ಬೆಂಗಳೂರು
ಬುಧವಾರ, 20 ಮೇ 2026
ಸಂಪುಟ 33, ಸಂಚಿಕೆ 199, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಗಾಯಗೊಂಡಿದ್ದ ಮಾರ್ತಾಂಡ ಸಾವು | ೦೨
ನಕ್ಸಲ್ ಪಿಡುಗು ನಿರ್ಮೂಲನೆ: ಶಾ | ೦೫
ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚೌತಿ, ನಕ್ಷತ್ರ: ಆರ್ದ್ರ ಉಪರಿ ಪುನರ್ವಸು

ದಿನದ ಮಾತು

ಒಳ್ಳೆಯವರು, ಜ್ಞಾನಿಗಳು ಆಡಿದ ಪ್ರೀತಿಯ ಮಾತುಗಳು ಸಾವಿರ ಸೂರ್ಯನ ಬೆಳಕಿನಂತೆ.
▲ ಹಿತೋಪದೇಶ

ಭರವಸೆಯ ಕಿರಣವಾಗಿ ಇಂಡೋ-ಮೆಡಿಟರೇನಿಯನ್ ಪಾಲುದಾರಿಕೆ

ಲೇಖನ
◆ ನರೇಂದ್ರ ಮೋದಿ
◆ ಜಾರ್ಜಿಯಾ ಮೆಲೋನಿ

◆ ಪುಟ ೬

ಕಿರುಸುದ್ದಿ

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ



◆ **ಡೆಹ್ರಾಡೂನ್:** ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ಬಿಜೆಪಿ ಮುಖಂಡ ಮೇಜರ್ ಜನರಲ್ (ನಿವೃತ್ತ) ಭುವನ್ ಚಂದ್ರ ಖಂಡೂರಿ (91) ಮಂಗಳವಾರ ಡೆಹ್ರಾಡೂನ್‌ನ ಮ್ಯಾಕ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಆರಂಭದಲ್ಲಿ ಖಂಡೂರಿ ಭಾರತೀಯ ಸೇನಾಧಿಕಾರಿಯಾಗಿದ್ದು, ನಂತರ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದರು. ➡ಪುಟ ೨

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

◆ **ಹೊಸದಿಲ್ಲಿ:** ದಿಲ್ಲಿ ಹೈಕೋರ್ಟ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ನಾಯಕರಾದ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸಂಜಯ್ ಸಿಂಗ್ ಮತ್ತು ಇತರರಿಗೆ ದಿಲ್ಲಿ ಹೈಕೋರ್ಟ್ ಮಂಗಳವಾರ ನೋಟಿಸ್ ನೀಡಿದೆ. ➡ಪುಟ ೨

ರಾಜ್ಯದಲ್ಲಿ ಇಂದು ಔಷಧ ಮಳಿಗೆ ಬಂದ್

◆ ಪುಟ ೨

ಪೆಟ್ರೋಲ್, ಡೀಸೆಲ್ ಬೆಲೆ 90 ಪೈಸೆ ಏರಿಕೆ

◆ ಪುಟ ೫

ಲಾಹೋರ್ ಗಲ್ಲಿಗಳಿಗೆ ರಾಮ, ಕೃಷ್ಣನ ನಾಮ

◆ ಪುಟ ೫

ಕೇರಳ ಸಂಪುಟದಲ್ಲಿ ಹಗ್ಗಜಗ್ಗಾಟ

◆ ಪುಟ ೫




ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್

◆ ಪುಟ ೫

ಸುದ್ದಿ ಸಮಗ್ರ

ತುಮಕೂರಿನಲ್ಲಿ ಐತಿಹಾಸಿಕ ಸಮಾವೇಶ | ಬಡವರ ಹಿತರಕ್ಷಣೆ
ಒಂದೇ ವರ್ಷದಲ್ಲಿ 5 ಗ್ಯಾರಂಟಿ ಜಾರಿ: ಸಿಎಂ ಸಿದ್ದರಾಮಯ್ಯ

ನುಡಿದಂತೆ ನಡೆದಿದ್ದೇವೆ



◆ **ತುಮಕೂರು:** ನಮ್ಮ ಸರ್ಕಾರ ಯಾವಾಗಲೂ ನುಡಿದಂತೆ ನಡೆಯುವ ಸರ್ಕಾರ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಸದಾ ಮಾಡಿಕೊಂಡು ಬಂದಿದ್ದೇವೆ. ನಮ್ಮ ಸರ್ಕಾರ ರಾಜ್ಯದ ಬಡವರ ಹಿತ ಕಾಯುವಲ್ಲಿ ಸದಾ ಬದ್ಧವಾಗಿದೆ.

ತುಮಕೂರಲ್ಲಿ ಸಾಧನೆಯ ಸಮರ್ಪಣೆ

ಕೇವಲ ಒಂದೇ ವರ್ಷದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಯಶಸ್ವಿಯಾಗಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿರುವ ಸಂದರ್ಭದಲ್ಲಿ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಮಂಗಳವಾರ ನಗರದ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ, ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶ, ಮಾದರಿ ವಸ್ತುಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದಂತೆ, ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರಿಗೂ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಸಿಗಬೇಕು. ➡ಪುಟ ೨

ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ: ಸಚಿವ ಕೃಷ್ಣ ಬೈರೇಗೌಡ

ಕಳೆದ 16 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹಾಗೂ ಅಸಾಧ್ಯವೆನಿಸಿದ್ದ ಕಂದಾಯ ಇಲಾಖೆಯ ಕೆಲಸ ಕಾರ್ಯಗಳನ್ನು ಇಂದು ಜನರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಕಂದಾಯ ಇಲಾಖೆ ಕ್ರಾಂತಿಕಾರಿ ಬದಲಾವಣೆ, ಪರಿವರ್ತನೆ ತಂದಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ➡ಪುಟ ೨

3 ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ ◆ಪುಟ ೩

ವಿಶ್ವಕ್ಕೇ ಗ್ಯಾರಂಟಿಗಳು ಮಾದರಿ: ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಬಡವರ ಮತ್ತು ಶೋಷಿತರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದಿರುವ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಇಂದು ಇಡೀ ವಿಶ್ವಕ್ಕೇ ಮಾದರಿಯಾಗಿವೆ ಎಂದು ತಿಳಿಸಿದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 5 ಗ್ಯಾರಂಟಿ ಯೋಜನೆಗಳು ಕೇವಲ ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದ ಈ ಐದು ಗ್ಯಾರಂಟಿಗಳು ಜಗತ್ತಿಗೇ ಮಾದರಿ ಎಂದು ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಉಲ್ಲೇಖಿಸಲಾಗಿದೆ. ಇದು ನಮ್ಮ ಸರ್ಕಾರಕ್ಕೆ ಹೆಮ್ಮೆ ಎಂದರು. ➡ಪುಟ ೨

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಹಲವು ದಶಕಗಳಿಂದ ರಾಜ್ಯದ ಹಟ್ಟಿ, ತಾಂಡಾ, ಮಜರೆ ಗ್ರಾಮಗಳು ಕಂದಾಯ ಗ್ರಾಮಗಳಾಗದೆ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದರು. ಇದನ್ನು ರಾಜ್ಯ ಕಂದಾಯ ಇಲಾಖೆ ಆದ್ಯತೆ ಕಾರ್ಯಕ್ರಮವಾಗಿ ತೆಗೆದುಕೊಂಡು 14 ಲಕ್ಷಕ್ಕೂ ಹೆಚ್ಚು ಹಕ್ಕು ಪತ್ರಗಳನ್ನು ರಾಜ್ಯದಲ್ಲಿ ವಿತರಿಸಿದೆ. ತುಮಕೂರು ಜಿಲ್ಲೆಯೊಂದರಲ್ಲೇ 22 ಸಾವಿರ ಕಂದಾಯ ಗ್ರಾಮಗಳ ಹಕ್ಕುಪತ್ರಗಳನ್ನು ನೀಡುವ ಮೂಲಕ ಇಂದು ಗಿನ್ನಿಸ್ ದಾಖಲೆ ಸೃಷ್ಟಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು. ತುಮಕೂರು ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ 650 ಅಂಗನವಾಡಿ ಕಾರ್ಯಕರ್ತೆಯರಿಗೆ ನೇಮಕ ಆದೇಶ ನೀಡಿ ಇಂದು ಮತ್ತೊಂದು ದಾಖಲೆ ಸೃಷ್ಟಿಸಿದೆ ಎಂದರು. ➡ಪುಟ ೨

ಐಲ್ಯಾಂಡ್, ಫಿನ್‌ಲ್ಯಾಂಡ್, ಡೆನ್ಮಾರ್ಕ್ ಪ್ರಧಾನಿಗಳ ಜತೆ ಮೋದಿ ಮಾತುಕತೆ

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ



ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಪ್ರಧಾನಿ ಮೋದಿ ◆ ಪುಟ ೨

◆ **ಓಸ್ಲೋ:** ತೃತೀಯ ಭಾರತ-ನಾರ್ಡಿಕ್ ಶೃಂಗಸಭೆಗೆ ಮುನ್ನ ಮಂಗಳವಾರ, ಶುದ್ಧ ಇಂಧನ, ವ್ಯಾಪಾರ, ಸುಸ್ಥಿರತೆ ಮತ್ತು ಡಿಜಿಟಲೀಕರಣ ರಂಗಗಳಲ್ಲಿ ದ್ವಿಪಕ್ಷೀಯ ಸಹಕಾರ ಕೊಂಡಿಗಳನ್ನು ಬಲಪಡಿಸುವ ಬಗ್ಗೆ ಐಲ್ಯಾಂಡ್, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಪ್ರಧಾನಿಗಳ ಜತೆ ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಮೋದಿ ಪಂಚ ರಾಷ್ಟ್ರ ಪ್ರವಾಸ

ಭಾರತ ಮತ್ತು ಐಲ್ಯಾಂಡ್, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ನಡುವಣ ದ್ವಿಪಕ್ಷೀಯ ಬಾಂಧವ್ಯಗಳ ಸಮಗ್ರ ಪ್ರಗತಿಪಥದ ಬಗ್ಗೆ ಈ ರಾಷ್ಟ್ರಗಳ ಪ್ರಧಾನಿಗಳಾದ ಕ್ರಮವಾಗಿ ಕ್ರಿಸ್ಟನ್ ಫ್ರೋಸ್ಟಡೋಟಿರ್, ಪೆಟ್ಟೆರಿ ಒರ್ಪೊ ಮತ್ತು ಮೆಟ್ಟೆ ಫ್ರೆಡರಿಕ್‌ಸೆನ್ ಜತೆ ಪ್ರಧಾನಿ ಮೋದಿ ಚರ್ಚಿಸಿದರು. ಐಲ್ಯಾಂಡ್ ಪ್ರಧಾನಿ ಕ್ರಿಸ್ಟನ್ ಜತೆ ಅದ್ಭುತ ಮಾತುಕತೆ ನಡೆಯಿತು. ಐಲ್ಯಾಂಡ್ ಜತೆಗಿನ ಸ್ನೇಹಬಾಂಧವ್ಯಕ್ಕೆ ಭಾರತ ತುಂಬು ಗೌರವ ನೀಡುತ್ತದೆ ಎಂದು ಪ್ರಧಾನಿ ಮೋದಿ ನಂತರ ಸಾಮಾಜಿಕ ಜಾಲತಾಣಕ್ಕೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಹೂಡಿಕೆಗಳಿಗೆ ಒತ್ತು: ಶುದ್ಧ ಇಂಧನ, ಮೀನುಗಾರಿಕೆ, ಸುಸ್ಥಿರತೆ, ಜಿಯೊಥರ್ಮಲ್ ಇಂಧನ, ಕಾರ್ಬನ್ ಕ್ಯಾಪ್ಚರ್ ಮತ್ತು ದಾಸ್ತಾನು ರಂಗಗಳಲ್ಲಿ ಸಹಕಾರ ಬಾಂಧವ್ಯಗಳ ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಇತ್ತಂಡಗಳ ನಡುವೆ ಚರ್ಚೆ ನಡೆಯಿತು. ➡ಪುಟ ೨

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಡೆನ್ಮಾರ್ಕ್ ಪ್ರಧಾನಿ ಜತೆ ಪ್ರಧಾನಿ ನರೇಂದ್ರ ಮೋದಿ ಫಲದಾಯಕ ಮಾತುಕತೆ ನಡೆಸಿದರು. ಈಚಿನ ವರ್ಷಗಳಲ್ಲಿ ಭಾರತ-ಡೆನ್ಮಾರ್ಕ್ ನಡುವಣ ಸ್ನೇಹಾಚಾರದಲ್ಲಿ ಗಮನಾರ್ಹ ಪ್ರಗತಿಯಾಗಿದೆ ಎಂದು ಮೋದಿ ಎಕ್ಸ್‌ಗೆ ಹಾಕಿರುವ ಪ್ರತ್ಯೇಕ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ನವೀಕರಿಸಬಹುದಾದ ಇಂಧನ, ಕ್ಲೈಮೇಟ್ ಆ್ಯಕ್ಷನ್, ಜಲ ನಿರ್ವಹಣೆ, ಗ್ರೀನ್ ಶಿಪ್ಪಿಂಗ್, ಡಿಜಿಟಲೀಕರಣ, ಆಹಾರ ಸಂಸ್ಕರಣೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಉಭಯ ನಾಯಕರು ಚರ್ಚಿಸಿದರು. ➡ಪುಟ ೨

ಕ್ರಮ ಕೈಗೊಳ್ಳದ್ದಕ್ಕೆ ರಾಜ್ಯಗಳಿಗೆ ಸುಪ್ರೀಂಕೋರ್ಟ್ ಛೀಮಾರಿ

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

◆ **ಹೊಸದಿಲ್ಲಿ:** ಬೀದಿ ನಾಯಿ ಕಡಿತದ ನಿರಂತರ ಘಟನಾವಳಿಗಳನ್ನು ಕಡೆಗಣಿಸುವಂತಿಲ್ಲ, ಅದರಲ್ಲೂ ಮುಖ್ಯವಾಗಿ ಮಕ್ಕಳ ಮೇಲೆ ಬೀದಿನಾಯಿಗಳ ಮಾರಣಾಂತಿಕ ದಾಳಿ ಘಟನೆಗಳು ನಿರ್ಲಕ್ಷಿಸುವಂತದ್ದಲ್ಲ



ಎಂದು ಸರ್ವೋಚ್ಚ ನ್ಯಾಯಾಲಯ ಮಂಗಳವಾರ ಮಹತ್ವದ ತೀರ್ಪು ನೀಡಿದೆ. ತನ್ಮೂಲಕ ಈ ವಿಚಾರದಲ್ಲಿ ನ.7ರ ತನ್ನದೇ ತೀರ್ಪನ್ನು ಎತ್ತಿಹಿಡಿದಿದೆ. ನ.7ರ ತೀರ್ಪಿಗೆ ಮಾರ್ಪಾಡು ತರಬೇಕೆಂಬ ಸರಕಾರೇತರ ಸಂಘಟನೆಗಳು ಮತ್ತು ಶ್ವಾನ ಪ್ರೇಮಿಗಳ ಎಲ್ಲಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ.

2001ರಲ್ಲಿ ಜಾರಿಗೊಂಡ ಪ್ರಾಣಿಗಳ ಸಂತಾನ ನಿಯಂತ್ರಣ ನಿಯಮಾವಳಿಯ ಸೂಕ್ತ ಪಾಲನೆ ಆಗಿಲ್ಲ ಅಥವಾ ಇದರ ಅನುಷ್ಠಾನ ವಿಚಾರದಲ್ಲಿ ಘೋರ ನಿರ್ಲಕ್ಷ್ಯ ವಹಿಸಲಾಗಿದೆ. ಬೆಳೆಯುತ್ತಲೇ ಇರುವ ನಾಯಿಗಳ ಸಂಖ್ಯೆಗೆ ಅನುಗುಣವಾಗಿ ಪೂರಕ ಸಂಪನ್ಮೂಲಗಳ ಸೃಷ್ಟಿಸುವ ಪ್ರಯತ್ನವಾಗಿಲ್ಲ. ಸಂತಾನ ನಿಯಂತ್ರಣ, ವ್ಯಾಕ್ಸಿನೇಶನ್ ಇತ್ಯಾದಿಗಳನ್ನು ಒಟ್ಟಾರೆ ನಿರ್ವಹಿಸಲಾಗುತ್ತಿದೆ. ➡ಪುಟ ೨

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ

◆ **ಹೊಸದಿಲ್ಲಿ:** ಬೀದಿ ನಾಯಿಗಳ ಹಾವಳಿ ಹಾಗೂ ಸಾರ್ವಜನಿಕರ ಸುರಕ್ಷತೆ ಪ್ರಶ್ನೆಗೆ



ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದ್ದು, 'ಕ್ರೂರ ಹಾಗೂ ಅಪಾಯಕಾರಿ' ಸ್ವಭಾವದ ನಾಯಿಗಳಿಗೆ ದಯಾಮರಣ ನೀಡಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದೆ. ಜತೆಗೆ, ಶಾಲೆಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳಲ್ಲಿ ನಾಯಿಗಳನ್ನು ತೆರವುಗೊಳಿಸಿ. ➡ಪುಟ ೨

ಕೇಂದ್ರಕ್ಕೆ ಭೂ ವರ್ಗಾವಣೆ ಪ್ರಕ್ರಿಯೆಗೆ ಸಿಎಂ ಸುವೇಂದು ಚಾಲನೆ

ಸಿಲಿಗುರಿ ಕಾರಿಡಾರ್‌ಗೆ 120 ಎಕರೆ ಜಾಗ

◆ **ಕೋಲ್ಕತ್ತಾ:** ಭಾರತದ ಮುಖ್ಯ ಭೂಭಾಗವನ್ನು ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕಿಸುವ ಮತ್ತು ಅಂತಾರಾಷ್ಟ್ರೀಯ ಗಡಿಗಳಿಗೆ ತೀರಾ ನಿಕಟವಾಗಿರುವ



ಕಾರಣ, ದೇಶದ ತೀರಾ ವ್ಯೂಹಾತ್ಮಕವಾದ ನಿರ್ಣಾಯಕ ಮತ್ತು ಸೂಕ್ಷ್ಮಸಂವೇದಿ ಪ್ರದೇಶವೆಂದು ಪರಿಗಣಿತ, ಸಿಲಿಗುರಿಯ ಚಿಕನ್‌ನೆಕ್ ಕಾರಿಡಾರ್‌ನ 120 ಎಕರೆ ಜಾಗವನ್ನು, ಕೇಂದ್ರ ಸರಕಾರಕ್ಕೆ ವರ್ಗಾಯಿಸುವ ಪ್ರಕ್ರಿಯೆಗೆ ಪಶ್ಚಿಮ ಬಂಗಾಳದ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ ಚಾಲನೆ ನೀಡಿದೆ.

ರಾಷ್ಟ್ರೀಯ ಭದ್ರತಾ ದೃಷ್ಟಿಯಿಂದ ಇದೊಂದು ಮಹತ್ವದ ನಿರ್ಧಾರ ವಾಗಿದೆ. ಚೀನಾದ ಟಿಬೆಟ್ ವಲಯಕ್ಕೆ ಸಮೀಪದಲ್ಲಿದ್ದು ನೇಪಾಳ, ಭೂತಾನ್, ಬಾಂಗ್ಲಾ ಗಡಿಗೆ ತಾಗಿಕೊಂಡಿರುವುದರಿಂದಲೇ ಅಗಲ ಕಿರಿದಾದ ಪ್ರಸ್ತುತ ಭೂಮಿಯು ವ್ಯೂಹಾತ್ಮಕವಾಗಿ ಸೂಕ್ಷ್ಮಸಂವೇದಿಯೆನಿಸಿದೆ. ಕೆಲವು ಕಡೆ ಈ ಕಾರಿಡಾರ್ ಕೇವಲ 20ರಿಂದ 22 ಕಿ.ಮೀ ಕಿರಿದಾಗಿದ್ದು, ಭೂ-ಭೌಗೋಳಿಕ ಬಿಕ್ಕಟ್ಟು ಅಥವಾ ಮಿಲಿಟರಿ ಸಂಘರ್ಷ ಸಂದರ್ಭದಲ್ಲಿ ವ್ಯೂಹಾತ್ಮಕವಾಗಿ ತೀರಾ ದುರ್ಬಲವೆಂದು ಪರಿಗಣಿತವಾಗಿದೆ. ➡ಪುಟ ೨

ಕ್ರಾಂತಿಕಾರಿ ಹೆಜ್ಜೆ

ಪಶ್ಚಿಮ ಬಂಗಾಳದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ವಿಜಯ ಸಾಧಿಸಿದೆ. ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಸುವೇಂದು ಸರಕಾರ ಬೇರೆ ಬೇರೆ ರಂಗಗಳಲ್ಲಿ ಕ್ರಾಂತಿಕಾರಿ ಹೆಜ್ಜೆಗಳನ್ನಿರಿಸ ತೊಡಗಿದೆ. ಅದು ಆಡಳಿತಾತ್ಮಕ ವ್ಯವಸ್ಥೆಗಳ ಪುನರ್‌ರಚನೆಯಿರಲಿ, ಕಾನೂನು ಸುವ್ಯವಸ್ಥೆ ಕ್ರಮಗಳು, ತೃಣಮೂಲ ಕಾಂಗ್ರೆಸ್ ನಾಯಕರ ಷಾಮೀಲಾತಿಯುಳ್ಳ ಗೋಲ್‌ಮಾಲ್‌ಗಳ ತನಿಖೆ, ದಕ್ಷ ಆಡಳಿತ ಜತೆ ಜತೆಗೆ ಕೇಂದ್ರದ ಜತೆ ವ್ಯೂಹಾತ್ಮಕ ಸಮನ್ವಯ ಕಾಯ್ದುಕೊಳ್ಳುವ ನಿರ್ಧಾರಗಳನ್ನು ತ್ವರಿತಗತಿಯಿಂದ ಕೈಗೊಳ್ಳಲಾಗುತ್ತಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

◆ **ಬೆಂಗಳೂರು:** ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯು ಮೇ 20ರಿಂದ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಹೈಕೋರ್ಟ್ ಮಂಗಳವಾರ ತಡೆಯೊಡ್ಡಿದೆ. ಈ ಹಿನ್ನೆಲೆ ಪ್ರತಿಭಟನೆ ಹಿಂಪಡೆಯಲಾಗಿದೆ ಎಂದು ಜಂಟಿ ಕ್ರಿಯಾ ಸಮಿತಿ ತಿಳಿಸಿದ್ದು, ಬುಧವಾರ ರಾಜ್ಯಾದ್ಯಂತ ಬಸ್ ಸೇವೆ ಎಂದಿನಂತೆ ಇರಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು ಈ ಸಂಬಂಧ ಮಾಹಿತಿ ನೀಡಿದ್ದಾರೆ. ➡ಪುಟ ೨

- ಎಂದಿನಂತಿರಲಿದೆ ಬಸ್ ಸಂಚಾರ, ಪ್ರಯಾಣಿಕರು ನಿರಾಳ
- ಸಾರಿಗೆ ನಿಗಮಗಳ ನೌಕರರು ಕರೆ ನೀಡಿದ್ದ ಹೋರಾಟ
- ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಕ್ಕೆ ಹೈಕೋರ್ಟ್ ಸೂಚನೆ

ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

◆ **ಹೊಸದಿಲ್ಲಿ:** ಉಗ್ರ ಚಟುವಟಿಕೆ ನಡೆಸುವ ಸ್ಲೀಪರ್ ಸೆಲ್‌ಗಳಿಗೆ ಉತ್ತರಪ್ರದೇಶದಲ್ಲಿ ಅಪ್ರಾಪ್ತರನ್ನು ನೇಮಕಾತಿ ಮಾಡುತ್ತಿರುವ ಪಾಕಿಸ್ತಾನ ನಿಯಂತ್ರಿತ ಜಾಲವೊಂದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಪತ್ತೆ ಹಚ್ಚಿದೆ.

ಭಾರತದ ವಿರುದ್ಧ ಪಾಕ್ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ



ಸಂವೇದನಾಶೀಲ ಪ್ರದೇಶಗಳಲ್ಲಿ ಅಪ್ರಾಪ್ತರು, ಆರ್ಥಿಕವಾಗಿ ದುರ್ಬಲ ವ್ಯಕ್ತಿಗಳನ್ನು ಭಾರತದ ವಿರುದ್ಧ ಗುಪ್ತಚರರಂತೆ ಬಳಸಿಕೊಳ್ಳುತ್ತಿದೆ. ಇದು ಪಾಕಿಸ್ತಾನದ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ ಎಂದು ಅಪ್ರಾಪ್ತರ ನ್ಯಾಯಮಂಡಳಿಗೆ ಸಲ್ಲಿಸಿದ ತನಿಖಾ ವರದಿಯಲ್ಲಿ ಎನ್‌ಐಎ ಉಲ್ಲೇಖಿಸಿದೆ. ಸಂವೇದನಾಶೀಲ ಪ್ರದೇಶಗಳು, ರೈಲ್ವೆ ನಿಲ್ದಾಣಗಳು, ತಂತ್ರಜ್ಞಾನದ ದೃಷ್ಟಿಯಿಂದ ಮಹತ್ವದ ಸ್ಥಳಗಳ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಈ ಜಾಲವು ಅಪ್ರಾಪ್ತರನ್ನು ನೇಮಕ ಮಾಡುತ್ತಿದೆ. ➡ಪುಟ ೨

ದೇಶದ್ರೋಹ ಕೃತ್ಯಕ್ಕೆ ₹500-15,000

ರಹಸ್ಯ ಮಾಹಿತಿಗಳನ್ನು ಸೋರಿಕೆ ಮಾಡುವುದಕ್ಕಾಗಿ ಪಾಕಿಸ್ತಾನಿ ಹ್ಯಾಂಡ್ಲರ್‌ಗಳು ಅಪ್ರಾಪ್ತರಿಗೆ 500ರಿಂದ 15,000 ರೂ.ವರೆಗೆ ಹಣ ನೀಡುತ್ತಿದ್ದಾರೆಂಬ ಆತಂಕಕಾರಿ ಮಾಹಿತಿಯನ್ನು ಎನ್‌ಐಎ ಬಯಲಿಗೆಳೆದಿದೆ. ಪಾಕಿಸ್ತಾನದ ಡಿಜಿಟಲ್ ಉಗ್ರವಾದ ಮತ್ತು ಸ್ಲೀಪರ್ ಸೆಲ್ ನೇಮಕಾತಿ ಪ್ರಯತ್ನದಲ್ಲಿ ಉತ್ತರಪ್ರದೇಶದ ಮೇಲೆ ಹೆಚ್ಚಿನ ಗಮನಹರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

◆ **ವಾಷಿಂಗ್ಟನ್:** ಇರಾನ್ ನಾಯಕರು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬೇಡುತ್ತಿದ್ದಾರೆ. ಒಂದು ವೇಳೆ ಇರಾನ್ ಒಪ್ಪಂದ ಅಂತಿಮಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಇರಾನ್ ಮೇಲೆ ದೊಡ್ಡ ದಾಳಿ ನಡೆಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಹೊಸ ಬೆದರಿಕೆ ಹಾಕಿದ್ದಾರೆ.

ಅಂದರೆ ಬಹುಶಃ ಮುಂದಿನ ವಾರದೊಳಗೆ ಒಪ್ಪಂದ ಅಂತಿಮಗೊಳ್ಳಬೇಕು. ಇನ್ನು ಎರಡು ಅಥವಾ ಮೂರು ದಿನ ಬಹುಶಃ ಶುಕ್ರವಾರ, ಶನಿವಾರ, ಭಾನುವಾರ ಅಥವಾ ಅದರೊಳಗೆ ಹೊಸ ದಾಳಿ ನಡೆಸುವ ಸಾಧ್ಯತೆಯಿದೆ. ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸುವಷ್ಟು ಸಮಯ ಕಾದು ಕುಳಿತುಕೊಳ್ಳಲು ನಮ್ಮ ಬಳಿ ಸಮಯವಿಲ್ಲ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ದಾಳಿಗೆ ಸಿದ್ಧತೆ ನಡೆಸಿದ್ದ ಅಮೆರಿಕ, ಗಂಟೆಗೊಂದು ಹೇಳಿಕೆ!



ದಾಳಿ ರದ್ದು ಹೇಳಿಕೆ ಬೆನ್ನಲ್ಲೇ ನಿರ್ಧಾರ ಬದಲು!: ಸೋಮವಾರ ಇರಾನ್ ಮೇಲೆ ಹೊಸ ದಾಳಿ ನಡೆಸುವುದು ಬಹುತೇಕ ಖಚಿತವಾಗಿತ್ತು. ಆದರೆ ಹೊಸ ದಾಳಿಗೆ ಸಕಲ ಸಿದ್ಧತೆಗಳನ್ನೂ ನಾವು ಮಾಡಿಕೊಂಡಿದ್ದೆವು. ಒಂದು ಗಂಟೆ ಮುಂಚೆ ದಾಳಿ ನಿರ್ಧಾರ ಬದಲಿಸಿದ್ದು, ದಾಳಿ ರದ್ದುಗೊಳಿಸಿದ್ದಾಗಿ ಟ್ರಂಪ್ ಬಹಿರಂಗಗೊಳಿಸಿದ್ದಾರೆ. ➡ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000(2,90,000) ಅಪರಂಜಿ ಚಿನ್ನ: 1,57,040(1,56,220) ಆಭರಣ ಚಿನ್ನ: 1,43,950(1,43,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,200(114↓) ಎನ್‌ಎಸ್‌ಇ 23,618(31↓)

$1 = ₹95.97

ಪರಮೇಶ್ವರ್ ನೇತೃತ್ವದ ಪ್ರಣಾಳಿಕೆ ಸಮಿತಿ ನೀಡಿದ್ದ 580 ಭರವಸೆಗಳಲ್ಲಿ 290 ಜಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ತಲಾದಾಯದಲ್ಲಿ ಕನ್ನಡಿಗರೇ ನಂಬರ್ 1

ತುಮಕೂರು: ನಾವು ನುಡಿದಂತೆ ನಡೆದಿದ್ದೇವೆ, ತಲಾ ಆದಾಯದಲ್ಲಿ ಕನ್ನಡಿಗರು ಇಡೀ ದೇಶದಲ್ಲೇ ನಂಬರ್ ಒನ್, ಇಡೀ ದೇಶದ ಜಿಡಿಪಿಗೆ ನಮ್ಮ ಕೊಡುಗೆ ಅಪಾರ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸರ್ಕಾರದ ಮೂರು ವರ್ಷಗಳ ಸಾಧನೆ ಜತೆಗೆ, ಕೇಂದ್ರ ಸರ್ಕಾರದ ವೈಫಲ್ಯಗಳನ್ನೂ ಪಟ್ಟಿ ಮಾಡಿದರು.

ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಮಂಗಳವಾರ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಆಯೋಜಿಸಿದ್ದ, ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿ ಬಳಿಕ, ನವ ಕರ್ನಾಟಕ ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ದೇಶದ ತಲಾ ಆದಾಯಕ್ಕಿಂತ ರಾಜ್ಯದ ಆದಾಯ ಹೆಚ್ಚಾಗಿರುವ ರೀತಿಯಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ ಎಂದು ಹೇಳಿದರು. ನಾವು ನುಡಿದಂತೆ ನಡೆದು ಸಾಬೀತುಪಡಿಸಿರುವುದರಿಂದ ಮತ್ತೆ 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಶತಸಿದ್ಧ. ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯದ ನಾಡನ್ನು ಇನ್ನಷ್ಟು ಗಟ್ಟಿಯಾಗಿ ರೂಪಿಸುತ್ತೇವೆ. ಸಂವಿಧಾನಬದ್ಧ ಅಭಿವೃದ್ಧಿ ಮಾರ್ಗದಲ್ಲಿ ನಾಡನ್ನು ಮುನ್ನಡೆಸುತ್ತೇವೆ ಎಂದು ಭರವಸೆ ಅವರು ನೀಡಿದರು. ನಾವು ನೆಮ್ಮದಿಯ ನಾಡು ಕಟ್ಟುವ ಸರ್ಕಾರ ಕೊಟ್ಟಿದ್ದೇವೆ. ಮೋದಿ ದೇಶದ ನೆಮ್ಮದಿ ಕಸಿಯುವ ಸರ್ಕಾರ ಕೊಟ್ಟಿದ್ದಾರೆ ಎಂದರು.

ಗುಜರಾತ್‌ನ ಅಭಿವೃದ್ಧಿ ಟೊಳ್ಳು: ಕಳೆದ 35 ವರ್ಷಗಳಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ಇಲ್ಲಿ ಅಭಿವೃದ್ಧಿಯೇ ಆಗಿಲ್ಲ ಎಂದು ಸಿಎಂ ಟೀಕಿಸಿದರು. ಮೊನ್ನೆಯಷ್ಟೆ ಕೇವಲ 2500 ರೂ ಮನೆ ಬಾಡಿಗೆ ಕಟ್ಟಲಾಗದ ಕಾರಣಕ್ಕೆ ಬಾಡಿಗೆಗಿದ್ದ ಬಡ ಕುಟುಂಬದ 13 ವರ್ಷದ ಮಗಳ ಮೇಲೆ ಮನೆ ಮಾಲೀಕ ಅತ್ಯಾಚಾರ ಎಸಗಿರುವ ಘಟನೆ ಗುಜರಾತ್‌ನಲ್ಲಿ ನಡೆದಿದೆ. ಇದು ನಿಜವಾದ ಗುಜರಾತ್ ಮಾದರಿ. ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಗುಜರಾತ್ ಮಾದರಿ ಟೊಳ್ಳು ಎಂದು ಅವರು ಪ್ರತಿಪಾದಿಸಿದರು.



ನೀಟ್ ಪರೀಕ್ಷೆ ರದ್ದಿಗೆ ಮೋದಿ ಸರ್ಕಾರ ಕಾರಣ

ನೀಟ್ ಪರೀಕ್ಷೆ ರದ್ದಾಗಿ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಿ, ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ಕಾರಣ ಎಂದು ಬಲವಾಗಿ ಟೀಕಿಸಿದರು. ರಾಜ್ಯದ ಸಿಇಟಿ ಮಾದರಿಯಲ್ಲಿ ಪರೀಕ್ಷೆ ನಡೆಸಿ ಎನ್ನುವ ನಮ್ಮ ಸಲಹೆಯನ್ನು ತಿರಸ್ಕರಿಸಿ ನೀಟ್‌ನಲ್ಲಿ ಅದ್ವಾನ ಮಾಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯ ಅಚ್ಚೇ ದಿನ ಬರಲಿಲ್ಲ. ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯದ ಮೋದಿ ಸರ್ಕಾರ, ರೈತರ ಆದಾಯವನ್ನೂ ದುಪ್ಪಟ್ಟು ಮಾಡಲಿಲ್ಲ. ಕಪ್ಪು ಹಣ ತರಲಿಲ್ಲ. ಹೀಗಾಗಿ ಬಿಜೆಪಿ-ಆರ್‌ಎಸ್‌ಎಸ್ ಸರ್ಕಾರ ಸಂಪೂರ್ಣ ವಿಫಲವಾಗಿ ದೇಶದ ಸಾಲವನ್ನು 220 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

- ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಮಂಕು
- ಸಮರ್ಪಣಾ ಸಂಕಲ್ಪದಲ್ಲಿ ಸಿದ್ದರಾಮಯ್ಯ ಟೀಕೆ
- ದೇಶ ತಲಾ ಆದಾಯಕ್ಕಿಂತ ಕನ್ನಡಿಗರ ತಲಾದಾಯವೇ ಹೆಚ್ಚು
- ಗುಜರಾತ್ ಅಭಿವೃದ್ಧಿ ಮಾದರಿ ಟೊಳ್ಳು

ಬೆಲೆ ಏರಿಕೆಗೆ ಮೋದಿ ಕಾರಣ: ಮೋದಿಯವರು ಪ್ರಧಾನಿ ಆಗುವ ಮೊದಲು ದೇಶದಲ್ಲಿ ಡೀಸೆಲ್, ಪೆಟ್ರೋಲ್, ಚಿನ್ನದ ಬೆಲೆ ಎಷ್ಟಿತ್ತು. ಈಗ ಅದು ಆಕಾಶಕ್ಕೆ ಏರಿದೆ. ಟ್ರಂಪ್ ಬಾಲ ಹಿಡಿದು ಸುತ್ತುತ್ತಿದ್ದ ಮೋದಿಯವರೇ ಈ ಬೆಲೆ ಏರಿಕೆಗೆ ಕಾರಣ. ಮೋದಿ ದರ್ಬಾರಿನಲ್ಲಿ ಅಂಬಾನಿ ಮತ್ತು ಅದಾನಿ ಮಾತ್ರ ಲಾಭ ಮಾಡಿಕೊಂಡು ಈಗ ಇವರ ಆಸ್ತಿ 8 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಬಡವರು ಮತ್ತು ಮಧ್ಯಮ ವರ್ಗದವರ ಆದಾಯ ಮತ್ತು ಬದುಕು ನೆಲಕಚ್ಚಿದ್ದನ್ನು ವಿವರಿಸಿದರು. ಮೋದಿ ಮೋದಿ ಎಂದು ಕುಣಿಯುತ್ತಿದ್ದ ಭಾರತದ ಬಡ ಜನರು ಮತ್ತು ಮಧ್ಯಮ ವರ್ಗದವರಿಗೆ ಭ್ರಮನಿರಸನವಾಗಿದೆ ಎಂದರು.

ಸಾಧನಾ ಸಮರ್ಪಣಾ ಸಮಾವೇಶದಲ್ಲಿ ಡಿಸಿಎಂ ಡಿಕೆಶಿ ವಿಶ್ವಾಸ

2028ರಲ್ಲೂ ಕಾಂಗ್ರೆಸ್‌ಗೆ ಅಧಿಕಾರ

ತುಮಕೂರು: 2028ಕ್ಕೆ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ. ಜನತಾದಳ ಹಾಗೂ ಬಿಜೆಪಿಯವರು ಇದನ್ನು ಬರೆದಿಟ್ಟುಕೊಳ್ಳಿ. ಜನರು ಕೂಡ ಇದನ್ನು ನೆನಪಿನಲ್ಲಿಟ್ಟುಕೊಳ್ಳಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ನಡೆದ 'ಸಾರ್ಥಕ ಸೇವೆಯ ಸಮರ್ಪಣೆ' ಸಮಾವೇಶದಲ್ಲಿ ಶಿವಕುಮಾರ್ ಅವರು ಮಾತನಾಡಿದರು.

ನಿಮ್ಮ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ಬದುಕಿನಲ್ಲಿ ಬದಲಾವಣೆ ತಂದಿದೆ. ಇಡೀ ದೇಶಕ್ಕೆ ಒಂದು ಮಾದರಿ ಸರ್ಕಾರ ಕೊಟ್ಟಿದೆ, ಅದನ್ನು ಉಳಿಸಿಕೊಂಡು ಹೋಗುತ್ತೇವೆ. ನಿಮ್ಮ ಆಶೀರ್ವಾದ ಸದಾ ಇರಲಿ. ಪರಿಶ್ರಮ ಇದ್ದ ಕಡೆ ಇತಿಹಾಸ ಸೃಷ್ಟಿ ಆಗುತ್ತದೆ. ನಂಬಿಕೆ ಇದ್ದ ಕಡೆ ಅದ್ಭುತಗಳು ನಡೆಯುತ್ತವೆ. ಸತ್ಯ ಇದ್ದ ಕಡೆ ಗೆಲುವು ಇದ್ದೇ ಇರುತ್ತದೆ ಎಂದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ನಡೆಸಿದ ಅಧ್ಯಯನದ ಪ್ರಕಾರ, ಕರ್ನಾಟಕದ ಪಂಚ ಗ್ಯಾರಂಟಿಗಳು ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾ ಜಿಕ ಬದಲಾವಣೆಯನ್ನು ತಂದಂತಹ ಕಾರ್ಯಕ್ರಮಗಳಾಗಿವೆ. ಇವು ವಿಶ್ವಕ್ಕೆ ಒಂದು ಮಾದರಿ ಎಂದರು.



- ಎಲ್ಲಾ ರಾಜ್ಯಗಳಿಂದಲೂ ಕಾಂಗ್ರೆಸ್ ಗ್ಯಾರಂಟಿ ಮಾದರಿ ಅನುಕರಣೆ
- ಬಿಜೆಪಿ, ಬೇರೆ ಪಕ್ಷದವರೂ ಕಾಪಿ
- ಆಕ್ಸ್‌ಫರ್ಡ್ ಯುನಿವರ್ಸಿಟಿಯವರೇ ಗ್ಯಾರಂಟಿ ಕೊಂಡಾಡಿದ್ದಾರೆ
- ಕೊಟ್ಟ ಕುದುರೆ ಏರಲು ಆಗದ ಕುಮಾರಸ್ವಾಮಿ: ಡಿಕೆಶಿ
- ಮಾತು ಕೊಡೋದು ಮುಖ್ಯವಲ್ಲ, ಕೊಟ್ಟ ಮಾತು ಉಳಿಸುವುಸು ಮುಖ್ಯ



ಜನರಿಗೆ ಭೂಮಿ ಗ್ಯಾರಂಟಿ

ಆರನೇ ಗ್ಯಾರಂಟಿಯಾಗಿ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ 1,11,11,111 ಜನರಿಗೆ ಭೂಮಿ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ 27 ಲಕ್ಷದ ಜನರಿಗೆ ಭೂಮಿ ಗ್ಯಾರಂಟಿಯನ್ನು ನಾವು ಕೊಟ್ಟಿದ್ದೇವೆ. ಬಿಜೆಪಿ, ಜನತಾದಳದ ಸ್ನೇಹಿತರಲ್ಲಿ ಕೆಲವರು ಇದನ್ನು ಟೀಕೆ ಮಾಡ್ತಾ ಇದ್ದಾರೆ. ಭಗವಂತ ನಿಮಗೆ ಅವಕಾಶ ಕೊಟ್ಟಿದ್ದಾಗ. ಡಬಲ್ ಎಂಜಿನ್ ಸರ್ಕಾರ ಇದ್ದಾಗ ಇಂತಹ ಜನಪರ ಕೆಲಸವನ್ನು ನೀವು ಏಕೆ ಮಾಡಲು ಆಗಲಿಲ್ಲ. ಕೋವಿಡ್ ವೇಳೆ ಮರಣ ಹೊಂದಿದ, ನರಳಿದ ಜನರಿಗೆ ನಿಮ್ಮ ಕೈಯಲ್ಲಿ ಸರಿಯಾಗಿ ನ್ಯಾಯ ಒದಗಿಸಿಕೊಡಲು ಆಗಲಿಲ್ಲ. ಇತ್ತೀಚೆಗೆ ನಾನು, ಸಿದ್ದರಾಮಯ್ಯನವರು ಚಾಮರಾಜನಗರ ಜಿಲ್ಲೆಯ ಆಕ್ಸಿಜನ್ ದುರಂತದಲ್ಲಿ ಸತ್ತಂತ ಜನರ ಕುಟುಂಬ ಸದಸ್ಯರಿಗೆ ಸರ್ಕಾರಿ ಕೆಲಸ ನೀಡಿದ್ದೇವೆ ಎಂದು ಹೇಳಿದರು.

ಗ್ಯಾರಂಟಿ ಎಲ್ಲರಿಗೂ ಮಾದರಿ ಯೋಜನೆ

ನಮ್ಮ ಬಿಜೆಪಿ ಸ್ನೇಹಿತರುಗಳು, ಪ್ರಧಾನಮಂತ್ರಿಗಳು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆಗಳ ಸುರಿಮಳೆಯನ್ನೇ ಮಾಡಿದರು. ಇವತ್ತು ಪ್ರತಿಯೊಂದು ರಾಜ್ಯದಲ್ಲೂ ಅವರೇ ಗ್ಯಾರಂಟಿ ಯೋಜನೆ ಪ್ರಕಟಿಸುತ್ತಿದ್ದಾರೆ. ಯಾವುದೇ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಗ್ಯಾರಂಟಿಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ ಎಂದರು. ನಾವು ಅಂದು ಜನಸಾಮಾನ್ಯರ ಜೀವನ ಉಳಿಯಬೇಕು ಎಂದು ಬದ್ಧತೆಯಿಂದ ಕೆಲಸ ಮಾಡಿದೆವು. ಈಗ ಎಲ್ಲ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಹೋಗುತ್ತಿದೆ. ಆದಾಯ ಪಾತಳಕ್ಕೆ ಇಳಿದಿದೆ. ಇಂತಹದಕ್ಕೆ ಸಹಾಯ ಮಾಡಬೇಕು ಅಂತಲೇ ನಾವು ಗ್ಯಾರಂಟಿ ಯೋಜನೆಗಳನ್ನು ಪ್ರಾರಂಭ ಮಾಡಿದೆವು.

- ಸ್ವಯಂ ಸ್ಫೂರ್ತಿಯಿಂದ ಸಾಧನಾ ಸಮರ್ಪಣಾ ಸಮಾವೇಶ ಆಯೋಜನೆ
- ಜಿ.ಪರಮೇಶ್ವರ್ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ಧ ಮಾಡಿದ್ದ 580 ಭರವಸೆಗಳಲ್ಲಿ 290ಕ್ಕೂ ಜಾರಿ
- ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳ ಈಡೇರಿಸುತ್ತೇವೆ ಎಂದ ಸಿಎಂ ಸಿದ್ದರಾಮಯ್ಯ

ಪರಮೇಶ್ವರ್, ಕೃಷ್ಣ ಬೈರೇಗೌಡರಿಗೆ ಶ್ಲಾಘನೆ

ತುಮಕೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ದಪಡಿಸಿದ್ದ ಪ್ರಣಾಳಿಕೆಯಲ್ಲಿನ 580 ಭರವಸೆಗಳಲ್ಲಿ 290ಕ್ಕೂ ಹೆಚ್ಚು ಭರವಸೆ ಈಡೇರಿಸಿದ್ದು, ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳನ್ನೂ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಾಳೆಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ತುಂಬುತ್ತಿರುವ ಹೊತ್ತಲ್ಲಿ ಜಿ.ಪರಮೇಶ್ವರ್ ಅವರು ಸರ್ಕಾರದ ಸಾಧನಾ ಸಮರ್ಪಣಾ ಸಮಾವೇಶ ಮತ್ತು ಕಂದಾಯ ಇಲಾಖೆಯ ಕ್ರಾಂತಿಕಾರಿ ಜನೋಪಯೋಗಿ ಕೆಲಸಗಳ ಜನಾರ್ಪಣೆ ಸಮಾವೇಶವನ್ನು ಸ್ವಯಂಸ್ಫೂರ್ತಿಯಿಂದ ತುಮಕೂರಿನಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಪ್ರಮುಖವಾಗಿ ನಾವು ಘೋಷಿಸಿದ್ದ ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಒಂದೊಂದಾಗಿ ಈಡೇರಿಸಿದ್ದಲ್ಲದೆ ಉಳಿದ ಭರವಸೆಗಳನ್ನೂ ಈಡೇರಿಸಿ ನಾವು ನಿಮ್ಮ ಮುಂದೆ ಧನ್ಯತೆ ಅರ್ಪಿಸಲು ಇಲ್ಲಿ ನಿಮ್ಮ ಮುಂದೆ ನಿಂತಿದ್ದೇವೆ ಎಂದರು. ನಾವು ಅಧಿಕಾರಕ್ಕೆ ಬಂದ ಬಳಿಕ ಸರ್ವ ಜಾತಿ, ಸರ್ವ ಧರ್ಮದ ಸಕಲ ಜನತೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಿಜೆಪಿಯವರ ರೀತಿ ಜಾತಿ ಧರ್ಮದದ ಹೆಸರಲ್ಲಿ ಮನುಷ್ಯರನ್ನು ವಿಭಜಿಸುವ ಕೆಟ್ಟ ರಾಜಕಾರಣ ನಾವು ಮಾಡಲಿಲ್ಲ. ಬಿಜೆಪಿಯವರ ಎಲ್ಲಾ ಅಪಪ್ರಚಾರಗಳನ್ನು ಸುಳ್ಳಾಗಿಸಿ ನಾವು ಅಭಿವೃದ್ಧಿ ಮಾಡಿ ತೋರಿಸಿದ್ದೇವೆ ಎಂದು ಹೇಳಿದರು.



ಕಿರುಸುದ್ದಿ

ಸರ್ಕಾರದ ನಡೆಗೆ ವಿಜಯೇಂದ್ರ ಟೀಕೆ

ಬೆಂಗಳೂರು: ತುಮಕೂರಿನಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ಆಯೋಜಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಪ್ರಶ್ನಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯ ಯೋಜನೆಗಳನ್ನು ತಮ್ಮ ಸರ್ಕಾರದ ಯೋಜನೆಗಳು ಎಂಬಂತೆ ಈಗಿನ ಕಾಂಗ್ರೆಸ್ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಜಾಹೀರಾತು ಮೂಲಕ ಆರ್ಥಿಕ ಮತ್ತು ಕಾನೂನು ಸ್ಥಿತಿ ಚೆನ್ನಾಗಿದೆ ಎಂದು ಜನರಿಗೆ ತೋರಿಸುತ್ತಿದ್ದಾರೆ. ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸವನ್ನು ಸಮಾವೇಶದ ಮೂಲಕ ಮಾಡುತ್ತಿದ್ದಾರೆ. ಹಳೆ ಸರ್ಕಾರದ ಕೆಲಸಗಳನ್ನು ತಮ್ಮ ಕೆಲಸ ಎಂದು ಜನರಿಗೆ ತೋರಿಸುತ್ತಿದ್ದಾರೆ ಎಂದು ದೂರಿದರು. ಇವರ ಸಾಧನೆ ಏನೂ ಇಲ್ಲ. ಕುರ್ಚಿ ಪೈಪೋಟಿಯಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದುಹೋಗಿದೆ. ಇವರ ಬಳಿ ಬೇರೆ ಬಂಡವಾಳ ಏನೂ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜನರ ಹಣವನ್ನು ಪೋಲು ಮಾಡುತ್ತಿದ್ದಾರೆ ಎಂದರು. ಬಿಜೆಪಿ ಜೆಡಿಎಸ್ ಮೈತ್ರಿ ಬಗ್ಗೆ ಕೇಂದ್ರದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನಕ್ಕೆ ನಾವು ಬದ್ಧರು. ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನು ಯಾವ ಕಾರಣಕ್ಕೆ ಭೇಟಿ ಮಾಡಿದ್ದಾರೆ ಎಂಬುದು ತಿಳಿದಿಲ್ಲ. ರಾಜ್ಯಸಭೆ ಬಗ್ಗೆ, ವಿಧಾನಸಭೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದು ಇನ್ನೂ ಚರ್ಚೆ ಆರಂಭವಾಗಿಲ್ಲ. ದೆಹಲಿಯಿಂದ ನಿರ್ದೇಶನ ಬಂದಿಲ್ಲ ಎಂದರು.



ಲಿಫ್ಟ್‌ನಲ್ಲಿ ಸಿಲುಕಿದ ಒಂಬತ್ತು ಮಂದಿ ರಕ್ಷಣೆ

ಶಿವಮೊಗ್ಗ: ಆಲ್ಕೊಳ ಸರ್ಕಲ್ ಸಮೀಪದ ವಿಶಾಲ್ ಮಾರ್ಟ್‌ನಲ್ಲಿ ಸೋಮವಾರ ರಾತ್ರಿ, ಲಿಫ್ಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು 9 ಮಂದಿ ಸಿಲುಕಿದ್ದ ಘಟನೆ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಇಬ್ಬರು ಮಕ್ಕಳು ಹಾಗೂ ಮಹಿಳೆಯರು ಸೇರಿದಂತೆ ಒಟ್ಟು 9 ಜನರನ್ನು ರಕ್ಷಿಸಿದ್ದಾರೆ. ವಿಶಾಲ್ ಮಾರ್ಟ್‌ನಲ್ಲಿ ಸಾಮಗ್ರಿ ಖರೀದಿಸಲು ಬಂದಿದ್ದ ಗ್ರಾಹಕರು ಲಿಫ್ಟ್ ಮೂಲಕ ಕೆಳಕ್ಕೆ ಬರುತ್ತಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಇದರಿಂದ ಲಿಫ್ಟ್ ಮಧ್ಯದಲ್ಲೇ ಸ್ಥಗಿತಗೊಂಡಿತ್ತು. ಮಾಲ್ ಸಿಬ್ಬಂದಿ ಬಾಗಿಲು ತೆರೆಯಲು ಪ್ರಯತ್ನ ನಡೆಸಿದರೂ ಸಾಧ್ಯವಾಗಲಿಲ್ಲ. ಇದರಿಂದಾಗಿ ಒಳಗಿದ್ದ ಗ್ರಾಹಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಲಿಫ್ಟ್‌ನಲ್ಲಿ ಗಾಳಿಯಾಡದೆ ಇದ್ದುದರಿಂದ ಓರ್ವ ಮಹಿಳೆಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಲಿಫ್ಟ್ ಬಾಗಿಲು ತೆರೆಯುವಲ್ಲಿ ಯಶಸ್ವಿಯಾದರು. ಸುಮಾರು ಒಂದು ಗಂಟೆ ಲಿಫ್ಟ್ ಒಳಗೆ ಸಿಲುಕಿದ್ದ ಒಂಭತ್ತೂ ಜನರನ್ನು ಸುರಕ್ಷಿತವಾಗಿ ಹೊರತಂದರು. ಅಗ್ನಿಶಾಮಕ ಠಾಣಾಧಿಕಾರಿ ಬಿ.ಎಸ್. ಅಶೋಕ್ ಕುಮಾರ್, ಆರ್.ಎಫ್.ಟಿ ರಾಮು, ಎಫ್.ಎಸ್.ಟಿ.ಒ ಮುಕ್ತಾಮ್ ಹುಸೇನ್ ಹಾಗೂ ಸಿಬ್ಬಂದಿ ಸುನೀಲ್, ಸತೀಶ್, ಸಂತೋಷ್ ಮತ್ತು ಮನೋಜ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಔಷಧ ಮಳಿಗೆ ಬಂದ್

ಬೆಂಗಳೂರು: ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ರಾಜ್ಯದಾದ್ಯಂತ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಔಷಧಿ ಮಳಿಗೆಯನ್ನು ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ.



ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಔಷಧಿ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಆರ್.ರಘುನಾಥ ರೆಡ್ಡಿ, ರಾಜ್ಯದಲ್ಲಿ ಸುಮಾರು 26 ಸಾವಿರ ಔಷಧಿ ಮಳಿಗೆಗಳ ಪೈಕಿ ಬೆಂಗಳೂರಿನಲ್ಲಿ 6,500 ಸಾವಿರ ಔಷಧಿ ಮಳಿಗೆಗಳು ಬಂದ್ ಆಗಲಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಆಸ್ಪತ್ರೆ ಬಳಿಯೊಂದಿಗಿರುವ ಔಷಧಿ ಮಳಿಗೆಗಳಿಗೆ ಬಂದ್ ಮಾಡುತ್ತಿಲ್ಲ. ಇ ಫಾರ್ಮಸಿ ಮೂಲಕ ಔಷಧಿ ಮಾರಾಟ ಮಾಡುವುದು ಕಾನೂನಿನಲ್ಲಿ ಅವಕಾಶವಿಲ್ಲ. ಈ ಬಗ್ಗೆ ಹೈಕೋರ್ಟ್ ಆದೇಶಗಳಿವೆ, ಆದರೆ ಅವುಗಳನ್ನು ಪಾಲಿಸುತ್ತಿಲ್ಲ ಎಂದರು.

ಇ ಫಾರ್ಮಸಿಗಳು ರಿಯಾಯತಿಯನ್ನು ನೀಡುತ್ತದೆ, ಅದು ಶೇ.16ರಿಂದ 20ರವರೆಗೆ ನಿಯಂತ್ರಿತ ಮಾರ್ಜಿನ್ ರಚನೆಗೆ ಅಡ್ಡಿಪಡಿಸುತ್ತಿದೆ ಮತ್ತು ಸಣ್ಣ ಚಿಲ್ಲರೆ ವ್ಯಾಪಾರಿಗಳ ವ್ಯಾಪರಕ್ಕೆ ಕುಂಟಿತ ಆಗುತ್ತಿದೆ ಎಂದು ಹೇಳಿದರು.

ಸಂಪೂರ್ಣ ಔಷಧಿ ಮಳಿಗೆ ಬಂದ್: ಬಂದ್ ಮಾಡಲೇಬೇಕು, ಯಾಕೆಂದರೆ ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ಮಾಡುವುದರಿಂದ ಮಾರಾಟ ಮಾಡುವವರಿಗೆ ಶೇ.50ರಷ್ಟು ನಷ್ಟವಾಗಿದೆ. ರಿಯಾಯತಿಯನ್ನು ನೀಡುವುದರಿಂದ ನಮಗೆ ಅದನ್ನು ಮೀರಿಸಲು ಸಾಧ್ಯವಿಲ್ಲ, ಆನ್‌ಲೈನ್ ಯಾವ ಆಧಾರದಲ್ಲಿ ರಿಯಾಯತಿ ನೀಡುತ್ತಿದ್ದಾರೆ ಎಂಬುದು ನಮಗೆ ತಿಳಿಯಬೇಕಾಗಿದೆ. ಜನರಿಗೆ ತೊಂದರೆ ಆಗಲಿದೆ, ಸರ್ಕಾರಕ್ಕೆ ಹಲವು ಭಾರಿ ಮನವಿ ಮಾಡಿದರು ಎಚ್ಚೆತ್ತುಕೊಳ್ಳಲಿಲ್ಲ. ಹಾಗಾಗಿ ಪ್ರತಿಭಟನೆ ಮಾಡಲೇಬೇಕಾದ ಪರಿಸ್ಥಿತಿಯಿದೆ ಎಂದು ಔಷಧಿ ಮಳಿಗೆ ಮಾಲೀಕ ವೆಂಕಟೇಶ್ ಹೇಳಿದ್ದಾರೆ.

ಕೆಎಸ್‌ಡಿಎಲ್‌ಗೆ ಝೆಪ್ಟೋ ಪುರಸ್ಕಾರ

ಬೆಂಗಳೂರು: ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಸಂಸ್ಥೆಯು ತನ್ನ ಪಾರಂಪರಿಕ ಉತ್ಪನ್ನವಾಗಿರುವ ಮೈಸೂರು ಸ್ಯಾಂಡಲ್ ಸೋಪ್ ವಹಿವಾಟು ಉಪಕ್ರಮಕ್ಕಾಗಿ ತ್ವರಿತ ವಾಣಿಜ್ಯ ವಹಿವಾಟು (ಕ್ವಿಕ್ ಕಾಮರ್ಸ್) ವಿಭಾಗದಲ್ಲಿ ಪ್ರತಿಷ್ಠಿತ ಝೆಪ್ಟೋ ಕಂಪನಿಯ ಪೂರೈಕೆ ಸರಪಳಿ ಉತ್ಕೃಷ್ಟತಾ ಪುರಸ್ಕಾರಕ್ಕೆ ಪಾತ್ರವಾಗಿದೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸಚಿವ ಎಂ.ಬಿ ಪಾಟೀಲ ಅವರು, ಸಂಸ್ಥೆಯ ಅಧ್ಯಕ್ಷ ಸಿ.ಎಸ್ ಅಪ್ಪಾಜಿ ನಾಡಗೌಡ, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ ಪ್ರಶಾಂತ್ ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವನ್ನು ಅಭಿನಂದಿಸಿದ್ದು, ಕೆಎಸ್‌ಡಿಎಲ್ ಸಂಸ್ಥೆಯು ತನ್ನ ಪರಂಪರೆ ಮತ್ತು ನಂಬಿಕೆಗಳನ್ನು ಬಿಟ್ಟುಕೊಡದೆ, ಇ-ಕಾಮರ್ಸ್, ಕ್ವಿಕ್ ಕಾಮರ್ಸ್ ವಹಿವಾಟು ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಅದರಲ್ಲಿ ಯಶಸ್ಸು ಸಾಧಿಸಿರುವುದನ್ನು ಈ ಪ್ರಶಸ್ತಿಯು ಪ್ರತಿಫಲಿಸುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ಸ್ಯಾಂಡಲ್ ಪ್ರಥಮ: ಝೆಪ್ಟೋ ತ್ವರಿತ ವಹಿವಾಟು ವೇದಿಕೆಗಳಲ್ಲಿ ಎರಡು ವರ್ಷಗಳ ಹಿಂದೆ ತಿಂಗಳಿಗೆ ಕೇವಲ 10 ಲಕ್ಷ ರೂಪಾಯಿ ಮೌಲ್ಯದ ಮೈಸೂರು ಸ್ಯಾಂಡಲ್ ಸೋಪ್ ಮಾರಾಟವಾಗುತ್ತಿತ್ತು.

ಲೋಕಾ ಬಲೆಗೆ ಮನೋಜ್, ಕಾಂತರಾಜ್

ಬೆಂಗಳೂರು: ತಾತ್ಕಾಲಿಕ ವಿದ್ಯುತ್ ಮೀಟರ್‌ಗೆ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಸಂಪರ್ಕ ಮಂಜೂರು ಮಾಡಲು 50 ಸಾವಿರ ಲಂಚ ಪಡೆಯುತ್ತಿದ್ದ ಜೆ.ಪಿ. ನಗರದ ಬೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರು ಹಾಗೂ ಅವರ ಪರವಾಗಿ ಹಣ ಪಡೆಯುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಮಂಗಳವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಬೆಸ್ಕಾಂ ಎಸ್12 ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತ ಮನೋಜ್ ಕುಮಾರ್ ಬಿ. (53) ಮತ್ತು ಅವರ ಪರವಾಗಿ ಲಂಚದ ಹಣ ಸ್ವೀಕರಿಸುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜು ಬಂಧಿತ ಆರೋಪಿಗಳಾಗಿದ್ದಾರೆ. ಪೀಣ್ಯದ ಹೆಗ್ಗನಹಳ್ಳಿಯ ನಿವಾಸಿ ಎನ್. ರಘುರಾಜ್ ಎಂಬವರು ತಮ್ಮ ಕೆಲಸವೊಂದಕ್ಕೆ ತಾತ್ಕಾಲಿಕ ಮೀಟರ್‌ಗಾಗಿ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿ ಕೋರಿ ಜೆ.ಪಿ. ನಗರದ 7ನೇ ಹಂತದಲ್ಲಿರುವ ಬೆಸ್ಕಾಂ ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಈ ಅಧಿಕೃತ ಕೆಲಸ ಮಾಡಿಕೊಡಲು ಎಇಇ ಮನೋಜ್ ಕುಮಾರ್ ಅವರು 50,000 ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ಈ ಬಗ್ಗೆ ರಘುರಾಜ್ ಅವರು ನಗರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ರೆಡ್ ಹ್ಯಾಂಡ್‌ಆಗಿ ಆರೋಪಿಗಳ ವಶಕ್ಕೆ: ದೂರಿನ ಅನ್ವಯ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡ ಲೋಕಾ ಪೊಲೀಸರು ಕಾರ್ಯಾಚರಣೆ ನಡೆಸಿದರು. ಯೋಜನೆಯ ಪ್ರಕಾರ, ದೂರುದಾರರು ಹಣ ತರುತ್ತಿದ್ದಂತೆ ಎಇಇ ಮನೋಜ್ ಕುಮಾರ್ ಆ ಲಂಚದ ಹಣವನ್ನು ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜುಗೆ ನೀಡುವಂತೆ ಸೂಚಿಸಿದ್ದರು. ಅದರಂತೆ ಕಾಂತರಾಜು ದೂರುದಾರರಿಂದ 50,000 ರೂ. ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಆತನನ್ನು ರೆಡ್ ಹ್ಯಾಂಡ್‌ಆಗಿ ವಶಕ್ಕೆ ಪಡೆದು, ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ.

ಲೋಕಾಯುಕ್ತ ಬೆಂಗಳೂರು ನಗರ -2 ರ ಎಸ್.ಪಿ. ಶಿವಪ್ರಕಾಶ್ ದೇವರಾಜು, ಅವರ ಮಾರ್ಗದರ್ಶನದಲ್ಲಿ ಹಾಗೂ ಡಿಎಸ್ಪಿ ಸತೀಶ್ ಎಂ.ಎಚ್. ಅವರ ಮೇಲ್ವಿಚಾರಣೆಯಲ್ಲಿ ಈ ಯಶಸ್ವಿ ದಾಳಿ ನಡೆದಿದೆ.

ಜೆಡಿಎಸ್ ಮುಖಂಡರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ

ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ

ಬೆಂಗಳೂರು: ನನಗೆ ಲೆಟರ್ ಹೆಡ್, ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ. ಸಕ್ರಿಯವಾಗಿ ಪಕ್ಷದ ಕೆಲಸವನ್ನು ನಿಷ್ಠೆಯಿಂದ ಮಾಡುವವರು ಬೇಕು. ಮುಂದಿನ ದಿನಗಳಲ್ಲಿ ಅಂಥವರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜೆಡಿಎಸ್ ಮುಖಂಡರಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಜಿಲ್ಲಾಧ್ಯಕ್ಷರ ಸಭೆ ಉದ್ದೇಶಿಸಿ ಮಾತನಾಡಿ, ಪಕ್ಷ ಸಂಘಟನೆಯನ್ನು ನಿಷ್ಠೆಯಿಂದ ಮಾಡಬೇಕು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಕೇವಲ ವಿಸಿಟಿಂಗ್ ಕಾರ್ಡ್ ಮತ್ತು ಲೆಟರ್ ಹೆಡ್ ಶೋಕಿ ಇರುವ ಜನ ನನಗೆ ಬೇಕಿಲ್ಲ. ಅಂಥವರಿಂದ ಪಕ್ಷಕ್ಕೆ ಯಾವುದೇ ಉಪಯೋಗ ಇಲ್ಲ ಎಂದು ತೀಕ್ಷ್ಣವಾಗಿ ನುಡಿದರು. ಯಾವುದೇ ಹುದ್ದೆ ಸಿಕ್ಕಿದೆ ಎಂದರೆ ಅದು ಅಜೀವ ಹುದ್ದೆ ಅಲ್ಲ. ಯಾವುದೇ ಜವಾಬ್ದಾರಿ ಸಿಕ್ಕಿದರೂ ಪಕ್ಷದ ಕೆಲಸ ಮಾಡುವುದಕ್ಕೆ ಸಿಕ್ಕಿದ ಅವಕಾಶ ಅಷ್ಟೇ. ಹೀಗಾಗಿ ಪ್ರತಿಯೊಬ್ಬರೂ ಪಕ್ಷದ ಕೆಲಸ ಮಾಡಬೇಕು ಎಂದು ಹೇಳಿದರು.



ಅಖಂಡ ಶ್ರೀನಿವಾಸಮೂರ್ತಿ ಶೀಘ್ರವೇ ಜೆಡಿಎಸ್‌ಗೆ?

ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಜೆಡಿಎಸ್ ಸೇರುವುದು ಖಚಿತವಾಗಿದ್ದು, ಈ ವಿಷಯವನ್ನು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೇ ಖಚಿತಪಡಿಸಿದ್ದಾರೆ. ಮಂಗಳವಾರ ಬೆಳಗ್ಗೆ ಕಾವಲ್‌ಭೈರಸಂದ್ರದಲ್ಲಿರುವ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಭೇಟಿ ನೀಡಿದ ಕುಮಾರಸ್ವಾಮಿ ಸುಮಾರು ಒಂದು ತಾಸಿನ ಅವರ ಮನೆಯಲ್ಲಿದ್ದು ಮಾತುಕತೆ ನಡೆಸಿದ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಇದೊಂದು ಗೌರವಪೂರ್ವಕ ಭೇಟಿಯಾಗಿದ್ದು, ಜೆಡಿಎಸ್ ಪಕ್ಷ ಸೇರಲು ಅವರು ಉತ್ಸುಕರಾಗಿದ್ದಾರೆ. ಸದ್ಯದಲ್ಲೇ ದಿನಾಂಕ ನಿಗದಿ ಮಾಡಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಪಕ್ಷದ ಬಲವರ್ಧನೆಗೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಈಗಿನಿಂದಲೇ ಪಕ್ಷಕ್ಕೆ ಶಕ್ತಿ ತುಂಬುತ್ತಿದ್ದೇವೆ. ಅದರ ಭಾಗವಾಗಿ ಅಖಂಡ ಶ್ರೀನಿವಾಸ ಮೂರ್ತಿ ಅವರು ಜೆಡಿಎಸ್ ಸೇರುತ್ತಿದ್ದಾರೆ ಎಂದು ಖಚಿತಪಡಿಸಿದರು. ಸಂಸದ ಮಲ್ಲೇಶ್ ಬಾಬು, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಮ್. ರಮೇಶ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ ಸೇರಿದಂತೆ ಅನೇಕ ಮುಖಂಡರು ಇದ್ದರು.

ಕಾದಾಟದಲ್ಲಿ ಗಾಯಗೊಂಡಿದ್ದ ಮಾರ್ತಾಂಡ ಆನೆ ಸಾವು

ಮಡಿಕೇರಿ: ದುಬಾರೆ ಶಿಬಿರದಲ್ಲಿ ಸೋಮವಾರ ಎರಡು ಸಾಕಾನೆಗಳ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 'ಮಾರ್ತಾಂಡ' ಆನೆ ಮಂಗಳವಾರ ಮುಂಜಾನೆ ಸಾವಿಗೀಡಾಗಿದೆ.

ಸೋಮವಾರ ಆನೆಗಳ ಸ್ನಾನದ ಸಂದರ್ಭ ದಸರಾ ಆನೆ ಕಂಜನ್ ಮತ್ತು ಮಕನಾ ಆನೆ ಮಾರ್ತಾಂಡ ನಡುವೆ ನಡೆದ ಕಾಳಗದ ಸಂದರ್ಭ ಸ್ಥಳದಲ್ಲಿದ್ದ ಚೆನ್ನೈ ಮೂಲದ ಪ್ರವಾಸಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದರು. ಜೊತೆಗೆ ಆನೆಯೂ ತೀವ್ರವಾಗಿ ಗಾಯಗೊಂಡಿತ್ತು. ಕಂಜನ್ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ (34) ಆನೆಗೆ ವನ್ಯಜೀವಿ ತಜ್ಞ ವೈದ್ಯ ಮುಜೀಬ್ ಅವರು ಚಿಕಿತ್ಸೆ ನೀಡುತ್ತಿದ್ದರು.

ಆದರೆ ಕಂಜನ್ ಆನೆ ದಾಳಿಯ ತಿವಿತದಿಂದ ಗಂಭೀರ ಗಾಯಗೊಂಡಿದ್ದ ಮಾರ್ತಾಂಡ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮುಂಜಾನೆ ಮೃತಪಟ್ಟಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಕೊಡಗು ಜಿಲ್ಲಾಡಳಿತಕ್ಕೆ ಸಚಿವ ಎನ್.ಎಸ್. ಭೋಸರಾಜು ಸೂಚನೆ

ದುಬಾರೆ ಶಿಬಿರದಲ್ಲಿ ಮಾರ್ಗಸೂಚಿ ಪಾಲಿಸಿ

ಬೆಂಗಳೂರು: ಕೊಡಗು ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ವೇಳೆ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅತ್ಯಂತ ದುರದೃಷ್ಟಕರ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ದುಬಾರೆ ಶಿಬಿರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಕೊಡಗು ಜಿಲ್ಲಾಡಳಿತಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚನೆ ನೀಡಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ದುರಂತದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಪ್ರಾಥಮಿಕ ಮಾಹಿತಿ ಪಡೆದುಕೊಂಡಿದ್ದೇನೆ. ಘಟನೆಗೆ ನಿಖರ ಕಾರಣಗಳೇನು ಮತ್ತು ಪ್ರವಾಸಿ ಮಾರ್ಗಸೂಚಿ ನಿರ್ವಹಣೆಯಲ್ಲಿ ಏನಾದರೂ ಲೋಪವಾಗಿದೆಯೇ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ಮಾರ್ತಾಂಡ ಸಾವಿಗೆ ಕಂಬನಿ

ಇದೇ ವೇಳೆ, ಸೋಮವಾರ ದುಬಾರೆ ಶಿಬಿರದಲ್ಲಿ ನಡೆದ ಸಾಕಾನೆಗಳ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಮಾರ್ತಾಂಡ ಆನೆಯು ಮಂಗಳವಾರ ಬೆಳಗ್ಗೆ ಮೃತಪಟ್ಟಿರುವ ಸುದ್ದಿ ತಿಳಿದು ಸಚಿವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಮಾರ್ತಾಂಡನ ಅಗಲಿಕೆ ಶಿಬಿರದ ಸಿಬ್ಬಂದಿ ಹಾಗೂ ಪ್ರಾಣಿ ಪ್ರಿಯರಿಗೆ ನೋವು ತಂದಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.


ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಆನೆ ಶಿಬಿರಗಳಲ್ಲಿ ಕಟ್ಟುನಿಟ್ಟಾಗಿ ಪ್ರವಾಸಿಗರ ನಿರ್ವಹಣೆಗೆ ಮಾರ್ಗಸೂಚಿ ಜಾರಿಗೆ ತರಲು ಸಚಿವರು ನಿರ್ದೇಶಿಸಿದ್ದಾರೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವಂತೆ ನಿಗಾವಹಿಸಬೇಕು. ಜಿಲ್ಲಾಡಳಿತವು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಾಡುಪ್ರಾಣಿಗಳ ನಡವಳಿಕೆಯನ್ನು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ನಿಖರವಾಗಿ ಊಹಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಅರಣ್ಯ ಪ್ರದೇಶಗಳು ಹಾಗೂ ಆನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರಾಣಿಗಳನ್ನು ವೀಕ್ಷಿಸುವಾಗ ಅಂತರ ಕಾಯ್ದುಕೊಳ್ಳುವ ಜೊತೆಗೆ ತಮ್ಮ ಸುರಕ್ಷತೆಯ ಬಗ್ಗೆ ತೀವ್ರ ಎಚ್ಚರಿಕೆ ವಹಿಸಬೇಕು ಎಂದು ಸಚಿವರು ಪ್ರವಾಸಿಗರಲ್ಲಿ ಕಾಳಜಿಯ ಮನವಿ ಮಾಡಿದ್ದಾರೆ.

ಸಾರ್ಥಕ ಜನಸೇವೆ

ವರ್ಷ ಮೂರು, ಹರ್ಷ ನೂರಾರು





3 ಕರ್ನಾಟಕದ ಗ್ಯಾರಂಟಿಗಳಿಗೆ ವರ್ಷದ ಹರ್ಷ



ಕರ್ನಾಟಕ ರಾಜ್ಯದಲ್ಲಿ ಗ್ಯಾರಂಟಿ ಶಕೆ ಆರಂಭವಾಗಿ ಇಂದಿಗೆ 1,097 ದಿನಗಳು ಸಂದಿವೆ. ಕನ್ನಡಿಗರ ವಿಶ್ವಾಸ ಗಳಿಸಿ ರಾಜ್ಯದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇಂದು ಮೂರು ವರ್ಷಗಳನ್ನು ಪೂರೈಸಿ ನಾಲ್ಕನೇ ವರ್ಷಕ್ಕೆ ಕಾಲಿರಿಸಿದೆ.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಹಾಗೂ ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು 2023ರ ಮೇ 20ರಿಂದ ಈವರೆಗೆ ಜನರಲ್ಲಿ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ. ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷ ನೀಡಿರುವ ಭರವಸೆಗಳು ಈ ಸರ್ಕಾರದ ಅವಧಿಯಲ್ಲಿ ಈಡೇರುತ್ತಿವೆ. ಜಾಗತಿಕ ಪ್ರಶಂಸೆಗೆ ಕಾರಣವಾಗಿರುವ ಗ್ಯಾರಂಟಿ ಯೋಜನೆಗಳು, ಜಗತ್ತಿನ ಮೂಲೆಮೂಲೆಗಳಿಂದ ಅಬಾಧಿತವಾಗಿ ಬಂಡವಾಳ ಹರಿದು ಬರಲು ಕಾರಣವಾಗಿರುವ ಅಭಿವೃದ್ಧಿ ಯೋಜನೆಗಳು, ಭೌಗೋಳಿಕ, ಸಾಮಾಜಿಕ ಕಂದರಗಳನ್ನು ಮೀರಿರುವ ಕಲ್ಯಾಣ ಯೋಜನೆಗಳು.. ಇವೆಲ್ಲವೂ ಕರ್ನಾಟಕದ ಪ್ರಗತಿಯ ಸಾಧನೆಯನ್ನು ಸಾರಿ ಸಾರಿ ಹೇಳುತ್ತಿವೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮಾನವಿಕ, ಸಾಮಾಜಿಕ, ಆರ್ಥಿಕ ಪ್ರಗತಿಗೆ ಅಪಾರ ಕೊಡುಗೆ ನೀಡುವಂತಹ ಹತ್ತು ಹಲವು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಕೃಷಿ ಕ್ಷೇತ್ರದಿಂದ ಐಟಿ-ಬಿಟಿಯವರೆಗೆ, ಪಾರಂಪರಿಕ ಉದ್ಯಮಗಳಿಗೆ ಉತ್ತೇಜನ ನೀಡುವುದರಿಂದ ಹಿಡಿದು ನವೋದ್ಯಮಗಳ ನೆಚ್ಚಿನ ಜಾಗತಿಕ ತಾಣ ಎನ್ನುವ ಗರಿಮೆಯನ್ನು ಪಡೆಯುವವರೆಗೆ ಕಾಂಗ್ರೆಸ್ ಸರ್ಕಾರದ ಪ್ರಗತಿಯ ಮಾದರಿಯಿಂದ ಯಾವುದೇ ಕ್ಷೇತ್ರವಾಗಲಿ ಅಥವಾ ವ್ಯಕ್ತಿಯಾಗಲಿ ಹೊರಗುಳಿದಿಲ್ಲ.

ಸಮ ಸಮಾಜದ ಪರಿಕಲ್ಪನೆಯಲ್ಲಿ ಅಧಿಕಾರ ಸ್ವೀಕಾರದ ಹೊಸ್ತಿಲಲ್ಲಿ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರ ನೀಡಿದ್ದ ಪಂಚ ಗ್ಯಾರಂಟಿ ಯೋಜನೆಗಳು ಸರ್ಕಾರದ ಜನಪರ ಕಾಳಜಿಯ ಪ್ರತೀಕವಾಗಿದ್ದವು. ಮಾತ್ರವಲ್ಲ, ಎಲ್ಲರಿಗೂ ಘನತೆಯುಕ್ತ ಬದುಕು, ಸಮಾನ ಅವಕಾಶ ಕಲ್ಪಿಸುವ ಸಂವಿಧಾನದ ಆಶಯದ ಪರಿಪಾಲನೆಯೂ ಆಗಿತ್ತು. ಕಾಂಗ್ರೆಸ್ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನರ ಬದುಕಿಗೆ ಭದ್ರತೆ ಒದಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,39,123 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ವೆಚ್ಚಮಾಡಲಾಗಿದೆ. ರಾಜ್ಯದ ಹಣಕಾಸು ಪರಿಸ್ಥಿತಿ ಅಯೋಮಯವಾಗುತ್ತದೆ ಎಂದು ಟೀಕಿಸಿದವರ ಪಾಲಿಗೆ ಈ ಯೋಜನೆಗಳ ಜನಪ್ರಿಯತೆಯು ಉತ್ತರ ನೀಡಿವೆ.

ಬಡವರ, ದಲಿತರ, ಕಾರ್ಮಿಕರ, ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಣೆ, ಸಕಾರಾತ್ಮಕ ಬದಲಾವಣೆ ಸರ್ಕಾರದ ಗುರಿ. ಸರ್ವೋದಯ, ಸಮಾನತೆ ಸಮೃದ್ಧಿ, ಸಹಬಾಳ್ವೆ, ಸಬಲೀಕರಣಗಳ ಧ್ಯೇಯ ಮಂತ್ರವನ್ನು ಪಾಲಿಸುತ್ತಾ ಪಂಚ ಗ್ಯಾರಂಟಿ ಯೋಜನೆಗಳೊಂದಿಗೆ ರಾಜ್ಯ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಆರ್ಥಿಕ ಶಿಸ್ತುಪಾಲನೆಯ ಚೌಕಟ್ಟಿನೊಳಗೆ ಸರ್ಕಾರ ಅನುಸರಿಸಿದ ರೀತಿ-ನೀತಿಗಳು ದೇಶದ ಇತರ ರಾಜ್ಯಗಳು ಕರ್ನಾಟಕ ರಾಜ್ಯವನ್ನು ಅನುಕರಿಸುವಷ್ಟರ ಮಟ್ಟಿಗೆ ಮಾದರಿ ಪ್ರಬಲ ಯೋಜನೆಗಳಾಗಿವೆ.

ಸರ್ಕಾರ ಸಾಮಾಜಿಕ ನ್ಯಾಯದತ್ತ ಪ್ರಾಮಾಣಿಕ ಹೆಜ್ಜೆಗಳನ್ನಿರಿಸಿದೆ. ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯಡಿ ರೂಪಿಸಲಾದ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಯ ದೈನಂದಿನ ಬದುಕಿನ ಮೇಲೆ ಬೀಳುತ್ತಿರುವ ಆರ್ಥಿಕ ಹೊರೆಯ ಒಂದು ಪಾಲನ್ನು ಸರ್ಕಾರ ಹೊರುತ್ತಿದೆ. ಸರ್ಕಾರದ ಈ ನಡೆಯನ್ನು ಜನತೆ ಇಂದು ಹೆಮ್ಮೆಯಿಂದ ಹಾಗೂ ಕೃತಜ್ಞತೆಯಿಂದ ಸ್ಮರಿಸುತ್ತಿದ್ದಾರೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆಯೊಂದರಲ್ಲೇ ರಾಜ್ಯದ ಮಹಿಳೆಯರು ಕಳೆದ ಮೂರು ವರ್ಷಗಳಲ್ಲಿ 726 ಕೋಟಿ (ಟಿಕೆಟ್) ಉಚಿತ ಪ್ರಯಾಣ ನಡೆಸಿದ್ದಾರೆ. ಇದಕ್ಕಾಗಿ ಸರ್ಕಾರದಿಂದ 18,945 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಕುಟುಂಬದ ಮುಖ್ಯಸ್ಥೆಗೆ ಮಾಸಿಕ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಯಲ್ಲಿ 1.24 ಕೋಟಿ ಮಹಿಳೆಯರಿಗೆ 74,216 ಕೋಟಿ ರೂ.ಗಳನ್ನು ನೀಡಲಾಗಿದೆ. ಉಚಿತ ವಿದ್ಯುತ್ ಮೂಲಕ ಮನೆಯನ್ನು ಬೆಳಗುವ ಗೃಹ ಜ್ಯೋತಿ ಯೋಜನೆಯಲ್ಲಿ 1.67 ಕೋಟಿ ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. ಇದಕ್ಕಾಗಿ ಸರ್ಕಾರ ಮೂರು ವರ್ಷಗಳಲ್ಲಿ ವ್ಯಯಿಸಿರುವುದು 26,115 ಕೋಟಿ ರೂ.ಗಳಾಗಿವೆ. ಅನ್ನಭಾಗ್ಯ ಯೋಜನೆಯಲ್ಲಿ 30.88 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ವಿತರಣೆ ಮಾಡಲಾಗಿದೆ. ಅಲ್ಲದೇ 4.44 ಕೋಟಿ ಜನರಿಗೆ ನೇರವಾಗಿ ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ 18,897 ಕೋಟಿ ರೂ.ಗಳನ್ನು ಈವರೆಗೆ ಜಮೆ ಮಾಡಲಾಗಿದೆ. ಅಲ್ಲದೇ 3.38 ಲಕ್ಷ ನಿರುದ್ಯೋಗಿ ಯುವ ಜನತೆಗೆ ಯುವನಿಧಿ ಯೋಜನೆಯಲ್ಲಿ 950 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಪಂಚ ಗ್ಯಾರಂಟಿಗಳಾಗಿ ಉಳಿಯದೇ ಷಡ್‌ಗ್ಯಾರಂಟಿಗಳಾಗಿವೆ. ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಬಂದಿದೆ.

ಉದ್ಯೋಗ ಸೃಷ್ಟಿ: ಮುಂಚೂಣಿಯಲ್ಲಿ ಕರ್ನಾಟಕ

ದೇಶದೆಲ್ಲೆಡೆ ಉದ್ಯೋಗ ಹಿಂಜರಿಕೆ ಕಂಡು ಬರುತ್ತಿರುವಾಗಲೂ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿರುವ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಕರ್ನಾಟಕದ ಪ್ರಗತಿಯ ಕಥೆಗೆ ಕನ್ನಡಿ ಹಿಡಿಯಲು ಇಂದು ದೇಶದ ಮೂಲೆಮೂಲೆಗಳಿಂದ ರಾಜ್ಯಕ್ಕೆ ಉದ್ಯೋಗಾವಕಾಶಗಳನ್ನು ಅರಸಿ ಬರುವ ವಲಸೆ ಪ್ರಮಾಣದಲ್ಲಿ ಉಂಟಾಗಿರುವ ಹೆಚ್ಚಳ ನೋಡಬಹುದು. ಕರ್ನಾಟಕವೆಂದರೆ ಪ್ರಗತಿ ಎನ್ನುವುದು ದೇಶಕ್ಕೇ ಇಂದು ತಿಳಿದಿದೆ. ಅದೇ ರೀತಿ, ಒಳಮೀಸಲಾತಿ, ಉಪಯೋಜನೆಗಳು, ಗುತ್ತಿಗೆಯಲ್ಲಿನ ಮೀಸಲಾತಿ ನೀಡುವಂತಹ ಕ್ರಾಂತಿಕಾರಕ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯದ ಬೇರುಗಳು ಆಳವಾಗಲು ಶ್ರಮಿಸಿದೆ.

ಭೂ ಗ್ಯಾರಂಟಿ ಯೋಜನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದೆ. ದಶಕಗಳಿಂದ ಕಂದಾಯ ವ್ಯಾಪ್ತಿಗೆ ಬಾರದ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅದರಲ್ಲಿನ ಕುಟುಂಬಗಳಿಗೆ ಉಳುವವನೇ ಭೂಮಿಯ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯ ಒಡೆಯ ಎಂದು ಹಕ್ಕುಪತ್ರಗಳನ್ನು ವಿತರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕರ್ನಾಟಕದ ಭೂಮಿ ಹಕ್ಕುಪತ್ರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಮಹತ್ವದ ಯೋಜನೆಯಾಗಿದ್ದು, ಸರ್ಕಾರಕ್ಕೆ ಎರಡು ವರ್ಷ ಭರ್ತಿಯಾದಾಗ ಈ ಯೋಜನೆ ಜಾರಿಗೊಳಿಸಲಾಯಿತು. ಈವರೆಗೆ ತಾಂಡಾ, ಹಟ್ಟಿ ಪ್ರದೇಶಗಳಲ್ಲಿ ವಾಸಿಸುತ್ತಿರುವ 2.20 ಲಕ್ಷ ಜನರಿಗೆ ಭೂದಾಖಲೆಗಳನ್ನು ಉಚಿತವಾಗಿ ನೀಡಿ ಭೂ ರಕ್ಷಣೆ ಒದಗಿಸಿದೆ. ಸರ್ಕಾರದ ಮೂರನೇ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಭೂಗ್ಯಾರಂಟಿ ಯೋಜನೆಯಲ್ಲಿ 1,52,492 ಕುಟುಂಬಗಳಿಗೆ ಹಕ್ಕುಪತ್ರ/ದಾಖಲೆ/ಆದೇಶಪತ್ರಗಳನ್ನು ವಿತರಿಸಲಾಯಿತು.

ಬೆಂಗಳೂರು ನಗರದಲ್ಲಿ ಈ ಯೋಜನೆಯಲ್ಲಿ ಆಸ್ತಿ ದಾಖಲೆಗಳ ಡಿಜಿಟಲೀಕರಣ ಮತ್ತು ಬಿ ಖಾತಾವನ್ನು ಎ ಖಾತಾವಾಗಿ ಸುಲಭವಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲದೇ ಬಿ ಖಾತಾವನ್ನು ಎ ಖಾತಾಕ್ಕೆ ಬದಲಾಯಿಸಲು ಇದ್ದ ಮಾರ್ಗಸೂಚಿ ಶುಲ್ಕವನ್ನು ಶೇ.5ರಿಂದ ಶೇ. 2ಕ್ಕೆ ಇಳಿಸಲಾಗಿದೆ.

“ಜನಸಾಮಾನ್ಯರ ಪರವಾಗಿ ನಮ್ಮ ಸರ್ಕಾರ ಕೈಗೊಂಡ ಯೋಜನೆಗಳಿಗೆ ಸಿಕ್ಕಿರುವ ಅಭೂತಪೂರ್ವ ಸ್ಪಂದನೆ ನೋಡಿದಾಗ ಮೂರು ವರ್ಷದ ಪರಿಕ್ರಮಣ ಸಾರ್ಥಕ ಭಾವ ಮೂಡಿಸುತ್ತದೆ. ನಮ್ಮ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮ ಸರ್ಕಾರದ ಆಡಳಿತದ ಮೂಲಮಂತ್ರವೇ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು. ಕಳೆದ ಮೂರು ವರ್ಷಗಳಲ್ಲಿ ನಾವು ಎದುರಿಸಿದ ಸವಾಲುಗಳು ಅನೇಕ. ಆದರೆ, ಕನ್ನಡಿಗರ ಹಿತರಕ್ಷಣೆಯ ವಿಷಯದಲ್ಲಿ ನಾವು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಮಾಹಿತಿ ತಂತ್ರಜ್ಞಾನ, ನವೋದ್ಯಮ, ಮೂಲಸೌಕರ್ಯ, ಕೃಷಿ, ಆರೋಗ್ಯ ಕ್ಷೇತ್ರಗಳಲ್ಲಿ ಕರ್ನಾಟಕವು ಜಾಗತಿಕ ಮಟ್ಟದಲ್ಲಿ ತನ್ನ ಮುಂಚೂಣಿ ಸ್ಥಾನವನ್ನು ಕಾಯ್ದುಕೊಂಡಿದೆ. ನಾವು ನಡೆದು ಬಂದ ಹಾದಿ ತೃಪ್ತಿ ತಂದಿದೆ, ತಲುಪಬೇಕಾದ ಗುರಿ ಇನ್ನೂ ದೂರವಿದೆ. ನವ ಕರ್ನಾಟಕದ ನಿರ್ಮಾಣದತ್ತ ನಮ್ಮ ಪಯಣ ಹೀಗೆಯೇ ಮುಂದುವರಿಯಲಿದೆ.

■ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನೆಯ ಮೈಲಿಗಲ್ಲುಗಳು

- **2023 ಮೇ 20** – ಸಿದ್ದರಾಮಯ್ಯ ಎರಡನೇ ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ
- **2023 ಜೂನ್ 2** – ಮೊದಲ ಸಚಿವ ಸಂಪುಟ ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಜಾರಿಗೊಳಿಸಲು ನಿರ್ಣಯ
- **2023 ಜೂನ್ 11** - ಶಕ್ತಿ ಯೋಜನೆ ಜಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಜುಲೈ 1** – ಅನ್ನಭಾಗ್ಯ ಯೋಜನೆ ಜಾರಿ; ತಲಾ 10 ಕೆಜಿ ಅಕ್ಕಿ ವಿತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ
- **2023 ಜುಲೈ 7** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 14ನೇ ಬಾರಿಗೆ ಬಜೆಟ್ ಮಂಡನೆ
- **2023 ಆಗಸ್ಟ್ 5** – ಗೃಹಜ್ಯೋತಿ ಯೋಜನೆಗೆ ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಅಕ್ಟೋಬರ್ 11** - ರಾಜ್ಯ ಶಿಕ್ಷಣ ನೀತಿ (ಎಸ್ಇಪಿ) ರೂಪಿಸಲು ಪ್ರೊ. ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ 15 ಸದಸ್ಯರ ಸಮಿತಿ ರಚನೆ
- **2024 ಜನವರಿ 12** – ಯುವನಿಧಿ ಯೋಜನೆಗೆ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಫೆಬ್ರವರಿ 16** – ಮುಖ್ಯಮಂತ್ರಿ ಅವರಿಂದ 15ನೇ ಬಾರಿಗೆ ಬಜೆಟ್ ಮಂಡನೆ
- **2024 ಫೆಬ್ರವರಿ 22** – ಸರ್ಕಾರಿ ಶಾಲಾ ಮಕ್ಕಳಿಗೆ ಬಹುಪೌಷ್ಠಿಕಾಂಶವುಳ್ಳ ಸಾಯಿ ಶ್ಯೂರ್ ರಾಗಿ ಮಾಲ್ಟ್ ನೀಡುವ ಕಾರ್ಯಕ್ರಮಕ್ಕೆ ಚಾಲನೆ
- **2024 ಆಗಸ್ಟ್ 25** – ದಕ್ಷಿಣ ಭಾರತದ ಪ್ರಪ್ರಥಮ ಹವಾನಿಯಂತ್ರಿತ ಪಾಲಿಕೆ ಬಜಾರ್ ಬೆಂಗಳೂರಿನಲ್ಲಿ ನಿರ್ಮಾಣ
- **2024 ಸೆಪ್ಟೆಂಬರ್ 26** – ಮಹತ್ವಕಾಂಕ್ಷೆಯ ನಾಲೆಡ್ಜ್-ಹೆಲ್ತ್-ಇನ್ನೋವೇಶನ್-ರಿಸರ್ಚ್ ಸಿಟಿ (ಕ್ವಿನ್ ಸಿಟಿ) ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಅಕ್ಟೋಬರ್ 24** – ಮನೆ ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡುವ ಗೃಹ ಆರೋಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2025 ಫೆಬ್ರವರಿ 12** – ಇನ್‌ವೆಸ್ಟ್ ಕರ್ನಾಟಕ ಸಮಾವೇಶಕ್ಕೆ ಚಾಲನೆ 10.27 ಲಕ್ಷ ಕೋಟಿ ರೂ.ಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ
- **2025 ಮಾರ್ಚ್ 7** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 16ನೇ ಬಾರಿಗೆ ಬಜೆಟ್ ಮಂಡನೆ
- **2025 ಏಪ್ರಿಲ್ 11**– ದೇಶದಲ್ಲೇ ಮೊದಲ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಮಸೂದೆಗೆ ಸಚಿವ ಸಂಪುಟ ಅಸ್ತು
- **2025 ಮೇ 1** – ಬೆಂಗಳೂರು ನಗರದ 12,692 ಗುತ್ತಿಗೆ ಪೌರಕಾರ್ಮಿಕರ ಸೇವೆ ಖಾಯಂ
- **2025 ಮೇ 20** – ರಾಜ್ಯ ಸರ್ಕಾರದ ಎರಡನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ 1,11,111 ಹಕ್ಕುಪತ್ರಗಳ ವಿತರಣೆ
- **2025 ಜೂನ್ 20** – ಸರ್ಕಾರಿ ನೌಕರರು, ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಆರೋಗ್ಯ ಭದ್ರತೆ; 50 ಲಕ್ಷ ರೂ.ವರೆಗೆ ನಗದು ರಹಿತ ಚಿಕಿತ್ಸೆಯ ಸೌಲಭ್ಯ
- **2025 ಸೆಪ್ಟೆಂಬರ್ 22** – ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025ಕ್ಕೆ ಚಾಲನೆ
- **2026 ಮಾರ್ಚ್ 6** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 17ನೇ ಬಾರಿಗೆ ಬಜೆಟ್ ಮಂಡನೆ
- **2026 ಏಪ್ರಿಲ್ 24** – ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ (ಎಡಗೈ ಸಮುದಾಯ - ಶೇ.5.25, ಬಲಗೈ ಸಮುದಾಯ - ಶೇ. 5.25 ಮತ್ತು ಇತರೆ ಉಪಜಾತಿ - ಶೇ.4.5)
- **2026 ಏಪ್ರಿಲ್ 28** – ವಿವಿಧ ಇಲಾಖೆಗಳಲ್ಲಿನ 56,432 ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ



ಸೇವೆಗಳ ಏಕೀಕರಣಕ್ಕಾಗಿ ಏಕಗವಾಕ್ಷಿ ವ್ಯವಸ್ಥೆ

ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಾಂಗ್ರೆಸ್ ಸರ್ಕಾರವು ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ. ಭೂಮಿ ಹಾಗೂ ಕಾವೇರಿ ತಂತ್ರಾಂಶಗಳನ್ನು ಆಧುನೀಕರಣಗೊಳಿಸಲಾಗಿದೆ. ಇನ್ನೂ ಹಲವು ತಂತ್ರಜ್ಞಾನಸ್ನೇಹಿ ಯೋಜನೆಗಳ ಅನುಷ್ಠಾನದ ಮೂಲಕ ಇಲಾಖೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿಪಡಿಸಲಾಗಿದೆ.

ದೇವಸ್ಥಾನಗಳ ಸಂರಕ್ಷಣೆಗೆ ಭೂ-ವರಾಹ ಯೋಜನೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಾಮಾನ್ಯ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ದೇವಾಲಯಗಳು, ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಮತ್ತು ವಿವಿಧ ಕಾಮಗಾರಿಗಳಿಗೆ ಸರ್ಕಾರದಿಂದ 6,311 ಧಾರ್ಮಿಕ ಸಂಸ್ಥೆಗಳಿಗೆ ಒಟ್ಟು 411.28 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಅಲ್ಲದೇ ರಾಜ್ಯದಲ್ಲಿ ಒತ್ತುವರಿಯಾಗಿರುವ 328 ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸಿ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲು ಭೂ ವರಾಹ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಇದಕ್ಕಾಗಿ 15 ಕೋಟಿ ರೂ.ಅನುದಾನ ಒದಗಿಸಲಾಗಿದೆ. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳಿಗೆ ಪಾವತಿಸುತ್ತಿರುವ ವರ್ಷಾಶನ ಮೊತ್ತವನ್ನು 60,000 ರೂ.ಗಳಿಂದ 72,000 ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯದ ಪ್ರಮುಖ 400 ದೇವಾಲಯಗಳು ಹಾಗೂ ಹೊರ ರಾಜ್ಯದಲ್ಲಿ ಲಭ್ಯವಿರುವ ಅಂದಾಜು 3,500 ಕೊಠಡಿಗಳಲ್ಲಿ ಯಾತ್ರಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ದೇವಾಲಯಗಳ ವಸತಿ ಕೋಶ ಯೋಜನೆಯಡಿ 1 ಕೋಟಿ ರೂ.ಒದಗಿಸಲಾಗಿದೆ. ಆನ್‌ಲೈನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸಿಕೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.



ದೇಶದ ಬೆನ್ನೆಲುಬು ರೈತರ ಸಬಲೀಕರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಒಟ್ಟು 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಿಸಿರುವುದೂ ಸೇರಿದಂತೆ ಅನೇಕ ಮಹತ್ವದ ಕ್ರಮಗಳ ಮೂಲಕ ಕೃಷಿ ವಲಯದಲ್ಲಿ ಚೈತನ್ಯಕ್ಕೆ ಕಾರಣವಾಗಿದೆ. ಇದರ ಪ್ರತಿಫಲನ ಎನ್ನುವಂತೆ ದೇಶದಲ್ಲಿಯೇ ಉತ್ತಮವಾದ ಶೇ.9.1ರ ಕೃಷಿ ಬೆಳವಣಿಗೆ ದರವನ್ನು ಕರ್ನಾಟಕವು ಸಾಧಿಸುವಲ್ಲಿ ಸಫಲವಾಗಿದೆ.

ತಲಾದಾಯದಲ್ಲಿ ದೇಶದಲ್ಲೇ ಪ್ರಥಮ

ಇಂದು ಕರ್ನಾಟಕವು ತಲಾದಾಯದಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. 2025–26ನೇ ಸಾಲಿನಲ್ಲಿ ದೇಶದ ಜಿಡಿಪಿಯು ಶೇ. 7.4ರ ದರದಲ್ಲಿ ಪ್ರಗತಿ ಸಾಧಿಸಿದ್ದರೆ, ರಾಜ್ಯದ ಜಿಎಸ್‌ಡಿಪಿಯು ಶೇ.8.1ರ ದರದಲ್ಲಿ ಪ್ರಗತಿ ಕಂಡಿದೆ. ಜಿಎಸ್‌ಟಿ ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯವು ದೇಶದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ಹೂಡಿಕೆಯ ವಿಚಾರವನ್ನು ಗಮನಿಸುವುದಾದರೆ, 2025–26ನೇ ಸಾಲಿನ ಪೂರ್ವಾರ್ಧದಲ್ಲಿ ರಾಜ್ಯವು 9.4 ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ದೇಶದಲ್ಲಿಯೇ ಮುಂಚೂಣಿಯಲ್ಲಿತ್ತು. ಇದು ಈ ಅವಧಿಯಲ್ಲಿನ ದೇಶದ ಒಟ್ಟು ವಿದೇಶಿ ಒಳಹರಿವಿನ ಶೇ.26.7ರಷ್ಟು ಎನ್ನುವುದು ಗಮನಾರ್ಹ. ಕರ್ನಾಟಕವು ವೈವಿಧ್ಯಮಯ ಹೂಡಿಕೆಗೆ ಪ್ರಶಸ್ತ ತಾಣವಾಗಿರುವುದಕ್ಕೆ ಇದುವೇ ನಿಚ್ಚಳ ಉದಾಹರಣೆಯಾಗಿದೆ.





ಬಂಡವಾಳ ಆಕರ್ಷಿಸಲು ಯಶಸ್ವಿ

ಕರ್ನಾಟಕವು ಇಂದು ದೇಶದಲ್ಲಿಯೇ ವ್ಯಾಪಕವಾಗಿ ವಿದೇಶಿ ಹೂಡಿಕೆಯನ್ನು ಬಹು ವಲಯಗಳಲ್ಲಿ ಆಕರ್ಷಿಸುತ್ತಿದೆ. ಐಟಿ, ಬಿಟಿ ಕ್ಷೇತ್ರಗಳಲ್ಲಿ ಮುಂಚೂಣಿ ಕಾಯ್ದುಕೊಳ್ಳುವುದರೊಂದಿಗೆ ಏರೋಸ್ಪೇಸ್, ರಕ್ಷಣಾ ಕ್ಷೇತ್ರ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಿನ್ಯಾಸ ಕ್ಷೇತ್ರದಲ್ಲಿಯೂ ಮಹತ್ವದ ಸಾಧನೆಗಳನ್ನು ಮಾಡಿದೆ. ಜಾಗತಿಕವಾಗಿ ನವೋದ್ಯಮಗಳಿಗೆ ಪ್ರಶಸ್ತ ತಾಣವಾಗಿದೆ. ರಾಜ್ಯವು ದೂರದರ್ಶಿತ್ವದ ನೀತಿಗಳನ್ನು ಹೊಂದಿದ್ದು ಕೈಗಾರಿಕಾ ನೀತಿ 2025–2030, ಗ್ಲೋಬಲ್ ಕೆಪಬಿಲಿಟಿ ಸೆಂಟರ್ ನೀತಿ, ಬ್ರೈನ್ಸ್ ರೋಬೋಟಿಕ್ಸ್ ಮತ್ತು ಎಐ ಕ್ಯಾಂಪಸ್, ಕ್ವಿನ್ ಸಿಟಿ, ನಾಲೆಜ್ ಸಿಟಿ, ಕ್ವಾಂಟಂ ರೋಡ್ ಮ್ಯಾಪ್, ಸ್ಥಳೀಯ ಆರ್ಥಿಕ ಆಕ್ಸಿಲರೇಟರ್ ಕಾರ್ಯಕ್ರಮ (ಎಲ್‌ಇಎಪಿ), ಎರಡು ಮತ್ತು ಮೂರನೇ ಹಂತದ ಲ್ಯಾಟ್ಸ್ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇನ್ವೆಸ್ಟ್ ಕರ್ನಾಟಕ ಸಮಾವೇಶದ ಮೂಲಕ 10.27 ಲಕ್ಷ ನಗರಗಳಲ್ಲಿ ಉದ್ಯಮ, ನವೋದ್ಯಮಗಳನ್ನು ಉತ್ತೇಜಿಸುವ ಬಿಯಾಂಡ್ ಬೆಂಗಳೂರು ಯೋಜನೆ, ಲೀಪ್ ಕೋಟಿಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ ಪಡೆದಿದೆ. ಸೆಮಿಕಂಡಕ್ಟರ್ ವಲಯದಲ್ಲಿಯಂತೂ ಜಾಗತಿಕ ಪ್ರತಿಷ್ಠಿತ ಕಂಪನಿಗಳಿಂದ 45 ಸಾವಿರ ಕೋಟಿ ರೂ.ಗೂ ಹೆಚ್ಚಿನ ಮೊತ್ತದ ಅಗಾಧ ಹೂಡಿಕೆಯಾಗಿದೆ. ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ.

ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಮಾಹಿತಿ

ಗ್ಯಾರಂಟಿ ಯೋಜನೆಗಳ ಹೆಸರು	ಫಲಾನುಭವಿಗಳ ಸಂಖ್ಯೆ	ವೆಚ್ಚ (ರೂ. ಕೋಟಿಗಳಲ್ಲಿ)
ಶಕ್ತಿ ಯೋಜನೆ (ಮಹಿಳೆಯರಿಗೆ ಉಚಿತ ಪ್ರಯಾಣ)	726 ಕೋಟಿ	18,945
ಗೃಹಲಕ್ಷ್ಮಿ ಯೋಜನೆ	1.24 ಕೋಟಿ	74,216
ಗೃಹ ಜ್ಯೋತಿ ಯೋಜನೆ	1.67 ಕೋಟಿ	26,115
ಅನ್ನಭಾಗ್ಯ ಯೋಜನೆ (ಡಿಬಿಟಿ)	4.44 ಕೋಟಿ	18,897
ಆಹಾರ ಧಾನ್ಯಗಳ ವಿತರಣೆ	30.88 ಲಕ್ಷ ಮೆಟ್ರಿಕ್ ಟನ್	
ಯುವನಿಧಿ	3.38 ಲಕ್ಷ	950
ಗ್ಯಾರಂಟಿ ಯೋಜನೆಗಳ ಒಟ್ಟು ವೆಚ್ಚ		1,39,123

ಅಭಿವೃದ್ಧಿ ಟೊಂಕ ಕಟ್ಟಿದ ಸರ್ಕಾರ

ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ಟೊಂಕಕಟ್ಟಿ ನಿಂತಿದೆ. ಕರ್ನಾಟಕದ ಸಂಪರ್ಕ ವ್ಯವಸ್ಥೆಯನ್ನು ಭವಿಷ್ಯದತ್ತ ಹೊಸ ಹೆಜ್ಜೆಗಳನ್ನಿಟ್ಟಿದೆ. ಭಾರೀ ಪ್ರಮಾಣದ ಹೂಡಿಕೆಯೊಂದಿಗೆ ಒಂಭತ್ತು ಹೊಸ ವೆಚ್ಚ ಹಂಚಿಕೆ ರೈಲು ಮಾರ್ಗಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಬಹುಕಾಲದ ನಿರೀಕ್ಷೆಯಲ್ಲಿದ್ದ ಬೆಂಗಳೂರು ಉಪನಗರ ರೈಲು ಯೋಜನೆಗೆ ವೇಗ ನೀಡಲಾಗಿದೆ. ಸಮಾನ ಪ್ರಾದೇಶಿಕ ಅಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕಾಂಗ್ರೆಸ್ ಸರ್ಕಾರದ ಪಣ

ಕರ್ನಾಟಕದಲ್ಲಿನ ಜಿಲ್ಲೆಗಳು ಮತ್ತು ತಾಲೂಕುಗಳ ನಡುವಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಮಗ್ರ ಅಭಿವೃದ್ಧಿ ಖಚಿತಪಡಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಪಣ ತೊಟ್ಟಿದೆ. ಇದಕ್ಕಾಗಿ ಆರ್ಥಿಕ ತಜ್ಞ ಪ್ರೊ. ಎಂ. ಗೋವಿಂದ ರಾವ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ನೀಡಿದ ವರದಿಯ ಶಿಫಾರಸ್ಸುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಒಪ್ಪಿಕೊಂಡಿದೆ. ಅಲ್ಲದೇ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ 9288.70 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದರಲ್ಲಿ ಒಟ್ಟು 12,393 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಪಾದಚಾರಿ ರಸ್ತೆ ಒತ್ತುವರಿ: ಅನಧಿಕೃತ ಕಟ್ಟಡಗಳ ತೆರವು

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಫುಟ್‌ಪಾತ್ ಮೇಲಿನ ಅನಧಿಕೃತ ಕಟ್ಟಡ ತೆರವುಗೊಳಿಸಲು ಖುದ್ದು ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಬೀದಿಗಿಳಿದಿದ್ದಾರೆ. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಂಗಾರು ಪೂರ್ವ ಪರಿಶೀಲನೆ ನಡೆಸಿದ ಅವರು, ಎಚ್.ಎಸ್.ಆರ್ ಲೇಔಟ್ ನಲ್ಲಿ ಫುಟ್‌ಪಾತ್ ಮೇಲೆ ನಿರ್ಮಿಸಲಾಗಿದ್ದ ಅನಧಿಕೃತ ಕಟ್ಟಡವನ್ನು ಖುದ್ದಾಗಿ ತೆರವು ಗೊಳಿಸಿದರು. ಬಳಿಕ ಇನ್ನುಳಿದ ಅನಧಿಕೃತ ಒತ್ತುವರಿಗಳನ್ನು ಕೂಡಲೇ ತೆರವುಗೊಸಿ. ರಸ್ತೆಯ ಅಡೆತಡೆಗಳನ್ನು ಮೂರು ದಿನಗಳ ಒಳಗಾಗಿ ತೆರವುಗೊಳಿಸಿ, ಅನಧಿಕೃತವಾಗಿರುವ ಎಲ್ಲ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸುವಂತೆ ಗಡುವು ನೀಡಿದರು. ಚರಂಡಿಗಳಲ್ಲಿ ಅಳವಡಿಸಲಾಗಿರುವ ಅನಧಿಕೃತ ಓಎಫ್‌ಸಿ ಕೇಬಲ್‌ಗಳನ್ನು ತಕ್ಷಣವೇ



ತೆರವುಗೊಳಿಸುವಂತೆ ಸಂಬಂಧಪಟ್ಟ ಇಂಜಿನಿ ಯರ್‌ಗಳಿಗೆ ಸೂಚಿಸಿದರು ಹಾಗೂ ಇದಕ್ಕೆ ಸಂಬಂಧಪಟ್ಟವರಿಗೆ ತಕ್ಷಣ ನೋಟಿಸ್ ಜಾರಿ ಮಾಡಲು ಆದೇಶಿಸಿದರು. ತಾವರೆಕೆರೆ ಮುಖ್ಯ ರಸ್ತೆಯಲ್ಲಿ ಚರಂಡಿ ಪಕ್ಕದಲ್ಲಿ ಶೇಖರಣೆಗೊಂಡಿರುವ ತ್ಯಾಜ್ಯವನ್ನು ತಕ್ಷಣವೇ ತೆರವುಗೊಳಿಸಿ.ಖಾಲಿ ಜಾಗದಲ್ಲಿ ಕಸ ಹಾಕುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಮಾಲೀಕರು ತಕ್ಷಣ ಸ್ವಚ್ಛಗೊಳಿಸಬೇಕು, ಇಲ್ಲದಿದ್ದರೆ ಪಾಲಿಕೆಯಿಂದ ತೆರವುಗೊಳಿಸಿ, ಸದರಿ ಜಾಗವನ್ನು ಪಾಲಿಕೆಯ ಸ್ವತ್ತು ಎಂದು ಬೋರ್ಡ್ ಅಳವಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಎಚ್‌ಎಸ್‌ಆರ್ ಲೇಔಟ್ ವ್ಯಾಪ್ತಿಯಲ್ಲಿ ಕೈಗೊಂಡಿರುವ ಚರಂಡಿ ಹೂಳು ತೆರವುಗೊಳಿಸುವ ಕಾಮಗಾರಿಗಳನ್ನು ಮುಂಬರುವ ಒಂದು ವಾರದ ಒಳಗಾಗಿ ಸಂಪೂರ್ಣವಾಗಿ ಪೂರ್ಣಗೊಳಿಸಬೇಕು ಎಂದು ಆಯುಕ್ತರು ಅಧಿಕಾರಿಗಳಿಗೆ ಅಂತಿಮ ಸೂಚನೆ ನೀಡಿದರು.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಧುಗಿರಿ.
ಅಸಲು ದಾವಾ ಸಂಖ್ಯೆ: 499 /2024

ವಾದಿ: ಎಂ.ಎಸ್. ದಿವ್ಯಲಕ್ಷ್ಮಿ

ವಿರುದ್ಧ

ಪ್ರತಿವಾದಿ: ಬಿ.ಎಂ ಹೇಮಲತಾ ಮತ್ತು ಇತರರು. D4 ಲಾವಣ್ಯ ಹೆಚ್.ಆರ್. ಕೋಮ್ ಮಧು, 29 ವರ್ಷ ವಾಸ-ವಡೇರಹಳ್ಳಿ ಪೋಸ್ಟ್, ಕಸಬಾ ಹೋಬಳಿ, ಮಧುಗಿರಿ ತಾಲೂಕು.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದಲ್ಲಿ D4 ಲಾವಣ್ಯ ಹೆಚ್.ಆರ್. ಕೋಮ್ ಮಧು ಆದ ನಿಮ್ಮ ಮೇಲೆ ವಾದಿಗಳು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ವಿಭಾಗಕ್ಕಾಗಿ ಕೋರಿ ಮೇಲ್ಕಂಡ ದಾವಾ ಸಲ್ಲಿಸಿರುತ್ತಾರೆ. ಆದ್ದರಿಂದ ದಿನಾಂಕ-01-07-2026 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲಿ ತಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ ತಕರಾರು ಸಲ್ಲಿಸಬಹುದು. ಮೇಲ್ಕಂಡ ದಿನಾಂಕದಂದು ನ್ಯಾಯಾಲಯದ ಮುಂದೆ ಹಾಜರಾಗದಿದ್ದರೆ ಈ ಕೇಸನ್ನು ಏಕಪಕ್ಷಿಯವಾಗಿ ತೀರ್ಮಾನಿಸಿಲಾಗುವುದು.

ದಿನಾಂಕ: 16-05-2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ: ಶಿರಸ್ತೆದಾರರು
ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ,ಮಧುಗಿರಿ.

ಜಿ. ಬಿ ಹಾಲಪ್ಪ, ಬಿ.ಎಸ್ಸಿ.,ಎಲ್‌ಎಲ್.ಬಿ
ವಾದಿಗಳ ಪರ ವಕೀಲರು, ಮಧುಗಿರಿ.

ಪುರಸಭೆ ಕಾರ್ಯಾಲಯ ಚಿಂಚೋಳಿ, ಜಿ-ಕಲಬುರಗಿ

E mail Id:- itstaff_ulb_chincholi@yahoo.in Phone no:08475-273058

ಸಂ:ಪುಸಚಿರ/ತಾ.ಶಾಖೆ/ 02/ 2026-27 ದಿನಾಂಕ: 19.05.2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿಯವರಿಂದ 2025-26ನೇ ಸಾಲಿನ ಮತ್ತು 2026-27ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ, 15ನೇ ಹಣಕಾಸು, ಕುಡಿಯುವ ನೀರು ಹಾಗೂ ಪುರಸಭೆ ನಿಧಿಯ ಹಣಕಾಸು ಅನುದಾನದ ಯೋಜನೆ ಅಡಿಯಲ್ಲಿ 1999-2000ರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಟಿ.ಪಿ) ಆಕ್ಟರಂತೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು ಅರ್ಹ ಆಸಕ್ತಿಯುಳ್ಳ ನವೀಕರಿಸಿ/ ನೊಂದಾಯಿತ ಗುತ್ತಿಗೆದಾರರಿಗೆ ಕೆ.ಡಬ್ಲ್ಯೂ-1ರನ್ವಯ ಹಾಗೂ ಕೆ.ಎಸ್-2ರ ಅನ್ವಯ https://kppp.karnataka.gov.in/ ನಲ್ಲಿ ಆನ್-ಲೈನ್ ಮುಖಾಂತರ ಭಾಗವಹಿಸಲು ತಿಳಿಸಿದೆ.

1) ಕಾಮಗಾರಿ /ಸರಕು ಸೇವೆಯ ವಿವರ : 1. DMA/2025-26/SE5869/CALL-2, 2. DMA/2026-27/OW/WORK_INDENT57987 (CAT-1 Reserved), 3.DMA/2026-27/OW/WORK_INDENT57988, 4. DMA/2026-27/OW/WORK_INDENT57636(CAT-2A Reserved), 5. DMA/2025-26/ OW/WORK_INDENT 57623(CAT-2A Reserved), 6. DMA/2026-27/OW/WORK_INDENT57614, 7. DMA/2026-27/OW/WORK_INDENT57613 (SC Reserved), 8. DMA/2025-26/OW/WORK_INDENT55803, 9. DMA/2025-26/OW/WORK_INDENT49208/CALL-2, 10.DMA/2025-26/OW/WORK_INDENT49204/CALL-2, 11. DMA/2025-26/OW/WORK_INDENT49201/CALL-2 (CAT-2A Reserved), 12. DMA/2025-26/OW/WORK_INDENT49098/CALL-2, 13. DMA/2025-26/OW/WORK_INDENT49103/CALL-2(CAT-2A Reserved), 14.DMA/2025-26/OW/WORK_INDENT49205/CALL-2(CAT-2A Reserved), 15. DMA/2026-27/OW/WORK_INDENT 58581, 2) ಕಾಮಗಾರಿ / ಸರಕು ಸೇವೆಯ ಟೆಂಡರ್ ಮೊತ್ತ: **0.40 ಲಕ್ಷಗಳಿಂದ 52.00 ಲಕ್ಷಗಳವರೆಗೆ,** 3) ಗುತ್ತಿಗೆದಾರರ ಅರ್ಹತೆ : ನೋಂದಾಯಿತ ಅರ್ಹವುಳ್ಳ ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರು, ವಿದ್ಯುತ್ ಗುತ್ತಿಗೆದಾರರು ಹಾಗೂ ಮ್ಯಾನಪವರ್ ಏಜೆನ್ಸಿ ಗುತ್ತಿಗೆದಾರರು, 4) ಕಾಮಗಾರಿಗಳ ಟೆಂಡರ್ ಮೊತ್ತ : **0.40 ಲಕ್ಷಗಳಿಂದ 52.00 ಲಕ್ಷಗಳವರೆಗೆ,** 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಮ್.ಡಿ ಮೊತ್ತ : ಟೆಂಡರ ಅರ್ಜಿಯ ಶುಲ್ಕ ಇ.ಪ್ರೋಕ್ಯೂರ್‌ಮೆಂಟನಂತೆ ಹಾಗೂ ಕಾಮಗಾರಿಗಳ ಇ.ಎಮ್.ಡಿ ರೂ. 1.00ಲಕ್ಷ ದಿಂದ 20ಲಕ್ಷಗಳವರೆಗೆ 2.5% ರಂತೆ 20.00ಲಕ್ಷ ದಿಂದ 50.00ಲಕ್ಷಗಳವರೆಗೆ ಇ.ಎಮ್.ಡಿ 2% ರಂತೆ, 50.00 ಲಕ್ಷಗಳಿಂದ 100.00 ಲಕ್ಷಗಳ ವರೆಗೆ 1.50% ರಂತೆ ಹಾಗೂ ಪ.ಜಾ ಮತ್ತು ಪ.ಪ ರವರಿಗೆ ರೂ. 1.00 ಲಕ್ಷಗೀಂದ ರೂ. 20.00 ಲಕ್ಷಗಳ ವರೆಗೆ 1.25% ರಂತೆ ಹಣ ಭರಿಸುವುದು. 6) ಟೆಂಡರ್ ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಕೊನೆ ದಿನಾಂಕ: **27.05.2026ರಂದು ಸಾಯಂಕಾಲ 17.30ಕ್ಕೆ,** 8) ತಾಂತ್ರೀಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : **29.05.2026ರಂದು ಮುಂಜಾನೆ 11.30ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **08.06.2026ರಂದು ಮುಂಜಾನೆ 11:30ಕ್ಕೆ,** 10) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ ಹಾಗೂ ದೂರವಾಣಿ ಸಂಖ್ಯೆ : ಬೀದರ ರಸ್ತೆ ಹತ್ತಿರ, ಪುರಸಭೆ ಕಾರ್ಯಾಲಯ ಚಿಂಚೋಳಿ 08475-273058, 11) ಅಂತರ್ಜಾಲ ತಾಣದ ವಿಳಾಸ: www.chincholitown.mrc.gov.in

ಸಹಿ/- ಆಡಳಿತಾಧಿಕಾರಿ, ಪುರಸಭೆ ಚಿಂಚೋಳಿ | ಸಹಿ/- ಮುಖ್ಯಾಧಿಕಾರಿ, ಪುರಸಭೆ ಚಿಂಚೋಳಿ

ವಾ.ಸಾ.ಸಂ.ಇ/ಕಲಬುರಗಿ/140/ಕೆ.ಎಸ್.ಎಂ.ಸಿ.&ಎ/2026-27

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

United Foodbrands

United Foodbrands Limited

(Formerly known as Barbeque-Nation Hospitality Limited)

CIN: L55101KA2006PLC073031

Registered Office: "Saket Callipolis", Unit No. 601 & 602, 6th Floor, Doddakannalli Village, VarthurHobli, Sarjapur Road, Bengaluru-560035.
Tel. No.: +9180 69134900; E-mail: compliance@ufbl.in | Website: www.unitedfoodbrands.in

Advertisement regarding approval of Audited Standalone and Consolidated Financial Results of the Company for the quarter and financial year ended March 31, 2026

[Pursuant to Regulation 33 read with Regulation 47(1) of the SEBI (Listing Obligations and Disclosure Requirements) Regulations, 2015]

The Board of Directors of the Company, at their meeting held on May19, 2026, have, inter-alia, considered and approved the Audited Standalone and Consolidated Financial Results of the Company for the quarter and financial year ended March 31, 2026 ("Financial Results").

The Financial Results, along with the Auditor's Reports thereon issued by the Statutory Auditors of the Company, are available on the Company's website at **https://api.barbequenation.com/sites/default/files/2026-05/Financial%20Results-Q4FY26.pdf,** and can be accessed by scanning the QR provided below. The Financial Results are also available on the websites of the Stock Exchanges, i.e., BSE Limited and National Stock Exchange of India Limited at **www.bseindia.com** and **www.nseindia.com,** respectively.

For United Foodbrands Limited
(Formerly known as Barbeque-Nation Hospitality Limited)
Rahul Agrawal
Chief Executive Officer & Whole-Time Director
DIN: 07194134
Place: Bengaluru
Date: May 19, 2026

Scan this QR Code for full Financial Results

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮುನಿಸ್ವಾಮಿ ಬಿನ್ ಲೇಟ್ ಲಾರಿ ನಂಜಪ್ಪ ಅಲಿಯಾಸ್ ನಂಜಯ್ಯ ಆದ ಇವರು ಬೆಂಗಳೂರು ಉತ್ತರ ತಾಲೂಕು, ಯಶವಂತಪುರ ಹೋಬಳಿ, ಹೇರೋಹಳ್ಳಿ ಗ್ರಾಮದ ಸರ್ವೆ ನಂಬರ್ 194ರ ಕೆಳಕಂಡ ಶೆಡ್ಯೂಲ್ ಸ್ವತ್ತಿನ ಸಂಬಂಧ ಬೆಂಗಳೂರು ಗ್ರಾಮಾಂತರ ದಿವಾನಿ ನ್ಯಾಯಾಲಯದಲ್ಲಿ ಮೂಲ ದಾವಾಸಂಖ್ಯೆ 1940/2025ನ್ನು ದಾಖಲಿಸಿದ್ದು, ಅದು ವಿಚಾರಣೆಯ ಹಂತದಲ್ಲಿ ಇರುತ್ತದೆ. ಸದರಿ ದಾವೆಯು ದಾಯಾದಿಗಳ ನಡುವಿನ ವಿಭಾಗ ದಾವೆಯಾಗಿದ್ದು ಅದು ಅಂತಿಮವಾಗಿ ತೀರ್ಮಾನ ಆಗುವವರೆಗೆ ಮೇಲ್ಕಾಣಿಸಿದ ಸ್ವತ್ತನ್ನಾಗಲಿ, ಅದರಲ್ಲಿ ವಿಂಗಡಿಸಿದ ನಿವೇಶನವನ್ನಾಗಲಿ ಅಥವಾ ಅದರ ಯಾವುದೇ ಭಾಗವನ್ನಾಗಲಿ ಸ್ವತಂತ್ರವಾಗಿ ಪರಭಾರೆ ಮಾಡಲು ಯಾರೊಬ್ಬರೂ ಹಕ್ಕುಳ್ಳವರಾಗಿರುವುದಿಲ್ಲ. ಒಂದು ವೇಳೆ ಯಾರಾದರೂ ಕ್ರಯ/ಭೋಗ್ಯ/ಹಸ್ತಾಂತರ/ ದಾನ/ಮರಣ ಶಾಸನ ಅಥವಾ ಇನ್ನಾವುದೇ ರೀತಿಯ ಪರಭಾರೆಯ ಮೂಲಕ ಮೇಲ್ಕಾಣಿಸಿದ ಸ್ವತ್ತನ್ನಾಗಲಿ, ಅದರಲ್ಲಿ ವಿಂಗಡಿಸಿದ ನಿವೇಶನವನ್ನಾಗಲಿ ಅಥವಾ ಅದರ ಯಾವುದೇ ಭಾಗವನ್ನಾಗಲಿ ಆರ್ಜಿಸಿದಲ್ಲಿ ಅದರ ಹಣಕಾಸಿನ ಮತ್ತು ಕಾನೂನು ಪರಿಣಾಮಗಳಿಗೆ ಸ್ವತಃ ಅವರೇ ಜವಾಬ್ದಾರರಾಗಿರುತ್ತಾರೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

ಷೆಡ್ಯೂಲ್

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲೂಕು, ಯಶವಂತಪುರ ಹೋಬಳಿ, ಹೇರೋಹಳ್ಳಿ ಗ್ರಾಮದ ಸರ್ವೆ ನಂಬರ್ 194ರ ಒಟ್ಟು 04 ಎಕರೆ 14 ಗುಂಟೆಗೆ ಚೆಕ್ಕುಬಂದಿ
ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ಸರ್ವೆ ನಂ 194ರ ಉಳಿಕೆ ಜಮೀನು
ಉತ್ತರಕ್ಕೆ : ಸರ್ವೆ ನಂ 194ರ ಉಳಿಕೆ ಜಮೀನು ಮತ್ತು ಈಸ್ಟ್-ವೆಸ್ಟ್ ಕಾಲೇಜು
ದಕ್ಷಿಣಕ್ಕೆ : ಸರ್ವೆ ನಂಬರ್ 165

ಸ್ಥಳ : ಬೆಂಗಳೂರು **ದಿನಾಂಕ :** 19/05/2026

ದಯಾನಂದ ಮೂರ್ತಿ ಪಿ.ಆರ್., ಬಿ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ. ವಕೀಲರು
ನಂ.555, 53ನೇ ಕ್ರಾಸ್, ರಾಮ ಮಂದಿರ ದೇವಸ್ಥಾನದ ಹತ್ತಿರ, 3ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು - 560010 ಮೊಬೈಲ್ : 9449407309
ಇ-ಮೇಲ್:dayanandamurthypr@gmail.com

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಹಾರೋಹಳ್ಳಿ, ರಾಮನಗರ -562112.

ಜಿಲ್ಲೆ :ಬೆಂಗಳೂರು ದಕ್ಷಿಣ ಜಿಲ್ಲೆ, ರಾಜ್ಯ : ಕರ್ನಾಟಕ
Website: www.harohallitown.mrc.gov.in. Phone: 08029-760055
Email: ka.harohalli.tp@gmail.com

ಸಂಖ್ಯೆ:ಪ.ಪಂ.ಹಾ/ಸಿ.ಶಾ/ಸಿ.ಆರ್/29/2026-27 ದಿನಾಂಕ::14.05.2026

ಟೆಂಡರ್ ಪ್ರಕಟಣೆ

(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್‌ನ ಪಬ್ಲಿಕ್-ಪ್ರಕ್ಯೂರ್‌ಮೆಂಟ್ ಮುಖಾಂತರ ಹಾರೋಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ SBM 2.0 ಮತ್ತು 2026-27ನೇ ಪಟ್ಟಣ ಮತ್ತು ಪಂಚಾಯ್ತಿ ಅನುದಾನದ ಯೋಜನೆಯಡಿಯಲ್ಲಿ ರೂ 9.18 ಲಕ್ಷಗಳ ವರೆಗಿನ ಕಾಮಗಾರಿ DMA/2025-26/SE7330/CALL-2 ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಆಸಕ್ತ ಗುತ್ತಿಗೆದಾರರು ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ದಿನಾಂಕ: 28.05.2026 17:30 ರೊಳಗಾಗಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ದಿನಾಂಕ 30.05.2025 ಬೆಳಗ್ಗೆ 16:00 ಗಂಟೆಗೆ ಟೆಂಡರ್ ತೆರೆಯಲಾಗುವುದು ಅಥವಾ ಮುಂದಿನ ದಿನಾಂಕದಂದು ತೆರೆಯಲಾಗುವುದು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು ಹಾಗೂ ಕಛೇರಿಯ ಅಧಿಕೃತ ವೆಬ್‌ಸೈಟ್ **www.harohallitown.mrc.gov.in** ನಲ್ಲಿ ಸಹ ಪಡೆಯಬಹುದು

ಸಹಿ/-
ಮುಖ್ಯಾಧಿಕಾರಿ, ಪಟ್ಟಣ ಪಂಚಾಯ್ತಿ. ಹಾರೋಹಳ್ಳಿ.

ಎನರ್ಜಿ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್

ಸಿಐಎನ್- ಎಲ್85110ಕೆಎ1995ಪಿಎಲ್‌ಸಿ017003
ನೋಂದಾಯಿತ ಕಚೇರಿ: ಗ್ರಾಮ- ಹುಲುಗುಂದ, ತಾಲೂಕು- ಸೋಮವಾರಪೇಟೆ, ಜಿಲ್ಲೆ-ಕೊಡಗು, ಕರ್ನಾಟಕ- 571233
ಫೋನ್: (08276) 277040; ಫ್ಯಾಕ್ಸ್ ನಂ. (08276) 277012
ಇ-ಮೇಲ್: secretarial@edclgroup.com ವೆಬ್‌ಸೈಟ್: www.edclgroup.com

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯ ಆಡಳಿತ ಮಂಡಳಿ ಸಭೆಯು 2026ರ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಾಂತ್ಯದ ಪರಿಶೋಧಿತ ಸ್ವತಂತ್ರ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಪರಿಶೀಲನೆಗೆ ಮತ್ತು ಅನುಮೋದಿಸುವ ಸಲುವಾಗಿ ಗುರುವಾರ, 28ನೇ ಮೇ 2026ರಂದು ನಡೆಯಲಿದೆ.
ಕಂಪನಿಯ ಷೇರುಗಳ ವ್ಯವಹಾರ ನಡೆಸುವ ವಹಿವಾಟು ಗವಾಕ್ಷಿಯು ಎಲ್ಲ ನಿಯೋಜಿತ ಉದ್ಯೋಗಿಗಳಿಗೆ ಹಾಗೂ ಅವರ ತಕ್ಷಣದ ಸಂಬಂಧಿಕರಿಗೆ, ನಿರ್ದೇಶಕರಿಗೆ ಮತ್ತು ಪ್ರವರ್ತಕರಿಗೆ 1ನೇ ಏಪ್ರಿಲ್, 2026ರಿಂದ ಮುಚ್ಚಲಾಗಿದೆ.
ಈ ಮಾಹಿತಿಯು ಕಂಪನಿಯ ವೆಬ್‌ಸೈಟ್ www.edclgroup.com ಮತ್ತು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ಗಳಾದ www.bseinda.com ಮತ್ತು www.nseindia.com ನಲ್ಲೂ ಲಭ್ಯ ಇದೆ.

ಎನರ್ಜಿ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್
ಆಡಳಿತ ಮಂಡಳಿಯ ಪರವಾಗಿ
ಸಹಿ/-
ಸ್ಥಳ: ಕೋಲ್ಕತ್ತಾ — ಸ್ನೇಹ ನರೇಡಿ
ದಿನಾಂಕ: 19ನೇ ಮೇ, 2026 — (ಕಂಪನಿ ಕಾರ್ಯದರ್ಶಿ)

ಜಾಹೀರಾತಿಗಾಗಿ ಸಂಪರ್ಕಿಸಿ:
9845438807, 9611755391

IN THE COURT OF THE PRL. CIVIL JUDGE AND JMFC AT KUNIGAL
CRI. MIS. NO. 152/2026

Petitioners : 1. Sri. Doddaiah, S/o. Late Doddaiah @ Nanjundaiah, Aged about 90 years, **2. Smt. Hanumamma,** W/o. Doddaiah, Aged about 80 years, **3. Smt. Doddamma,** D/o. Doddaiah, W/o. Bhyraiah, Aged about 59 years, R/at Tharadakuppe Village, Kothagere Hobli, Kunigal Taluk. **4. Smt. Honnamma,** D/o. Doddaiah, W/o. Honnegowda, Aged about 55 years, **5. Sri. Nanjundaiah,** S/o. Doddaiah, Aged about 53 years, **6. Smt. Jayamma,** D/o. Doddaiah, W/o. Late Shivanna, R/ at Andanaiahanapalya Village, Hamlet of Kempanahalli, Huthridurga Hobli, Kungial Taluk. The Petitioners No.1, 2 and 4 and 5 are R/at Yaliyur Village, Huthridurga Hobli, Kunigal Taluk.

V/s

Respondent : The Tahasildar, Kunigal Taluk.
Kunigal.

DRAFT PAPER PUBLISHING TO BE PUBLISH IN DAILY NEWS PAPER

The Petitioners filed the Petition under Section 13(3) of Birth and Death Act before the Hon'ble Prl. Civil Judge & JMFC at Kunigal to get the Death Certificate of the mother of Petitioner No.1 and mother in law of the Petitioner No.2 and grandmother of the Petitioner No.3 to 6 by name Honnamma W/o. Late Doddaiah @ Nanjundaiah was died on 04-02-1983 at Yaliyur Village, Huthridurga Hobli, Kunigal Taluk for which anybody are having any objection file then objection before the Court on 24-06-2026 if anybody one not filed any objection, the matter will be dealt and heard and certificate will be issued to the Petitioners.

Given under my seal and signature on this day of 19-05-2026.

Sherasthedar
Hon'ble Prl. Civil & JMFC Court Kunigal
Y.G. Shivanna, B.Com., LL.B.,
Advocate, Kunigal.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-518/25-26/582/2026-27 ದಿನಾಂಕ: 16.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಜಿ.ಸುಶೀಲ್ ಮತ್ತು ಇತರರು #40, ಸುಶೀಲ್ ಫಾರ್ಮ್ ಕಾಸರಗುಪ್ಪೆ ಮುಖ್ಯರಸ್ತೆ ಹತ್ತಿರ, ಬನ್ನೇರುಘಟ್ಟ, ಬೆಂಗಳೂರು-560083	ಆನೇಕಲ್	ಜಿಗಣಿ	ಬಿಲಾರದಹಳ್ಳಿ	6/15	10-00	ವ್ಯವಸಾಯ	ವಸತಿ
				6/16	7-30		
				6/43	0-11.25		
				6/44	0-11.25		
				6/45	0-5.50		
				6/46	0-5.50		
				6/47	0-5.50		
				6/48	1-00		
				6/49	0-5.50		
				6/72	0-5.50		
				ಒಟ್ಟು	20-00		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ. ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). X @BDAOfficialGoK

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ

ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ,
ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22220227
(www.kpwd.gov.in)

ಸಂಖ್ಯೆ: 02/2026-27 ದಿನಾಂಕ:18.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ-2000ರನ್ವಯ ಕೆಡಬ್ಲ್ಯೂ-1 & ಕೆಡಬ್ಲ್ಯೂ-2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೊಸಸಿಂಗ್ ಶುಲ್ಕ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. (1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ:18.05.2026 ರಿಂದ 25.05.2026 ಸಂಜೆ 5.30 ಗಂಟೆವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:25.05.2026 ಸಂಜೆ 5.30 ಗಂಟೆವರೆಗೆ.** (3) ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ **ದಿನಾಂಕ: 27.05.2026 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ವಾಸಾಸಂಇ/ಉನಿ-ಸಿ.ಪಿ/727/ಕೆಎಸ್‌ಎಂಸಿಎ/2026-27

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001
ದೂರವಾಣಿ : 080-25581383, ಫ್ಯಾಕ್ಸ್ : 080-25586321

ಸಂಖ್ಯೆ: ಮಾನಿಮಂ/90/ಕ/2025/2026-27/521 ದಿನಾಂಕ: 14.05.2026

ಟೆಂಡರ್‌ಗಾಗಿ ಆಹ್ವಾನ - ಕರೆ-1

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ https://kppp.karnataka.gov.in ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಬೆಂಗಳೂರು, ಎಸ್.ಜಿ.ಹಳ್ಳಿ, ನಿಸರ್ಗ ಭವನದಲ್ಲಿ ವಿದ್ಯುತ್ ನಿರ್ವಹಣೆಗಾಗಿ (1 ವರ್ಷ) ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ). ಕೆಲಸದ ಅಂದಾಜು ಮೌಲ್ಯ: **ರೂ.30.76 ಲಕ್ಷಗಳು.** ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ, ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ವೀಕ್ಷಿಸುವುದು.

ಸಹಿ/-
ಮುಖ್ಯ ಪರಿಸರ ಅಧಿಕಾರಿ-2
ವಾ.ಸಾ.ಸಂ.ಇ/ವಾಪ್ರ/728/ಆಕಾರ್/2026-27 ಕರಾಮಾನಿಮಂ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ :
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ - 586201
ತಾ: ನಿಡಗುಂದಿ, ಜಿ:ವಿಜಯಪುರ.

ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ-ವಿ/ಉಗ್ರಾಣ ಶಾಖೆ/2026-27/181
ದಿನಾಂಕ:16.05.2026

ಇನ್‌ಫಾರ್ಮೇಶನ್ ಕೊಟೇಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ. ವಿಭಾಗ ಆಲಮಟ್ಟಿ ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ನೊಂದಾಯಿತ ಫರ್ಮ / ಅಥರಾಯಿಸ್ಡ್ ಏಜೆನ್ಸಿರವರಿಂದ **"quotations** for competitive rates from Reputed Firm/Authorized Agencies for **"Replacement of Drive End Bearing and Non Drive Bearing of Crompton Greaves Make of 1800 KW and Supplying, Installation and Commissioning of Soft Starter Display of Jayshree Make at Almatti Left Bank Canal Headwork and Servicing and Overhauling of Non-Return Valve of 1400 mm Dia size of KBL make at Chimmalagi Lift Irrigation Scheme Headwork and Supplying and Fixing of 12 Tonne Capacity of size 5.00 meter height Hydraulic Jack with house pipe, adopter and link pin operated by hydraulic pressure, etc at CLIS".** ಕಾಮಗಾರಿಗಾಗಿ ಸ್ಪರ್ಧಾತ್ಮಕ ದರಗಳಿಗಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳಿಗಾಗಿ ಹಾಗೂ ವಿವರವಾದ ಐಟಂಗಳಿಗಾಗಿ ಈ ಕಛೇರಿಯ ಸಮಯದಲ್ಲಿ ಭೇಟಿ ನೀಡಿ ಅಥವಾ ಈ ಕಛೇರಿಯ ಇ-ಮೇಲ್‌ಗೆ ee09albc@gmail.com ಮತ್ತು ದೂರವಾಣಿ ಸಂಖ್ಯೆ: 9035782142 ರ ಮೂಲಕ ತಮ್ಮ ಬೇಡಿಕೆಯನ್ನು **ದಿನಾಂಕ: 22.05.2026** ರೊಳಗಾಗಿ ಸಲ್ಲಿಸಿ ವಿವರಗಳನ್ನು ಪಡೆದುಕೊಳ್ಳಬಹುದು ಹಾಗು ಭರ್ತಿಗೊಳಿಸಿದ ಕೊಟೇಶನ್‌ಗಳನ್ನು **ದಿನಾಂಕ: 25.05.2026 ರಂದು ಸಾಯಂಕಾಲ 5.00 ಘಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸುವದು ಹಾಗು **ದಿನಾಂಕ: 26.05.2026 ರಂದು ಬೆಳಿಗ್ಗೆ 11.00 ಘಂಟೆಗೆ** ಭರ್ತಿಗೊಳಿಸಿದ ಕೊಟೇಶನ್‌ಗಳನ್ನು ವಿಭಾಗ ಕಛೇರಿಯಲ್ಲಿ ತೆರೆಯಲಾಗುವದು. ಸದರಿ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/106/ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ,
ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/3ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27/ ದಿ: 18.05.2026

ಅಲ್ಪಾವಧಿ ಟೆಂಡರ್ ಪಕಟಣೆ - 3ನೇ ಕರೆ

ಉಲ್ಲೇಖ: 1) ಸಂ:ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27/ ದಿ: 04.04.2026

2) ಸಂ:ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27/ ದಿ: 29.04.2026

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 19.05.2026 ರಿಂದ 26.05.2026 ರವರೆಗೆ 17.30 ಗಂಟೆಗೆ
2. Pre-Bid Meeting ದಿ : 21.05.2026 ರಂದು 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.05.2026 ರಂದು 17.30 ಗಂಟೆಗೆ
4. ಆರ್ಥಿಕ ಬಿಡ್ ತರೆಯುವ ದಿನಾಂಕ : After obtaining approval of technical bid from competent authority 5. ಕಾಲಾವಧಿ 08 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ ರೂ.97.40 ಲಕ್ಷಗಳು 7. ಇ.ಎಂ.ಡಿ ಮೊತ್ತ ರೂ.1,95,000/-

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಪೋನ್- 8660573513

ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/82/05/252

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532-225778

THESE WORKS ARE CATAGEORY WISE CONTRACTORS

ಲೋಇ/ರಾವಿ/ತಾಂಶಾ-4/ಟೆಂಪ್ರ/2026-27/688 ದಿ: 13-05-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1, 2, 3 & 4)

1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ-4/ಟೆಂಪ್ರ/2026-27/688 ದಿನಾಂಕ: 13-05-2026 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 31 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 327346.40 ಗರಿಷ್ಠ ರೂ. 83193198.49 4) **ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 8200.00 ಗರಿಷ್ಠ ರೂ. 1248000.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 1 (ಒಂದು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 27/05/2026 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:** 29/05/2026 ಸಂಜೆ 4.30 ಗಂಟೆಯವರೆಗೆ

ಕಾರಣಾಂತರಗಳಿಂದ ತಿಳಿಯಪಡಿಸಿದ ಟೆಂಡರ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ ಆಹ್ವಾನಿಸಿದಲ್ಲಿ ಗುತ್ತೆದಾರರು ಕೆ.ಪಿ.ಪಿ ಪೋರ್ಟನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಯಿರಾತು ಹೊರಡಿಸಲಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ
ರಾಯಚೂರು.
DIP/RCR/72/KSMCA/74/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ಗದಗ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
Phone No: 08372-238782 Fax No. 08372-237268 E.Mail-eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ-1 2 :ವಿವಿಧ: 2026-27/592 ದಿನಾಂಕ: 19/05/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **420.00 ಲಕ್ಷ** ಮೊತ್ತದಲ್ಲಿ ಒಟ್ಟು 04 ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 10.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 300.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

"Work Indent No:- Part-1" 32781-Cat-I/Call-2
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ-25-05-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ-26-05-2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ-27-05-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ-29-05-2026.**

"Work Indent No:- Part-2" 36008,
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ-02-06-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ-03-06-2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ-04-06-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ-05-06-2026**

"Work Indent No:- Part-3" 23872-SC, 35774,
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ-06-06-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ-08-06-2026 ಮಧ್ಯಾಹ್ನ 4.00 ಘಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ-09-06-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ-10-06-2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ,
ವಾ.ಸಾ.ಸಂ.ಇ/ಗದಗ/74/ದೇಶಪಾಂಡೆಪಬ್ಲಿಸಿಟಿ/2026-27 ಗದಗ

ಗಡುವಿಗೆ ಮುನ್ನವೇ ಮೂಲೋತ್ಪಾಟನೆ

ನಕ್ಸಲ್ ಪಿಡುಗು ನಿರ್ಮೂಲನೆ

ಜಗ್ದಲ್‌ಪುರ: ಭದ್ರತಾ ಪಡೆಗಳ ಪರಮೋಚ್ಚ ಶೌರ್ಯ, ದಿಟ್ಟತನ ಮತ್ತು ತ್ಯಾಗ ಬಲಿದಾನಗಳಿಂದಾಗಿ ಅಂತಿಮಗಡುವಾದ ಮಾ.31ಕ್ಕೆ ಮುನ್ನವೇ, ನಕ್ಸಲ್ ಪಿಡುಗನ್ನು ದೇಶದಿಂದ ಯಶಸ್ವೀ ಮೂಲೋತ್ಪಾಟನೆ ಮಾಡಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ನಕ್ಸಲ್‌ಮುಕ್ತ ಭಾರತ ಅಭಿಯಾನದಲ್ಲಿ ಕೆಲವು ದಿನಾಂಕಗಳು ಚಾರಿತ್ರಿಕ ಮಹತ್ತ್ವ ಪಡೆದಿವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಸಚಿವ ಶಾ, ಛತ್ತೀಸ್‌ಗಢದ ಬಿಜೆಪಿ ಸರಕಾರ ನಕ್ಸಲ್ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಬಗ್ಗೆ 2023ರ ಡಿ.13ರಂದು ಶಪಥ ಮಾಡಿತ್ತು ಮತ್ತು ಅಂದಿನಿಂದಲೇ ಪ್ರಸ್ತುತ ಅಭಿಯಾನಕ್ಕೆ ನಾಂದಿ ಹಾಡಿತ್ತು ಎಂದು ನೆನಪಿಸಿದರು.



ದ್ವಿತೀಯ ಚಾರಿತ್ರಿಕ ದಿನಾಂಕ 2024 ಆ.24. ಆ ದಿನಾಂಕದಂದು ಸಭೆ ಸೇರಿದ ದೇಶದ ಎಲ್ಲಾ ರಾಜ್ಯಗಳ ಡಿಜಿಪಿಗಳು ದೇಶವನ್ನು 2026 ಮಾ.31ಕ್ಕೆ ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ಸಂಕಲ್ಪ ಮಾಡಿದ್ದರು.

ತೃತೀಯ ದಿನಾಂಕ 2026 ಮಾ. 31(ದೇಶದಲ್ಲಿನ ನಕ್ಸಲ್ ಪಿಡುಗನ್ನು ಆಮೂಲಾಗ್ರ ನಿರ್ಮೂಲನೆ ಮಾಡಲು ಕೇಂದ್ರ ಸರಕಾರ ವಿಧಿಸಿದ್ದ ಅಂತಿಮ ಗಡುವು)ಎಲ್ಲರಿಗೂ ಗೊತ್ತಿರುವ ದಿನಾಂಕ. ನಮ್ಮ ಭದ್ರತಾ ಪಡೆಗಳ ಧೈರ್ಯ, ದಿಟ್ಟತನ ಹಾಗೂ ಪರಮೋಚ್ಚ ಬಲಿದಾನಗಳ ಪರಿಣಾಮ ಅಂತಿಮ ಗಡುವಿಗೆ ಮುನ್ನವೇ ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡಲಾಗಿದೆ.

ಕಾಂಗ್ರೆಸ್ ಸರಕಾರ ಸಹಕರಿಸಲಿಲ್ಲ: ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡುವ ಕೇಂದ್ರ ಸರಕಾರದ ಯೋಜನೆ-ಪ್ರಯತ್ನಗಳಿಗೆ ವಿವಿಧ ರಾಜ್ಯಗಳ ಬಿಜೆಪಿಯೇತರ ಸರಕಾರಗಳು ಕೈಜೋಡಿಸಿದ್ದವು. ಆದರೆ ಛತ್ತೀಸ್‌ಗಢದ ಕಾಂಗ್ರೆಸ್ ಸರಕಾರ ಮಾತ್ರ ಸಹಕರಿಸಿರಲಿಲ್ಲ. 2023 ಡಿಸೆಂಬರ್ ನಂತರ ಅಂದರೆ ಛತ್ತೀಸ್‌ಗಢದಲ್ಲಿ ಬಿಜೆಪಿ ಸರಕಾರ ರಚನೆಯಾದ ನಂತರ , ಬಸ್ತರ್‌ನಲ್ಲಿ ತೀವ್ರವಾಗಿದ್ದ ನಕ್ಸಲ್‌ಪಿಡುಗಿನ ನಾಶ ನಮಗೆ ಸಾಧ್ಯವಾಯಿತು. ಛತ್ತೀಸ್‌ಗಢದಂತಹ ಪ್ರದೇಶಗಳಿಗೆ ಅಭಿವೃದ್ಧಿ ಯೋಜನೆಗಳು ತಲುಪದ ಕಾರಣ ಅಲ್ಲಿ ನಕ್ಸಲರು ಹುಲುಸಾಗಿ ಬೆಳೆದರೆಂಬುದು ಸುದೀರ್ಘ ಕಾಲದಿಂದ ಕೆಲವು ಬುದ್ಧಿಜೀವಿಗಳ ವಾದವಾಗಿದೆ. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧ. ಬಸ್ತಾರ್‌ನಂತಹ ವಲಯಗಳಲ್ಲಿ ನಕ್ಸಲರ ಹಾವಳಿಯಿದ್ದ ಕಾರಣ ಅಲ್ಲಿ ಅಭಿವೃದ್ಧಿ ಚಟುವಟಿಕೆಗಳು ನಡೆಯಲಿಲ್ಲ ಎಂದು ಸಚಿವರು ಸುದ್ದಿಗಾರರಿಗೆ ವಿವರಿಸಿದರು.


ಸಿಕ್ಕಿರಲಿಲ್ಲ ರೇಶನ್ ಕಾರ್ಡ್, ಉಚಿತ ಅಕ್ಕಿ, ಆರೋಗ್ಯ ವಿಮೆ: ನಕ್ಸಲರ ಹಾವಳಿಯಿಂದಾಗಿ ಇಡೀ ಬಸ್ತರ್ ವಲಯವು ಅಭಿವೃದ್ಧಿಯಿಂದ ವಂಚಿತವಾಗಿತ್ತು ಎಂದು ಗೃಹ ಸಚಿವ ಶಾ ಆರೋಪಿಸಿದರು. ನಕ್ಸಲ್ ಪಿಡುಗಿನಿಂದಾಗಿ ವಲಯದ ಜನರಿಗೆ ಪಡಿತರ ಚೀಟಿ ಸಿಕ್ಕಿರಲಿಲ್ಲ, ಉಚಿತ ಆಹಾರಧಾನ್ಯ ಸ್ಕೀಮ್ ನಿಂದ ವಂಚಿತರಾಗಿದ್ದರು. 5ಲಕ್ಷ ರೂವರೆಗಿನ ಆರೋಗ್ಯ ವಿಮಾ ಯೋಜನೆಯ ಸವಲತ್ತುಗಳು ದೊರೆತಿರಲಿಲ್ಲ, ಉದ್ಯೋಗಾವಕಾಶವಂತು ಕನಸಿನ ಮಾತಾಗಿತ್ತು. ನಕ್ಸಲ್ ಹಾವಳಿ ಸಂತ್ರಸ್ತ ವಲಯಗಳಿಗಿಂತಲೂ ತೀರಾ ಹಿಂದುಳಿದ ಹಲವು ಪ್ರದೇಶಗಳು ದೇಶದಲ್ಲಿವೆ. ಆದರೆ ಈ ಪ್ರದೇಶಗಳಲ್ಲಿ ನಕ್ಸಲ್‌ಹಾವಳಿ ಇಲ್ಲ ಎಂದು ಸಚಿವ ಶಾ ಗಮನ ಸೆಳೆದರು.

ಕೇರಳ ಸಂಪುಟ: ಹಗ್ಗಜಗ್ಗಾಟ

ತಿರುವನಂತಪುರಂ: ಕೇರಳದಲ್ಲಿ ಯುಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡ ಬಳಿಕ ಇದೀಗ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಸಚಿವ ಸಂಪುಟ ಸದಸ್ಯರಿಗೆ ಖಾತೆ ಹಂಚಿಕೆ ದೊಡ್ಡ ತಲೆನೋವಾಗಿ ಕಾಡಿದೆ.ಮಿತ್ರಪಕ್ಷಗಳ ಲಾಬಿ ಒಂದೆಡೆ, ಮತೀಯ ಲಾಬಿಗಳ ಒತ್ತಡ ಇನ್ನೊಂದೆಡೆ , ಕಾಂಗ್ರೆಸ್‌ನೊಳಗಣ ಪೈಪೋಟಿ ಮಗದೊಂದೆಡೆ ತೀವ್ರಗೊಂಡಿದ್ದು, ಖಾತೆಗಳಿಗಾಗಿ ತೀವ್ರ ಹಗ್ಗಜಗ್ಗಾಟ ನಡೆದಿದೆ. ಒಂದೆಡೆ ಉನ್ನತ ಶಿಕ್ಷಣ ಖಾತೆ ತನಗೆ ನೀಡಬೇಕೆಂದು ಮುಸ್ಲಿಂಲೀಗ್ ಒತ್ತಡ ಹೇರುತ್ತಿದ್ದು, ಶಿಕ್ಷಣ ಖಾತೆಗಾಗಿ ಕ್ರೈಸ್ತ ಲಾಬಿ ಕೂಡ ತೀವ್ರ ಒತ್ತಡ ಹೇರುತ್ತಿದೆ.ಇದೇ ವೇಳೆ ಮೀನುಗಾರಿಕಾ ಖಾತೆಯನ್ನು ಮುಸ್ಲಿಂಲೀಗಿಗೆ ನೀಡುವುದನ್ನು ಚರ್ಚ್ ನಾಯಕತ್ವ ತೀವ್ರವಾಗಿ ವಿರೋಽಸಿದ್ದು,ಅದು ಕ್ರೈಸ್ತ ಸಚಿವರಿಗೆ ನೀಡಬೇಕೆಂದು ಪ್ರತಿಪಾದಿಸಿದೆ.ಸೆಕ್ಯುಲರ್ ಯುಡಿಎಫ್ ಸರಕಾರವೀಗ ಪ್ರಮುಖ ಖಾತೆಗಳಿಗೆ ಪಟ್ಟುಹಿಡಿದಿರುವ ಈ ಮತೀಯವಾದಿ ಲಾಬಿಗಳನ್ನು ಮನವೊಲಿಸಲು ಹರಸಾಹಸಪಡುತ್ತಿದೆ. ಸಂಧಾನ, ಮಾತುಕತೆಗಳು, ಆಳುವ ಕೂಟದ ಅತೃಪ್ತ ಗುಂಪುಗಳನ್ನು ಸಮಾಧಾನಪಡಿಸಲು ಯತ್ನಗಳು ನಡೆಯುತ್ತಿವೆ.

ಸಚಿವ ಖಾತೆಗಳನ್ನು, ಸಚಿವ ಪಟ್ಟಿಯನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರಿಗೆ ಸಲ್ಲಿಸಿ ಗಜೆಟಿನಲ್ಲಿ ಪ್ರಕಟಿಸಿದ ಬಳಿಕವೇ ಅಧಿಕೃತವಾಗಿ ಬಹಿರಂಗಪಡಿಸಲಾಗುವುದು ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ತಿಳಿಸಿದ್ದರು.

ನೂತನ ಸಂಪುಟದಲ್ಲಿ ತನ್ನ ಸಮುದಾಯಕ್ಕೆ ಕಡಿಮೆ ಪ್ರಾತಿನಿಧ್ಯ ನೀಡಲಾಗಿದೆ ಎಂದು ಲ್ಯಾಟಿನ್ ಕ್ಯಾಥೋಲಿಕ್ ಚರ್ಚ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.



ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನೂತನ ಪ್ರಯೋಗ

ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್

ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಐಜಿಐಎ) ದೀರ್ಘಕಾಲದಿಂದ ನನೆಗುದಿಗೆ ಬಿದ್ದಿದ್ದ ಸ್ವಯಂಚಾಲಿತ ಏರ್ ಟ್ರೈನ್ ಯೋಜನೆಯನ್ನು ಕೊನೆಗೂ ಆರಂಭಿಸುತ್ತಿದೆ. ಈ ಹಿಂದೆ ಖಾಸಗಿ ಹೂಡಿಕೆದಾರರನ್ನು ಸೆಳೆಯಲು ವಿಫಲವಾದ ಕಾರಣ, ಈಗ ವಿಮಾನ ನಿಲ್ದಾಣದ ನಿರ್ವಾಹಕರೇ ಸ್ವಂತ ಹಣದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೆ.

ಕಾರ್ಯನಿರ್ವಹಣೆ



ಜಾಗತಿಕ ಮಟ್ಟದ ಪ್ರಮುಖ ವಿಮಾನ ನಿಲ್ದಾಣಗಳ ಮಾದರಿಯಲ್ಲಿಯೇ ಈ ಏರ್ ಟ್ರೈನ್ ಕೂಡ ಚಾಲಕನಿಲ್ಲದೆ ಪ್ರತ್ಯೇಕ ಹಳಿಗಳ ಮೇಲೆ ಓಡಾಡಲಿದೆ. ಇಲ್ಲಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಇದ್ದು, ಪ್ರಯಾಣಿಕರು ಒಳಗೆ ಹೋಗುವ ಮುನ್ನ ತಮ್ಮ ಬೋರ್ಡಿಂಗ್ ಪಾಸ್ ಸ್ಕ್ಯಾನ್ ಮಾಡುವುದು ಕಡ್ಡಾಯವಾಗಿದೆ. ವಿಮಾನ ನಿಲ್ದಾಣಕ್ಕೆ ಪ್ರಯಾಣಿಕರನ್ನು ಬಿಡಲು ಬರುವ ಸಾರ್ವಜನಿಕರ ಸಂಖ್ಯೆ ಹೆಚ್ಚಿರುವುದರಿಂದ ಈ ನಿಯಂತ್ರಣ ಕ್ರಮ ಅನಿವಾರ್ಯವಾಗಿದೆ. ಒಂದು ವಿಮಾನದಿಂದ ಮತ್ತೊಂದು ವಿಮಾನಕ್ಕೆ ಕನೆಕ್ಟಿಂಗ್ ಫ್ಲೈಟ್ ಹಿಡಿಯುವ ಪ್ರಯಾಣಿಕರಿಗೆ ಈ ಸೇವೆ ಸಂಪೂರ್ಣ ಉಚಿತವಾಗಿರುತ್ತದೆ. ಆದರೆ ಸಾಮಾನ್ಯ ಸಾರ್ವಜನಿಕರು ಇದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆ.

ತಂತ್ರಜ್ಞಾನ ಮತ್ತು ನಿರ್ಮಾಣ

ಈ ಇಡೀ ಯೋಜನೆಯನ್ನು ಡಿಐಎಎಲ್ ಎರಡು ಭಾಗಗಳಾಗಿ ವಿಂಗಡಿಸಿದೆ. ಹಳಿಗಳು ಮತ್ತು ನಿಲ್ದಾಣಗಳಂತಹ ಸಿವಿಲ್ ಕಾಮಗಾರಿಗಳನ್ನು ಭಾರತೀಯ ನಿರ್ಮಾಣ ಕಂಪನಿಗಳಿಗೆ ನೀಡಲಾಗುತ್ತದೆ. ಆದರೆ ರೈಲು ಪೆಟ್ಟಿಗೆಗಳು (ರೋಲಿಂಗ್ ಸ್ಟಾಕ್) ಮತ್ತು ತಾಂತ್ರಿಕ ವ್ಯವಸ್ಥೆಯನ್ನು ವಿದೇಶಿ ಸಂಸ್ಥೆಗಳಿಂದ ಪಡೆಯಲು ಉದ್ದೇಶಿಸಲಾಗಿದೆ. ತಂತ್ರಜ್ಞಾನದ ಆಯ್ಕೆಗಾಗಿ ವಿಮಾನ ನಿಲ್ದಾಣದ ಅಧಿಕಾರಿಗಳು ಈಗಾಗಲೇ ದಕ್ಷಿಣ ಕೊರಿಯಾ, ಇಂಡೋನೇಷ್ಯಾ, ಇಟಲಿ ಮತ್ತು ಸ್ವಿಟ್ಜರ್ಲೆಂಡ್ ದೇಶಗಳ ಏರ್ ಟ್ರೈನ್ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ. ಈ ತಂತ್ರಜ್ಞಾನ ಪಾಲುದಾರಿಕೆಗಾಗಿ ಶೀಘ್ರದಲ್ಲೇ ಜಾಗತಿಕ ಟೆಂಡರ್ ಕರೆಯಲಾಗುತ್ತದೆ.

ಮುಖ್ಯ ಅಂಶಗಳು

- ಭಾರತದ ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಲಿರುವ ಮೊದಲ ಬೃಹತ್ ಏರ್ ಟ್ರೈನ್ ಯೋಜನೆ
- ಒಟ್ಟು 7.7 ಕಿಲೋಮೀಟರ್ ಉದ್ದದ ಕಾರಿಡಾರ್ ನಲ್ಲಿ ಎಲ್ಲಾ ಟರ್ಮಿನಲ್‌ಗಳನ್ನು ಸಂಪರ್ಕಿಸುತ್ತದೆ.
- ಒಟ್ಟು ವೆಚ್ಚ ಸುಮಾರು 3,000 ದಿಂದ 4,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ.
- ಮುಂದಿನ 30 ತಿಂಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಗುರಿ
- ವಿಮಾನ ಬದಲಾಯಿಸುವ ಪ್ರಯಾಣಿಕರಿಗೆ ಉಚಿತ, ಉಳಿದವರಿಗೆ ಶುಲ್ಕ ಇರಲಿದೆ.

ತಡೆರಹಿತ ಸೇವೆ

ಸುದ್ದಿ ಸಮಗ್ರ

ಹೆಚ್ಚಿನ ಜನದಟ್ಟಣೆ ಇರುವ ಸಮಯದಲ್ಲಿ ಈ ರೈಲುಗಳು ಮಧ್ಯದ ನಿಲ್ದಾಣಗಳಲ್ಲಿ ನಿಲ್ಲದೆ ನೇರವಾಗಿ ಚಲಿಸಲಿವೆ. ವಿಮಾನ ನಿಲ್ದಾಣದ 'ಹಬ್-ಅಂಡ್-ಸ್ಪೋಕ್' ಮಾದರಿಗೆ ತಕ್ಕಂತೆ, ಪೀಕ್ ಅವರ್ ಗಳಲ್ಲಿ ಟರ್ಮಿನಲ್ 1 ಮತ್ತು ಟರ್ಮಿನಲ್ 3/2 ನಡುವೆ ಯಾವುದೇ ನಿಲುಗಡೆ ಇಲ್ಲದೆ ರೈಲುಗಳು ಓಡಲಿವೆ. ಇದರಿಂದಾಗಿ ಅಂತಾರಾಷ್ಟ್ರೀಯ ಮತ್ತು ದೇಶೀಯ ವಿಮಾನಗಳ ನಡುವೆ ತುರ್ತಾಗಿ ಸಂಚರಿಸಬೇಕಾದ ಪ್ರಯಾಣಿಕರಿಗೆ ಭಾರಿ ಅನುಕೂಲವಾಗಲಿದೆ.

ನಿಲ್ದಾಣಗಳ ವಿನ್ಯಾಸ

ರೈಲು ನಿಲ್ದಾಣಗಳನ್ನು ಟರ್ಮಿನಲ್‌ಗಳ ಪ್ರವೇಶ ದ್ವಾರಗಳಿಗೆ ತೀರಾ ಹತ್ತಿರದಲ್ಲಿ ನಿರ್ಮಿಸಲಾಗುತ್ತಿದೆ. ಮೆಟ್ರೋ ಅಥವಾ ಬಸ್ ನಿಲ್ದಾಣಗಳಿಂದ ಈ ಏರ್ ಟ್ರೈನ್ ನಿಲ್ದಾಣಗಳಿಗೆ ಕೇವಲ ಎರಡು ಅಥವಾ ಮೂರು ನಿಮಿಷಗಳ ನಡಿಗೆಯ ದೂರವಿರಲಿದೆ. ಇದು ಇಡೀ ವಿಮಾನ ನಿಲ್ದಾಣವನ್ನು ಒಂದು ಸಮಗ್ರ ಸಾರಿಗೆ ಕೇಂದ್ರವನ್ನಾಗಿ ಬದಲಾಯಿಸಲಿದೆ.

ಯೋಜನೆ ಹೇಗಿದೆ?

ಇದು ಸಂಪೂರ್ಣ ಸ್ವಯಂಚಾಲಿತವಾಗಿ ಚಲಿಸುವ ರೈಲು ವ್ಯವಸ್ಥೆಯಾಗಿದ್ದು (ಎಪಿಎಂ), ವಿಮಾನ ನಿಲ್ದಾಣದ ಒಳಗಿನ 7.7 ಕಿಲೋಮೀಟರ್ ಉದ್ದದ ಹಳಿಯ ಮೇಲೆ ಸಂಚರಿಸಲಿದೆ. ಇದು ಟರ್ಮಿನಲ್ 1, ಟರ್ಮಿನಲ್ 2, ಟರ್ಮಿನಲ್ 3 ಸೇರಿದಂತೆ ಏರೋಸಿಟಿ ಮತ್ತು ಸರಕು ಸಾಗಣೆ (ಕಾರ್ಗೋ) ವಲಯಗಳನ್ನು ಪರಸ್ಪರ ಜೋಡಿಸುತ್ತದೆ. ದಿಲ್ಲಿ ಇಂಟರ್ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಡಿಐಎಎಲ್) ಈ ಯೋಜನೆಗಾಗಿ 3,000 ಕೋಟಿಯಿಂದ 4,000 ಕೋಟಿ ರೂ. ವೆಚ್ಚವಾಗಬಹುದು ಎಂದು ಅಂದಾಜಿಸಿದೆ. ಮುಂದಿನ 30 ತಿಂಗಳಲ್ಲಿ ಕಾಮಗಾರಿ ಮುಗಿಸುವ ಗುರಿ ಹೊಂದಲಾಗಿದೆ. ಈ ಹೊಸ ವ್ಯವಸ್ಥೆಯಿಂದಾಗಿ ಒಂದು ಟರ್ಮಿನಲ್‌ನಿಂದ ಮತ್ತೊಂದಕ್ಕೆ ಹೋಗುವ ಪ್ರಯಾಣಿಕರ ಸಮಯ ಉಳಿಯಲಿದ್ದು, ಸಂಚಾರ ಸರಳವಾಗಲಿದೆ.

ನಿಧಿಯ ಬದಲಾವಣೆ

ಮೊದಲು ಈ ಯೋಜನೆಯನ್ನು ಖಾಸಗಿ ಸಹಭಾಗಿತ್ವದ (ಡಿಬಿಎಫ್‌ಒಟಿ) ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅಂದರೆ ಖಾಸಗಿ ಕಂಪನಿಯೇ ಹಣ ಹೂಡಿ, ನಿರ್ಮಿಸಿ, ಜಾಹೀರಾತುಗಳ ಮೂಲಕ ಆದಾಯ ಗಳಿಸಬೇಕಿತ್ತು. ಆದರೆ ಈ ಟೆಂಡರ್‌ಗೆ ಕೇವಲ ಒಂದೇ ಒಂದು ಬಿಡ್ ಬಂದಿದ್ದರಿಂದ ಯೋಜನೆ ಮುಂದುವರಿಯಲಿಲ್ಲ. ಹೀಗಾಗಿ ವಿಮಾನ ನಿಲ್ದಾಣದ ನಿರ್ವಾಹಕರು ತಮ್ಮ ಆಂತರಿಕ ಉಳಿತಾಯದ ಹಣವನ್ನೇ ಬಳಸಲು ಮುಂದಾಗಿದ್ದಾರೆ. ಈ ವೆಚ್ಚವನ್ನು ಮುಂದೆ ವಿಮಾನ ನಿಲ್ದಾಣದ ಸುಂಕ ಹಾಗೂ ಜಾಹೀರಾತು ಆದಾಯದ ಮೂಲಕ ಸರಿದೂಗಿಸಲಾಗುತ್ತದೆ. ಆದರೂ ಸಾಮಾನ್ಯ ಪ್ರಯಾಣಿಕರ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ನೋಡಿಕೊಳ್ಳಲಾಗುವುದು ಎಂದು ಸಂಸ್ಥೆ ಹೇಳಿದೆ.



ಹೆಚ್ಚುತ್ತಿರುವ ಬೇಡಿಕೆ ಮತ್ತು ಪ್ರಾಮುಖ್ಯತೆ

ದಿಲ್ಲಿ ವಿಮಾನ ನಿಲ್ದಾಣದಲ್ಲಿ ಕನೆಕ್ಟಿಂಗ್ ಫ್ಲೈಟ್ ಪಡೆಯುವ ಪ್ರಯಾಣಿಕರ ಸಂಖ್ಯೆ 2006 ರಲ್ಲಿ ಕೇವಲ ಶೇ.5 ರಷ್ಟಿತ್ತು, ಆದರೆ ಈಗ ಅದು ಶೇ.25 ಕ್ಕೆ ಏರಿಕೆಯಾಗಿದೆ. ದುಬೈ ಮತ್ತು ಸಿಂಗಾಪುರದಂತಹ ಜಾಗತಿಕ ವಿಮಾನ ನಿಲ್ದಾಣಗಳಿಗೆ ಪೈಪೋಟಿ ನೀಡಲು ಇಂತಹ ತಡೆರಹಿತ ಸಾರಿಗೆ ವ್ಯವಸ್ಥೆ ಅಗತ್ಯವಾಗಿದೆ. ಸದ್ಯ ಟರ್ಮಿನಲ್‌ಗಳ ನಡುವೆ ರಸ್ತೆ ಮೂಲಕ ಸಂಚರಿಸಲು ಟ್ರಾಫಿಕ್ ಹಾಗೂ ಭದ್ರತಾ ತಪಾಸಣೆಗಳಿಂದಾಗಿ ಸಾಕಷ್ಟು ಸಮಯ ವ್ಯರ್ಥವಾಗುತ್ತಿತ್ತು. ಭಾರತದ ವಿಮಾನಯಾನ ಕ್ಷೇತ್ರ ವೇಗವಾಗಿ ಬೆಳೆಯುತ್ತಿದ್ದು, ರಸ್ತೆ ಸಾರಿಗೆಯ ಮೇಲಿನ ಅವಲಂಬನೆ ಕಡಿಮೆ ಮಾಡಲು ಈ ಏರ್ ಟ್ರೈನ್ ದೊಡ್ಡ ಕೊಡುಗೆ ನೀಡಲಿದೆ. ಇದು ಪೂರ್ಣಗೊಂಡರೆ ಭಾರತದ ಮೊದಲ ಬೃಹತ್ ಸ್ವಯಂಚಾಲಿತ ವಿಮಾನ ನಿಲ್ದಾಣ ಸಾರಿಗೆ ಜಾಲ ಎನಿಸಿಕೊಳ್ಳಲಿದೆ.

ಕಿರುಸುದ್ದಿ

ಪೆಟ್ರೋಲ್, ಡೀಸೆಲ್ ಬೆಲೆ 90 ಪೈಸೆ ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಸಂಘರ್ಷ ಮತ್ತು ಜಾಗತಿಕ ಇಂಧನ ಪೂರೈಕೆ ಕೊರತೆ ಕಾರಣಗಳಿಂದಾಗಿ ಭಾರತೀಯ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 90 ಪೈಸೆ ಹೆಚ್ಚಿಸಿವೆ. ಮೇ 15ರಂದು ತೈಲ ಕಂಪನಿಗಳು ಲೀಟರ್‌ಗೆ 3 ರೂ. ಬೆಲೆ ಏರಿಕೆ ಮಾಡಿದ್ದು, ಮಂಗಳವಾರ ಇಂಧನ ಇನ್ನಷ್ಟು ದುಬಾರಿಯಾಗಿವೆ. ಹೊಸ ಬೆಲೆ ಏರಿಕೆ ನಂತರ ಬೆಂಗಳೂರಿನಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ)ನಲ್ಲಿ ಲೀಟರ್ ಪೆಟ್ರೋಲ್ ದರ 107.15 ರೂ. ಮತ್ತು ಡೀಸೆಲ್ ಬೆಲೆ 95.04 ರೂ. ತಲುಪಿದೆ. ಕಚ್ಚಾ ತೈಲ ಕಂಪನಿ ಬ್ರೆಂಟ್ ಕ್ರೂಡ್, ಬ್ಯಾರೆಲ್ ಕಚ್ಚಾ ತೈಲ ಬೆಲೆಯನ್ನು 111 ಡಾಲರ್‌ಗೆ ಹೆಚ್ಚಿಸಿದೆ. ಹಾರ್ಮುಜ್ ಜಲಸಂಧಿ ಮುಚ್ಚಿರುವ ಕಾರಣ ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಲೆ ಏರಿಕೆ ಸಾಧ್ಯತೆಯಿದೆ.

ಭಾರತ-ಇಂಗ್ಲೆಂಡ್ ಮುಕ್ತ ವ್ಯಾಪಾರ ಒಪ್ಪಂದ ಶೀಘ್ರ

ಹೊಸದಿಲ್ಲಿ: ಮುಂಬರುವ ವರ್ಷಗಳಲ್ಲಿ ಭಾರತಕ್ಕೆ ಗಮನಾರ್ಹ ರಫ್ತುಗಳನ್ನು ಯೋಜಿಸಿರುವ ಇಂಗ್ಲೆಂಡ್ ಸ್ಕಾಚ್ ವಿಸ್ಕಿ ಅಸೋಸಿಯೇಷನ್, ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ತ್ವರಿತ ಅನುಷ್ಠಾನದ ಬಗ್ಗೆ ಭರವಸೆ ವ್ಯಕ್ತಪಡಿಸಿದೆ. ಕಳೆದ ಜುಲೈನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಯುಕೆ ಭೇಟಿ ವೇಳೆ ಭಾರತ-ಇಂಗ್ಲೆಂಡ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು ಮತ್ತು ಈ ವರ್ಷ ಯುಕೆ ಸಂಸತ್ತಿನ ಅನುಮೋದನೆ ಪ್ರಕ್ರಿಯೆಯ ಮೂಲಕ ಪ್ರಗತಿಯಾಗಿದೆ.

ಎರಡು ವಿದೇಶಿ ಮಿಲಿಟರಿ ಸರಕು ಮಾರಾಟಕ್ಕೆ ಅಸ್ತು

ಹೊಸದಿಲ್ಲಿ: ಭಾರತಕ್ಕೆ ಅಮೆರಿಕ ಒಟ್ಟು 428.2 ಮಿಲಿಯನ್ ಮೌಲ್ಯದ ಎರಡು ಸಂಭಾವ್ಯ ವಿದೇಶಿ ಮಿಲಿಟರಿ ಸರಕುಗಳ ಮಾರಾಟಕ್ಕೆ ಅನುಮೋದನೆ ನೀಡಿದೆ. ಇದರಲ್ಲಿ ಎಎಚ್-64ಇ ಅಪಾಚೆ ಹೆಲಿಕಾಪ್ಟರ್ ಗಳಿಗೆ ಫಾಲೋ-ಆನ್ ಬೆಂಬಲ ಹಾಗೂ ಎಂ-777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್ ಫಿರಂಗಿ ಸುಸ್ಥಿರ ಸಹಾಯ ಸೇರಿವೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ. ಅಂದಾಜು 230 ಮಿಲಿಯನ್ ಡಾಲರ್ ಮೌಲ್ಯದ ಎಂ-777 ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳ ದೀರ್ಘಾವಧಿಯ ಸುಸ್ಥಿರ ಬೆಂಬಲಕ್ಕಾಗಿ, ಪ್ಯಾಕೇಜ್‌ನಲ್ಲಿ ಪೂರಕ ವಸ್ತುಗಳು, ಬಿಡಿಭಾಗಗಳು, ದುರಸ್ತಿ ಮತ್ತು ಹಿಂತಿರುಗಿಸುವಿಕೆ, ತರಬೇತಿ, ತಾಂತ್ರಿಕ ನೆರವು, ಕ್ಷೇತ್ರ ಸೇವಾ ಪ್ರತಿನಿಧಿ, ಡಿಪೋ ಸಾಮರ್ಥ್ಯ ಮತ್ತು ಲಾಜಿಸ್ಟಿಕ್ಸ್ ಹಾಗೂ ಕಾರ್ಯಕ್ರಮ ಬೆಂಬಲದ ಇತರ ಸಂಬಂಧಿತ ಅಂಶಗಳು ಸೇರಿವೆ.

ಲಾಹೋರ್ ಗಲ್ಲಿಗಳಿಗೆ ರಾಮ, ಕೃಷ್ಣನ ನಾಮ

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಸರ್ಕಾರ, ಲಾಹೋರ್‌ನ ರಸ್ತೆಗಳಿಗೆ ದಶಕಗಳ ಹಿಂದೆ ನೀಡಲಾಗಿದ್ದ ಇಸ್ಲಾಮೀಕೃತ ಹೆಸರುಗಳನ್ನು ಬದಲಾಯಿಸಿ, ಅವುಗಳ ಹಳೆಯ ಹಿಂದು, ಸಿಖ್, ಜೈನ್ ಮತ್ತು ವಸಾಹತುಶಾಹಿ ಕಾಲದ ಹೆಸರುಗಳನ್ನು ಮರುಸ್ಥಾಪಿಸಲು ಪ್ರಾರಂಭಿಸಿದೆ.

ಕಳೆದ ಎರಡು ತಿಂಗಳುಗಳಲ್ಲಿ ಕನಿಷ್ಠ ಒಂಬತ್ತು ಸ್ಥಳಗಳ ಹೆಸರುಗಳನ್ನು ಬದಲಾಯಿಸಲಾಗಿದೆ. ಇಸ್ಲಾಂಪುರವನ್ನು ಕೃಷ್ಣ ನಗರ ಎಂದು, ರೆಹಮಾನ್ ಗಲಿಯನ್ನು ರಾಮ್ ಗಲಿ ಎಂದು ಮತ್ತು ಬಾಬರಿ ಮಸೀದಿ ಚೌಕವನ್ನು ಜೈನ್ ಮಂದಿರ್ ರಸ್ತೆ ಎಂದು ಬದಲಾಯಿಸಲಾಗಿದೆ. ಸನತ್ ನಗರ, ಲಕ್ಷ್ಮಿ ಚೌಕ್ ಮತ್ತು ಧರಂಪುರ ಇತರ ಬದಲಾವಣೆಗಳಾಗಿವೆ. ಇದು, 50 ಬಿಲಿಯನ್ ಪಿಕೆಆರ್ ವೆಚ್ಚದ 'ಲಾಹೋರ್ ಹೆರಿಟೇಜ್ ಏರಿಯಾ ರಿವೈವಲ್' ಯೋಜನೆಯ ಭಾಗ ಎನ್ನಲಾಗಿದೆ. ದೇಶದ ಸಾಂಸ್ಕೃತಿಕ ರಾಜಧಾನಿಯ ವಿಭಜನೆ ಪೂರ್ವದ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸಲು ಮಾಜಿ ಪ್ರಧಾನಿ ನವಾಜ್ ಷರೀಫ್ ಮತ್ತು ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ 2025 ರಲ್ಲಿ ಈ ಯೋಜನೆ ಪ್ರಾರಂಭಿಸಿದ್ದರು.

ಭಯೋತ್ಪಾದನೆಗೆ ಧನಸಹಾಯದ ಕುರಿತಾದ ಅಂತಾರಾಷ್ಟ್ರೀಯ ಗ್ರಹಿಕೆಗಳನ್ನು ಬದಲಾಯಿಸುವುದು ಇದರ ಗುರಿಯಾಗಿದೆ. ಜತೆಗೆ ಸಹಿಷ್ಣುತೆ ಪ್ರದರ್ಶಿಸುವ ಮೂಲಕ ವಿದೇಶಿ ಹೂಡಿಕೆ, ರಾಜತಾಂತ್ರಿಕ ನೆರವು ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ಯಿಂದ ಅನುಮೋದನೆ ನಿರೀಕ್ಷಿಸುತ್ತಿದೆ.

ಐಎಎಫ್ ಸ್ಕ್ವಾಡ್ರನ್ ಲೀಡರ್ ಸಾನ್ಯಾ ಸಾಧನೆ

ಹೊಸದಿಲ್ಲಿ: ಭಾರತೀಯ ವಾಯುಪಡೆ(ಐಎಎಫ್) ಸ್ಕ್ವಾಡ್ರನ್ ಲೀಡರ್ ಸಾನ್ಯಾ ಅತ್ಯುನ್ನತ ಗೌರವಾನ್ವಿತ (ಕ್ಯಾಟ್-ಎ ಕ್ಯೂಎಫ್‌ಐ) ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಪಡೆದ ಮೊದಲ ಮಹಿಳಾ ಅಧಿಕಾರಿ ಎಂಬ ಇತಿಹಾಸ ನಿರ್ಮಿಸಿದ್ದಾರೆ.

ಭಾರತೀಯ ಸಶಸ್ತ್ರಪಡೆಗಳಲ್ಲಿ ಮಹಿಳೆಯರ ಸಾಧನೆಗೆ ಇದೊಂದು ದೊಡ್ಡ ಉದಾಹರಣೆಯಾಗಿದೆ. ಶ್ರೇಷ್ಠತೆಯು ಹಾರಾಟ ನಡೆಸುತ್ತದೆ ಎಂದು ಮೂರು ಪದಗಳಲ್ಲಿ ಸಾನ್ಯಾ ಸಾಧನೆಗೆ ವಾಯುಪಡೆ ಪ್ರಶಂಸೆ ವ್ಯಕ್ತಪಡಿಸಿದೆ. ಅಂದರೆ ಭಾರತೀಯ ಸೇನೆಯಲ್ಲಿ ಯಾವುದೇ ಲಿಂಗ ಭೇದವಿಲ್ಲ, ಇಲ್ಲಿ ಶ್ರೇಷ್ಠತೆಯನ್ನಷ್ಟೇ ಪರಿಗಣಿಸಲಾಗುತ್ತದೆ ಎಂಬರ್ಥ ನೀಡುತ್ತದೆ.

ಆಕೆಯ ಸಾಧನೆ ಸಮರ್ಪಣೆ ಮತ್ತು ಶ್ರೇಷ್ಠತೆಯ ನಿರಂತರ ಹಂಬಲದ ಪ್ರತೀಕ. ಇದು ಭಾರತೀಯ ವಾಯುಪಡೆಗೆ ಹೆಮ್ಮೆಯ ಮೈಲಿಗಲ್ಲಾಗಿದ್ದು, ದೇಶಾದ್ಯಂತ ವಿಮಾನಯಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಕನಸು ಕಾಣುತ್ತಿರುವ ಯುವ ಜನಾಂಗಕ್ಕೆ ಸಾನ್ಯಾ ಪ್ರೇರಣಾದಾಯಿ ಆಗಿದ್ದಾರೆ ಎಂದು ಐಎಎಫ್ ಎಕ್ಸ್‌ನಲ್ಲಿ ಬರೆದುಕೊಂಡಿದೆ.

ಹುದ್ದೆಗೆ ಬೇಕಾದ ಅರ್ಹತೆಗಳು: ಅತ್ಯುನ್ನತ ಕ್ಯಾಟ್-ಎ ಕ್ಯೂಎಫ್‌ಐ ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಸಂಪಾದಿಸಲು ತಾಳ್ಮೆ, ಸ್ಪಷ್ಟತೆ, ಶಾಂತತೆ, ಆಳವಾದ ತಾಂತ್ರಿಕ ಜ್ಞಾನ ಇತ್ಯಾದಿ ಕೌಶಲಗಳ ಅಪರೂಪದ ಸಂಯೋಜನೆ ಅಗತ್ಯವಿದೆ. 2017ರಲ್ಲಿ ಫ್ಲೈಟ್ ಲೆಫ್ಟಿನೆಂಟ್ ಮತ್ತು 2021ರಲ್ಲಿ ಸ್ಕ್ವಾಡ್ರನ್ ಲೀಡರ್ ಹುದ್ದೆಗಳಿಗೆ ಸಾನ್ಯಾ ಭಡ್ತಿ ಪಡೆದಿದ್ದರು.

ನೀಟ್: ಕೋಚಿಂಗ್ ಕೇಂದ್ರ ಸ್ಥಾಪಕ ಬಂಧನ

ಪುಣೆ: ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಭಾರೀ ತಿರುವು ಪಡೆದಿದ್ದು, ಮಹಾರಾಷ್ಟ್ರದ ಖ್ಯಾತ ಕೋಚಿಂಗ್ ಕೇಂದ್ರ ಆರ್‌ಸಿಸಿ ಸ್ಥಾಪಕ ಶಿವರಾಜ್ ರಘುನಾಥ್ ಮೋಟೆಗಾಂವಕರ್ ಅವರನ್ನು ಸಿಬಿಐ ಬಂಧಿಸಿದೆ. ಆರ್‌ಸಿಸಿ ಕೋಚಿಂಗ್ ಸಂಸ್ಥೆಯ ವಿವಿಧ ಘಟಕಗಳಲ್ಲಿ ಮಾಕ್ ಟೆಸ್ಟ್ ಹೆಸರಿನಲ್ಲಿ ಪರೀಕ್ಷೆಗಳನ್ನು ನಡೆಸುವ ನೆಪದಲ್ಲಿ ನೀಟ್ -ಯುಜಿ 2026ರ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದಾರೆ ಎಂಬ ಆರೋಪದ ಆಧಾರದಲ್ಲಿ ಶಿವರಾಜ್‌ರನ್ನು ಸಿಬಿಐ ಸಿಬ್ಬಂದಿ ಭಾನುವಾರ ರಾತ್ರಿ ಬಂಧಿಸಿದ್ದಾರೆ. ಭಾನುವಾರ ರಾತ್ರಿ ಬಂಧಿಸಿದ ಬಳಿಕ ಪುಣೆ ಸಿಬಿಐ ಕಚೇರಿಯಲ್ಲಿ ವಿಚಾರಣೆಯನ್ನು ನಡೆಸಲಾಗಿದೆ. ಇದಾದ ಬಳಿಕ ಸೋಮವಾರ ಶಿವರಾಜ್ ಅವರನ್ನು ಹೊಸದಿಲ್ಲಿಗೆ ಕರೆತಂದು ಅಧಿಕೃತವಾಗಿ ಬಂಧಿಸಲಾಗಿದೆ.



ಶಿವರಾಜ್‌ಗಿತ್ತು ಕುಲಕರ್ಣಿ ಸಂಪರ್ಕ: ಈಗಾಗಲೇ ಸಿಬಿಐ ಬಂಧನದಲ್ಲಿರುವ ಪುಣೆ ಮೂಲದ ರಸಾಯನಶಾಸ್ತ್ರ ಉಪನ್ಯಾಸಕ ಪ್ರಹ್ಲಾದ್ ವಿಠಲ್‌ರಾವ್ ಕುಲಕರ್ಣಿ ಮತ್ತು ಶಿವರಾಜ್ ಇಬ್ಬರೂ ಸಂಪರ್ಕದಲ್ಲಿದ್ದರು. ಪಿ.ವಿ. ಕುಲಕರ್ಣಿ ಪ್ರಕರಣದ ಪ್ರಮುಖ ಆರೋಪಿಯೆಂದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ಕುಲಕರ್ಣಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ)ಗಾಗಿ ಮರಾಠಿ ಅನುವಾದಕನ ಕೆಲಸ ಮಾಡಿದ್ದರು. ಸಿಬಿಐ ಸಿಬ್ಬಂದಿ ಕುಲಕರ್ಣಿ ಅವರನ್ನು ಮೇ 15ರಂದೇ ಬಂಧಿಸಿದ್ದರು. ಕಳೆದ ವರ್ಷವೂ ನಡೆದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಪಿ.ವಿ. ಕುಲಕರ್ಣಿ ಪಾತ್ರವಿದೆಯೇ ಎಂಬ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ.

ಕಣದಿಂದ ಹಿಂದೆ ಸರಿದ ಟಿಎಂಸಿ ಪುಷ್ಪಾ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಮರು ಮತದಾನಕ್ಕೆ ಎರಡು ದಿನಗಳ ಮುನ್ನ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಾಂಗೀರ್ ಖಾನ್ ಅವರು ಚುನಾವಣೆಕಣದಲ್ಲಿರುವುದಿಲ್ಲ ಎಂದು ಘೋಷಿಸಿದ್ದಾರೆ. ಈ ಸ್ಥಳವು ಅಭಿವೃದ್ಧಿ ಹೊಂದುವುದನ್ನು ನೋಡುವುದು ನನ್ನ ಕನಸಾಗಿತ್ತು. ಹೊಸ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಫಾಲ್ಟಾಗಾಗಿ ಹೊಸ ಪ್ಯಾಕೇಜ್‌ಗಳನ್ನು ಹೊರತರುತ್ತಾರೆ. ಇದನ್ನು ನೋಡಿ, ನಾನು ಮರುಮತದಾನದಿಂದ ಹಿಂದೆಸರಿಯುತ್ತೇನೆ ಎಂದು ಹೇಳಿದ್ದಾರೆ. ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ಉತ್ತರ ಪ್ರದೇಶದಿಂದ ಚುನಾವಣಾ ವೀಕ್ಷಕರಾಗಿ ನಿಯೋಜನೆಗೊಂಡಿದ್ದ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಅವರಿಗೆ ಈ ಹಿಂದೆ ಖಾನ್ ನೀವು ಸಿಂಗಂ ಆದರೇ ನಾನು ಪುಷ್ಪಾ.. ಎಂದು ಸವಾಲು ಹಾಕಿದ್ದರು. ಎನ್ ಕೌಂಟರ್ ಸ್ಪೆಷಲಿಸ್ಟ್ ಎಂಬ ಖ್ಯಾತಿಯು ಶರ್ಮಾ ಅವರಿಗೆ ಸಿಂಗಂ ಎಂಬ ಉಪನಾಮವನ್ನು ತಂದುಕೊಟ್ಟಿತು.

ಅಗ್ರ 100ರಲ್ಲಿ ಭಾರತದ 95ರಿಂದ 99 ನಗರಗಳಿಗೆ ಸ್ಥಾನ

ವಿಶ್ವದ ಅತ್ಯಂತ ಬಿಸಿ ರಾಷ್ಟ್ರ ಭಾರತ!

ಹೊಸದಿಲ್ಲಿ: ವಿಶ್ವದ 100 ಅತ್ಯಂತ ಬಿಸಿ ನಗರಗಳಲ್ಲಿ ದಿಲ್ಲಿ ಸಹಿತ ಭಾರತದ 95-99 ನಗರಗಳು ಸ್ಥಾನ ಪಡೆದುಕೊಂಡಿದೆ. ಸದ್ಯ 46 ಡಿಗ್ರಿ ಉಷ್ಣಾಂಶದ ಮಧ್ಯ ಆಫ್ರಿಕಾ ನಗರ ಫಾಯಾ ಅಗ್ರಸ್ಥಾನದಲ್ಲಿ, 45 ಡಿಗ್ರಿ ಉಷ್ಣಾಂಶದ ಸೌದಿ ಅರೇಬಿಯಾ ನಗರ ಅಲ್ ಜುಬೈಲ್ ದ್ವಿತೀಯ ಸ್ಥಾನದಲ್ಲಿವೆ.

ವಾಯು ಗುಣಮಟ್ಟ ಇಂಡೆಕ್ಸ್ (ಏಕ್ಯೂಐ) ನೈಜ ಸಮಯದ ಉಷ್ಣಾಂಶ ರ್‍ಯಾಂಕಿಂಗ್ ಬಿಡುಗಡೆಗೊಳಿಸುತ್ತದೆ. ಇದು ನೈಜ ಸಮಯದ ರ್‍ಯಾಂಕಿಂಗ್ ಆಗಿದ್ದು, ಕ್ಷಣಕ್ಕೊಮ್ಮೆ ರ್‍ಯಾಂಕಿಂಗ್ ನಲ್ಲಿ ಬದಲಾವಣೆ ಆಗುತ್ತಲೇ ಇರುತ್ತವೆ. ಹಾಗಿದ್ದೂ ಭಾರತದ 95ರಿಂದ 99 ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.



ಈ ನಗರಳು ದೇಶದೆಲ್ಲೆಡೆ ಬಿಸಿ ಗಾಳಿ ಹಾಗೂ ಉಷ್ಣಾಂಶದ ತೀವ್ರತೆಯನ್ನು ಹೆಚ್ಚಿಸುತ್ತಿವೆ. ಅಗ್ರ 100 ಅತ್ಯಂತ ಬಿಸಿ ನಗರಗಳಲ್ಲಿ ಕೊನೆಯ ಸ್ಥಾನ ಪಡೆದಿರುವ ನಗರಗಳೂ 44 ಡಿಗ್ರಿ ಉಷ್ಣಾಂಶವನ್ನು ಹೊಂದಿವೆ. ಅಗ್ರ 7 ನಗರಗಳು 48 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವನ್ನು ಹೊಂದಿವೆ.ದಿಲ್ಲಿ, ಫರೀದಾಬಾದ್, ಚಂಡೀಗಢ, ಜಮ್ಮು, ಆಗ್ರಾ, ಅಯೋಧ್ಯಾ, ಗ್ವಾಲಿಯರ್, ಕೋಟ ಮತ್ತು ರಾಯ್ಪುರ ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಪ್ರಮುಖ ನಗರಗಳಾಗಿವೆ. ಚಂಡೀಗಢ, ಜಮ್ಮು, ಬಟಿಂಡಾ, ಪಠಾನ್‌ಕೋಟ್, ಬರೇಲಿ, ಝೂನ್ಸಿ, ಕೈಥಾಲ್ ಮತ್ತು ಹರಿದ್ವಾರ್ ನಗರಗಳು 46 ಡಿಗ್ರಿ ಉಷ್ಣಾಂಶ ವಿಭಾಗದಲ್ಲಿ ಸ್ಥಾನ ಪಡೆದಿವೆ. ಆಗಾಗ ಹವಾಮಾನದಲ್ಲಿ ಬದಲಾವಣೆ ಆಗುತ್ತಲೇ ರ್‍ಯಾಂಕಿಂಗ್ ನಲ್ಲಿ ನೈಜ ಸಮಯದ ಬದಲಾವಣೆ ಆಗುತ್ತದೆ.

ಉತ್ತರಪ್ರದೇಶದ್ದೇ ಮೇಲುಗೈ!: ಅಗ್ರ 100 ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಉತ್ತರಪ್ರದೇಶದ ನಗರಗಳೇ ತುಂಬಿಕೊಂಡಿವೆ. ಉಳಿದಂತೆ ಮಧ್ಯಪ್ರದೇಶ, ಪಂಜಾಬ್, ಚತ್ತೀಸಗಢ, ಹರ್ಯಾಣ, ದಿಲ್ಲಿ, ರಾಜಸ್ಥಾನ, ಜಮ್ಮು ಕಾಶ್ಮೀರ ಮತ್ತು ಬಿಹಾರ ನಗರಗಳು ಸ್ಥಾನ ಪಡೆದಿವೆ.

ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ

ಏಕ್ಯೂಐ ನೈಜ ಸಮಯದ ಅತ್ಯಂತ ಶೀತ ನಗರಗಳ ಪಟ್ಟಿಯಲ್ಲಿ ಬಹಳಷ್ಟು ಅಮೆರಿಕ ನಗರಗಳೇ ಸ್ಥಾನ ಪಡೆದುಕೊಂಡಿದ್ದು, ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ ಎನಿಸಿದೆ. ಉಳಿದಂತೆ ನ್ಯೂಜಿಲೆಂಡ್, ಕೆನಡಾ, ರಷ್ಯಾ, ಜಪಾನ್, ಚಿಲಿ ಮತ್ತು ಚೀನಾ ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.

ಬ್ರಿಕ್ಸ್ ಸಚಿವರ ಸಭೆಯಲ್ಲಿ ಲಾವ್ರೊವ್-ಜೈಶಂಕರ್ ಚರ್ಚೆ

ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್

ಹೊಸದಿಲ್ಲಿ: ಸೆಪ್ಟೆಂಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಸೆ.12 ಮತ್ತು 13ರಂದು ದಿಲ್ಲಿಯಲ್ಲಿ ಬ್ರಿಕ್ಸ್ ಶೃಂಗಸಭೆ ನಡೆಯಲಿದೆ. ಅಂತೆಯೇ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸಹ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.

ರಷ್ಯಾ ಅಧ್ಯಕ್ಷರ ಭಾರತ ಭೇಟಿಯನ್ನು ಕ್ರೆಮ್ಲಿನ್ ವಕ್ತಾರ ಯೂರಿ ಉಶಕೋವ್ ದೃಢೀಕರಿಸಿದ್ದಾರೆ ಎಂದು ದಕ್ಷಿಣ ಆಫ್ರಿಕಾದಲ್ಲಿನ ರಷ್ಯಾ ರಾಯಭಾರ ಕಚೇರಿ ಎಕ್ಸ್ ಪೋಸ್ಟ್ ಮಾಡಿದೆ. 2025ರ ಡಿಸೆಂಬರ್‌ನಲ್ಲಿ ನಡೆದಿದ್ದ ಭಾರತ-ರಷ್ಯಾ ನಡುವಿನ 23ನೇ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಕಡೆಯದಾಗಿ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಅಜಿತ್ ದೋವಲ್‌ರೊಂದಿಗೆ ವಿವಿಧ ಕ್ಷೇತ್ರಗಳ ಕುರಿತು ಚರ್ಚೆ ನಡೆಸಿದ್ದರು. ಟ್ರಂಪ್ ಸುಂಕ ಸಮರ, ರಷ್ಯಾ ತೈಲ ಖರೀದಿ ಮತ್ತು ಉಕ್ರೇನ್ ಯುದ್ಧ ಪ್ರಮುಖ ಚರ್ಚಾ ವಿಷಯವಾಗಿದ್ದವು. ಇತ್ತೀಚೆಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಗಾಗಿ ರಷ್ಯಾ ವಿದೇಶಾಂಗ ಸಚಿವ ಸರ್ಗೆ ಲಾವ್ರೊವ್ ಅವರ 2 ದಿನಗಳ ಭಾರತ ಭೇಟಿ ಬಳಿಕ ಪುಟಿನ್ ಭಾರತ ಪ್ರವಾಸದ ಸುದ್ದಿ ಬಂದಿದೆ. ಮೇ 14 ಮತ್ತು 15ರಂದು ಜೈಶಂಕರ್ ಅವರೊಂದಿಗೆ ಲಾವ್ರೊವ್ ಮಾತುಕತೆ ನಡೆಸಿದ್ದರು.

ಭಾರತ ಆತಿಥ್ಯದಲ್ಲಿ 18ನೇ ಬ್ರಿಕ್ಸ್ ಶೃಂಗ

ಬ್ರಿಕ್ಸ್ ನಾಯಕರ 18ನೇ ಶೃಂಗಸಭೆ ಸೆ.12 ಮತ್ತು 13ರಂದು ಭಾರತದ ಆತಿಥ್ಯದಲ್ಲಿ ನಡೆಯಲಿದೆ. ಜಾಗತಿಕ ಭದ್ರತಾ ಸವಾಲುಗಳು, ಆರ್ಥಿಕ ಸಹಯೋಗ, ವ್ಯಾಪಾರ ವಹಿವಾಟು ಪಾಲುದಾರಿಕೆ ಮತ್ತು ಬಹುಧ್ರುವೀಯ ಜಾಗತಿಕ ವ್ಯವಸ್ಥೆಯನ್ನು ಬಲಗೊಳಿಸುವುದು ಇತ್ಯಾದಿ ವಿಚಾರಗಳ ಬಗ್ಗೆ ದಿಲ್ಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆ-2026ರಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ. ಶೃಂಗದಲ್ಲಿ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುಎಇ, ಸೌದಿ ಅರೇಬಿಯಾ ಮತ್ತು ಇಂಡೋನೇಷ್ಯಾ ನಾಯಕರು ಭಾಗವಹಿಸಲಿದ್ದಾರೆ.

ಸಂಪಾದಕೀಯ

ಒಲೈಕೆಯ ರಾಜಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿ ತೆರೆ

ಪಶ್ಚಿಮ ಬಂಗಾಳದ ರಾಜಕಾರಣವು ಹಲವು ದಶಕಗಳಿಂದ ಒಂದು ವಿಚಿತ್ರ ದಿಕ್ಕಿನಲ್ಲಿ ಸಾಗುತ್ತಿತ್ತು. ಆಡಳಿತದ ಕೇಂದ್ರಬಿಂದು ಜನಸಾಮಾನ್ಯರ ಹಿತಾಸಕ್ತಿ ಅಥವಾ ರಾಷ್ಟ್ರೀಯ ಭದ್ರತೆ ಆಗಿರದೆ ಬದಲಾಗಿ ನಿರ್ದಿಷ್ಟ ಸಮುದಾಯದ ಓಲೈಕೆ ಎಂಬ ಆರೋಪವೇ ಹೆಚ್ಚಾಗಿ ಕೇಳಿಬರುತ್ತಿತ್ತು. ಪರಿಣಾಮವಾಗಿ, ಸಾಮಾನ್ಯ ನಾಗರಿಕರ ಜೀವನಕ್ಕೆ ಸಂಬಂಧಿಸಿದ ಅನೇಕ ನಿರ್ಧಾರಗಳು ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದಲ್ಲೇ ಸಿಲುಕಿಕೊಂಡಿದ್ದವು.



ಇದೀಗ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ನೂತನ ಬಿಜೆಪಿ ಸರ್ಕಾರ ಆ ಪ್ರವೃತ್ತಿಗೆ ಸ್ಪಷ್ಟ ಬ್ರೇಕ್ ಹಾಕುವ ಕೆಲಸ ಆರಂಭಿಸಿರುವುದು ಗಮನಾರ್ಹ.

ದೇಶದ ಭದ್ರತಾ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಪ್ರದೇಶವೆಂದೇ ಪರಿಗಣಿಸಲ್ಪಡುವ ಸಿಲಿಗುರಿ ಕಾರಿಡಾರ್‌ಗೆ ಅಗತ್ಯ ಭೂಮಿ ನೀಡುವ ವಿಚಾರ ವರ್ಷಗಳಿಂದ ರಾಜಕೀಯದ ಕಾರಣಕ್ಕೆ ವಿಳಂಬವಾಗಿತ್ತು. 'ಚಿಕನ್ ನೆಕ್' ಎಂದೇ ಕರೆಯಲ್ಪಡುವ ಈ ಪ್ರದೇಶ ದೇಶದ ಈಶಾನ್ಯ ಭಾಗವನ್ನು ಉಳಿದ ಭಾರತಕ್ಕೆ ಸಂಪರ್ಕಿಸುವ ಜೀವನಾಡಿ. ಇಂಥ ವ್ಯೂಹಾತ್ಮಕ ಮಹತ್ವದ ಪ್ರದೇಶದಲ್ಲಿ ಕೇಂದ್ರದ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಅಡ್ಡಿಯಾಗಿದ್ದರೆ ಅದು ಕೇವಲ ಆಡಳಿತ ವೈಫಲ್ಯವಲ್ಲ, ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಎನ್ನಬೇಕಾಗುತ್ತದೆ. ಈಗಿನ ಸರ್ಕಾರ ಅದನ್ನು ಮನಗಂಡು ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ.

ಅದೇ ರೀತಿ, ಬಾಂಗ್ಲಾದೇಶ ಗಡಿಯಲ್ಲಿ ಬೇಲಿ ನಿರ್ಮಾಣಕ್ಕೆ ಅಗತ್ಯ ಭೂಮಿ ನೀಡಿರುವ ಕ್ರಮವೂ ಮಹತ್ವದ್ದಾಗಿದೆ. ಅಕ್ರಮ ನುಸುಳುವಿಕೆ, ಕಳ್ಳಸಾಗಣೆ, ಭಯೋತ್ಪಾದಕ ಚಟುವಟಿಕೆಗಳ ತಡೆಗೆ ಗಡಿ ಭದ್ರತೆ ಅತ್ಯವಶ್ಯಕ.

ಆದರೆ ಹಿಂದಿನ ಸರ್ಕಾರಗಳು ಮತಬ್ಯಾಂಕ್ ರಾಜಕಾರಣದ ಕಾರಣಕ್ಕೆ ಈ ವಿಚಾರದಲ್ಲಿ ಗಂಭೀರತೆ ತೋರಲಿಲ್ಲ ಎಂಬ ಟೀಕೆ ಸಾಮಾನ್ಯವಾಗಿತ್ತು. ಈಗಿನ ಸರ್ಕಾರ ಆ ರಾಜಕೀಯ ಭಯವನ್ನು ಬದಿಗಿಟ್ಟು ಕಾರ್ಯೋನ್ಮುಖವಾಗಿದೆ.

ಮೌಲ್ವಿಗಳಿಗೆ ನೀಡಲಾಗುತ್ತಿದ್ದ ಗೌರವಧನವನ್ನು ಸ್ಥಗಿತಗೊಳಿಸಿರುವ ಕ್ರಮವೂ ಸಮಾನತೆಯ ತತ್ವದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸರ್ಕಾರವು ಧರ್ಮಾಧಾರಿತ ಪ್ರೋತ್ಸಾಹದ ಕೇಂದ್ರವಾಗಬಾರದು. ಧರ್ಮನಿರಪೇಕ್ಷ ಆಡಳಿತ ಎಂದರೆ ಎಲ್ಲ ಧರ್ಮಗಳಿಗೆ ಸಮಾನ ಅಂತರ ಕಾಯ್ದುಕೊಳ್ಳುವುದೇ ಹೊರತು, ತೆರಿಗೆದಾರರ ಹಣವನ್ನು ನಿರ್ದಿಷ್ಟ ಸಮುದಾಯದ ಧಾರ್ಮಿಕ ನಾಯಕರಿಗೆ ಹಂಚುವುದಲ್ಲ. ಇದೇ ಮಾತು ಸಾರ್ವಜನಿಕ ರಸ್ತೆಗಳಲ್ಲಿ ನಮಾಜ್ ನಡೆಸುವ ವಿಚಾರಕ್ಕೂ ಅನ್ವಯಿಸುತ್ತದೆ. ಸಾರ್ವಜನಿಕ ಸ್ಥಳಗಳು ಎಲ್ಲರಿಗೂ ಸೇರಿದ್ದಾಗಿದ್ದು, ಅವುಗಳ ಬಳಕೆ ಸಾಮಾನ್ಯ ಜನರ ಸಂಚಾರ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಿರಬಾರದು.

ಒಟ್ಟಿನಲ್ಲಿ, ಪಶ್ಚಿಮ ಬಂಗಾಳದಲ್ಲಿ ಈಗ ಕಾಣಿಸುತ್ತಿರುವುದು ಕೇವಲ ಸರ್ಕಾರ ಬದಲಾವಣೆ ಅಲ್ಲ; ಆಡಳಿತದ ಮನೋಭಾವದ ಬದಲಾವಣೆ. ಓಲೈಕೆಯ ರಾಜಕಾರಣದಿಂದ ಹೊರಬಂದು ರಾಷ್ಟ್ರೀಯ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಸಾಮಾನ್ಯ ಜನರ ಹಿತಾಸಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುವ ದಿಕ್ಕಿನಲ್ಲಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಸಾಗುತ್ತಿರುವುದು ಸ್ಪಷ್ಟ.

ಜನಪರ ಆಡಳಿತವೆಂದರೆ ಇದೇ ಎಂಬ ಸಂದೇಶವನ್ನು ಬಂಗಾಳ ಈಗ ದೇಶಕ್ಕೆ ನೀಡುತ್ತಿದೆ. ಇದಕ್ಕಿಂತಲೂ ಮುಖ್ಯವಾಗಿ, ಈ ನಿರ್ಧಾರಗಳು ಪಶ್ಚಿಮ ಬಂಗಾಳದಲ್ಲಿ ವರ್ಷಗಳಿಂದ ಬೆಳೆದಿದ್ದ 'ರಾಜ್ಯಕ್ಕಿಂತ ಸಮುದಾಯ ದೊಡ್ಡದು' ಎಂಬ ಅಪಾಯಕಾರಿ ರಾಜಕೀಯ ಮನೋಭಾವಕ್ಕೆ ಸವಾಲು ಹಾಕುತ್ತಿವೆ.

ಕಾನೂನು ಎಲ್ಲರಿಗೂ ಒಂದೇ ಆಗಬೇಕು, ಸಾರ್ವಜನಿಕ ವ್ಯವಸ್ಥೆ ಎಲ್ಲರಿಗೂ ಸಮಾನವಾಗಿರಬೇಕು ಮತ್ತು ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಯಾವುದೇ ರಾಜಕೀಯ ಸಂಶಯ ಇರಬಾರದು ಎಂಬ ಸಂದೇಶವನ್ನು ಹೊಸ ಸರ್ಕಾರ ಸ್ಪಷ್ಟವಾಗಿ ನೀಡುತ್ತಿದೆ. ದೀರ್ಘಕಾಲದ ಓಲೈಕೆ ರಾಜಕಾರಣದಿಂದ ಆಡಳಿತದ ಮೇಲೆ ಜನರಲ್ಲಿ ಮೂಡಿದ್ದ ಅನಿಶ್ಚಿತತೆಯನ್ನು ದೂರ ಮಾಡುವ ಪ್ರಯತ್ನವೂ ಇದಾಗಿದೆ. ಆಡಳಿತದ ಕೇಂದ್ರಬಿಂದು ಮತಬ್ಯಾಂಕ್ ಅಲ್ಲ, ನಾಗರಿಕರ ಹಕ್ಕು ಮತ್ತು ದೇಶದ ಭದ್ರತೆ ಎಂಬ ತತ್ವಕ್ಕೆ ಮರಳುತ್ತಿರುವುದು ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆಯೆಂದೇ ಪರಿಗಣಿಸಬೇಕು.

ಭರವಸೆಯ ಕಿರಣವಾಗಿ ಇಂಡೋ-ಮೆಡಿಟರೇನಿಯನ್ ಪಾಲುದಾರಿಕೆ

'ಧರ್ಮ' ಮತ್ತು 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಸಮಾಜಗಳನ್ನು ಒಂದುಗೂಡಿಸುತ್ತದೆ. ಇದರ ಆಧಾರದಲ್ಲಿ ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.



ನರೇಂದ್ರ ಮೋದಿ,
ಭಾರತದ ಪ್ರಧಾನ ಮಂತ್ರಿ



ಜಾರ್ಜಿಯಾ ಮೆಲೋನಿ,
ಇಟಲಿ ಪ್ರಧಾನ ಮಂತ್ರಿ

ಭಾರತ ಮತ್ತು ಇಟಲಿ ದೇಶಗಳ ನಡುವಿನ ಸಂಬಂಧವು ಈಗ ಒಂದು ಪ್ರಮುಖ ಹಂತವನ್ನು ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ನಡುವಿನ ಬಾಂಧವ್ಯವು ಅಭೂತಪೂರ್ವ ವೇಗದಲ್ಲಿ ಬೆಳೆದಿದೆ. ಕೇವಲ ಸಾಮಾನ್ಯ ಸ್ನೇಹವಾಗಿದ್ದ ನಮ್ಮ ಒಡನಾಟ ಈಗ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಭವಿಷ್ಯದ ಸಮಾನ ದೃಷ್ಟಿಕೋನವನ್ನು ಆಧರಿಸಿದ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬದಲಾಗಿದೆ.

ಜಾಗತಿಕ ವ್ಯವಸ್ಥೆಯು ದೊಡ್ಡ ಬದಲಾವಣೆಗೆ ಒಳಗಾಗುತ್ತಿರುವ ಈ ಸಮಯದಲ್ಲಿ, ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆಯು ಉನ್ನತ ರಾಜಕೀಯ ಹಾಗೂ ಸಾಂಸ್ಥಿಕ ಮಟ್ಟದ ನಿಯಮಿತ ಭೇಟಿ ಮತ್ತು ಮಾತುಕತೆಗಳಿಂದ ಮುನ್ನಡೆಯುತ್ತಿದೆ. ಇದು ನಮ್ಮ ಆರ್ಥಿಕ ಚೈತನ್ಯ, ಸಾಮಾಜಿಕ ಸೃಜನಶೀಲತೆ ಮತ್ತು ಸಾವಿರಾರು ವರ್ಷಗಳ ಹಳೆಯ ನಾಗರಿಕತೆಯ ಜ್ಞಾನವನ್ನು ಒಟ್ಟುಗೂಡಿಸುವ ಒಂದು ಹೊಸ ಹಾಗೂ ಉನ್ನತ ಆಯಾಮವನ್ನು ಪಡೆದುಕೊಳ್ಳುತ್ತಿದೆ. 21ನೇ ಶತಮಾನದ ಪ್ರಗತಿ ಮತ್ತು ಭದ್ರತೆಯು ಹೊಸ ಆವಿಷ್ಕಾರಗಳನ್ನು ಮಾಡುವ, ಇಂಧನ ಪರಿವರ್ತನೆಯನ್ನು ಸರಿಯಾಗಿ ನಿರ್ವಹಿಸುವ ಮತ್ತು ತನ್ನ ದೇಶದ ಸಾರ್ವಭೌಮತ್ವವನ್ನು ಬಲಪಡಿಸುವ ರಾಷ್ಟ್ರಗಳ ಸಾಮರ್ಥ್ಯದ ಮೇಲೆ ನಿರ್ಧಾರವಾಗುತ್ತದೆ ಎಂಬ ಸಾಮೂಹಿಕ ಅರಿವು ನಮ್ಮ ಸಹಕಾರದಲ್ಲಿದೆ. ಈ ಉದ್ದೇಶಕ್ಕಾಗಿ, ಹೊಸ ಗುರಿಗಳನ್ನು ತಲುಪಲು ಮತ್ತು ನಮ್ಮ ಪರಸ್ಪರ ಪೂರಕ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವ ಸಲುವಾಗಿ ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಾಢವಾಗಿಸಲು ಹಾಗೂ ವೈವಿಧ್ಯಮಯಗೊಳಿಸಲು ನಾವು ಬದ್ಧರಾಗಿದ್ದೇವೆ.

ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲ ಶಕ್ತಿಯಾಗಿ ಇಟಲಿ ಹೊಂದಿರುವ ಸ್ಥಾನವನ್ನು ಬಿಂಬಿಸುವ ಇಟಾಲಿಯನ್ ವಿನ್ಯಾಸ, ಅತ್ಯುತ್ತಮ ಉತ್ಪಾದನಾ ಸಾಮರ್ಥ್ಯ ಹಾಗೂ ವಿಶ್ವದರ್ಜೆಯ ಸೂಪರ್ ಕಂಪ್ಯೂಟರ್‌ಗಳನ್ನು ಭಾರತದ ತ್ವರಿತ ಆರ್ಥಿಕ ಪ್ರಗತಿ, ಎಂಜಿನಿಯರಿಂಗ್ ಪ್ರತಿಭೆ, ಬೃಹತ್ ಮಾರುಕಟ್ಟೆ ಹಾಗೂ 100ಕ್ಕೂ ಹೆಚ್ಚು ಯುನಿಕಾರ್ನ್‌ಗಳು ಮತ್ತು 2,00,000 ನವೋದ್ಯಮಗಳನ್ನು ಒಳಗೊಂಡ ನಾವೀನ್ಯತೆಯ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿ ಒಂದು ಪ್ರಬಲ ಸಮನ್ವಯತೆಯನ್ನು ರೂಪಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಇದು ಕೇವಲ ಎರಡು ವ್ಯವಸ್ಥೆಗಳ ಸಾಮಾನ್ಯ ಜೋಡಣೆಯಲ್ಲ, ಬದಲಿಗೆ ನಮ್ಮ ಕೈಗಾರಿಕಾ ಸಾಮರ್ಥ್ಯಗಳು ಪರಸ್ಪರ ಶಕ್ತಿಯನ್ನು ಹೆಚ್ಚಿಸುವಂತಹ ಒಂದು ಮೌಲ್ಯಾಧಾರಿತ ಸಹ-ಸೃಷ್ಟಿಯಾಗಿದೆ.

ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಉಭಯ ದೇಶಗಳಲ್ಲಿ ವ್ಯಾಪಾರ ಹಾಗೂ ಹೂಡಿಕೆಯನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ. ರಕ್ಷಣೆ ಮತ್ತು ಏರೋಸ್ಪೇಸ್, ಹಸಿರು ತಂತ್ರಜ್ಞಾನ, ಯಂತ್ರೋಪಕರಣ, ವಾಹನ ಬಿಡಿಭಾಗ, ರಾಸಾಯನಿಕ, ಔಷಧೀಯ ಉತ್ಪನ್ನ, ಜವಳಿ, ಕೃಷಿ-ಆಹಾರ ಮತ್ತು ಪ್ರವಾಸೋದ್ಯಮ ಸೇರಿದಂತೆ ಪ್ರಮುಖ ವಲಯಗಳ ಮೇಲೆ ವಿಶೇಷ ಗಮನ ಹರಿಸುವ ಮೂಲಕ, 2029 ರ ವೇಳೆಗೆ ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದಲ್ಲಿ 20 ಬಿಲಿಯನ್ ಯುರೋ ಗುರಿಯನ್ನು ತಲುಪಲು ಹಾಗೂ ಅದನ್ನು ಮೀರಿ ಸಾಧಿಸಲು ನಾವು ಬಯಸುತ್ತೇವೆ.

ಜಗತ್ತಿನಾದ್ಯಂತ ಮೇಡ್ ಇನ್ ಇಟಲಿ ಎಂಬುದು ಯಾವಾಗಲೂ ಅತ್ಯುತ್ತಮ ಗುಣಮಟ್ಟಕ್ಕೆ ಹೆಸರಾಗಿದೆ. ಇಂದು ಅದು ಭಾರತದ ಮೇಕ್ ಇನ್ ಇಟಲಿ ಯೋಜನೆಯ ಉನ್ನತ ಗುಣಮಟ್ಟದ ಗುರಿಗಳೊಂದಿಗೆ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ, ಭಾರತೀಯ ಮಾರುಕಟ್ಟೆಗಾಗಿ ಉತ್ಪಾದನೆ ಮಾಡಲು ಇಟಾಲಿಯನ್ ಉದ್ಯಮಗಳು ತೋರಿಸುತ್ತಿರುವ ಆಸಕ್ತಿ ಮತ್ತು ಇಟಲಿಯಲ್ಲಿ ಭಾರತೀಯ ಕೈಗಾರಿಕೆಗಳ ಪ್ರಸ್ತುತತೆ ಹೆಚ್ಚುತ್ತಿದ್ದು, ಇದು ಅತ್ಯಂತ ಸಕಾರಾತ್ಮಕ ಸಂಕೇತವಾಗಿದೆ. ಪ್ರಸ್ತುತ ಎರಡೂ ಕಡೆಯಿಂದ ಇಂತಹ ಉದ್ಯಮಗಳ ಒಟ್ಟು ಸಂಖ್ಯೆ 1,000 ದಾಟಿದ್ದು, ಇದು ನಮ್ಮ ಪೂರೈಕೆ ಸರಪಳಿಗಳ ಜೋಡಣೆಯನ್ನು ಮತ್ತಷ್ಟು ಬಲಪಡಿಸಲಿದೆ.

ತಾಂತ್ರಿಕ ನಾವೀನ್ಯತೆಯು ನಮ್ಮ ಪಾಲುದಾರಿಕೆಯ ಪ್ರಮುಖ ಅಂತಃಸತ್ವವಾಗಿದೆ. ಮುಂಬರುವ ದಶಕಗಳು ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಸುಧಾರಿತ ಉತ್ಪಾದನೆ, ನಿರ್ಣಾಯಕ ಖನಿಜಗಳು ಮತ್ತು ಡಿಜಿಟಲ್ ಮೂಲ ಸೌಕರ್ಯಗಳಂತಹ ವಲಯಗಳಲ್ಲಿನ ಅಭೂತಪೂರ್ವ ಪ್ರಗತಿಯಿಂದ ಗುರುತಿಸಲ್ಪಟ್ಟ, ಅಳೆಯಲಾಗದ ವ್ಯಾಪ್ತಿಯ ತಾಂತ್ರಿಕ ಕ್ರಾಂತಿಗೆ ಸಾಕ್ಷಿಯಾಗಲಿವೆ. ಭಾರತದ ಕ್ರಿಯಾತ್ಮಕ ನಾವೀನ್ಯ ಪರಿಸರ ವ್ಯವಸ್ಥೆ ಮತ್ತು ಉನ್ನತ ನೈಪುಣ್ಯತೆಯ ವೃತ್ತಿಪರ ಪ್ರತಿಭಾವಂತರ ಸಮೂಹವು, ಇಟಲಿಯ ಸುಧಾರಿತ ಕೈಗಾರಿಕಾ ಸಾಮರ್ಥ್ಯಗಳೊಂದಿಗೆ ಸಮ್ಮಿಲನಗೊಂಡು ಮೇಲ್ಕಂಡ ವಲಯಗಳಲ್ಲಿನ ನಮ್ಮ ಸಹಕಾರವನ್ನು ಸ್ವಾಭಾವಿಕ ಹಾಗೂ ಕಾರ್ಯತಂತ್ರಬದ್ಧವಾಗಿಸಿದೆ. ಉಭಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ನಡುವೆ ವರ್ಧಿಸುತ್ತಿರುವ ಪಾಲುದಾರಿಕೆಯು ಈ ಪ್ರಯತ್ನಕ್ಕೆ ಪೂರಕ ಬಲವನ್ನು ನೀಡಲಿದೆ.

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಈಗಾಗಲೇ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ, ವಿಶೇಷವಾಗಿ 'ಗ್ಲೋಬಲ್ ಸೌತ್' (ಅಭಿವೃದ್ಧಿಶೀಲ ದೇಶಗಳು) ನಲ್ಲಿ ವ್ಯಾಪಕವಾಗಿ ಪ್ರತಿಧ್ವನಿಸುತ್ತಿದೆ. ಕೃತಕ ಬುದ್ಧಿಮತ್ತೆಯು ಪ್ರಮುಖವಾಗಿ ನಮ್ಮ ಸಮಾಜ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಆಳವಾದ ಪರಿಣಾಮ ಬೀರುತ್ತಿದೆ. ಎಐ ತಂತ್ರಜ್ಞಾನದ ಅಭಿವೃದ್ಧಿಯು ಜವಾಬ್ದಾರಿಯುತ ಹಾಗೂ 'ಮಾನವ'-ಕೇಂದ್ರಿತವಾಗಿರಬೇಕು (ಮನುಷ್ಯನ ಒಳಿತಿಗಾಗಿ ಇರಬೇಕು) ಎಂಬುದನ್ನು ಖಚಿತ ಪಡಿಸಿಕೊಳ್ಳಲು ಭಾರತ ಮತ್ತು ಇಟಲಿ ದೀರ್ಘಕಾಲದಿಂದ ಜಂಟಿಯಾಗಿ ಶ್ರಮಿಸುತ್ತಿವೆ. ಈ ದೃಷ್ಟಿಕೋನದಿಂದ, ಎಐ ಎಲ್ಲರನ್ನೂ ಒಳಗೊಳ್ಳುವ ಸಮಗ್ರ ಅಭಿವೃದ್ಧಿಯ ಪ್ರಬಲ ಸಾಧನವಾಗಿ ಉಭಯ ರಾಷ್ಟ್ರಗಳು ಎದುರು ನೋಡುತ್ತವೆ. ಪ್ರಮುಖವಾಗಿ ಗ್ಲೋಬಲ್ ಸೌತ್ ವಲಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು



ಸುಲಭವಾಗಿ ಲಭ್ಯವಾಗುವ ಬಹು ಭಾಷಾ ತಂತ್ರಜ್ಞಾನಗಳು ಜನರ ನಡುವಿನ ಸಾಮಾಜಿಕ ಕಂದಕಗಳನ್ನು ಆಳಗೊಳಿಸುವ ಬದಲು ಅವುಗಳನ್ನು ಕಡಿಮೆ ಮಾಡಬಲ್ಲವು.

ತಂತ್ರಜ್ಞಾನದ ಕೇಂದ್ರಬಿಂದುವಾಗಿ ಮಾನವನನ್ನು ಇರಿಸಬೇಕು ಎಂಬ ಭಾರತದ 'ಮಾನವ್' (MANAV) ದೃಷ್ಟಿಕೋನ ಮತ್ತು ತನ್ನ ಮಾನವತಾವಾದಿ ಸಂಪ್ರದಾಯದಲ್ಲಿ ಬೇರೂರಿರುವ ಮಾನವ ಕೇಂದ್ರಿತ ನೈತಿಕ ತಂತ್ರಜ್ಞಾನದ ನಿಯಮಾವಳಿಗಳನ್ನು (ಅಲ್ಗಾರ್-ಎಥಿಕ್ಸ್) ಉತ್ತೇಜಿಸುವ ಇಟಲಿಯ ನಾಯಕತ್ವವನ್ನು ಆಧರಿಸಿ, ನಮ್ಮ ಪಾಲುದಾರಿಕೆಯು ಎಐ ತಂತ್ರಜ್ಞಾನವನ್ನು ಸಾಮಾಜಿಕ ಸಬಲೀಕರಣದ ವೇಗವರ್ಧಕವನ್ನಾಗಿ ರೂಪಿಸಲು ಬದ್ಧವಾಗಿದೆ. ನಮ್ಮ ಈ ಕಾರ್ಯವಿಧಾನವು ಭಾರತದ ಡಿಜಿಟಲ್ ವ್ಯಾಪ್ತಿಯನ್ನು ಇಟಲಿಯ ನೈತಿಕ ಹಾಗೂ ಕೈಗಾರಿಕಾ ಪರಿಣತಿಯೊಂದಿಗೆ ಸಂಯೋಜಿಸುವ ಮೂಲಕ, ತಂತ್ರಜ್ಞಾನವು ಮಾನವ ಘನತೆಗೆ ಪೂರಕವಾಗಿ ಸೇವೆ ಸಲ್ಲಿಸುವುದನ್ನು ಖಚಿತಪಡಿಸುತ್ತದೆ.

ಸುರಕ್ಷಿತ ಡಿಜಿಟಲ್ ಸಹಕಾರ, ಸಾಮರ್ಥ್ಯ ವೃದ್ಧಿ ಹಾಗೂ ಬಲಿಷ್ಠ ಸೈಬರ್ ಮೂಲಸೌಕರ್ಯ ವಲಯಗಳಲ್ಲಿ ಅತ್ಯುತ್ತಮ ಕಾರ್ಯವಿಧಾನಗಳನ್ನು ಹಂಚಿಕೊಳ್ಳುವ ಮೂಲಕ, ಪ್ರತಿಯೊಂದು ರಾಷ್ಟ್ರವೂ ಎಐ ಅನ್ನು ರೂಪಿಸುವ ಮತ್ತು ಅದರ ಲಾಭವನ್ನು ಪಡೆಯುವಂತಹ ಮುಕ್ತ, ವಿಶ್ವಾಸಾರ್ಹ ಹಾಗೂ ಸಮಾನ ಡಿಜಿಟಲ್ ಜಗತ್ತನ್ನು ಸೃಷ್ಟಿಸುವ ಧ್ಯೇಯವನ್ನು ನಾವು ಹೊಂದಿದ್ದೇವೆ. ಈ ದೃಷ್ಟಿಕೋನವೇ ಇಟಲಿಯ ಜಿ-7 ಅಧ್ಯಕ್ಷತೆಯ ತಿರುಳಾಗಿದೆ ಮತ್ತು ನವ ದೆಹಲಿಯಲ್ಲಿ ಯಶಸ್ವಿಯಾಗಿ ಜರುಗಿದ 'ಎಐ ಇಂಪ್ಯಾಕ್ಟ್ ಶೃಂಗ ಸಭೆ 2026' ರ ಪ್ರಮುಖ ಫಲಿತಾಂಶವೂ ಆಗಿದೆ. ಎಐ ಅನ್ನು ಮಾನವ ಕುಲಕ್ಕಾಗಿ ಮಾನವನೇ ರೂಪಿಸಿದ ಸಾಧನ ಎಂದು ಕಲ್ಪಿಸಿಕೊಳ್ಳುವುದು ಎಂದರೆ-ತಂತ್ರಜ್ಞಾನವು ಎಂದಿಗೂ ವ್ಯಕ್ತಿಗಳ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ, ಜನರ ಮೂಲಭೂತ ಹಕ್ಕುಗಳನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಮತ್ತು ಸಾರ್ವಜನಿಕ ಚರ್ಚೆಗಳನ್ನು ಹಾದಿ ತಪ್ಪಿಸಲು ಅಥವಾ ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ಬದಲಾಯಿಸಲು ಇದನ್ನು ಬಳಸಲಾಗದು ಎಂದು ದೃಢವಾಗಿ ಪ್ರತಿಪಾದಿಸುವುದಾಗಿದೆ. ಹೆಚ್ಚು ಅಂತರ್ ಸಂಪರ್ಕಿತವಾಗುತ್ತಿರುವ ಇಂದಿನ ಜಗತ್ತಿನಲ್ಲಿ ಸ್ವಾತಂತ್ರ್ಯ ಮತ್ತು ಮಾನವ ಘನತೆಯನ್ನು ರಕ್ಷಿಸುವ ನಮ್ಮ ಬದ್ಧತೆಯು ಈ ಮೂಲಭೂತ ಸವಾಲಿನ ಮೇಲೆಯೇ ಆಧಾರಿತವಾಗಿದೆ.

ನಮ್ಮ ಸಹಕಾರವು ಬಾಹ್ಯಾಕಾಶ ಕ್ಷೇತ್ರಕ್ಕೂ ವಿಸ್ತರಿಸಿದೆ. ಬಾಹ್ಯಾಕಾಶ ಪರಿಶೋಧನೆ ಮತ್ತು ಉಪಗ್ರಹ ತಂತ್ರಜ್ಞಾನದಲ್ಲಿ ಭಾರತದ ಪ್ರಗತಿ, ಇಟಲಿಯ ಏರೋಸ್ಪೇಸ್ ಎಂಜಿನಿಯರಿಂಗ್ ಉತ್ಕೃಷ್ಟತೆಯ ಜೊತೆಗೆ ಸೇರಿ ಜಂಟಿ ಯೋಜನೆಗಳು ಮತ್ತು ಮುಂದಿನ ಪೀಳಿಗೆಯ ತಂತ್ರಜ್ಞಾನ ಅಭಿವೃದ್ಧಿಗೆ ದೊಡ್ಡ ಅವಕಾಶಗಳನ್ನು ಒದಗಿಸುತ್ತವೆ.

ರಾಷ್ಟ್ರಗಳ ಸಮೃದ್ಧಿಯನ್ನು ಖಚಿತ ಪಡಿಸಿಕೊಳ್ಳಲು ಭದ್ರತೆ ಮತ್ತು ಸ್ಥಿರತೆ ಅತ್ಯಗತ್ಯ. ರಕ್ಷಣೆ, ಭದ್ರತೆ ಮತ್ತು ಕಾರ್ಯತಂತ್ರದ ತಂತ್ರಜ್ಞಾನಗಳಂತಹ ವಲಯಗಳಲ್ಲಿ ತಮ್ಮ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಇಟಲಿ ಮತ್ತು ಭಾರತ ಉದ್ದೇಶಿಸಿವೆ. ನಮ್ಮ ಸಹಯೋಗವು ಪ್ರಮುಖ ಸಮುದ್ರ ವ್ಯಾಪಾರ ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಭಯೋತ್ಪಾದನೆ, ಅಂತಾರಾಷ್ಟ್ರೀಯ ಅಪರಾಧ ಜಾಲಗಳು, ಮಾದಕ ವಸ್ತು ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಮಾನವ ಕಳ್ಳಸಾಗಣೆಯಂತಹ ಬೆದರಿಕೆಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಬಲಪಡಿಸುತ್ತದೆ.

ಇಂಧನ ವಲಯವು ನಮ್ಮ ಪಾಲುದಾರಿಕೆಯ ಮತ್ತೊಂದು ಪ್ರಮುಖ ಆಧಾರಸ್ತಂಭವಾಗಿದೆ. ವೈವಿಧ್ಯಮಯ ಇಂಧನ ಮೂಲಗಳತ್ತ ಜಾಗತಿಕ ಸ್ಥಿತ್ಯಂತರವು ನಾವೀನ್ಯತೆ, ಹೂಡಿಕೆ ಮತ್ತು ವ್ಯಾಪಕ ಸಹಕಾರವನ್ನು ಅಪೇಕ್ಷಿಸುತ್ತದೆ. ಭಾರತ ಮತ್ತು ಇಟಲಿ ರಾಷ್ಟ್ರಗಳು ನವೀಕರಿಸಬಹುದಾದ ಇಂಧನದಿಂದ ಹಿಡಿದು ಹೈಡ್ರೋಜನ್ ತಂತ್ರಜ್ಞಾನಗಳವರೆಗೆ ಹಾಗೂ ಸ್ಮಾರ್ಟ್ ಗ್ರಿಡ್ ಗಳಿಂದ ಹಿಡಿದು ಸ್ಥಿತಿಸ್ಥಾಪಕ ಮೂಲ ಸೌಕರ್ಯಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕರಿಸುತ್ತಿವೆ.

ಗ್ರೀನ್ ಹೈಡ್ರೋಜನ್ ರಫ್ತಿನ ಜಾಗತಿಕ ಕೇಂದ್ರವಾಗಲು ಭಾರತವು ನೀಡುತ್ತಿರುವ ಉತ್ತೇಜನವು ಅಪಾರ ಸಾಮರ್ಥ್ಯವನ್ನು ಹೊಂದಿದ್ದು, ಇದು ನವೀಕರಿಸಬಹುದಾದ ಮೂಲಸೌಕರ್ಯ ವಲಯದಲ್ಲಿ ಇಟಲಿ ಹೊಂದಿರುವ ಸುಧಾರಿತ ತಂತ್ರಜ್ಞಾನಕ್ಕೆ ಮತ್ತು ಯುರೋಪಿಗೆ ಇಂಧನ ಪ್ರವೇಶ ದ್ವಾರವಾಗಿ ಆ ದೇಶ ಹೊಂದಿರುವ ಕಾರ್ಯತಂತ್ರದ ಪಾತ್ರಕ್ಕೆ ಸಂಪೂರ್ಣವಾಗಿ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ, ಭಾರತ ನೇತೃತ್ವದ ಪ್ರಮುಖ ಅಂತಾರಾಷ್ಟ್ರೀಯ ಉಪಕ್ರಮಗಳಾದ-ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ವಿಪತ್ತು ನಿರೋಧಕ ಮೂಲಸೌಕರ್ಯ ಒಕ್ಕೂಟ (ಸಿಡಿಆರ್‌ಐ) ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟ(ಜಿಬಿಎ)ಗಳಲ್ಲಿ ಇತರ ರಾಷ್ಟ್ರಗಳ ಜೊತೆಗೂಡಿ ನಾವು ನಡೆಸುತ್ತಿರುವ ಸಹಯೋಗವು ಅತ್ಯಂತ ಮಹತ್ವದ್ದಾಗಿದೆ.

ಭೌತಿಕ, ಡಿಜಿಟಲ್ ಹಾಗೂ ಮಾನವ ಸಂಪರ್ಕದ ಬೆಸುಗೆಯೇ ನಮ್ಮನ್ನು ಒಟ್ಟುಗೂಡಿಸುವ ಸೂತ್ರವಾಗಿದೆ. ಭಾರತ ಮತ್ತು ಇಟಲಿ ಉಭಯ ರಾಷ್ಟ್ರಗಳೂ ಜಾಗತಿಕ ಆರ್ಥಿಕತೆಯ ಎರಡು ನಿರ್ಣಾಯಕ ಕೇಂದ್ರಗಳಾದ ಇಂಡೋ-ಪೆಸಿಫಿಕ್ ಮತ್ತು ಮೆಡಿಟರೇನಿಯನ್ ದೇಶಗಳ ಹೃದಯ ಭಾಗದಲ್ಲಿ ನೆಲೆಗೊಂಡಿವೆ. ಇವುಗಳನ್ನು ಪರಸ್ಪರ ಪ್ರತ್ಯೇಕ ವಲಯಗಳಾಗಿ ನೋಡಲು ಸಾಧ್ಯವಿಲ್ಲ, ಬದಲಿಗೆ ಇವು ದಿನೇ ದಿನೇ ಹೆಚ್ಚುತ್ತಿರುವ ಅಂತರ್ ಸಂಪರ್ಕಿತ ಪ್ರದೇಶಗಳಾಗಿವೆ. ವಾಸ್ತವವಾಗಿ, ಹಿಂದೂ ಮಹಾಸಾಗರವನ್ನು ಯುರೋಪ್ ಖಂಡಕ್ಕೆ ಜೋಡಿಸುವುದರ ಮೂಲಕ ವ್ಯಾಪಾರ, ತಂತ್ರಜ್ಞಾನ, ಇಂಧನ, ದತ್ತಾಂಶ ಮತ್ತು ವೈಚಾರಿಕ ವಿನಿಮಯದ ಪ್ರಮುಖ ಕಾರಿಡಾರ್ ಆಗಿ ಹೊರಹೊಮ್ಮುತ್ತಿರುವ 'ಇಂಡೋ-ಮೆಡಿಟರೇನಿಯನ್' ಎಂಬ ಹೊಸ ಪರಿಕಲ್ಪನೆಯ ಉಗಮಕ್ಕೆ ನಾವು ಸಾಕ್ಷಿಯಾಗುತ್ತಿದ್ದೇವೆ. ನಿಖರವಾಗಿ ಈ ಅಂತರ್ ಸಂಪರ್ಕಿತ ಆಯಾಮದೊಳಗೆ ನಮ್ಮ ದ್ವಿಪಕ್ಷೀಯ ಬಾಂಧವ್ಯವು ಸ್ವಾಭಾವಿಕವಾಗಿ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ವಿಕಸನಗೊಳ್ಳುತ್ತಿದೆ. ಇದು ಎರಡು ಖಂಡಗಳನ್ನು ಬೆಸೆಯುವುದರ ಜೊತೆಗೆ ಹೊಸ ಜಾಗತಿಕ ಚಲನಶೀಲತೆಯನ್ನು ರೂಪಿಸಲಿದೆ. ಈ ಹಿನ್ನೆಲೆಯಲ್ಲಿ, 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್' (ಐಎಂಇಸಿ) ಯೋಜನೆಯು ಆಧುನಿಕ ಸಾರಿಗೆ, ಮೂಲ ಸೌಕರ್ಯ, ಡಿಜಿಟಲ್ ಜಾಲ, ಇಂಧನ ವ್ಯವಸ್ಥೆಗಳು ಮತ್ತು ಬಲಿಷ್ಠ ಪೂರೈಕೆ ಸರಪಳಿಗಳ ಮೂಲಕ ನಮ್ಮ ಪ್ರದೇಶಗಳನ್ನು ಸಂಪರ್ಕಿಸುವ ಒಂದು ದೊಡ್ಡ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಈ ದೃಷ್ಟಿಕೋನವನ್ನು ನನಸಾಗಿಸಲು ಇತರ ಪಾಲುದಾರರೊಂದಿಗೆ ಒಟ್ಟಾಗಿ ಕೆಲಸ ಮಾಡಲು ಭಾರತ ಮತ್ತು ಇಟಲಿ ಬದ್ಧವಾಗಿವೆ.

ನಮ್ಮ ರಾಷ್ಟ್ರಗಳ ನಡುವಿನ ಆಳವಾದ ಪಾಲುದಾರಿಕೆ ಹಾಗೂ ಶಾಶ್ವತ ಸಾಂಸ್ಕೃತಿಕ ಬಾಂಧವ್ಯದ ಶಕ್ತಿಯನ್ನು ಆಧರಿಸಿ, ನಾವು ನಮ್ಮ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ, 'ಧರ್ಮ' ಎಂಬ ಪರಿಕಲ್ಪನೆಯು ನಮ್ಮ ಕರ್ತವ್ಯಗಳಿಗೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಹಾಗೆಯೇ 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಅಂತರ್ ಸಂಪರ್ಕಿತ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಪ್ರತಿಧ್ವನಿಸುತ್ತದೆ. ಇಂತಹ ಉನ್ನತ ಮೌಲ್ಯಗಳು ನವೋದಯ ಕಾಲಘಟ್ಟದಲ್ಲಿ ಬೇರೂರಿರುವ ಇಟಲಿಯ ಮಾನವತಾವಾದಿ ಸಂಪ್ರದಾಯದಲ್ಲಿ ಸ್ವಾಭಾವಿಕವಾಗಿ ಪ್ರತಿಧ್ವನಿಸುತ್ತವೆ. ಇದು ಪ್ರತಿಯೊಬ್ಬ ವ್ಯಕ್ತಿಯ ಘನತೆ ಹಾಗೂ ಜನರನ್ನು ಮತ್ತು ಸಮಾಜಗಳನ್ನು ಒಂದುಗೂಡಿಸುವ ಸಂಸ್ಕೃತಿಯ ಅನನ್ಯ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ಆದುದರಿಂದ, ನಮ್ಮ ಈ ಹಂಚಿಕೆಯ ದೃಷ್ಟಿಕೋನವು ನಮ್ಮ ಜನಸಾಮಾನ್ಯರನ್ನು ಕೇಂದ್ರಬಿಂದುವಾಗಿರಿಸಿಕೊಂಡು, ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಒಂದು ನೂತನ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.

ಸೋಮನಾಥ ಮಂದಿರ: ಭಾರತದ ಅಪರಾಜಿತ ಅಸ್ಮಿತೆಯ ಪ್ರತೀಕ

ಸೋಮನಾಥವು ದೇಶದ ಪುನರುತ್ಥಾನದ ಸಂಕೇತ!
ದೇಶದ ಪರಂಪರೆಯ ನಾಡಿಮಿಡಿತ!

ಶೆಹಜಾದ್ ಪೂನಾವಾಲಾ

ಗುಜರಾತ್‌ನಲ್ಲಿರುವ ಸೋಮನಾಥ ದೇವಾಲಯವು ಶಿವನ 12 ಪವಿತ್ರ ಆದಿ ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದು. ಇದು ಕೇವಲ ಪೂಜಾ ಸ್ಥಳವಲ್ಲ, ಇದು ಭಾರತದ ಪುರಾತನ ನಾಗರಿಕತೆಯ ಶಕ್ತಿಯ ಜೀವಂತ ಉದಾಹರಣೆ. ನಮ್ಮ ಸಾಂಸ್ಕೃತಿಕ ಹೃದಯಮಿಡಿತ. ದೇಶದ ಹೊಸ ಆರಂಭದ ಸಂಕೇತ. ಅತ್ಯಂತ ಪ್ರಭಾವಿ ರಾಜಕೀಯ ಭಾಷ್ಯವೊಂದರ ಪ್ರತೀಕ.

ನಾವೀಗ ಸೋಮನಾಥ ದೇವಾಲಯದ ಪುನರ್ನಿರ್ಮಾಣದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತ ಸ್ವತಂತ್ರಗೊಂಡ ಬಳಿಕ 1951ರಲ್ಲಿ ಈ ದೇವಾಲಯವನ್ನು ಮರುನಿರ್ಮಾಣ ಮಾಡಲಾಗಿತ್ತು. ಪದೇಪದೇ ಆಕ್ರಮಣಕಾರರಿಂದ ದಾಳಿಗೊಳಗಾಗಿದ್ದ ಸೋಮನಾಥ ದೇವಾಲಯವು ತನ್ನ ಪುನರ್‌ನಿರ್ಮಾಣದಿಂದ ಸಾರುವ ಸಂದೇಶವೆಂದರೆ, ಅಚಲ ನಂಬಿಕೆ ಮತ್ತು ಧೈರ್ಯಗಳು ಮಂದಿರವನ್ನು ನಾಶಮಾಡುವ ಪ್ರತಿಯೊಂದು ಪ್ರಯತ್ನವನ್ನೂ ಸೋಲಿಸುತ್ತದೆ ಎಂಬುದಾಗಿದೆ. ಸೋಮನಾಥದ ಇತಿಹಾಸ ಕೇವಲ ಪುರಾತನವಷ್ಟೇ ಅಲ್ಲ, ನಮ್ಮ ಅಸ್ಮಿತೆಯನ್ನು ಮರಳಿ ಪಡೆಯಲು ಅದು ನಮಗೆ ಈಗಲೂ ಬಲ ನೀಡುತ್ತಿರುತ್ತದೆ.

ಸೋಮನಾಥ ದೇವಾಲಯವನ್ನು ಹಲವಾರು ಬಾರಿ ನಾಶ ಮಾಡಿದರೂ ಅದು ಮತ್ತೆ ಮತ್ತೆ ಎದ್ದು ನಿಂತುದರಲ್ಲಿಯೇ ಅದರ ನಾಗರಿಕತೆಯ ಮಹತ್ವ ಅಡಗಿದೆ. 11 ಮತ್ತು 18ನೇ ಶತಮಾನದ ಮಧ್ಯದಲ್ಲೇ ಈ ದೇವಾಲಯದ ಮೇಲೆ 6 ಬಾರಿ ದೊಡ್ಡ ಪ್ರಮಾಣದ ದಾಳಿಗಳು ನಡೆದಿದ್ದವು. ಇವು ಕೇವಲ ದೇವಸ್ಥಾನದ ಸಂಪತ್ತು ಕೊಳ್ಳೆ ಹೊಡೆಯಲಷ್ಟೇ ನಡೆದ ದಾಳಿಗಳಲ್ಲ, ನಮ್ಮ ನಂಬಿಕೆ ಮತ್ತು ಸಂಸ್ಕೃತಿಯನ್ನು ನಾಶ ಗೊಳಿಸುವುದೂ ಅದರ ಹಿಂದಿನ ಉದ್ದೇಶವಾಗಿತ್ತು. ಆದರೆ ಪ್ರತಿಬಾರಿಯೂ ರಾಜರು, ರಾಣಿಯರು ಮತ್ತು ಸಾಮಾನ್ಯ ಜನರು ಅದನ್ನು ಮತ್ತೆ ಎತ್ತಿ ಕಟ್ಟಲು ಶ್ರಮಿಸಿದರು. 18ನೇ ಶತಮಾನದಲ್ಲಿ ಮರಾಠ ರಾಣಿ ಅಹಲ್ಯಾಭಾಯಿ ಹೋಳ್ಕರ್ ಮತ್ತು ಸಿಖ್ ರಾಜರು ಕೂಡಾ ಸೋಮನಾಥದ ಪುನರ್‌ನಿರ್ಮಾಣಕ್ಕೆ ಸಂಕಲ್ಪಿಸಿದರು. ಈ ಬಗೆಯ ನಾಶ ಮತ್ತು ಪುನರ್‌ನಿರ್ಮಾಣ ನಮಗೊಂದು ದೊಡ್ಡ ಸತ್ಯವನ್ನು ಹೇಳಿಕೊಡುತ್ತದೆ. ಅದೆಂದರೆ, ಭಾರತದ ಅಸ್ಮಿತೆಯು ಅತಿಕ್ರಮಣಕಾರರ ಖಡ್ಗದಿಂದ ರೂಪಿಸಲ್ಪಟ್ಟುದ್ದಲ್ಲ, ಬದಲಿಗೆ ನಮ್ಮ ಜನರ ಧೈರ್ಯದಿಂದ ರೂಪಿಸಲ್ಪಟ್ಟದ್ದು ಎಂಬುದಾಗಿ. ಈಗಿನ ಬದಲಾಗುತ್ತಿರುವ ಜಗತ್ತಿನಲ್ಲಿ ಸೋಮನಾಥವು ನಮ್ಮ ಶಕ್ತಿ ಇರುವುದು ಪುರಾತನ ಬೇರುಗಳಲ್ಲಿ ಮತ್ತು ಪವಿತ್ರವಾದುದನ್ನು ರಕ್ಷಿಸಲು ತೋರುವ ಧೈರ್ಯದಲ್ಲಿ ಎಂಬ ಪಾಠವನ್ನು ಕಲಿಸುತ್ತದೆ.

ಸಾಂಸ್ಕೃತಿಕವಾಗಿ ಸೋಮನಾಥವು ದೇಶದ ಪರಂಪರೆಯ ನಾಡಿಮಿಡಿತ. ಅದೊಂದು ತೀರ್ಥಕ್ಷೇತ್ರ. ಪ್ರತಿವರ್ಷ ಲಕ್ಷಾಂತರ ಭಕ್ತರು ಅಲ್ಲಿಗೆ ಭೇಟಿ ನೀಡುತ್ತಾರೆ. ಸೋಮನಾಥ ದೇವರ ದರ್ಶನದಿಂದ ಮೋಕ್ಷ ಸಿಗುವುದೆಂದು ನಂಬುತ್ತಾರೆ. ದೇವಾಲಯದ ಶಿಲ್ಪಕಲೆಯು ಪುರಾತನ ಭಾರತದ ಶಿಲ್ಪ ಕಲಾ ವೈಭವಕ್ಕೆ ಸಾಕ್ಷಿಯಾಗಿದೆ. ಭಕ್ತಿ ಮತ್ತು ಸೌಂದರ್ಯ ಇಲ್ಲಿ ಜತೆಯಾಗಿ ಸಾಗುತ್ತದೆ. ಕಥೆಗಳಲ್ಲಿ, ಪುರಾಣ ಗ್ರಂಥಗಳಲ್ಲಿ ಮತ್ತು ಉತ್ಸವಗಳಲ್ಲಿ ಸೋಮನಾಥ ಯಾವಾಗಲೂ ಜೀವಂತವಾಗಿ ಉಳಿದಿದೆ ಇಲ್ಲಿನ ಐತಿಹ್ಯವು ಶಿವನನ್ನು ಪಾಲಕನಾಗಿಯೂ, ಲಯಕಾರಕನಾಗಿಯೂ ಪ್ರತಿಬಿಂಬಿಸುತ್ತದೆ.



ರಾಷ್ಟ್ರೀಯತೆಯ ದೃಷ್ಟಿಯಿಂದ ನೋಡುವುದಾದರೆ, ಸೋಮನಾಥವು 1947ರ ಬಳಿಕ ದೇಶದ ಪುನರುತ್ಥಾನದ ಸಂಕೇತ! ಜುನಾಗಢ್ ಭಾರತಕ್ಕೆ ಸೇರ್ಪಡೆಗೊಂಡ ಬಳಿಕ ಉಪಪ್ರಧಾನಿ ಸರ್ದಾರ್ ಪಟೇಲ್ ಅವರು 1947ರ ನವೆಂಬರ್ 12ರಂದು ಸೋಮನಾಥಕ್ಕೆ ಭೇಟಿ ನೀಡಿದರು. ಆಗ ಸೋಮನಾಥ ಪಾಳುಬಿದ್ದಂತಿತ್ತು. ದೇವಾಲಯವನ್ನು ಮರು ನಿರ್ಮಿಸುವುದು ರಾಷ್ಟ್ರೀಯ ಕರ್ತವ್ಯವೆಂದು ಪಟೇಲ್ ಅಲ್ಲೇ ಘೋಷಿಸಿದರು. ಸರಕಾರದ ಹಣದ ಬದಲಾಗಿ ಜನರ ದೇಣಿಗೆಯಿಂದಲೇ ಅದನ್ನು ಮತ್ತೆ ಕಟ್ಟುವ ಪಣ ತೊಟ್ಟರು. ಮಹಾತ್ಮ ಗಾಂಧಿ ಕೂಡಾ ದೇವಾಲಯ ನಿರ್ಮಾಣದ ಎಲ್ಲಾ ಖರ್ಚುಗಳನ್ನು ಜನರೇ ಭರಿಸಬೇಕೆಂದು ಶರತ್ತು ಹಾಕಿದರು. ಅದರಂತೆ ದೇವಾಲಯದ ಮರುನಿರ್ಮಾಣ ಕಾರ್ಯ ನಡೆದು, 1951ರ ಮೇ 11ರಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಹೊಸ ದೇವಾಲಯವನ್ನು ಉದ್ಘಾಟಿಸಿದರು.

ಅಂದಿನ ಮೇ 11ನೇ ದಿನಾಂಕವು ರಾಷ್ಟ್ರ ಚೇತನದ ಪುನರ್ ಜಾಗೃತಿ ಮತ್ತು ರಾಷ್ಟ್ರ ಸಂಕಲ್ಪದ ದಿನವಾಗಿ ದಾಖಲಾಯಿತು. ಸ್ವತಂತ್ರ ಭಾರತವು ತನ್ನ ಪುರಾತನ ಪರಂಪರೆಯನ್ನು ಎತ್ತಿ ಹಿಡಿಯಲಿದೆ ಎಂಬ ಸಂದೇಶವನ್ನು ಸೋಮನಾಥದ ಪುನರ್ ನಿರ್ಮಾಣ ಸಾರಿ ಹೇಳಿತು. ಮೇ 11 ಮತ್ತೊಂದು ಬಗೆಯಲ್ಲೂ ಭಾರತಕ್ಕೆ ಮಹತ್ವದ ದಿನ. 1998ರ ಮೇ 11ರಂದೇ ಭಾರತವು ಪೋಖ್ರಾಣ್-2 ಪರಮಾಣು ಪರೀಕ್ಷೆ ನಡೆಸಿತ್ತು. ಇದಕ್ಕಾಗಿ ಕೆಲವು ದೇಶಗಳು ಭಾರತದ ಮೇಲೆ ನಿರ್ಬಂಧ ಹೇರಿದರೂ ಭಾರತ ಬಗ್ಗಲಿಲ್ಲ. ಸೋಮನಾಥದ ಅಜೇಯಕ್ಷಾತ್ರ ತೇಜಸ್ಸು ಇಲ್ಲಿಯೂ ಪ್ರತಿಫಲನಗೊಂಡಿತು.

75 ವರ್ಷಗಳ ಹಿಂದೆ ಕಾಂಗ್ರೆಸ್‌ನಲ್ಲಿ ಕೂಡಾ ಸೋಮನಾಥ ಮರು ನಿರ್ಮಾಣದ ಬಗ್ಗೆ ವಿರೋಧವಿತ್ತು. ನೆಹರೂ ಈ ಪುನರ್‌ನಿರ್ಮಾಣ ಮತ್ತು ಉದ್ಘಾಟನೆಯನ್ನು ಕಟುವಾಗಿ ವಿರೋಧಿಸಿದ್ದರು. ಇದು ಹಿಂದು ಪುನರುತ್ಥಾನ ಎಂದು ಅವರು ಬಣ್ಣಿಸಿ, ರಾಷ್ಟ್ರಪತಿಯವರು ದೇವಾಲಯದ ಉದ್ಘಾಟನೆಗೆ ಹೋಗಬಾರದೆಂದು ಒತ್ತಡ ಹೇರಿದ್ದರು. ಸರಕಾರವು ಧಾರ್ಮಿಕ ಕಾರ್ಯಗಳಿಂದ ದೂರವುಳಿಯಬೇಕೆಂದು ಆಗ್ರಹಿಸಿ ನೆಹರೂ 17 ಕ್ಕೂ ಅಧಿಕ ಪತ್ರಗಳನ್ನು ಬರೆದಿದ್ದರು. ಆದರೆ ಸರ್ದಾರ್ ಪಟೇಲ್ ಮತ್ತು ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಚಲ ನಿರ್ಧಾರದೆದುರು ನೆಹರೂ ಬೇಳೆ ಬೇಯಲಿಲ್ಲ.

ಸ್ವಾತಂತ್ರ್ಯದ ಬಳಿಕ ಹಲವು ದಶಕಗಳ ಕಾಲ ಕಾಂಗ್ರೆಸ್ ಪಕ್ಷವು ಹಲವಾರು ಸನಾತನ ಮತ್ತು ಧಾರ್ಮಿಕ ಕೇಂದ್ರಗಳನ್ನು ನಿರ್ಲಕ್ಷಿಸುತ್ತಾ ಬಂದಿತು. ಅದಕ್ಕೆ ಕಾರಣ ಓಟ್ ಬ್ಯಾಂಕ್ ರಾಜಕಾರಣ. ಕೆಲವು ಸಮುದಾಯಗಳಿಗೆ ಅಪ್ರಿಯವಾಗಬಹುದೆಂಬ ಕಾರಣಕ್ಕಾಗಿ ಹಿಂದು ದೇವಾಲಯ ಮತ್ತು ಯಾತ್ರಾ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಗೋಜಿಗೇ ಹೋಗಲಿಲ್ಲ. ಆದರೆ ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಈ ಎಲ್ಲಾ ಪವಿತ್ರ ತಾಣಗಳು ಹೊಸಜೀವ ಪಡೆದುಕೊಂಡವು ಮತ್ತು ಘನತೆಯನ್ನು ಮರಳಿ ಪಡೆದವು. ಅಯೋಧ್ಯೆಯಲ್ಲಿನ ಭವ್ಯ ರಾಮಮಂದಿರದಿಂದ ಹಿಡಿದು ವೈಭವೋಪೇತ ಕಾಶಿ ವಿಶ್ವನಾಥ ಕಾರಿಡಾರ್ ತನಕ, ಸಿಕ್ಖರ ಕರ್ತಾರ್‌ಪುರ ಸಾಹಿಬ್ ಕಾರಿಡಾರ್‌ನಿಂದ ಹಿಡಿದು ಉಜ್ಜೈನಿಯ ಕೇದಾರನಾಥ ಮಹಾಕಾಲ ಮಂದಿರದ ತನಕ ಮೋದಿಯವರು ಹಲವಾರು ದೇವಾಲಯಗಳ ಮರುನಿರ್ಮಾಣವನ್ನು ಭಕ್ತಿಯಿಂದ ನೆರವೇರಿಸಿದರು. ಸೋಮನಾಥ ಕೂಡಾ ಅವರ ನಾಯಕತ್ವದಡಿಯಲ್ಲಿ ಮತ್ತಷ್ಟು ನವೀಕರಣಗೊಂಡಿದೆ. ಇದು ವಿಭಜನಕಾರಿ ರಾಜಕೀಯವಲ್ಲ, ಬದಲಾಗಿ ಸಾಂಸ್ಕೃತಿಕ ಗೌರವದ ಮತ್ತು ರಾಷ್ಟ್ರೀಯ ಘನತೆಯ ರಾಜಕೀಯ!

ರಾಜಕೀಯವಾಗಿ ಕೂಡಾ ಸೋಮನಾಥವು ಯಾವತ್ತಿಗೂ ಒಂದು ಮಹತ್ವದ ಸಂಕೇತವಾಗಿದೆ. 1951ರಲ್ಲಿ ದೇವಾಲಯ ಉದ್ಘಾಟಿಸುವ ಕುರಿತಂತೆ ಚರ್ಚೆ ನಡೆದಿತ್ತು. ಇದು ಸಾಂಸ್ಕೃತಿಕ ಜಾಗೃತಿ ಮತ್ತು ಜಾತ್ಯತೀತತೆಯ ನಡುವಿನ ಸಂಘರ್ಷ ಎಂದು ಕೆಲವರು ಬಣ್ಣಿಸಿದ್ದರು. ಆದರೆ ನಮ್ಮ ನಾಗರಿಕ ಕುರುಹನ್ನು ಗೌರವಿಸುವುದು ದೇಶವನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ ಎಂಬುದು ಸೋಮನಾಥದ ಪುನರ್ ನಿರ್ಮಾಣದ ಬಳಿಕ ಸಾಬೀತಾಯಿತು. ಈಗ ಸೋಮನಾಥವು ಸಾಂಸ್ಕೃತಿಕ ರಾಷ್ಟ್ರೀಯತೆಯ ಪ್ರತೀಕವಾಗಿ ನಿಂತಿದೆ. ಭಾರತದ ನೀತಿಗಳು ಮತ್ತು ಘನತೆಯು 5000 ವರ್ಷಗಳ ಹಿಂದಿನ ಪರಂಪರೆಯಿಂದ ಬರಬೇಕೇ ಹೊರತು ವಿದೇಶಿ ಸಿದ್ಧಾಂತಗಳಿಂದ ಅಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ಇತಿಹಾಸವನ್ನು ನೆನಪಿಟ್ಟುಕೊಳ್ಳುವುದು ನಮ್ಮ ಕರ್ತವ್ಯವೆಂಬುದನ್ನು ಬೋಧಿಸಿದೆ. ದೇವಾಲಯದ ಮೇಲೆ ಹಾರುತ್ತಿರುವ ಬಾವುಟವು ಭಾರತದ ಹೆಚ್ಚುತ್ತಿರುವ ಶಕ್ತಿಯನ್ನು ಜಗತ್ತಿಗೇ ತಿಳಿಸುತ್ತಿದೆ.

ಸೋಮನಾಥ ಮಂದಿರದ ಪುನರ್‌ನಿರ್ಮಾಣವೇ ಒಂದು ದೊಡ್ಡ ಗೆಲುವು. ದೇವಾಲಯದ ಅಂದಿನ ಸ್ಥಿತಿ ನೋಡಿ ಸರ್ದಾರ್ ಪಟೇಲರ ಮನಸ್ಸು ಕಲಕಿತ್ತು. ದೇವಾಲಯ ಮರುನಿರ್ಮಿಸುವುದು ದೇಶದ 'ಸಾಂಸ್ಕೃತಿಕ ಸ್ವಾತಂತ್ರ್ಯ'ದ ಅವಿಭಾಜ್ಯ ಅಂಗ ಎಂಬುದಾಗಿ ಅವರು ಭಾವಿಸಿದರು. ಪಟೇಲರ ಕನಸು 1951ರಲ್ಲಿ ನನಸಾಯಿತು.

ಇದೀಗ ಮಂದಿರ ನಿರ್ಮಾಣದ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸುತ್ತಿರುವುದು ಪ್ರಧಾನಿ ಮೋದಿಯವರು. ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗಿನಿಂದ ಹಿಡಿದು ಈಗ ಪ್ರಧಾನಿಯಾಗಿರುವ ತನಕ ಅವರು 'ಸೋಮನಾಥ ಮಂದಿರ ಟ್ರಸ್ಟ್'ನ ಅಧ್ಯಕ್ಷರಾಗಿದ್ದಾರೆ. ಈ ಪುರಾತನ ದೇವಾಲಯವು ಆಧುನಿಕ ಭಾರತದ ದೇದೀಪ್ಯಮಾನ ಜ್ಯೋತಿಯಾಗಿ ಬೆಳಗುವಂತೆ ಮಾಡಿದ್ದಾರೆ.

ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರಾಗಿ ಮೋದಿಯವರು ಅಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು, ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲು ಆಗಾಗ ಸಭೆ ಕರೆಯುತ್ತಿರುತ್ತಾರೆ. ತಮ್ಮ ಭಾಷಣದಲ್ಲಿ ಅವರು ಸೋಮನಾಥವು ಭಾರತದ ಅಪರಾಜಿತ ಸ್ಫೂರ್ತಿಯ ಸಂಕೇತವಾಗಿದೆ ಎಂದು ಬಣ್ಣಿಸುತ್ತಿರುತ್ತಾರೆ. ಸೋಮನಾಥದ ಮೇಲೆ ದಾಳಿ ಮಾಡಿದ ಅತಿಕ್ರಮಣಕಾರರು ನಶಿಸಿ ಹೋಗಿದ್ದಾರೆ. ಆದರೆ ಸೋಮನಾಥವು ಶಾಶ್ವತವಾಗಿ ಉಳಿದಿದೆ ಎಂದು ಅವರು ಹೇಳುತ್ತಿರುತ್ತಾರೆ. ಮಂದಿರ ನಿರ್ಮಾಣದ ಸಾವಿರ ವರ್ಷಗಳ ಕುರುಹಾಗಿ ಈ ವರ್ಷದ ಜನವರಿಯಲ್ಲಿ 'ಸೋಮನಾಥ ಸ್ವಾಭಿಮಾನ ಪರ್ವ' ಆಚರಿಸಲಾಯಿತು. ಅಲ್ಲಿಂದ ಆರಂಭಗೊಂಡು ಮುಂದಿನ 1000 ದಿನಗಳ ಕಾಲ ವಿಶೇಷ ಪೂಜೆ ನಡೆಯಲಿದೆ. ದೇವಾಲಯ ಮರುನಿರ್ಮಾಣದ 75ನೇ ವರ್ಷಾಚರಣೆಯಾದ ಮೇ 11 ರಂದು ಮೋದಿ ಸೋಮನಾಥ ದೇವಾಲಯಕ್ಕೆ ಮತ್ತೆ ಭೇಟಿ ನೀಡಿದರು.

ಸರ್ದಾರ್ ಪಟೇಲ್ ಮತ್ತು ಪ್ರಧಾನಿ ಮೋದಿ ಮುಂತಾದ ನಾಯಕರಿಂದಾಗಿ ಸೋಮನಾಥ ದೇವಾಲಯವು ಪುರಾತನ ವೈಭವ ಮತ್ತು ಆಧುನಿಕ ಭಾರತದ ಮಧ್ಯೆ ಸೇತುವೆಯಾಗಿ ನಿಂತಿದೆ. ಸೋಮನಾಥವನ್ನು ಗೌರವಿಸುವುದೆಂದರೆ ಭಾರತದ ಅಪರಾಜಿತ ಅಸ್ಮಿತೆಯನ್ನು ಗೌರವಿಸಿದಂತೆ.

ಪ್ರಾಣಕ್ಕೆ ಸಂಚಕಾರ ತರುವಂಥವುಗಳು

ಅಗ್ನಿಶಾಪಃ ಸ್ತ್ರಿಯೋ ಮೂರ್ಖಃ ಸರ್ಪೋ ರಾಜಕುಲಾನಿ ಚ ।
ನಿತ್ಯಂ ಯತ್ನೇನ ಸೇವ್ಯಾನಿ ಸದ್ಯಃ ಪ್ರಾಣಹರಾಣಿ ಷಟ್ ॥

– ಸಮಯೋಚಿತ ಪದ್ಯಮಾಲಿಕಾ

ಅಗ್ನಿ, ನೀರು, ಸ್ತ್ರೀಯರು, ಮೂರ್ಖ, ಸರ್ಪ ಮತ್ತು ರಾಜಕುಲಗಳು ಇವು ಆರನ್ನೂ ಪ್ರಯತ್ನದಿಂದಲೇ ಸೇವಿಸಬೇಕು. ಇಲ್ಲದಿದ್ದಲ್ಲಿ ಪ್ರಾಣಕ್ಕೆ ಸಂಚಕಾರವನ್ನು ತರುತ್ತವೆ – ಎಂಬುದು ಶ್ಲೋಕಾರ್ಥ.

'ಜಾತಸ್ಯ ಹಿ ಧ್ರುವೋ ಮೃತ್ಯುಃ' ಹುಟ್ಟಿದವರಿಗೆ ಸಾವು ನಿಶ್ಚಿತ. ಇದು ಜನಪ್ರಿಯ ಉಕ್ತಿ. ಹುಟ್ಟಿದವುಗಳಿಗೆ ಸಾವು ಕಟ್ಟಿಟ್ಟ ಬುತ್ತಿ. ಹುಟ್ಟಿದವರಾರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಂದಲ್ಲ ನಾಳೆ ಸಾವು ಬಂದೇ ಬರುತ್ತದೆ. ಸಾವು ಬರದಿರುವುದಕ್ಕೆ ಏಕೈಕ ಮಾರ್ಗವೆಂದರೆ ಹುಟ್ಟದಿರುವುದು. ಹುಟ್ಟಿದವರಿಗೆ ಸಾವೆಂಬುದು ಪ್ರಕೃತಿಯ ನಿಯಮ.



ಸಾವು ಸಹಜವಾಗಿರಬೇಕು. ಅದೆಂದೂ ಬಲಾತ್ಕಾರದ ಸಾವಾಗ ಬಾರದು. ಆದರೆ ಕೆಲವು ಸಂದರ್ಭಗಳಲ್ಲಿ ನಮ್ಮ ಅವಿವೇಕ, ಅತ್ಯುತ್ಸಾಹ, ಹದ ಮೀರಿದ ಸಾಹಸ, ವಿಚಾರಿಸದೇ ಮುಂದುವರಿಯುವುದು, ದುಡುಕು ಸ್ವಭಾವ ಇವೆಲ್ಲವೂ ಅಸಹಜ ಸಾವಿಗೆ ಕಾರಣವಾಗುತ್ತದೆ.

ಇನ್ನು ಕೆಲವು ಸಂದರ್ಭಗಳಲ್ಲಿ ನಮ್ಮ ಕುತೂಹಲವೂ ಸಾವಿಗೆ ಕಾರಣವಾಗಬಹುದು. ನಾವು ಮಾಡಬೇಕಾದ ಕೆಲಸ, ಬೆಳೆಸಿಕೊಳ್ಳುವ ಸಹವಾಸ ಇತ್ಯಾದಿಗಳು ಸಾವಿಗೆ ಕಾರಣವಾಗುತ್ತವೆ. ಆದ್ದರಿಂದ ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದು ಮುಖ್ಯವೆನಿಸುತ್ತದೆ. ಯಾರೊಂದಿಗೆ ಸಹವಾಸ ಮಾಡಬೇಕು, ಹೇಗೆ ವ್ಯವಹರಿಸಬೇಕು ಎಂಬುದೂ ಮುಖ್ಯವಾಗುತ್ತದೆ.

ಬೆಂಕಿಯೊಂದಿಗೆ ಸರಸ ಸಲ್ಲದು. ಸುಡುವುದು ಅದರ ಗುಣ, ನಾವು ಎಚ್ಚರ ಮೀರಿ ಅಗ್ನಿಯೊಂದಿಗೆ ಸರಸಕ್ಕೆ ಅಥವಾ ಸಾಹಸಕ್ಕೆ ಮುಂದಾದರೆ ಸಾವು ಖಚಿತ. ಆದ್ದರಿಂದ ಬೆಂಕಿಯೊಂದಿಗೆ ಕೆಲಸ ಮಾಡುವಾಗ ಎಚ್ಚರ ವಹಿಸಬೇಕು.

ನೀರಿನೊಂದಿಗೂ ಇದೇ ನಿಯಮ ಅನ್ವಯ. ಈಜು ಬರದಿದ್ದರೆ ಸಮುದ್ರ, ನದಿ ಇತ್ಯಾದಿ ಕಡೆ ಇಳಿಯಬಾರದು. ಸ್ವಲ್ಪವೇ ಮೈಮರೆತರೂ ಅಪಾಯ ತಪ್ಪಿದ್ದಲ್ಲ.

ಸ್ತ್ರೀಯರ ಸಹವಾಸ ಮಾಡುವಾಗಲೂ ಯೋಚಿಸಿ ಅಡಿಯಿಡಬೇಕು. 'ಸ್ತ್ರೀಣಾಂ ಮನಃಕ್ಷಣಿಕಮ್' ಎಂದು ಚಾಣಕ್ಯ ಹೇಳಿದ್ದಾನೆ. 'ಸ್ತ್ರೀಣಾಂ ಅಪಾಂಗದೃಷ್ಟ್ಯೈವ ಜೀಯತೇ ಜಗತಾಂ ತ್ರಯಮ್' ಎಂಬ ಮಾತಿದೆ. ಸ್ತ್ರೀಯರ ಸಹವಾಸ ಮಾಡಿ ಎಲ್ಲವನ್ನೂ ಕಳೆದುಕೊಂಡವರು ಸಾಕಷ್ಟಿದ್ದಾರೆ. ಆದ್ದರಿಂದ ಸ್ತ್ರೀಯ ಸಹವಾಸ ಮಾಡುವಾಗ ನೂರು ಬಾರಿ ಯೋಚಿಸಬೇಕು.

ಮೂರ್ಖರ ಸಹವಾಸವನ್ನು ಮಾಡಬಾರದು. ಅವರಿಗೆ ಯಾವ ಸಿದ್ಧಾಂತವೂ ಇರುವುದಿಲ್ಲ, ಯಾವ ಬದ್ಧತೆಯೂ ಇರುವುದಿಲ್ಲ. ಇಂಥವರ ಸಹವಾಸ ಮಾಡಿ ಅಪಾಯ ತಂದುಕೊಳ್ಳಬಾರದು. ರಾಜಕುಲ ಸ್ವಾರ್ಥಿಗಳ ಕೂಟ. ಅಲ್ಲಿರುವ ಪ್ರತಿಯೊಬ್ಬರೂ ಸ್ವಾರ್ಥಿಗಳೇ ರಾಜನ ಪ್ರೀತಿ ಗಳಿಸಲು ಯಾರನ್ನೂ ಬೇಕಾದರೂ ಬಲಿ ಕೊಡುತ್ತಾರೆ. ರಾಜಕುಲದ ಸೇವೆಯೆಂಬುದು ಕತ್ತಿಯ ಅಲಗಿನ ಮೇಲೆ ನಡೆದಂತೆ.

ಆದ್ದರಿಂದ ಉತ್ತಮ ಬದುಕನ್ನು ಬಯಸುವವರು ಈ ಆರು ವಿಷಯದ ಕುರಿತು ಎಚ್ಚರದಿಂದ ವ್ಯವಹರಿಸಬೇಕು. ಎಚ್ಚರ ತಪ್ಪಿದರೆ ಅಪಾಯ ತಪ್ಪದು.

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

ಪುಟ ೧➡ ಪರಿಣಾಮ, ಪ್ರಸ್ತುತ ನಿಯಮಾವಳಿಯ ಆಶಯಗಳು ಇದುವರೆಗೂ ಈಡೇರಿಲ್ಲ ಎಂದು ನ್ಯಾಯಾಲಯ ಕಲಾಪ ಸಂದರ್ಭ ಛೀಮಾರಿ ಹಾಕಿತು. ರಾಜ್ಯಗಳು ಅಗತ್ಯ ದೂರದೃಷ್ಟಿಯಿಂದ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಪ್ರಸ್ತುತ ಸನ್ನಿವೇಶ ಆತಂಕಕಾರಿ ಮಟ್ಟಕ್ಕೆ ತಲುಪುತ್ತಿರಲಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನಾಲ್ಕು ತಿಂಗಳಲ್ಲಿ 2 ಲಕ್ಷ ನಾಯಿ ಕಡಿತ: ಬೀದಿ ನಾಯಿ ಕಡಿತ ಪ್ರಕರಣಗಳು ನಿರಂತರಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ನ್ಯಾಯಾಲಯ, ರಾಜಸ್ಥಾನದ ಶ್ರೀಗಂಗಾನಗರ ನಗರದಲ್ಲಿ ಒಂದು ತಿಂಗಳಲ್ಲಿ 1084 ನಾಯಿ ಕಡಿತ ಪ್ರಕರಣಗಳಾಗಿವೆ. ತಮಿಳ್ನಾಡಲ್ಲಿ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಇಂತಹ 2ಲಕ್ಷ ಘಟನೆಗಳಾಗಿವೆ. ಬೀದಿನಾಯಿಗಳು ಎಳೆ ಮಕ್ಕಳನ್ನು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿಸಿರುವುದು ವರದಿಗಳಿಂದ ದೃಢಪಟ್ಟಿದೆ. ಇಂತಹ ದುರ್ಘಟನೆಗಳಿಗೆ ರಾಜ್ಯಗಳು ಅಥವಾ ಸರಕಾರಗಳು ಮೂಕಪ್ರೇಕ್ಷಕರಾಗಕೂಡದು. ಬೀದಿ ನಾಯಿಗಳು ವಿದೇಶಿ ಪ್ರವಾಸಿಗರನ್ನೂ ಬಿಡದೆ ದಾಳಿ ನಡೆಸಿವೆ. ನಾಯಿ ಕಡಿತದಿಂದ ಗಾಯಗೊಳ್ಳುವ ಭೀತಿ ಮುಕ್ತರಾಗಿ ಜೀವಿಸುವ ಹಕ್ಕು ಜನರಿಗಿದೆ. ಇದು ಘನತೆಯಿಂದ ಬದುಕುವ ಹಕ್ಕಿನ ವ್ಯಾಪ್ತಿಯಲ್ಲಿದೆ. ಮಕ್ಕಳು, ವೃದ್ಧರು, ವಿದೇಶಿ ಪ್ರವಾಸಿಗರನ್ನೂ ಬೀದಿ ನಾಯಿಗಳು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿ ಸುವ ದುರ್ಘಟನೆಗಳಿಗೆ ನ್ಯಾಯಾಲಯ ಕೂಡ ಮೂಕ ಪ್ರೇಕ್ಷಕನಾಗಿರಲು ಸಾಧ್ಯವಿಲ್ಲ ಎಂದು ಸರಕಾರಗಳನ್ನು ಕಟುವಾಗಿ ತರಾಟೆಗೆತ್ತಿಕೊಂಡಿತು.

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ

ಪುಟ ೧➡ ಜನಸಂದಣಿ ಹೆಚ್ಚಿರುವ ಸಾರ್ವಜನಿಕ ಸಂಸ್ಥೆಗಳ ವ್ಯಾಪ್ತಿಯಿಂದ ಬೀದಿ ನಾಯಿಗಳನ್ನು ತೆರವುಗೊಳಿಸಬೇಕೆಂಬ ತನ್ನ 2025ರ ನವೆಂಬರ್ 7ರ ಆದೇಶ ಹಿಂಪಡೆಯಲು ನಿರಾಕರಿಸಿದೆ. ಬೀದಿ ನಾಯಿಗಳನ್ನು ಲಸಿಕೆ ಹಾಗೂ ಸಂತಾನಹರಣ ಮಾಡಿದ ಬಳಿಕ ಮತ್ತೆ ಅದೇ ಸಾರ್ವಜನಿಕ ಸಂಸ್ಥೆಗಳ ಆವರಣಕ್ಕೆ ಬಿಡಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿತು. ಆದೇಶ ಪಾಲಿಸದಿದ್ದರೆ ನ್ಯಾಯಾಂಗ ನಿಂದನೆ ಕ್ರಮಕ್ಕೂ ಒಳಗಾಗಬೇಕಾಗುತ್ತದೆ ಎಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಚ್ಚರಿಕೆ ನೀಡಿತು.

ಮಕ್ಕಳು, ವೃದ್ಧರು ದೈಹಿಕ ಶಕ್ತಿಯ ಬಲವಿದ್ದರೆ ಮಾತ್ರ ಬದುಕಬಹುದೆಂಬ ಸಮಾಜ ವ್ಯವಸ್ಥೆಯನ್ನು ಸಂವಿಧಾನ ಕಲ್ಪಿಸಿಕೊಳ್ಳುವುದೂ ಇಲ್ಲ. ಹಾಗಾಗಿ ಈ ವಿಚಾರದಲ್ಲಿ ನ್ಯಾಯಾಲಯದ ನಿರ್ದೇಶಗಳ ಪಾಲನೆಯಲ್ಲಿ ಯಾವುದೇ ರೀತಿ ವೈಫಲ್ಯವಾದರೂ ಗಂಭೀರ ಪರಿಗಣಿಸಲಾಗುವುದು. ಆದೇಶಗಳನ್ನು ಜಾರಿ ಮಾಡದಿರುವುದನ್ನು ನ್ಯಾಯಾಂಗ ನಿಂದನೆಯಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಮತ್ತು ರಾಜ್ಯಗಳ ವಿರುದ್ಧ ಅಪರಾಧಗಳ ಹೊಣೆಗಾರಿಕೆ ಆಪಾದನೆ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಸುಪ್ರೀಂಕೋರ್ಟ್ ಎಚ್ಚರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

ಪುಟ ೧➡ ದೋಣಿಗಳು, ಯುದ್ಧನೌಕೆಗಳು ಎಲ್ಲವೂ ತಯಾರಿದ್ದವು. ಎಲ್ಲವೂ ಬಾಂಬ್‌ಗಳಿಂದ ತುಂಬಿದ್ದವು. ನಾವು ಹೊಸ ದಾಳಿ ನಡೆಸಲು ಸಂಪೂರ್ಣ ಸಿದ್ಧರಾಗಿದ್ದೆವು. ನಾನು ದಾಳಿಗೆ ಸಿದ್ಧತೆ ನಡೆಸಿದ್ದೇನೆಂದು ಇರಾನ್‌ನವರಿಗೆ ತಿಳಿದಿದ್ದು, ಇನ್ನೂ ಎರಡರಿಂದ ಮೂರು ದಿನಗಳ ಅವಕಾಶ ನೀಡುವಂತೆ ದೂರವಾಣಿ ಕರೆಮಾಡಿದ್ದರು. ಹಾಗಾಗಿ ದಾಳಿಗೂ ಒಂದು ಗಂಟೆ ಉಳಿದಿದ್ದಾಗ ದಾಳಿ ರದ್ದುಗೊಳಿಸಿದ್ದೇನೆ. ಆದರೆ ಯಾವುದೇ ಕಾರಣಕ್ಕೂ ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸಲು ಸಮಯಾವಕಾಶ ನೀಡಲ್ಲ. ಇರಾನ್ ಪರಮಾಣು ಬಾಂಬ್ ಹೊಂದಿದರೆ, ಮೊದಲು ಇಸ್ರೇಲ್ ಮೇಲೆ ಪ್ರಯೋಗ ಮಾಡಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಇದಕ್ಕೂ ಮುನ್ನ ಗಲ್ಫ್ ರಾಷ್ಟ್ರಗಳ ನಾಯಕರ ಕೋರಿಕೆಯ ಮೇರೆಗೆ ಮಂಗಳವಾರದಂದು ಇರಾನ್ ವಿರುದ್ಧ ನಡೆಸಲು ಯೋಜಿಸಲಾಗಿದ್ದ ಸೇನಾ ದಾಳಿಯನ್ನು ತಡೆಹಿಡಿಯಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟ್ರುಥ್ ಸೋಷಿಯಲ್‌ನಲ್ಲಿ ಪ್ರಕಟಿಸಿದ್ದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗ್ಯಾರೆಂಟಿಗಾಗಿ ವಿದ್ಯುತ್, ಬಸ್, ಮದ್ಯದ ದರವನ್ನು ಎಷ್ಟು ಬಾರಿ ಹೆಚ್ಚಿಸಲಾಗಿದೆ ಎಂಬುದರ ಪಟ್ಟಿ ನೀಡಲಿ – **ಕುಮಾರಸ್ವಾಮಿ**

– ಅದನ್ನು ಅಡಗಿಸಲೆಂದೇ ಅವರು ಬೊಬ್ಬೆ ಹಾಕುತ್ತಿರೋದು.ತಮ್ಮ ನೂರು ತಪ್ಪುಗಳನ್ನು ಅಡಗಿಸಲು ಎದುರಾಳಿಯ ಬಗ್ಗೆ ಅಲ್ಲದ ಸಲ್ಲದ ಆರೋಪಗಳನ್ನು ಜೋರಾದ ಸ್ವರದಲ್ಲಿ ಹೇಳುವುದು ರಾಜಕೀಯ ಬುದ್ಧಿವಂತಿಕೆ!

ದಿನ ಭವಿಷ್ಯ

ಮೇಷ ತಿನ್ನುವುದರ ಮೇಲೆ ಎಚ್ಚರವಿರಲಿ. ಹೊಟ್ಟೆ ಕೆಡಬಹುದು. ಹೊಸ ಬಗೆಯ ವ್ಯವಹಾರಕ್ಕೆ ಕೈಹಚ್ಚಲು ಕಾಲ ಸೂಕ್ತ. ಯಶಸ್ಸು ಸಿಗಲಿದೆ.

ವೃಷಭ ವೃತ್ತಿಯಲ್ಲಿ ಕಠಿಣ ಪರಿಸ್ಥಿತಿ ಎದುರಿಸುವಿರಿ. ಆದರೆ ಕೆಲವರ ಸಹಕಾರ ಲಭ್ಯ. ಸಂಬಂಧ ವೃದ್ಧಿ. ಹಣ ಗಳಿಕೆಯ ಪ್ರಯತ್ನ ಹೆಚ್ಚು ಫಲ ನೀಡದು.

ಮಿಥುನ ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹೆಣಗುವಿರಿ. ಕಾರ್ಯ ವಿಳಂಬ. ಆಪ್ತರ ಹಿತರಕ್ಷಣೆ ನಿಮ್ಮ ಆದ್ಯತೆಯಾಗಲಿದೆ. ಧನ ಗಳಿಕೆಗೆ ತೊಡಕು.

ಕಟಕ ಹಲವಾರು ಕಾರ್ಯಗಳಲ್ಲಿ ವ್ಯಸ್ತ. ಹಾಗಾಗಿ ಖಾಸಗಿ ವ್ಯವಹಾರಕ್ಕೆ ಸಮಯ ಸಿಗದು. ಸಂಗಾತಿ ಜತೆ ಪ್ರಾಮಾಣಿಕ ನಡೆ ನುಡಿ ಪ್ರದರ್ಶಿಸಿ.

ಸಿಂಹ ಕ್ಲಿಷ್ಟಕರವಾಗಿ ದಿನ ಆರಂಭ. ಬಿಡುವಿಲ್ಲದ ಕಾರ್ಯ. ಸಂಜೆ ವೇಳೆ ನಿರಾಳತೆ ತರುವ ಬೆಳವಣಿಗೆ. ಆರೋಗ್ಯ ಚಿಂತೆ ಪರಿಹಾರ.

ಕನ್ಯಾ ಕಷ್ಟದ ಪರಿಸ್ಥಿತಿಯನ್ನು ನಿರ್ಮಲ ಚಿತ್ತದಿಂದ ನಿಭಾಯಿಸಿ. ಗೊಂದಲ ಮಾಡಿಕೊಳ್ಳದಿರಿ. ಆಪ್ತರ ಕರೆ ಮುದ ತರಲಿದೆ.

ತುಲಾ ಏಕಕಾಲದಲ್ಲಿ ಹಲವಾರು ಕಾಯ ಮಾಡುವ ಉಮೇದು. ಆದರೆ ಧಾವಂತ ಬೇಡ. ನಿಧಾನವಾಗಿ ಕಾರ್ಯ ಪೂರೈಸಿದರೆ ಒಳಿತು.

ವೃಶ್ಚಿಕ ಸವಾಲಿನ ದಿನ. ದಿನವಿಡೀ ವಿವಾದದಲ್ಲಿ ಸಿಲುಕುವಿರಿ. ಹದತಪ್ಪಿ ಮಾತು ಆಡಬೇಡಿ. ತಾಳ್ಮೆಯಿಂದ ವರ್ತಿಸಿ. ಕೌಟುಂಬಿಕ ಒತ್ತಡ.

ಧನು ಒಂದೇಬಾರಿ ಹಲವು ಹೊಣೆ ಹೆಗಲೇರುವುದು. ಕಂಗೆಡಬೇಡಿ. ಸೂಕ್ತ ನೆರವು ಒದಗಲಿದೆ. ಬಂಧುಗಳ ಜತೆ ಮನಸ್ತಾಪ ಉಂಟಾದೀತು.

ಮಕರ ಆತ್ಮವಿಶ್ವಾಸ ಕುಂದಿಸುವ ಬೆಳವಣಿಗೆ. ಟೀಕೆ ಎದುರಿಸುವಿರಿ. ಪಾಲುದಾರರ ವಿರೋಧ ಕಟ್ಟಿಕೊಳ್ಳುವಿರಿ. ತಾಳ್ಮೆಯಿಂದ ನಿಭಾಯಿಸಿ.

ಕುಂಭ ಹಣದ ವ್ಯವಹಾರ ಸುಗಮ. ಗಳಿಕೆಯ ಹೊಸ ದಾರಿ ತೋರಬಹುದು. ಆಹಾರ ಹಿತಮಿತ ಆಗಿರಲಿ. ಉದರ ಸಂಬಂಧಿ ಸಮಸ್ಯೆ.

ಮೀನ ಪ್ರೀತಿ, ದ್ವೇಷ ಎರಡನ್ನೂ ತೀವ್ರವಾಗಿ ಅನುಭವಿಸುವಿರಿ. ಹೊಸ ಯೋಜನೆ ಈಗ ಬೇಡ. ತಂಪು ಆಹಾರ ಸೇವನೆ ಆರೋಗ್ಯ ಕೆಡಿಸೀತು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,0,2,7

ರಾಜ್ಯ ಪೊಲೀಸ್ ಇಲಾಖೆಯ ವಿವಿಧ ದತ್ತಾಂಶಗಳ ಸಂಗ್ರಹ

ಡೇಟಾ ಸೆಂಟರ್‌ಗೆ ಐಎಸ್‌ಒ ಪ್ರಶಸ್ತಿ



ಪ್ರಮುಖ ಪ್ರಯೋಜನ

- **ಮಾಹಿತಿ ಭದ್ರತೆ:** ಸೈಬರ್ ದಾಳಿಗಳು ಹಾಗೂ ಅನಧಿಕೃತ ಪ್ರವೇಶದ ವಿರುದ್ಧ ಇಲಾಖೆಗೆ ಹೆಚ್ಚಿನ ರಕ್ಷಣೆ ಸಿಗಲಿದೆ.
- **ಪಾರದರ್ಶಕತೆ:** ದತ್ತಾಂಶ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಜವಾಬ್ದಾರಿತನ ಮೂಡಲಿದೆ.
- **ನಾಗರಿಕರ ಗೌಪ್ಯತೆ:** ಸಾರ್ವಜನಿಕರ ಮಾಹಿತಿಯ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಯ್ದುಕೊಳ್ಳಬಹುದು.
- **ವಿಶ್ವಾಸ ವೃದ್ಧಿ:** ಡಿಜಿಟಲ್ ಪೊಲೀಸ್ ಸೇವೆಗಳಲ್ಲಿ ಸಾರ್ವಜನಿಕರಿಗೆ ಇಲಾಖೆಯ ಮೇಲಿರುವ ನಂಬಿಕೆ ಮತ್ತು ವಿಶ್ವಾಸ ಮತ್ತಷ್ಟು ವೃದ್ಧಿ.

• **ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯ ವಿವಿಧ ತಂತ್ರಾಂಶಗಳ ಅನುಷ್ಠಾನ ಹಾಗೂ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ, ನಿರ್ವಹಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ರಾಜ್ಯ ಪೊಲೀಸ್ ಡೇಟಾ ಸೆಂಟರ್‌ಗೆ ಅಂತರರಾಷ್ಟ್ರೀಯ ಮಟ್ಟದ ಐಎಸ್‌ಒ/ಐಇಸಿ 27001 (ಮಾಹಿತಿ ಭದ್ರತಾ ನಿರ್ವಹಣಾ ವ್ಯವಸ್ಥೆ) ಪ್ರಮಾಣಪತ್ರ ಲಭಿಸಿದೆ.

ವಿವಿಧ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳು ಹಾಗೂ ಇಲಾಖೆಯ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು, ಸಂಸ್ಕರಿಸಲು ಮತ್ತು ನಿರ್ವಹಿಸಲು ವಿಶೇಷ ದತ್ತಾಂಶ ಕೇಂದ್ರವನ್ನು (ಡೇಟಾ ಸೆಂಟರ್) ಸ್ಥಾಪಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ದೇಶದ ಮೊದಲ ರಾಜ್ಯ ಪೊಲೀಸ್ ಪಡೆಗಳಲ್ಲಿ ಕರ್ನಾಟಕ ಪೊಲೀಸ್ ಕೂಡ ಒಂದಾಗಿದೆ.

ಸುರಕ್ಷಿತ ದತ್ತಾಂಶ ನಿರ್ವಹಣೆ: ಪ್ರಸ್ತುತ ಈ ಡೇಟಾ ಸೆಂಟರ್‌ನಲ್ಲಿ ಅಪರಾಧ ದಾಖಲೆಗಳು, ಪೊಲೀಸ್ ಐಟಿ ವ್ಯವಸ್ಥೆಗಳು, ಸಿಸಿಟಿಎನ್‌ಎಸ್, ಐಸಿಜೆಎಸ್, ಎಎಫ್‌ಐಎಸ್, ಸೈಬರ್ ಅಪರಾಧ ಮಾಹಿತಿ ವ್ಯವಸ್ಥೆಗಳು, ಕೆಎಸ್‌ಪಿ ಮೊಬೈಲ್ ಆಪ್, ಎಂ-ಸಿಸಿಟಿಎನ್‌ಎಸ್ ಮೊಬೈಲ್ ಆಪ್ ಹಾಗೂ ಸ್ಮಾರ್ಟ್ ಇ-ಬೀಟ್ ನಂತಹ ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳನ್ನು ಸುರಕ್ಷಿತವಾಗಿ ಹೋಸ್ಟ್ ಮಾಡಿ ನಿರ್ವಹಿಸಲಾಗುತ್ತಿದೆ.

ಅಧಿಕಾರಿಗಳ ಪರಿಶ್ರಮಕ್ಕೆ ಸಂದ ಗೌರವ: ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ, ಅವರ ಸಮರ್ಥ ಮಾರ್ಗದರ್ಶನದಲ್ಲಿ, ಪೊಲೀಸ್ ಗಣಕ ವಿಭಾಗದ ತಾಂತ್ರಿಕ ತಂಡ, ಡೇಟಾ ಸೆಂಟರ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಮನ್ವಯಿತ ನಿರಂತರ ಪರಿಶ್ರಮದಿಂದಾಗಿ ಇಲಾಖೆಗೆ ಈ ಜಾಗತಿಕ ಮಟ್ಟದ ಗೌರವ ಲಭಿಸಿದೆ.


ಸೌಹಾರ್ದಯುತ ಸಂಬಂಧ ಇರಲಿ: ಸಲೀಂ

• **ಬೆಂಗಳೂರು:** ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸೌಹಾರ್ದಯುತ ನಿಯಮಿತ ಸಂಪರ್ಕ ಇಟ್ಟುಕೊಳ್ಳುವ ಮೂಲಕ ಅಪರಾಧ ನಿಯಂತ್ರಣ, ರೌಡಿಗಳ ಮಟ್ಟ ಹಾಕುವುದು, ಕಳ್ಳತನ ಪ್ರಕರಣಗಳ ಪತ್ತೆ ಸೇರಿದಂತೆ ಕಠಿಣ ಪ್ರಕರಣಗಳನ್ನು ಸಲೀಸಾಗಿ ಬಗೆಹರಿಸಬಹುದಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ತಿಳಿಸಿದರು. ಎಲ್ಲಾ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯ ನಿವೃತ್ತ ಪೊಲೀಸ್ ಅಧಿಕಾರಿಗಳೊಂದಿಗೆ ಸೌಹಾರ್ದ ಹಾಗೂ ಬಾಂಧವ್ಯದ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರ ಸುದೀರ್ಘ ಅನುಭವದ ಪ್ರಯೋಜನ ಪಡೆದು ಸಮಾಜದ ಶಾಂತಿ, ಸುವ್ಯವಸ್ಥೆಯನ್ನು ಜಾಗೃತಗೊಳಿಸಬೇಕಾಗಿದೆ ಎಂದಿದ್ದಾರೆ.

ಅನುಭವದ ಸದ್ಬಳಕೆ: ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಅನುಭವ, ಕೌಶಲ್ಯ ಹಾಗೂ ಸೇವೆಯನ್ನು ಉತ್ತಮ ಪದ್ಧತಿಯನ್ನಾಗಿ ಪೊಲೀಸ್ ಇಲಾಖೆಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬೇಕು. ಪೊಲೀಸ್ ವ್ಯವಸ್ಥೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸುವ ಸದುದ್ದೇಶದಿಂದ ಈ ಹೊಸ ಕ್ರಮಕ್ಕೆ ಮುಂದಾಗಿದ್ದೇವೆ. ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕೇವಲ ನಿವೃತ್ತಿ ಹೊಂದಿದವರೆಂದು ದೂರ ಇಡಬಾರದು, ಅವರ ದಕ್ಷ ಮತ್ತು ಸಮರ್ಥ ಕಾರ್ಯಚರಣೆಯ ಅನುಭವವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಅವರ ವಿಶ್ವಾಸವನ್ನು ಗಳಿಸಿಕೊಳ್ಳಬೇಕಾಗಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

ಪುಟ ೧➡ ನಾವು ಮುಷ್ಕರ ಸಂಬಂಧ ಸರ್ಕಾರಕ್ಕೆ ಮೊದಲೇ ಮಾಹಿತಿ ನೀಡಿದ್ದೆವು. ಹೈಕೋರ್ಟ್ ಮುಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ಬಂದಿತ್ತು. ವಾದ -ಪ್ರತಿವಾದ ಆಲಿಸಿದ ನಂತರ ಮುಷ್ಕರ



ಬಿಟ್ಟು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಹೇಳಿರುವ ಹೈಕೋರ್ಟ್ ಮುಷ್ಕರ ಹಿಂದಕ್ಕೆ ಪಡೆಯುವಂತೆ ನಿರ್ದೇಶನ ನೀಡಿದೆ. ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶೀಘ್ರವೇ ಸಮಯ ನಿಗದಿಗೊಳಿಸಿ, ಸಂಘಟನೆಯೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವಂತೆ ರಾಜ್ಯ ಸರ್ಕಾರಕ್ಕೂ ತಿಳಿಹೇಳಿದೆ. ಆದ್ದರಿಂದ ಹೈಕೋರ್ಟ್ ಆದೇಶವನ್ನು ಗೌರವಿಸಿ, ಪ್ರತಿಭಟನೆ ಹಿಂಪಡೆದಿದ್ದೇವೆ ಎಂದರು. ವಿವಿಧ ರಸ್ತೆ ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆ ಹಾಗೂ ಹಿಂಬಾಕಿ ಮೊತ್ತ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆನೀಡಿದ್ದರು.

ಜಂಟಿ ಕ್ರಿಯಾಸಮಿತಿಯಿಂದ ಹೊರಬಂದ ಸಾರಿಗೆ ಸಂಸ್ಥೆ ನೌಕರರ ಸಂಘ: ಸರ್ಕಾರದ ಕಾರ್ಯಕ್ರಮ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಮನವೊಲಿಸಿ ಆದಷ್ಟು ಬೇಗ ಬೇಡಿಕೆಗಳ ಬಗ್ಗೆ ಮಾತುಕಡೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಭರವಸೆ ನೀಡಿದ್ದರು. ಆದರಿಂದ ವ್ಯವಸ್ಥಾಪಕ ನಿರ್ದೇಶಕರ ಮಾತಿಗೆ ಗೌರವ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘದ ಪದಾಧಿಕಾರಿಗಳು ಜಂಟಿ ಕ್ರಿಯಾಸಮಿತಿ ಮುಷ್ಕರಕ್ಕೆ ನೀಡಿದ್ದ ಬೆಂಬಲ ಹಿಂಪಡೆದಿರುವುದಲ್ಲದೆ ಜಂಟಿ ಕ್ರಿಯಾ ಸಮಿತಿಯಿಂದ ಹೊರಬರಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಜಗದೀಶ್ ಎಚ್.ಆರ್. ತಿಳಿಸಿದ್ದಾರೆ.

ಸಿಲಿಗುರಿ ಕಾರಿಡಾರ್‌ಗೆ 120 ಎಕರೆ ಜಾಗ

ಪುಟ ೧➡ **ಕಿರಿದಾದ ಲ್ಯಾಂಡ್ ಲಿಂಕ್ :** ಈಶಾನ್ಯ ವಲಯದ ರಾಜ್ಯಗಳನ್ನು ದೇಶದ ಇತರ ಪ್ರದೇಶಗಳ ಜತೆ ಜೋಡಿಸುವ ಏಕೈಕ ಕಿರಿದಾದ ಭೂ ಸಂಪರ್ಕವಾಗಿದೆ ಚಿಕನ್ ನೆಕ್. ಹಾಗಾಗಿ ಈ ವಲಯದ ಭೂಮಿಗೆ ಸಂಬಂಧಪಟ್ಟಂತೆ ಯಾವುದೇ ನಿರ್ಧಾರ ಕೂಡ ಬಲು ಮಹತ್ವ ಪಡೆಯುತ್ತದೆ. ಎಂಟು ಈಶಾನ್ಯ ರಾಜ್ಯಗಳಿಗೆ ಪೂರೈಕೆ ಕೊಂಡಿ, ಮಿಲಿಟರಿ ಚಲನ ವಲನ-ಚಟುವಟಿಕೆಗಳು, ವ್ಯಾಪಾರ, ಸಾರಿಗೆ ಇತ್ಯಾದಿ ಎಲ್ಲಕ್ಕೂ ಈ ಹಾದಿ ಜೀವ ನಾಡಿ ಎನಿಸಿದೆ. ಅಗಾಧ ವ್ಯೂಹಾತ್ಮಕ ಮೌಲ್ಯದಿಂದಾಗಿ, ಸುದೀರ್ಘ ಕಾಲದಿಂದ ಈ ಕಾರಿಡಾರ್ ಭಾರತದ ರಕ್ಷಣಾ ಪ್ಲ್ಯಾನಿಂಗ್ ಮತ್ತು ಗಡಿ ಭದ್ರತಾ ಉಪಕ್ರಮಗಳಿಗೆ ಪ್ರಧಾನವಾಗಿ ಪರಿಗಣಿತವಾಗಿದೆ.

ಚಿಕನ್‌ನೆಕ್ ಭೂ ವರ್ಗಾವಣೆ ಹಿಂದಿನ ಆಶಯವನ್ನು ಕೇಂದ್ರ ಸರಕಾರ ಅಧಿಕೃತವಾಗಿ ವಿಷದೀಕರಿಸಿಲ್ಲ. ಆದರೂ, ವಲಯದಲ್ಲಿ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿ, ಲಾಜಿಸ್ಟಿಕ್ಸ್ ಕೇಂದ್ರಗಳು, ಸಂಪರ್ಕ ವ್ಯವಸ್ಥೆ ವಿಸ್ತರಣೆ ಅಥವಾ ಭದ್ರತೆಗೆ ಸಂಬಂಧಿತ ಯೋಜನೆಗಳ ಸಾಕಾರಕ್ಕೆ ಪ್ರಸ್ತುತ ಭೂಮಿಯು ಹಾದಿ ಸುಗಮಗೊಳಿಸುವ ಸಾಧ್ಯತೆಗಳಿವೆ.

ಬಾಂಗ್ಲಾದಿಂದ ಭಾರತಕ್ಕೆ ಅಕ್ರಮ ನುಸುಳುವಿಕೆ ಅಥವಾ ಅಕ್ರಮ ನುಸುಳುಕೋರರ ಹಾವಳಿಯನ್ನು ಶಾಶ್ವತವಾಗಿ ತಡೆಯುವ ಯತ್ನವಾಗಿ ಗಡಿಬೇಲಿ ನಿರ್ಮಿಸಲು ನಿಕಟಪೂರ್ವ ಟಿಎಂಸಿ ಸರಕಾರದ ಆಡಳಿತದಲ್ಲಿ ಸಾಧ್ಯವಾಗಿಲ್ಲ. ದೀದಿ ಸರಕಾರದ ಉದ್ದೇಶಪೂರ್ವಕ ಅಸಹಕಾರದಿಂದಾಗಿಯೇ ಬೇಲಿ ನಿರ್ಮಾಣವಾಗಿರಲಿಲ್ಲ. ಇದೀಗ ಪ.ಬಂಗಾಳದಲ್ಲಿ ಬಿಜೆಪಿ ಮೈಲಿಗಲ್ಲಿನ ವಿಜಯ ಸಾಧಿಸಿ ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ, ವ್ಯೂಹಾತ್ಮಕ ಚಿಕನ್‌ನೆಕ್ ಭೂಮಿಯನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ವೇಗ ದೊರೆತಿದೆ. ಈ

ಮಾರ್ಗಗಳನ್ನು ಕೇಂದ್ರ ಏಜೆನ್ಸಿಗಳಿಗೆ ಹಸ್ತಾಂತರಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಮಮತಾ ಬ್ಯಾನರ್ಜಿ ಸರ್ಕಾರದ ಮೇಲೆ ಬಿಜೆಪಿ ನಿರಂತರವಾಗಿ ದಾಳಿ ನಡೆಸಿತ್ತು.

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

ಪುಟ ೧➡ ಅಬಕಾರಿ ನೀತಿ ಪ್ರಕರಣದ ವಿಚಾರಣೆಗಳಿಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಯೋಜಿತ ಅಭಿಯಾನ ನಡೆಸಿದ್ದಕ್ಕಾಗಿ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ಆಪ್ ನಾಯಕರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ಆರಂಭಿಸಿದ್ದಾರೆ. ನ್ಯಾಯಮೂರ್ತಿ ನವೀನ್ ಚಾವ್ಲಾ ಮತ್ತು ನ್ಯಾಯಮೂರ್ತಿ ರವೀಂದರ್ ದುಡೇಜಾ ಅವರನ್ನೊಳಗೊಂಡ ವಿಭಾಗೀಯ ಪೀಠವು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನಾಲ್ಕು ವಾರಗಳಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ಸಲ್ಲಿಸಲು ಎಲ್ಲಾ ನಾಯಕರಿಗೆ ಸೂಚಿಸಿದೆ.

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ

ಪುಟ ೧➡ ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಎರಡು ಅವಧಿಗಳಿಗೆ ಸೇವೆ ಸಲ್ಲಿಸಿದ್ದರು. ಮೊದಲ ಬಾರಿಗೆ 2007ರಿಂದ 2009ರವರೆಗೆ ಮತ್ತು ಎರಡನೇ ಬಾರಿಗೆ 2011 ರಿಂದ 2012 ರವರೆಗೆ ರಾಜ್ಯದ ಆಡಳಿತ ಮುನ್ನಡೆಸಿದ್ದರು. ತಮ್ಮ ಆಡಳಿತಾವಧಿಯಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರು. ಪಾರದರ್ಶಕ, ಶಿಸ್ತುಬದ್ಧ ಆಡಳಿತಕ್ಕೆ ಒತ್ತು ನೀಡಿದ್ದರು. ಉತ್ತರಾಖಂಡದ ಪ್ರಸ್ತುತ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಖಂಡೂರಿ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಅವರು ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಸಾರ್ವಜನಿಕ ಸೇವೆಯ ಪರಂಪರೆಯನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದ್ದಾರೆ.

ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

ಪುಟ ೧➡ ಪ್ರಕರಣದಲ್ಲಿ ಈವರೆಗೆ 21 ಆರೋಪಿಗಳ ಬಂಧನವಾಗಿದೆ. ಇವರಲ್ಲಿ ಐವರು ಅಪ್ರಾಪ್ತರಾಗಿದ್ದಾರೆ. ಇವರೆಲ್ಲರೂ ಪಾಕ್ ಭಯೋತ್ಪಾದಕರು ಮತ್ತು ಉಗ್ರ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರೆಂಬ ಆತಂಕ ಕಾರಿ ಮಾಹಿತಿ ಬೆಳಕಿಗೆ ಬಂದಿದೆ. ಎನ್‌ಐಎ ಪ್ರಕಾರ, ಜಿಯೋ-ಟ್ಯಾಗ್‌ನೊಂದಿಗೆ ಸಂವೇದನಾಶೀಲ ಪ್ರದೇಶ ಗಳ ದೃಶ್ಯಗಳನ್ನು ಸೆರೆ ಹಿಡಿದು ಕಳುಹಿಸುವುದು.

ಕೆಲವು ಪ್ರಮುಖ ಸ್ಥಳಗಳು, ಮೂಲಸೌಕರ್ಯಗಳ ಜಿಪಿಎಸ್ ಲೊಕೇಶನ್‌ನೊಂದಿಗೆ ಚಿತ್ರಗಳು ಮತ್ತು ವಿಡಿಯೋಗಳನ್ನು ಕಳುಹಿಸುವುದು. ಈ ರೀತಿ ರಹಸ್ಯ ಮಾಹಿತಿ ಸೋರಿಕೆ ಮಾಡುವುದು ದೇಶದ ಸಾರ್ವಭೌಮತ್ವ, ಒಗ್ಗಟ್ಟು, ಸಮಗ್ರತೆ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ರಾಜಿ ಮಾಡಿಕೊಂಡಂತೆ ಎಂದು ಎನ್‌ಐಎ ನ್ಯಾಯ ಮಂಡಳಿಗೆ ಮನದಟ್ಟು ಮಾಡಿದೆ. ಉಗ್ರರೊಂದಿಗೆ ಸಂವಹನ ನಡೆಸಲು ಬಳಕೆಯಾದ ಭಾರತೀಯ ಸಿಮ್‌ಗಳು, ವಾಟ್ಸ್ಯಾಪ್ ಚಾಟ್ ದಾಖಲೆಗಳನ್ನು ಎನ್‌ಐಎ ಪ್ರಸ್ತುತಪಡಿಸಿದೆ.

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ

ಪುಟ ೧➡ ನೀಲಿ ಆರ್ಥಿಕತೆ ರಂಗದಲ್ಲಿ ಐಲ್ಯಾಂಡ್‌ನ ಸಾಮರ್ಥ್ಯ ಪ್ರಶಂಸಾರ್ಹವೆಂದು ಮೆಚ್ಚುಗೆ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ಚಾರಿತ್ರಿಕವಾದ ಭಾರತ- ಇಎಫ್‌ಟಿಎ ಟಿಇಪಿಎಯು ವ್ಯಾಪಾರ ಮತ್ತು ಹೂಡಿಕೆಗಳಿಗೆ ಮತ್ತಷ್ಟು ಒತ್ತು ನೀಡುವ ಭರವಸೆಯನ್ನು ನಾವು ಹೊಂದಿದ್ದೇವೆ ಎಂದಿದ್ದಾರೆ. ಫಿನ್‌ಲ್ಯಾಂಡ್ ಪ್ರಧಾನಿ ಒರ್ಪೊ ಜತೆ ಮಾತುಕತೆ ನಡೆಸಿದ ಪ್ರಧಾನಿ ಮೋದಿ, ವ್ಯಾಪಾರ ಮತ್ತು ಹೂಡಿಕೆ, ಡಿಜಿಟಲೀಕರಣ, ಕೃತಕ ಬುದ್ಧಿಮತ್ತೆ, 5ಜಿ, 6ಜಿ , ಕ್ವಾಂಟಮ್ ಟೆಕ್ನಾಲಜೀಸ್, ಸುಸ್ಥಿರತೆ, ನವೀಕರಿಸಬಹುದಾದ ಇಂಧನ ಮತ್ತು ಆವರ್ತನ ಆರ್ಥಿಕತೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಚರ್ಚಿಸಿದರು. ಆವಿಷ್ಕಾರ, ಶಿಕ್ಷಣ, ಜನ-ಜನ ಬಾಂಧವ್ಯ ಇತ್ಯಾದಿ ಬಗ್ಗೆಯೂ ಚರ್ಚಿಸಿದರು.

ಎಫ್‌ಟಿಎ ಶೀಘ್ರ ಅನುಷ್ಠಾನ ಬಗ್ಗೆ ಚರ್ಚೆ: ಭಾರತ-ಯುರೋಪ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದದ ಶೀಘ್ರ ಅನುಷ್ಠಾನದ ಅಗತ್ಯವನ್ನು ಉಭಯ ನಾಯಕರು ಪ್ರತಿಪಾದಿಸಿದ್ದಾರೆ.

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಪುಟ ೧➡ ಮುಂಬರುವ ವರ್ಷಗಳಲ್ಲಿ ಫಿನ್‌ಟೆಕ್, ಉದ್ದಿಮೆಗಳು, ರಕ್ಷಣಾ ರಂಗ, ಆವಿಷ್ಕಾರ ಮತ್ತಿತರ ರಂಗಗಳಲ್ಲೂ ಇದೇ ರೀತಿ ಸಹಕಾರ ವರ್ಧನೆಗೆ ಮುಂದಾಗಲಿದ್ದೇವೆ ಎಂದಿರುವ ಪ್ರಧಾನಿ ಮೋದಿ, ಭಾರತದಲ್ಲಿ ಹೂಡಿಕೆ ಹೂಡುವಂತೆ ಡ್ಯಾನಿಶ್ ಪೆನ್ಷನ್ ಫಂಡ್‌ಗಳನ್ನು ಆಮಂತ್ರಿಸಿದರು.

ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಮೋದಿ

ಭಾರತ-ನಾರ್ಡಿಕ್ ಸಂಬಂಧಗಳನ್ನು ಹಸಿರು ತಂತ್ರಜ್ಞಾನ ಮತ್ತು ನಾವೀನ್ಯತೆ ಕಾರ್ಯತಂತ್ರದ ಸಹಭಾಗಿತ್ವಕ್ಕೆ ಏರಿಸಿದ ನಾರ್ವೆ ಭೇಟಿಯನ್ನು ಮುಕ್ತಾಯಗೊಳಿಸಿದ ನಂತರ ಮೋದಿ ಮಂಗಳವಾರ ಇಟಲಿಗೆ ತೆರಳಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಇಟಲಿಗೆ ಭೇಟಿ ನೀಡುತ್ತಿದ್ದಾರೆ.

ನುಡಿದಂತೆ ನಡೆದಿದ್ದೇವೆ

ಪುಟ ೧➡ ನಮ್ಮ ಸರ್ಕಾರ ಯಾವುದೇ ಜಾತಿ, ಧರ್ಮ ಅಥವಾ ಬೇಧ-ಭಾವವಿಲ್ಲದೆ, ಎಲ್ಲಾ ಸಮುದಾಯಗಳ ಬಡ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಕೆಲಸ ಮಾಡಿದೆ ಎಂದು ತಿಳಿಸಿದರು.

ಗ್ಯಾರಂಟಿ ಅಭಿವೃದ್ಧಿ: ನಮ್ಮ ಪಂಚ ಗ್ಯಾರಂಟಿ ಯೋಜನೆಗಳನ್ನು ವಿರೋಧ ಪಕ್ಷದವರು ಹಾಗೂ ಸ್ವತಃ ದೇಶದ ಪ್ರಧಾನಮಂತ್ರಿಯವರೂ ಸೇರಿದಂತೆ ಹಲವರು ಈ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವೇ ಇಲ್ಲ, ಒಂದು ವೇಳೆ ಜಾರಿ ಮಾಡಿದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ಹಣವಿರುವುದಿಲ್ಲ ಎಂದು ಟೀಕಿಸಿದ್ದರು. ಆದರೆ, ನಾವು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಈ ಎಲ್ಲಾ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ. ಇದಕ್ಕಾಗಿ ರಾಜ್ಯ ಸರ್ಕಾರ ಈವರೆಗೆ 1.40ಲಕ್ಷ ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಅಲ್ಲದೆ, ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿಪಥದತ್ತ ಕೊಂಡೊಯ್ದಿದ್ದೇವೆ ಎಂದು ತಿಳಿಸಿದರು.

ವಿಶ್ವಕ್ಕೇ ಗ್ಯಾರಂಟಿಗಳು ಮಾದರಿ: ಡಿಸಿಎಂ ಡಿ.ಕೆ.ಶಿವಕುಮಾರ್

ಪುಟ ೧➡ **ತುಮಕೂರು ಅಭಿವೃದ್ಧಿಗೆ ಬೆಂಬಲ:** ಬೆಂಗಳೂರಿನ ಜನಸಂಖ್ಯೆ ಮತ್ತು ಒತ್ತಡ ನಿಯಂತ್ರಿಸಲು ಬೆಂಗಳೂರಿನ



ಉತ್ತರ ಭಾಗದಲ್ಲಿರುವ ತುಮಕೂರು ನಗರವನ್ನು 'ಎರಡನೇ ಬೆಂಗಳೂರು' ಆಗಿ ಪರಿವರ್ತಿಸಬೇಕು ಎಂಬುದು ಸಚಿವ ಡಾ.ಜಿ. ಪರಮೇಶ್ವರ ಅವರ ದೊಡ್ಡ ಸಂಕಲ್ಪವಾಗಿದೆ. ಈ ಐತಿಹಾಸಿಕ ಕಲ್ಪತರು ನಾಡನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸಲು ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ರಾಜ್ಯದ ಸುಮಾರು 1 ಕೋಟಿ 11 ಲಕ್ಷ ಜನರಿಗೆ ಭೂ ಗ್ಯಾರಂಟಿ ಯೋಜನೆಯ ಸೌಲಭ್ಯ ಸಿಗುತ್ತಿದೆ. ಕೇವಲ ಬೆಂಗಳೂರು ನಗರವೊಂದರಲ್ಲೇ 27 ಲಕ್ಷಕ್ಕೂ ಹೆಚ್ಚು ಜನರಿಗೆ ಖಾತೆ ಬದಲಾವಣೆ, ಆಸ್ತಿ ದಾಖಲೆಗಳು, ಫೋಟೋ ಸೇರಿದಂತೆ ಅಗತ್ಯ ದಾಖಲೆ ಒದಗಿಸುವ ಮೂಲಕ ಅವರ ಮುಂದಿನ ಪೀಳಿಗೆಗೆ ಭದ್ರತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಪುಟ ೧➡ ರಾಜ್ಯದ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಕಟಿಬದ್ಧವಾಗಿದೆ.



ಬಡವರು, ರೈತರು, ಕಾರ್ಮಿಕರು ಮತ್ತು ಶೋಷಿತರ ಸ್ವಾಭಿಮಾನದ ಬದುಕಿಗಾಗಿ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದಕ್ಕಾಗಿ ಈ ನಾಲ್ಕು ವರ್ಷಗಳಲ್ಲಿ ಬರೋಬ್ಬರಿ 2 ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದರು.

ದೇಶದಲ್ಲೇ ಎರಡನೇ ಸ್ಥಾನ: ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು, ವಿದೇಶಿ ನೇರ ಹೂಡಿಕೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನ ಕಾಯ್ದುಕೊಂಡಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ರಾಜ್ಯಕ್ಕೆ 10 ಲಕ್ಷದ 24 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹರಿದುಬಂದಿದೆ ಎಂದು ತಿಳಿಸಿದರು. ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ನೀಡಿದ ಪ್ರತಿ ಮಾತನ್ನು ಉಳಿಸಿಕೊಂಡಿದ್ದಾರೆ ಎಂದು ಹೇಳಿದರು.

ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ

ಪುಟ ೧➡ ಕಂದಾಯ ಇಲಾಖೆಯಲ್ಲಿ ಎಷ್ಟೇ ಕೆಲಸ ಮಾಡಿದರೂ ಮುಗಿಯುವುದಿಲ್ಲ. ಮಾಡಬೇಕಾದದ್ದು ಬಾಕಿ ಇರುತ್ತದೆ. ಸಾರ್ವಜನಿಕರ ಪ್ರೋತ್ಸಾಹ ಮತ್ತು ಶಕ್ತಿಯಿಂದ ಬಾಕಿ ಉಳಿದಿರುವ ಎಲ್ಲಾ ಕಂದಾಯ ಸೇವೆಗಳನ್ನು ಶೀಘ್ರದಲ್ಲೇ ಜನರ ಬಾಗಿಲಿಗೆ ತಲುಪಿಸಲು ನಮ್ಮ ಇಲಾಖೆ ಬದ್ಧವಾಗಿದೆ.



ವಿಧಾನಸೌಧದಲ್ಲಿ ನಮಗೆ ದೊರೆತಿರುವ ಅಧಿಕಾರವು ಕೇವಲ ಆಡಳಿತ ನಡೆಸುವುದಕ್ಕಾಗಿ ಅಲ್ಲ. ಬದಲಿಗೆ ಸಾರ್ವಜನಿಕರ ಸೇವೆಗಾಗಿ ಎಂಬುದನ್ನು ಅರಿತಿದ್ದೇವೆ ಎಂದರು. ರಾಜ್ಯದಲ್ಲಿನ ಲಂಬಾಣಿ ತಾಂಡಾಗಳು, ಗೊಲ್ಲರಹಟ್ಟಿ ಹಾಗೂ ನಾಯಕರ ಹಟ್ಟಿಗಳ ನಿವಾಸಿಗಳಿಗೆ ಶಾಶ್ವತ ನೆಲೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರವು ಆಂದೋಲನದ ರೂಪದಲ್ಲಿ ಅವರ ಮನೆ ಬಾಗಿಲಿಗೆ ಹೋಗಿ ಹಕ್ಕುಪತ್ರ ವಿತರಿಸುವ ಐತಿಹಾಸಿಕ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಹಿಂದೆ ಕೃಷಿ ಹಾಗೂ ಕೂಲಿ ಕಾರ್ಮಿಕರಾಗಿ ಊರಿನ ಹೊರಗಿನ ವಸತಿಪ್ರದೇಶಗಳಲ್ಲಿ ಜನರು ವಾಸಿಸುತ್ತಿದ್ದರು. ಅವರಿಗೆ ಯಾವುದೇ ಹಕ್ಕುಪತ್ರ ಇರಲಿಲ್ಲ. ಇಂದು ಕೃಷಿ ಮತ್ತು ಕೂಲಿ ಕಾರ್ಮಿಕರಿಗೆ ಹಕ್ಕುಪತ್ರವನ್ನು ನಮ್ಮ ಸರ್ಕಾರ ನೀಡುತ್ತಿದೆ ಎಂದು ತಿಳಿಸಿದರು.

ಮೂರು ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ

ಕಂದಾಯ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಾಲನೆ ನೀಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿದ್ದ ಸರ್ಕಾರದ 3 ವರ್ಷಗಳ ಸಾಧನೆಗಳನ್ನು ಬಿಂಬಿಸುವ ಕಿರುಹೊತ್ತಗೆಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ಕಂದಾಯ ಇಲಾಖೆಯ ಜನಪರ ಯೋಜನೆಗಳು ಹಾಗೂ ಸೌಲಭ್ಯಗಳ ವಿತರಣೆಯ ಮಾಹಿತಿ ಒಳಗೊಂಡ ಬೃಹತ್ ವಸ್ತುಪ್ರದರ್ಶನವನ್ನು ಸಾರ್ವಜನಿಕರಿಗಾಗಿ ಆಯೋಜಿಸಲಾಗಿತ್ತು. ಸಚಿವರಾದ ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್, ಎಂ.ಬಿ.ಪಾಟೀಲ್, ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ, ಆರ್.ಬಿ.ತಿಮ್ಮಾಪುರ, ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಸುರೇಶ್ ಬಿ.ಎಸ್., ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ಎಸ್.ವೈದ್ಯ, ಮಧು ಬಂಗಾರಪ್ಪ, ಡಾ.ಎಂ.ಸಿ.ಸುಧಾಕರ್, ಎನ್.ಎಸ್.ಬೋಸರಾಜು, ಸರ್ಕಾರದ ಮುಖ್ಯಸಚೇತಕ ಸಲೀಂ ಅಹಮದ್ ಹಾಗೂ ಶಾಸಕರು, ಸರ್ಕಾರದ ಅಪರ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಸಿಇಒ ಬಿ.ವಿ.ಅಶ್ವಿಜ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರು ಸುದ್ದಿ

ಕಸ ಸುರಿವ ವಿಚಾರ: ಅಧಿಕಾರಿಗೆ ಚಪ್ಪಲಿ ತೋರಿಸಿದ ವ್ಯಕ್ತಿ

ಹಾಸನ: ಜಿಲ್ಲೆಯ ಸಕಲೇಶಪುರ ಪುರಸಭೆಗೆ ವ್ಯಕ್ತಿಯೋರ್ವ ನುಗ್ಗಿ ವಿವಾದಿತ ಜಾಗಕ್ಕೆ ಕಸ ಸುರಿದ ವಿಚಾರಕ್ಕೆ ಅಧಿಕಾರಿಗಳಿಗೆ ಚಪ್ಪಲಿ ತೋರಿಸಿರುವ ಘಟನೆ ನಡೆದಿದೆ.ಪ್ರೀತಂ ಪುರಸಭೆ ಅಧಿಕಾರಿ ನಟರಾಜ್ ಗೆ ಚಪ್ಪಲಿ ತೋರಿಸಿದ ವ್ಯಕ್ತಿ. ಸಕಲೇಶಪುರ ಪಟ್ಟಣದ ಸುಭಾಷ್ ಮೈದಾನದಲ್ಲಿರುವ 29 ಗುಂಟೆ ವಿವಾದಿತ ಜಾಗ ತಮಗೆ ಸೇರಿದೆ ಎಂದು ವಕೀಲ ಅಭಿಜ್ಞಾನ್ ಕೋರ್ಟ್ ಮೆಟ್ಟಿಲೇರಿದ್ದಾರೆ. ಪುರಸಭೆಗೆ ಸೇರಿರುವ ಜಾಗವೆಂದು ಕೋರ್ಟ್‌ನಲ್ಲಿ ವಾದ-ವಿವಾದ ನಡೆಯುತ್ತಿರುವ ವೇಳೆ ವಿವಾದಿತ ಜಾಗಕ್ಕೆ ಪುರಸಭೆ ಪೌರಕಾರ್ಮಿಕರು ಕಸ ಸುರಿದಿದ್ದಾರೆ. ಅಭಿಜ್ಞಾನ್ ಸಕಲೇಶಪುರದಲ್ಲಿ ಇಲ್ಲದ ಕಾರಣ ಅವರ ಪರವಾಗಿ ಪುರಸಭೆಗೆ ತೆರಳಿ ಅಧಿಕಾರಿಗಳನ್ನು ಪ್ರೀತಂ ಪ್ರಶ್ನಿಸಿದ್ದಾರೆ. ಪ್ರೀತಂ ಹಾಗೂ ಪುರಸಭೆ ಅಧಿಕಾರಿ ನಟರಾಜ್ ನಡುವೆ ನಡೆದ ಮಾತಿನ ಚಕಮಕಿಯಿಂದ ಮಾತಿಗೆ ಮಾತು ಬೆಳೆದು ಪುರಸಭೆ ಅಧಿಕಾರಿ ನಟರಾಜ್‌ಗೆ ಪ್ರೀತಂ ಚಪ್ಪಲಿ ತೋರಿಸಿದ್ದಾರೆ. ಚಪ್ಪಲಿ ತೋರಿಸುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಆದರೆ ಇದುವರೆಗೂ ಅಧಿಕಾರಿ ನಟರಾಜ್ ಪೊಲೀಸ್ ಠಾಣೆಗೆ ದೂರು ನೀಡಿಲ್ಲ.

ಡಿಪ್ಲೊಮಾ ಪ್ರವೇಶಕ್ಕೆ ಅವಧಿ ವಿಸ್ತರಣೆ

ದೇವನಹಳ್ಳಿ: ತಾಲೂಕು ಚನ್ನರಾಯಪಟ್ಟಣ ಗ್ರಾಮದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ(ಜಿಟಿಟಿಸಿ) ದಲ್ಲಿ ಅತ್ಯುನ್ನತ ಡಿಪ್ಲೊಮಾ ಕೋರ್ಸ್ ಗಳ ಪ್ರವೇಶಾತಿಗೆ ಮೇ 23ವರೆಗೆ ಅವಧಿ ವಿಸ್ತರಿಸಲಾಗಿದೆ. ಈ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಡೈಮೇಕಿಂಗ್ (DTDM),ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ (DMCH), ಡಿಪ್ರೋಮಾ ಇನ್ ಎಲೆಕ್ಟ್ರಿಕಲ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ (ಈಉಉಉ), ಡಿಪ್ಲೋಮಾ ಇನ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮಷೀನ್ ಲರ್ನಿಂಗ್ ((DAI & ML)ಈ 04 ವಿಭಾಗದ ಡಿಪ್ಲೋಮಾ ಕೋರ್ಸ್‌ಗಳು ಲಭ್ಯವಿದೆ.ಡಿಪ್ಲೊಮಾ ಕೋಸ್ ್ಗಳಿಗೆ ಅರ್ಜಿ ಸಲ್ಲಿಸಲು ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆ ಪಾಸಾಗಿರಬೇಕು. ಪಿಯುಸಿ ಮತ್ತು ಐಟಿಐ ಪಾಸಾದ ವಿದ್ಯಾರ್ಥಿಗಳಿಗೆ ಎರಡನೇ ವರ್ಷಕ್ಕೆ ನೇರ ಪ್ರವೇಶವಿರುತ್ತದೆ. ಈ ಡಿಪ್ಲೋಮಾ ಕೋರ್ಸ್‌ಗಳ ಅವಧಿ 3+1 ವರ್ಷ. ಅರ್ಜಿ ಸಲ್ಲಿಸಲು ಮೇ ಕೊನೆಯ ದಿನವನ್ನು ಮೇ23ವರೆಗೆ ವಿಸ್ತರಣೆ ಮಾಡಲಾಗಿದೆ. ಅರ್ಜಿಯನ್ನು https://gttc.karnataka.gov.in ವೆಬ್ ಸೈಟ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9036144417, 9686268737, 9980956422 ಅಥವಾ ಜಿಟಿಟಿಸಿ, ದೇವನಹಳ್ಳಿ ಕಾಲೇಜಿಗೆ ಖುದ್ದಾಗಿ ಭೇಟಿ ನೀಡಬಹುದು ಎಂದು ಜಿಟಿಟಿಸಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಸಿ ಟಿವಿ ಕ್ಯಾಮೆರಾಗಳ ಬ್ಯಾಟರಿಗೆ ಕನ್ನ

ಬೆಂಗಳೂರು: ಮಹಿಳೆಯರ ಸುರಕ್ಷತೆ ಮತ್ತು ನಗರದಲ್ಲಿ ನಿಗಾವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ನಗರದಾದ್ಯಂತ ಅಳವಡಿಸಲಾಗಿರುವ ಸೇಫ್ ಸಿಟಿ ಯೋಜನೆಯ ಸಿಸಿಟಿವಿ ಕ್ಯಾಮೆರಾಗಳಿಗೆ ಸಂಪರ್ಕಿಸಲಾದ ಬ್ಯಾಟರಿಗಳನ್ನೇ ಕಳ್ಳರು ಕದ್ದೊಯ್ದಿರುವ ಘಟನೆ ಬೆಳಕಿಗೆ ಬಂದಿದೆ. ನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಜಂಕ್ಷನ್ ಬಾಕ್ಸ್‌ಗಳೊಳಗಿನ ಎರಡು ಬ್ಯಾಟರಿಗಳನ್ನು ಮೇ 16ರಂದು ಕಳವು ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಸಿಸಿಟಿವಿ ಕ್ಯಾಮೆರಾಗಳು ವಿದ್ಯುತ್ ಇಲ್ಲದಿದ್ದಾಗಲೂ ನಿರಂತರವಾಗಿ ಕಾರ್ಯನಿರ್ವಹಿಸಲಿ ಎಂಬ ಉದ್ದೇಶದಿಂದ ಈ ಜಂಕ್ಷನ್ ಬಾಕ್ಸ್‌ಗಳಲ್ಲಿ ಬ್ಯಾಟರಿ ಬ್ಯಾಕ್-ಅಪ್ ಇರಿಸಲಾಗಿತ್ತು. ಆದರೆ, ಕಳ್ಳರು ಇದನ್ನೇ ಗುರಿಯಾಗಿಸಿಕೊಂಡು ಜಂಕ್ಷನ್ ಬಾಕ್ಸ್ ಒಡೆದು ಬ್ಯಾಟರಿಗಳನ್ನು ಕಳವು ಮಾಡಲಾಗಿದೆ. ಈ ಕುರಿತು ನಗರದ ಸರ್ವೆಲೆನ್ಸ್ ವ್ಯವಸ್ಥೆಯ ನಿರ್ವಹಣೆಯ ಹೊಣೆ ಹೊತ್ತಿರುವ ಹನಿವೆಲ ಕಂಪನಿಯ ಯೋಜನಾ ನಿರ್ದೇಶಕ ರಾಜೀವ್ ನಾಯ್ಕರ್ ಅವರು ಅಶೋಕ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಸಾರ್ವಜನಿಕ ವಲಯದಲ್ಲಿ ತೀವ್ರ ಆತಂಕ ಮೂಡಿಸಿದ್ದು, ಹೋಟೆಲ್ ಹಾಗೂ ರಸ್ತೆಯ ಸುತ್ತಮುತ್ತಲಿನ ಇತರೆ ಸಿಸಿಟಿವಿ ದೃಶ್ಯಾವಳಿಯನ್ನು ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಲು ಅಶೋಕ್ ನಗರ ಪೊಲೀಸರು ವಿವಿಧ ಆಯಾಮಗಳಲ್ಲಿ ಶೋಧ ಕಾರ್ಯ ಆರಂಭಿಸಿದ್ದಾರೆ.

ಹಾಸ್ಟೆಲ್ ಪ್ರವೇಶ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್.ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ ಸೇರಿದಂತೆ ಇತರ ಸರ್ಕಾರಿ ಹಾಸ್ಟೆಲ್‌ಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಈ ಸೀಟು ಹಂಚಿಕೆಗೆ ಏನಾದರೂ ಆಕ್ಷೇಪಣೆಗಳು ಅಥವಾ ಬದಲಾವಣೆಗಳು ಇದ್ದಲ್ಲಿ ಮೇ 21ರೊಳಗೆ ಆಯಾ ಶಾಲೆಗಳಲ್ಲಿಯೇ ಲಿಖಿತವಾಗಿ ಸಲ್ಲಿಸಲು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸೂಚಿಸಿದ್ದಾರೆ.

ಬೆಲೆ ಕುಸಿತದಿಂದಾಗಿ ಸಂಗ್ರಹ ಮಾಡಲಾಗಿತ್ತು | ಬೆಳೆಗಾರರಿಗೆ ಲಕ್ಷಾಂತರ ನಷ್ಟ | ಪರಿಹಾರಕ್ಕೆ ಸರಕಾರದ ಮೊರೆ

ದಾಸ್ತಾನಿಟ್ಟಲ್ಲೇ ಕೊಳೆತ ತಂಬಾಕು ಬೆಳೆ

▸ ಶಿವಣ್ಣ ಕೆ ಕೆರೆಕೋಡಿ

ದಿಗಂತ ವಿಶೇಷ

ಕೊಣನೂರು: ಸಮೀಪದ ರಾಮನಾಥಪುರ ಸುಬ್ರಹ್ಮಣ್ಯ ನಗರದಲ್ಲಿರುವ ಫ್ಲಾಟ್ಸ್ ಪಾರಂ 7 ಹಾಗೂ 63 ರ ವ್ಯಾಪ್ತಿಯ 2 ಹರಾಜು ತಂಬಾಕು ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಹಿನ್ನೆಲೆಯಲ್ಲಿ ಬೆಳೆಗಾರರು ದಾಸ್ತಾನು ಮಾಡಲಾದ ತಂಬಾಕು ಬೆಳೆ ಕೊಳೆತು ಆರ್ಥಿಕವಾಗಿ ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ.

ಮಾರುಕಟ್ಟೆ ವ್ಯಾಪ್ತಿಯಲ್ಲಿ ಸುಮಾರು 20 ಸಾವಿರ ದಿಂದ 30 ಸಾವಿರ ತಂಬಾಕು ಬೆಳೆಗಾರರಿದ್ದಾರೆ. ಈ ವಾಣಿಜ್ಯ ಬೆಳೆ ತಂಬಾಕು ಬೆಳೆಯುವುದನ್ನೇ ಕಸಬನ್ನಾಗಿಸಿಕೊಂಡಿದ್ದಾರೆ. ಹೊಗೆಸೊಪ್ಪನ್ನು ಮಾರಾಟಕ್ಕಾಗಿ ತಿಂಗಾನುಗಟ್ಟಲೇ ಮನೆಯಲ್ಲಿ ಒಂದೆಡೆ ಕೆಲ ತಿಂಗಳಿನಿಂದ ದಾಸ್ತಾನಿಟ್ಟಿದ್ದರು. ಈ ಬಾರಿ ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಕಂಡಿದ್ದರಿಂದ ಸಕಾಲದಲ್ಲಿ ಮಾರಾಟ ಮಾಡಲಾಗಲಿಲ್ಲ. ತಂಬಾಕು ಕೊಳ್ಳುವ ವರ್ತಕರು ಸಹ ಬೇಲ್ ಖರೀದಿಸಲು ಹಿಂದೇಟು ಹಾಕಿದರು. ಇತ್ತ ಬ್ಯಾರಲ್ ಮನೆಯಲ್ಲಿ ಹದಗೊಳಿಸಿ ಗ್ರೇಡ್ ಕಾರ್ಯ ಮುಗಿಸಿ ಅಪಾರ ದಿನಗಳ ಕಾಲ ಇಟ್ಟಿದ್ದ ಹೊಗೆಸೊಪ್ಪು ಶೀತಗಾಳಿಗೆ ಹುಳು ಹತ್ತಿದೆ. ಕೆಲವೆಡೆ ಸಾಕಷ್ಟು ಪ್ರಮಾಣದಲ್ಲಿ ಕರಗಿ ನಷ್ಟವಾಗಿದೆ.

ಉತ್ತಮ ದರ್ಜೆಯ ಹೊಗೆಸೊಪ್ಪು ಮಾತ್ರ ಖರೀದಿಸುತ್ತಿದ್ದ ವರ್ತಕರು ಆರಂಭದಿಂದಲೂ ಬೇಡಿಕೆ ಇಲ್ಲದ ಎಂಬ ನೆಪವೊಡ್ಡಿ ಕೆಳ ದರ್ಜೆಯ ಹೊಗೆಸೊಪ್ಪು ಕೊಂಡುಕೊಳ್ಳದೆ ತಿರಸ್ಕರಿಸುತ್ತಿದ್ದಾರೆ. ಕೆಳ ದರ್ಜೆಯ ಕೆಲವು ಬೇಲನ್ನು ಕೇವಲ 100 ರೂಪಾಯಿಗೆ ಬೇಕಾಬಿಟ್ಟಿ ದರದಲ್ಲಿ ಖರೀದಿಸುತ್ತಿದ್ದಾರೆ. ಸಾಕಷ್ಟು ಬೇಲ್‌ಗಳು ಬಿಡ್ ಆಗದೆ ಬೆಳೆಗಾರರು ಹೈರಾಣಾಗಿದ್ದಾರೆ.

ಈ ಬಾರಿ ಹರಾಜು ಪ್ರಕ್ರಿಯೆ ಶುರುವಾದ ದಿನದಲ್ಲಿ ಒಂದು ಕೆಜಿ ಗುಣಮಟ್ಟದ ತಂಬಾಕಿಗೆ 320 ರೂಪಾಯಿಂದ ಆರಂಭಿಸಲಾಗಿತ್ತು. ನಂತರದ ದಿನಗಳಲ್ಲಿ 320ರಿಂದ 325 ರೂಪಾಯಿಗೆ ಏರಿಕೆ ಕಂಡಿತ್ತು. ವರ್ತಕರು ಮತ್ತಷ್ಟು ಉತ್ತಮ ದರ ನೀಡುವ ಆಶಾಭಾವನೆ ರೈತರಲ್ಲಿತ್ತು. ಈಗ ಗುಣಮಟ್ಟದ ಒಂದು ಕೆಜಿ ತಂಬಾಕು 320 ರೂಪಾಯಿಗೆ ಮಾರಾಟವಾಗುವ ಬದಲಿಗೆ 150ರಿಂದ 180 ರೂ ಇಳಿಕೆ ದಾಖಲಿಸಿದೆ.



> ತಂಬಾಕು ಉತ್ಪಾದಿಸಿದ ರೈತರ ಸ್ಥಿತಿ ಚಿಂತಾಜಕವಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ಸುಧಾರಣೆ ಕಾಣದೆ 320 ರೂನಿಂದ 100 ರೂಪಾಯಿಗೆ ಬೆಲೆ ಕುಸಿದಿದೆ. ಕೆಳ ದರ್ಜೆಯ ಬೇಲ್‌ಗಳನ್ನು ಖರೀದಿಸುತ್ತಿಲ್ಲ. ವಿದೇಶದಲ್ಲಿ ಇಲ್ಲಿನ ಹೊಗೆಸೊಪ್ಪಿಗೆ ಉತ್ತಮ ಬೆಲೆ ಇದೆ. ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾತ್ರ ಬೇಕಾಬಿಟ್ಟಿ ಬೆಲೆಗೆ ಕೊಳ್ಳಲಾಗುತ್ತಿದೆ. ಬೆಳೆಗಾರರು ಬೆಲೆ ಕುಸಿತದಿಂದ ತತ್ತರಿಸಿದ್ದರೂ ಸರ್ಕಾರ ರೈತರ ಕಣ್ಣೀರು ಒರೆಸುತ್ತಿಲ್ಲ. ದಾಸ್ತಾನಿಟ್ಟಿರುವ ತಂಬಾಕು ಹುಳ್ಳು ಹತ್ತಿ ಕರಗುತ್ತಿದ್ದು ಕಷ್ಟಪಟ್ಟು ಹೊಗೆಸೊಪ್ಪು ಬೆಳೆರೂ ನೆಮ್ಮದಿ ಇಲ್ಲ. ರೈತರ ಸಮಸ್ಯೆಗೆ ಸ್ಪಂದಿಸದ ಶಾಸಕರು ಮತ್ತು ಸಂಸದರು ಏಕಿರಬೇಕು. ಮಾರುಕಟ್ಟೆಯಲ್ಲಿ ನಮ್ಮ ಗೋಳು ಕೇಳುವವರೇ ಇಲ್ಲವಾಗಿದ್ದಾರೆ.
>
> ■ **ರೈತ ಮುಖಂಡ ಕುಮಾರ,** ಕೆ ಎಂ ಕೆರೆಕೋಡಿ

> ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಕೆಳ ದರ್ಜೆಯ ಬೇಲ್‌ಗಳನ್ನು 100 ರೂಪಾಯಿಗೆ ಕೊಳ್ಳಲಾಗುತ್ತಿದ್ದು ಕೆಲವು ಬೇಲ್‌ಗಳು ಬಿಡ್ ಆಗುತ್ತಿಲ್ಲ. ಇನ್ನೊಂದು 10 ಅಥವಾ-12 ದಿವಸಗಳ ಕಾಲ ತಂಬಾಕು ಹರಾಜು ಪ್ರಕ್ರಿಯೆ ಮುಕ್ತಾಯಗೊಳ್ಳುವ ಸಾಧ್ಯತೆ ಇದೆ. ಬೇಡಿಕೆ ಉಂಟಾದರೆ ಮುಂದಿನ ದಿನಗಳಲ್ಲಿ ವರ್ತಕರು ಕೆಳದರ್ಜೆಯ ಬೇಲ್‌ಗಳನ್ನು ಖರೀದಿಸುವರೇ ಎಂಬುದನ್ನು ಕಾದು ನೋಡಬೇಕಿದೆ.
>
> ■ **ಕೋಟೀಶ್ ರಾವ್,** ತಂಬಾಕು ಮಾರುಕಟ್ಟೆ, ಹರಾಜು ಅಧೀಕ್ಷಕ, ರಾಮನಾಥಪುರ.

ಕೇಂದ್ರ ಸರ್ಕಾರದ ಸುಂಕ: ಜನವರಿ ಮೂರನೇ ವಾರದಲ್ಲಿ ಕೇಂದ್ರ ಸರ್ಕಾರ ತಂಬಾಕು ಮೇಲಿನ ಅಬಕಾರಿ ಸುಂಕ ಮತ್ತು ಜಿಎಸ್‌ಟಿದರಏರಿಕೆಮಾಡಲುಮುಂದಾಗಿರುವುದನ್ನು ವಿರೋಧಿಸಿ ಕಂಪನಿಗಳು ಏಕಾಏಕಿ ಹರಾಜು ಪ್ರಕ್ರಿಯೆನ್ನೇ ಸ್ಥಗಿತಗೊಳಿಸಿದ್ದರು,. ಎರಡು ವಾರ ಕಳೆದ ನಂತರ ತಂಬಾಕು ಖರೀದಿಸಲು ವರ್ತಕರು ಮುಂದಾದರೂ ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ನೀಡಿದ ಬೆಲೆಯನ್ನು ಇಲ್ಲಿನಮಾರುಕಟ್ಟೆಯಲ್ಲಿಮುಂದುವರಿಸಬೇಕು. ಬೆಲೆ ತಾರತಮ್ಯ ಹೋಗಲಾಡಿಸಿ ರೈತರ ನೆರವಿಗೆ ಬರಬೇಕು ಎಂದು ಪ್ರತಿಭಟಿಸಿ ವರ್ತಕರನ್ನು ಒತ್ತಾಯಿಸಿದ್ದರೂ ಪ್ರಯೋಜ ಆಗಲಿಲ್ಲ.

ಮಾರುಕಟ್ಟೆಯಲ್ಲಿ ಕಳಪೆ ದರ್ಜೆಯ ಹೊಗೆಸೊಪ್ಪು ಖರೀದಿಸಲು ಒಪ್ಪದ ವರ್ತಕರು ಉತ್ತಮ ದರ್ಜೆ ತಂಬಾಕಿನ ದರ ಕೂಡ ಏರಿಕೆ ಮಾಡಲಿಲ್ಲ. ಆಂಧ್ರಪ್ರದೇಶದಲ್ಲಿ ಕಳೆದ ಸಲ ನಡೆದ ತಂಬಾಕು ಹರಾಜಿನಲ್ಲಿ ಒಂದು ಕೆಜಿ ಹೊಗೆಸೊಪ್ಪಿನ ಗರಿಷ್ಠ ದರ 450 ರೂ. ದಾಟಿತ್ತು.

ಈ ಬಾರಿ ತಂಬಾಕು ಖರೀದಿ ಗುರಿ ನಿಗದಿಪಡಿಸಿದ್ದ 100 ಮಿಲಿಯನ್ ಕೆಜಿ ಬದಲಿಗೆ ಅಂದಾಜು 80 ಮಿಲಿಯನ್ ಕೆಜಿಯಷ್ಟೇ ಉತ್ಪಾದನೆಯಾಗಿದೆ. ಇದರಿಂದಾಗಿ ಉತ್ಪಾದಿತ ತಂಬಾಕಿಗೆ ಗರಿಷ್ಠ ದರ ಅಂದಾಜಿಸಿದ್ದ ನಿರೀಕ್ಷೆ ಕೂಡ ತಲೆಕೆಳಗಾಗಿದೆ.

ಕೇಂದ್ರದ ಜನಪ್ರತಿನಿಧಿಗಳ ಭೇಟಿ

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಶಾಸಕ ಎ. ಮಂಜು ಅವರು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿ ದರ ಏರಿಕೆ ಮಾಡಿ ಕಷ್ಟದಲ್ಲಿರುವ ರೈತರ ಸಮಸ್ಯೆಗೆ ಸ್ಪಂದಿಸುವತೆ ಮಾಡಿದ್ದ ಮನವಿಗೂ ಮಾನ್ಯತೆ ಸಿಕ್ಕಿಲ್ಲ. ರೈತರ ಸಮಸ್ಯೆ ಬಗೆಹರಿಸಲು ಯಾರೂ ಮುಂದಾಗುತ್ತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ತಂಬಾಕು ಬೆಳೆಗಾರರ ಸ್ಥಿತಿ ನರಿ ಕೂಗು ಗಿರಿ ಮುಟ್ಟತ್ತೇ ಎಂಬಂತಾಗಿದ್ದು ಸರ್ಕಾರ ತಳೆದಿರುವ ನಿರ್ಲಕ್ಷ ಧೋರಣೆಯಿಂದಾಗಿ ಬೆಲೆಯಲ್ಲಿ ಅಪಾರ ಅನ್ಯಾಯವಾಗಿದ್ದು ದಿಕ್ಕುತೋಚದ ಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಬೆಳೆಗಾರರು.

ವರ್ತಕರ ಇಬ್ಬಗೆ ನೀತಿ

ಕೇಂದ್ರ ಸರ್ಕಾರ ಅಬಕಾರಿ ಸುಂಕ ಏರಿಸಲಿದೆ ಎಂದು ಆರೋಪಿಸಿ ದಿಢೀರ್ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸುವ ವರ್ತಕರು ಬೆಲೆ ಏರಿಕೆ ಬಗ್ಗೆ ಮಾತ್ರ ತಲೆಕೆಡಿಸಿಕೊಳ್ಳಲಿಲ್ಲ. ಮಂಡಳಿ ಕೂಡ ರೈತರಿಗೆ ಆಗುತ್ತಿರುವ ಬೆಲೆ ನಷ್ಟ ಸರಿಪಡಿಸದೆ ಮೌನವಾಗಿದೆ. ಕೆಲವು ರೈತರು ಇನ್ನೂ ಪೂರ್ಣಪ್ರಮಾಣದಲ್ಲಿ ತಂಬಾಕು ಮಾರಾಟ ಮಾಡಿಲ್ಲ. ದಾಸ್ತಾನಿಟ್ಟಿರುವ ಹೊಗೆಸೊಪ್ಪು ಮನೆಯಲ್ಲೇ ಹುಳು ಹತ್ತಿದ್ದು ಜತೆಗೆ ಬೆಲೆ ಕುಸಿತದಿಂದ ಅನ್ನದಾತರು ಸಾಲದ ಶೂಲದಲ್ಲಿ ನರಳುವಂತಾಗಿದೆ.

2025-26ನೇ ಸಾಲಿಗೆ 1,310 ಕೋಟಿ ರೂ.ಲಾಭ: ರಾಘವೇಂದ್ರ

ಕರ್ನಾಟಕ ಬ್ಯಾಂಕ್ ಸಾರ್ವಕಾಲಿಕ ಸಾಧನೆ

ಮಂಗಳೂರು: ದೇಶದ ಖಾಸಗಿ ರಂಗದ ಪ್ರಮುಖ ಬ್ಯಾಂಕ್‌ಗಳಲ್ಲೊಂದಾದ ಕರ್ನಾಟಕ ಬ್ಯಾಂಕ್ 2025-26 ನೇ ಸಾಲಿಗಾಗಿ ದಾಖಲೆಯ 1,310.50ಕೋ.ರೂ. ಗಳ ನಿವ್ವಳ ಲಾಭಗಳಿಸಿ ಸಾರ್ವಕಾಲಿಕ ಸಾಧನೆಗೈದಿದೆ. ಈ ಅವಧಿಯಲ್ಲಿ 1,92,118.67ಕೋ.ರೂ.ಗಳ ವ್ಯವಹಾರ ನಡೆಸಿ ಹೊಸ ಸಾಧನೆಯ ಹೊಸ ಎತ್ತರವನ್ನು ದಾಖಲಿಸಿದೆ ಎಂದು ಬ್ಯಾಂಕಿನ ಆಡಳಿತ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಎಸ್.ಭಟ್ ಅವರು ಬ್ಯಾಂಕಿನ ಮಂಗಳೂರಿನ ಕೇಂದ್ರ ಕಚೇರಿಯಲ್ಲಿ ಘೋಷಿಸಿದರು.



ಬ್ಯಾಂಕಿನ ಆಡಳಿತ ನಿರ್ದೇಶಕರು ಮಂಗಳವಾರ ಮಂಗಳೂರಿನಲ್ಲಿ ನಡೆದ ಸಭೆಯಲ್ಲಿ 2026ರ ಮಾ.31ಕ್ಕೆ ಅಂತ್ಯಗೊಳ್ಳುವ ಬ್ಯಾಂಕಿನ ತ್ರೈಮಾಸಿಕ ಮತ್ತು ವಾರ್ಷಿಕ ಹಣಕಾಸು ಫಲಿತಾಂಶಗಳ ಪರಿಶೋಧನೆಯನ್ನು ಅಂಗೀಕರಿಸಿದ್ದು, ಶೇರುದಾರರಿಗೆ ಶೇ.50ರ ಲಾಭಾಂಶವನ್ನು ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಅನುಮೋದಿಸುವ ಬಗ್ಗೆ ಪ್ರಸ್ತಾವಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಈಅವಧಿಯಲ್ಲಿಬ್ಯಾಂಕಿನಠೇವಣಿ1,08,778.75ಕೋ. ರೂ.ಗಳಿಗೆ ತಲುಪಿದ್ದು, ತ್ರೈಮಾಸಿಕ ಬೆಳವಣಿಗೆಯನ್ನು ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ(ಕ್ಯೂಒಕ್ಯೂ) ಶೇ.4ರ ಬೆಳವಣಿಗೆಯನ್ನು ದಾಖಲಿಸಿದೆ.2025ರ ಡಿ.31ಕ್ಕೆ ಇದು 1,04,111.52ಕೋ.ರೂ.ಗಳಾಗಿತ್ತು.ಬ್ಯಾಂಕಿನ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ)ಗಳಲ್ಲಿನ ಠೇವಣಿಯು 36,559.66ಕೋ.ರೂ.ಗಳಿಗೆ ತಲುಪಿ ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ (ಕ್ಯೂಒಕ್ಯೂ) ಶೇ.11ರ ಬೆಳವಣಿಗೆಯನ್ನು ದಾಖಲಿಸಿದೆ.ಇದು ಹಿಂದಿನ ಅವಧಿಯಲ್ಲಿ 32,828.70ಕೋ.ರೂ.ಗಳಾಗಿದ್ದುಫ್ರಿ, ಶೇ. 33.61ರ ಕಾಸಾ ಅನುಪಾತ (ಹಿಂದಿನ ಅವಧಿಯಲ್ಲಿದು ಶೇ. 31.53 ಆಗಿತ್ತು)ದಾಖಲಿಸಿದೆ.

ಒಟ್ಟು ಮುಂಗಡ 83,339.92ಕೋ. ರೂ.(ಹಿಂದಿನ ವರ್ಷ 77,282.85 ಕೋ. ರೂ.) ಗಳಾಗಿದ್ದು, ಇದು ತ್ರೈಮಾಸಿಕ ದಿಂದ ತ್ರೈಮಾಸಿಕಕ್ಕೆ ಶೇ.8ರ ಬೆಳವಣಿಗೆ ತೋರಿಸಿದೆ. ಬ್ಯಾಂಕಿನ ನಿವ್ವಳ ಬಡ್ಡಿ ಗಳಿಕೆ ಕೂಡ 2025ರ ಡಿ.31ರಲ್ಲಿದ್ದ ಶೇ.2.92ರಿಂದ 2026ರ ಮಾ.31ಕ್ಕೆ ಶೇ.3.07ಕ್ಕೆ ಏರಿಕೆಯಾಗಿದ್ದು, ಇದರಿಂದಾಗಿ ತ್ರೈಮಾಸಿಕ ದಿಂದ ತ್ರೈಮಾಸಿಕಕ್ಕೆ 15ಬಿಪಿಎಸ್ ಹೆಚ್ಚಳವನ್ನು ದಾಖಲಿಸಿದೆ.

2026ರ ಮಾ.31ಕ್ಕೆ ಅಂತ್ಯಗೊಳ್ಳುವ ತ್ರೈಮಾಸಿಕಕ್ಕೆ ಬ್ಯಾಂಕಿನ ನಿವ್ವಳ ಲಾಭ 408.19ಕೋ.ರೂ.ಗಳಾಗಿದ್ದು, ಇದು 2025ರ ಡಿ.31ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ 290.79ಕೋ.ರೂ.ಗಳಾಗಿದ್ದು, ಇದು ಶೇ.40ರ ಕ್ಯೂಒಕ್ಯೂ ಸುಧಾರಣೆಯನ್ನು ತೋರಿಸಿದೆ.

ವಾರ್ಷಿಕ ನಿವ್ವಳ ಲಾಭ ದಲ್ಲೂ 1,272.37ಕೋ. ರೂ.ಗಳಿದ್ದುದು ಈ ವರ್ಷ 1,310.50 ಕೋ.ರೂ. ಗಳಿಗೆ ಏರಿಕೆಯಾಗುವ ಮೂಲಕ ಶೇ.3ರ ವೈಒವೈ ಸುಧಾರಣೆಯನ್ನು ದಾಖಲಿಸಿದೆ.ಇದರ ಪರಿಣಾಮ ಬ್ಯಾಂಕಿನ ಆರ್‌ಒಎ ಮತ್ತು ಆರ್‌ಒಇಗಳು ಶೇ.0.92 ಮತ್ತು ಶೇ.9.06ರಿಂದ 2026ರ ಮಾ.31ಕ್ಕೆ ಕೊನೆಗೊಂಡ ತ್ರೈಮಾಸಿಕಕ್ಕೆ ಶೇ.1.27 ಮತ್ತು 12.69ಕ್ಕೆ ಸುಧಾರಿಸಿದೆ.

2025ರ ಡಿಸೆಂಬರ್‌ಗೆ ಹೋಲಿಸಿದರೆ 2026ನೇ ವರ್ಷಕ್ಕೆ ಬ್ಯಾಂಕಿನ ಆಸ್ತಿ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ. ಜಿಎನ್‌ಪಿಎ ಪ್ರಮಾಣ ಶೇ.54ಬಿಪಿಎಸ್ ಗಳಷ್ಟು ಕಡಿಮೆಯಾಗಿ ಶೇ.3.32ರಿಂದ ಶೇ.2.78ಕ್ಕೆ ಇಳಿಕೆ ಯಾಗಿದೆ. ಇದೇ ರೀತಿ ಎನ್‌ಎನ್‌ಪಿಎ ಪ್ರಮಾಣ ಕೂಡ 33ಬಿಪಿಎಸ್ ಕಡಿಮೆಯಾಗಿ ಶೇ.1.31ರಿಂದ ಶೇ.0.98ಕ್ಕೆ ಇಳಿಕೆಯಾಗಿದೆ.ಪಿಸಿಆರ್ ಶೇ.61.23ರಿಂದ ಶೇ.65.39ಕ್ಕೆ ಸುಧಾರಿಸಿದೆ.

ಬ್ಯಾಂಕ್ ಸಾರ್ವಕಾಲಿಕ ನಿವ್ವಳ ಲಾಭಗಳಿಸುವ ಮೂಲಕ ತನ್ನ ಸ್ಥಿತಿಸ್ಥಾಪಕ ವ್ಯವಹಾರ ಮಾದರಿಯನ್ನು ಪ್ರತಿಫಲಿಸಿದ್ದು, ಬೆಳವಣಿಗೆಯ ಕಾರ್ಯತಂತ್ರವನ್ನು ಎತ್ತಿತೋರಿದೆಯಲ್ಲದೆ, ಕಾರ್ಯಾಚರಣೆಯ ದಕ್ಷತೆಯನ್ನು ಸಾರಿ ಹೇಳಿದೆ.

ಬ್ಯಾಂಕ್ ಗಳಿಸಿದ ಲಾಭ, ಠೇವಣಿ, ಮುಂಗಡಗಳು, ಹಾಗೆಯೇ ಸಾಲ ನೀಡಿಕೆ ಮತ್ತು ಸಾಲ ವಸೂಲಾತಿ ವ್ಯವಸ್ಥೆ, ಸಾಲಪೋರ್ಟ್‌ಫೋಲಿಯೋ ಮೇಲೆ ಸ್ಥಿರ ನಿಗಾ...ಇವೆಲ್ಲ ಬ್ಯಾಂಕಿನ ಗ್ರಾಹಕರು ಮತ್ತು ಸಂಬಂಧಪಟ್ಟ ಸ್ಟೇಕ್ ಹೋಲ್ಡರ್‌ಗಳು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸ, ನಂಬಿಕೆಯ ದ್ಯೋತಕವಾಗಿದೆ ಎಂದು ರಾಘವೇಂದ್ರ ಭಟ್ ಅವರು ತಿಳಿಸಿರುವುದಾಗಿ ಬ್ಯಾಂಕಿನ ಚೀಫ್ ಮ್ಯಾನೇಜರ್ ಹಾಗೂ ಪಿಆರ್‌ಒ ಆಗಿರುವ ಪಲ್ಲವಿ ಟಿ.ಎಸ್. ಅವರ ಪ್ರಕಟನೆ ತಿಳಿಸಿದೆ.

ಮೇ 23ರಂದು ದೇಶದ ದೊಡ್ಡ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ



ಆನೇಕಲ್: ಇಲ್ಲಿನ ಇಂಡ್ಲವಾಡಿ ಗ್ರಾಮದ ಸೂರ್ಯನಗರದ 4ನೇ ಹಂತದಲ್ಲಿ ದೇಶದ ಎರಡನೇ ಅತಿ ದೊಡ್ಡ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಮೇ 23ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುದ್ದಲಿ ಪೂಜೆ ನೆರವೇರಿಸುವರು.

ಸುದ್ದಿಗೋಷ್ಠಿಯಲ್ಲಿ ಕುರುಬ ಸಮಾಜದ ಹಿರಿಯ ನಾಯಕರಾದ ಇಂಡ್ಲವಾಡಿ ನಾಗರಾಜು ಮಾತನಾಡಿ, 75 ಎಕರೆ ವಿಸ್ತೀರ್ಣದಲ್ಲಿ 945 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣದ ನಿರ್ಮಾಣದ ಕಾಮಗಾರಿಗೆ ಸಚಿವ ಸಂಪುಟ ಸಚಿವರು ಮತ್ತು ರಾಷ್ಟ್ರೀಯ ಕ್ರಿಕೆಟ್ ಆಟಗಾರರಾದ ಸಚಿನ್ ತೆಂಡೂಲ್ಕರ್ ,ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ ,ವಿಶ್ವಾನಾಥ್ ಸೇರಿದಂತೆ ಅನೇಕ ಗಣ್ಯರು ಆಗಮಿಸುವರು ಎಂದರು.

ಸಮಾಜದ ಮುಖಂಡ ಬೊಮ್ಮಸಂದ್ರ ಲಿಂಗಣ್ಣ ಮಾತನಾಡಿ, ಸಮಾಜದ ಬಂಧುಗಳು ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಬೇಕು. ಶಾಸಕರಾದ ಬಿ.ಶಿವಣ್ಣ, ಮಾಜಿ ಸಂಸದ ಡಿ.ಕೆ.ಸುರೇಶ್, ಸಚಿವರಾದ ರಾಮಲಿಂಗಾರೆಡ್ಡಿ ಸೇರಿದಂತೆ ಅನೇಕರಿಗೆ ಧನ್ಯವಾದಗಳು ಅರ್ಪಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ತಾಲೂಕಿನ ಕುರುಬ ಸಮಾಜದ ಹಿರಿಯ ಮುಖಂಡರಾದ ಸಿ. ನಾಗರಾಜ್, ನರಸಿಂಹಮೂರ್ತಿ, ಗೊಲ್ಲಹಳ್ಳಿ ವೆಂಕಟಸ್ವಾಮಿ, ಚಂದಾಪುರ ರಾಮಚಂದ್ರ, ವೀರಭದ್ರಪ್ಪ, ಜಿಗಣಿ ಹರೀಶ್, ಅಶೋಕ್, ರಾಧಾಕೃಷ್ಣ, ಅಭಿ ಸೇರಿದಂತೆ ಹಲವರಿದ್ದರು.

ಮೇ 23ಕ್ಕೆ ಭಜನಾ ಸ್ಪರ್ಧೆ

ಬೆಂಗಳೂರು: ಉಕ್ಕಿನಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜಯಂತಿ ಅಂಗವಾಗಿ ರಾಷ್ಟ್ರೀಯ ಚಿಂತನೆಯ ಸಂಸ್ಥೆ ಭಾರತ ಭಾರತಿ ವತಿಯಿಂದ ಮೇ 23ರಂದು ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ ಕೆಇಬಿ ಇಂಜಿನಿಯರ್ಸ್ ಅಸೋಸಿಯೇಷನ್ ರಜತ ಮಹೋತ್ಸವ ಕಟ್ಟಡದಲ್ಲಿ ಭಜನಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.



ಭಾರತದ ವಿವಿಧ ರಾಜ್ಯಗಳಿಂದ ಬೆಂಗಳೂರಿಗೆ ಬಂದು ನೆಲೆಸಿರುವ ಮಹಿಳೆಯರಿಗಾಗಿ ಏರ್ಪಡಿಸಿರುವ ಈ ಸ್ಪರ್ಧೆಯಲ್ಲಿ 15ಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ. ಕನ್ನಡ, ತೆಲುಗು, ತಮಿಳು, ಮಲಯಾಳಂ, ಪಂಜಾಬಿ, ಮರಾಠಿ, ತುಳು, ಗುಜರಾತಿ, ಬಂಗಾಳಿ ಸೇರಿದಂತೆ ಹಲವು ಭಾಷೆಗಳ ಭಜನಾ ತಂಡಗಳು ತಮ್ಮ ರಾಜ್ಯಗಳ ಸಾಂಪ್ರದಾಯಿಕ ಉಡುಪುಗಳಲ್ಲಿ ಭಾಗವಹಿಸಲಿವೆ. ಏಕ ಭಾರತ, ಶ್ರೇಷ್ಠ ಭಾರತ ಎಂಬ ಸಂಕಲ್ಪವನ್ನು ಪ್ರತಿಬಿಂಬಿಸುವ ಈ ಕಾರ್ಯಕ್ರಮವು ರಾಷ್ಟ್ರೀಯ ಏಕತೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಸಾರಲಿದೆ ಎಂದು ಭಾರತ ಭಾರತಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಧಿಕಾರಿಗಳಿಗೆ ಬೆಂಗಳೂರು ಪೂರ್ವನಗರ ಪಾಲಿಕೆ ಆಯುಕ್ತರ ಸೂಚನೆ

ಆದ್ಯತೆ ಮೇರೆಗೆ ಕಚ್ಚಾ ಕಾಲುವೆಗಳ ಸ್ವಚ್ಛತೆಗೆ ಕ್ರಮ

ಬೆಂಗಳೂರು: ಆದ್ಯತೆ ಮೇರೆಗೆ ಕಚ್ಚಾ ಕಾಲುವೆಯನ್ನು ಸ್ವಚ್ಛಗೊಳಿಸುವಂತೆ ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ಅನುದಾನದ ಅಡಿಯಲ್ಲಿ ಕೈಗೊಂಡಿರುವ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳು ಹಾಗೂ ಈಗಾಗಲೇ ಅಭಿವೃದ್ಧಿಗೊಂಡಿರುವ ರಾಜಕಾಲುವೆಗಳ ನಿರ್ವಹಣಾ ಕಾಮಗಾರಿಗಳ ಕುರಿತು ಅವರು ಸ್ಥಳ ಪರಿಶೀಲನೆ ನಡೆಸಿದರು.

ಮಳೆಗಾಲದ ಹಿನ್ನೆಲೆಯಲ್ಲಿ ಕಾಲುವೆಗಳಲ್ಲಿ ಮಳೆನೀರು ಸರಾಗವಾಗಿ ಹರಿಯುವಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಿದರು.

ಬಾಕಿ ಇರುವ ಕಚ್ಚಾ ಕಾಲುವೆಗಳನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಕಲ್ಪಿಸಲು ತಕ್ಷಣದಿಂದಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಈಗಾಗಲೇ ಯೋಜನಾ ಘಟಕದಿಂದಅಭಿವೃದ್ಧಿ ಪಡಿಸಿರುವ ರಾಜಕಾಲುವೆಗಳ ನಿರ್ವಹಣಾ ಕಾರ್ಯಗಳನ್ನು ನಿಯಮಿತವಾಗಿ ಕೈಗೊಳ್ಳುವಂತೆ ಹಾಗೂ ಹೂಳು, ತ್ಯಾಜ್ಯ ಮತ್ತು ಅಡೆತಡೆಗಳನ್ನು ತೆರವುಗೊಳಿಸಿ ಕಾಲುವೆಗಳಲ್ಲಿ ಮಳೆ ನೀರು ಹರಿವಿನ ಸಾಮರ್ಥ್ಯವನ್ನು ಕಾಪಾಡಿಕೊಳ್ಳುವಂತೆ ಸೂಚಿಸಿದರು.

ಪ್ರವಾಹ ಸಂಭವನೀಯ ಪ್ರದೇಶಗಳಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.



ಇದೇ ಸಂದರ್ಭದಲ್ಲಿ ಸರ್ಜಾಪುರ ಮುಖ್ಯ ರಸ್ತೆಯಲ್ಲಿರುವ ಅಗ್ನಿಶಾಮಕ ಠಾಣೆಗೆ ಭೇಟಿ ನೀಡಿದ ಆಯುಕ್ತರು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ ಅಡಿಯಲ್ಲಿ ಒದಗಿಸಲಾಗಿರುವ ವಿಪತ್ತು ನಿರ್ವಹಣೆ ಉಪಕರಣಗಳನ್ನು ಪರಿಶೀಲಿಸಿದರು. ಅಗ್ನಿಶಾಮಕ ದಳದ ಬಳಿಯಿರುವ ವಿವಿಧ ವಿಪತ್ತು ನಿರ್ವಹಣಾ ತುರ್ತು ಉಪಕರಣ ಗಳ ಕಾರ್ಯಕ್ಷಮತೆ ಹಾಗೂ ಸಿದ್ಧತೆಯನ್ನು ಪರಿಶೀಲಿಸಿ, ಮಳೆಗಾಲದ ತುರ್ತು ಪರಿಸ್ಥಿತಿಗಳಿಗೆ ಸಂಪೂರ್ಣ ಸಜ್ಜಾಗಿರುವಂತೆ ಹಾಗೂ ಅಗತ್ಯ ತುರ್ತು ಉಪಕರಣಗಳನ್ನು ಸದಾ ಸನ್ನದ ಸ್ಥಿತಿಯಲ್ಲಿಡುವಂತೆ ಸೂಚಿಸಿದರು.

ಪಾಲಿಕೆ ಚುನಾವಣೆ ಸಂಬಂಧಿತ ಅಧಿಕಾರಿಗಳು, ಸಿಬ್ಬಂದಿ ಜತೆ ಸಭೆ

ಮತಪಟ್ಟಿ ಸಮಗ್ರ ಪರಿಷ್ಕರಣೆ ತೀವ್ರಗೊಳ್ಳಲಿ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಾಗೂ ಚುನಾವಣೆ ಕೆಲಸ ಕಾರ್ಯಗಳ ಪ್ರಕ್ರಿಯೆ ತ್ವರಿತ ಕೈಗೊಳಿಸುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ.ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಸ್‌ಐಆರ್ ಹಾಗೂ ಚುನಾವಣೆ ಕೆಲಸಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿದ ಅವರು, ಭಾರತೀಯ ಚುನಾವಣಾ ಆಯೋಗದ ನಿರ್ದೇಶನ ಪ್ರಕಾರ, ಪ್ರಸ್ತುತ ಎಸ್‌ಐಆರ್ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿರುವ ಹಿನ್ನೆಲೆಯಲ್ಲಿ ಪೂರ್ಣ ಸಿದ್ಧತೆಯೊಂದಿಗೆ ಕಾರ್ಯಪ್ರವೃತ್ತರಾಗುವಂತೆ ಸೂಚಿಸಿದರು.

ಜೊತೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಗರ ಪಾಲಿಕೆಗಳ ಚುನಾವಣೆಯೂ ನಡೆಯಲಿರುವ ಹಿನ್ನೆಲೆಯಲ್ಲಿ ಈಗಿನಿಂದಲೇ ಸಂಪೂರ್ಣ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ಮಾಡಿಕೊಳ್ಳಬೇಕೆಂದು ತಿಳಿಸಿದರು.



ಪ್ರಮುಖ ನಿರ್ದೇಶನಗಳು: ಮತದಾರರ ನೋಂದಣಾಧಿಕಾರಿಗಳು ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತಗಟ್ಟೆ ಅಧಿಕಾರಿ ಗಳೊಂದಿಗೆ ತಮ್ಮ ತಮ್ಮ ವ್ಯಾಪ್ತಿಯ ಎಲ್ಲ ಮತಗಟ್ಟೆಗಳಿಗೆಮುಂಚಿತವಾಗಿಭೇಟಿನೀಡಿಪರಿಶೀಲಿಸಿ. ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕರುಗಳು ಬಿಎಲ್ ಒಗಳನ್ನು ಸೂಕ್ತ ರೀತಿಯಲ್ಲಿ ಕೆಲಸಕ್ಕೆ ನಿಯೋಜಿಸಬೇಕು. ಅಗತ್ಯವಿದ್ದಲ್ಲಿ ತರಬೇತಿ ನೀಡಬೇಕೆಂದು ಸೂಚಿಸಿದರು.

ಕಂದಾಯ ಅಧಿಕಾರಿಗಳು ಖಾತೆ ಕೆಲಸಗಳ ಜೊತೆಗೆ ಎಸ್‌ಐಆರ್‌ಗೆ ಸಮರ್ಪಕ ರೀತಿಯಲ್ಲಿ ಸಮಯ ಮೀಸಲಿಡಿ. ಖಾತಾ ಮೇಳದ ಕಡೆಗೂ ಗಮನ ಹರಿಸಿ.ಚುನಾವಣೆ ಕೆಲಸಗಳಿಗೂ ಯಾವುದೇ ಲೋಪದೋಷಗಳು ಆಗದ ಹಾಗೇ ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳಬೇಕು.ಚುನಾವಣಾ ಆಯೋಗ ನಿಗದಿಪಡಿಸಿದ ಮಾನದಂಡ ಪ್ರಕಾರ ಮತದಾರರ ಪಟ್ಟಿ ನಿರ್ವಹಣೆಯಾಗಬೇಕೆಂದು ನಿರ್ದೇಶನ ನೀಡಿದರು.

ನಂಜನಗೂಡು ನಗರಸಭೆ ಪ್ರಗತಿ ಪರಿಶೀಲನಾ ಸಭೆ: ಶಾಸಕ ಎಚ್ಚರಿಕೆ

ಜನರ ಕೆಲಸಗಳಿಗೆ ತೊಡಕಾದರೆ ಕ್ರಮ

ನಂಜನಗೂಡು: ಜನಸಾಮಾನ್ಯರ ಕೆಲಸ ಕಾರ್ಯಗಳಿಗೆ ತೊಡಕಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು ಇಲ್ಲವಾದಲ್ಲಿ ಅಸಡ್ಡೆ ತೋರುವ ಅಧಿಕಾರಿಗಳು ಇಲ್ಲಿಂದ ಜಾಗ ಖಾಲಿಮಾಡಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಎಚ್ಚರಿಸಿದರು.

ನಗರಸಭೆಕರ್ನಾಟಕತ್ರೈಮಾಸಿಕಪ್ರಗತಿಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದ ಬಜಾರ್ ರಸ್ತೆಯನ್ನು ಫುಟ್ಪಾತ್ ವ್ಯಾಪಾರಿಗಳು ಅತಿಕ್ರಮಿಸಿಕೊಂಡು ವಾಹನ ಸಂಚಾರಕ್ಕೆ ತೊಡಕುಂಟು ಮಾಡುತ್ತಿರುವ ಬಗ್ಗೆ ಹಲವು ಬಾರಿ ಸ್ಥಳೀಯರು ದೂರಿದ್ದಾರೆ. ಜತೆಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರೂ ನಗರಸಭೆ ಅಧಿ ಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕ ದರ್ಶನ್ ಅವರು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಆಸಕ್ತಿ ಇಲ್ಲದಿದ್ದಲ್ಲಿ ಇಲ್ಲಿಂದ ಜಾಗ ಖಾಲಿ ಮಾಡುವಂತೆ ಎಚ್ಚರಿಸಿದರು.

ಜಲ ಜೀವನ್ ಮಿಷನ್ ಯೋಜನೆ ಮೂಲಕ ಕುಡಿಯುವನೀರು ತಲುಪಿಸುವ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಹೀಗಾಗಿ ಆದ್ಯತೆ ಮೇರೆಗೆ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಮುಂದಾಗು ವಂತೆ ಸೂಚಿಸಿದರು.



ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಎಸ್‌ಐಆರ್ ಜಾರಿಗೊಳಿಸಲು ಕೇಂದ್ರ ಚುನಾವಣಾ ಆಯೋಗ ನೀಡಿರುವ ಮಾನದಂಡ ಗಳ ಬಗ್ಗೆ ವಿವರಣೆ ನೀಡುವಂತೆ ತಹಶೀಲ್ದಾರ್ ಅವರಿಗೆ ಸೂಚಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಸ್ವಿತಾರಾಮು ಶೀಘ್ರದಲ್ಲಿಯೇ ಈ ಬಗ್ಗೆ ಅಧಿಕೃತ ಆದೇಶ ಹೊರ ಬೀಳಲಿದೆ ಎಂದು ತಿಳಿಸಿದರು. ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ಎಸ್‌ಐಆರ್ ಜಾರಿ ಸಂದರ್ಭ ರಾಜಕೀಯ ಪಕ್ಷಗಳವರಿಗೆ ಸಮರ್ಪಕ ಮಾಹಿತಿ ಪಾರದರ್ಶಕವಾಗಿ ಮತದಾರರ ಪಟ್ಟಿ ಪರಿಷ್ಕರಣೆಗೆ ಮುಂದಾಗುವಂತೆ ತಿಳಿಸಿದರು. ಚಾಮರಾಜನಗರ ಸಂಸದ ಸುನೀಲ್ ಬೋಸ್ ಮಾತನಾಡಿ, ಅಧಿಕಾರಿಗಳು ತಮ್ಮ ಕಾರ್ಯ ನಿರ್ವಹಣೆಯಲ್ಲಿ ದಕ್ಷತೆಯನ್ನು ತೋರಬೇಕೆಂದರು. ಇಒ ಜೆರಾಲ್ಡ್ ರಾಜೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚೆನ್ನಪ್ಪ ಇದ್ದರು.

ಕಿರುಸುದ್ದಿ

ಪುಸ್ತಕ ನಕಲು ಮಾಡಿ ಮಾರಾಟ: ಪ್ರಕರಣಕ್ಕೆ ತಡೆ

ಬೆಂಗಳೂರು: ಪತ್ರಕರ್ತ ರವಿ ಬೆಳಗೆರೆ ರಚಿಸಿರುವ ಹೇಳಿ ಹೋಗು ಕಾರಣ ಪುಸ್ತಕವನ್ನು ಅನುಮತಿ ಪಡೆಯದೆ ನಕಲು ಮಾಡಿ ಮಾರಾಟ ಮಾಡಿದ ಆರೋಪ ಸಂಬಂಧ ಅಮೆಜಾನ್ ಸೆಲ್ಲರ್ಸ್ ಸರ್ವೀಸಸ್ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಹೈಕೋರ್ಟ್ ಮಂಗಳವಾರ ತಡೆ ನೀಡಿದೆ. ಪ್ರಕರಣದ ತನಿಖೆಗೆ ತಡೆ ನೀಡುವಂತೆ ಕೋರಿ ಅಮೆಜಾನ್ ಸೆಲ್ಲರ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾ. ಕೆ.ವಿ. ಅರವಿಂದ್ ಅವರ ರಜಾಕಾಲೀನ ಏಕಸದಸ್ಯ ಪೀಠ ನಡೆಸಿತು. ಸುಬ್ರಹ್ಮಣ್ಯಪುರ ಪೊಲೀಸ್ ಮತ್ತು ಭಾವನಾ ಬೆಳಗೆರೆ ಅವರಿಗೆ ನೋಟಿಸ್ ಜಾರಿ ಮಾಡಿದ ನ್ಯಾಯಾಲಯವು ಪ್ರಕರಣಕ್ಕೆ ತಡೆ ನೀಡಿ ಆದೇಶಿಸಿತು. ಅಲ್ಲದೇ, ವಿಚಾರಣೆಯನ್ನು ಜೂನ್ ಮೂರನೇ ವಾರಕ್ಕೆ ಮುಂದೂಡಿತು. ಅಮೆಜಾನ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಸಂದೇಶ್ ಚೌಟ ಅವರು ಅಮೆಜಾನ್ ಮಧ್ಯಸ್ಥಿಕೆ ಸಂಸ್ಥೆಯಾಗಿದ್ದು, ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 79ರ ಅಡಿ ರಕ್ಷಣೆ ಒದಗಿಸಲಾಗಿದೆ. ಮಾರಾಟಗಾರರು ಮತ್ತು ಖರೀದಿದಾರರಿಗೆ ವೇದಿಕೆಯಾಗಿ ಅಮೆಜಾನ್ ಕೆಲಸ ಮಾಡುತ್ತದೆ. ಸೆಕ್ಷನ್79 ಮಧ್ಯಸ್ಥಿಕೆ ಸಂಸ್ಥೆಗಳಿಗೆ ಸುರಕ್ಷಿತ ತಾಣವಾಗಿದೆ. ಅನಾಮಿಕ ವ್ಯಕ್ತಿಗಳನ್ನು ಆರೋಪಿಗಳನ್ನಾಗಿ ಮಾಡುವ ಬದಲಿಗೆ ಮಧ್ಯಸ್ಥಿಕೆ ಸಂಸ್ಥೆಗಳನ್ನು ಆರೋಪಿಗಳನ್ನಾಗಿ ಮಾಡಲಾಗಿದೆ ಎಂದರು. ಪುಸ್ತಕ ಮಾರಾಟಗಾರರಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ತನಿಖಾಧಿಕಾರಿಗೆ ಹಂಚಿಕೆ ಮಾಡಲಾಗಿದೆ. ಹೆಸರು, ಇ-ಮೇಲ್ ಐಡಿ, ಮೊಬೈಲ್ ನಂಬರ್, ಮೊದಲ ಮತ್ತು ಕೊನೆಯ ಮಾರಾಟದ ದಿನಾಂಕ, ಎಷ್ಟು ಪುಸ್ತಕಗಳನ್ನು ಮಾರಾಟ ಮಾಡಲಾಗಿದೆ ಎಂಬ ಮಾಹಿತಿಯನ್ನೂ ವಿವರಿಸಲಾಗಿದೆ ಎಂದು ಪೀಠಕ್ಕೆ ವಿವರಿಸಿದರು.

ಹಣ ಅಕ್ರಮ ವರ್ಗಾವಣೆ: ನ್ಯಾಯಾಂಗ ಬಂಧನ

ಬೆಂಗಳೂರು: ಆನ್‌ಲೈನ್ ನೈಜ ಹಣ ಗೇಮಿಂಗ್ ವೇದಿಕೆಯನ್ನು ತಿರುಚಿದ ಆರೋಪದ ಸಂಬಂಧಿತ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಗೇಮ್ಸ್ ಕ್ರಾಫ್ಟ್ ಕಂಪನಿಯ ಮೂವರು ನಿರ್ದೇಶಕರನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯವು ಮಂಗಳವಾರ 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿದೆ. ವಿಕಾಸ್ ತನೇಜಾ, ಪೃಥ್ವಿರಾಜ್ ಸಿಂಗ್ ಮತ್ತು ದೀಪಕ್ ಸಿಂಗ್ ಅಹ್ಲಾವತ್ ಅವರ ಕಸ್ಟಡಿ ಅವಧಿ ಮಂಗಳವಾರ ಮುಗಿದ ಹಿನ್ನೆಲೆಯಲ್ಲಿ ಇ.ಡಿ. ಅಧಿಕಾರಿಗಳು ಆರೋಪಿಗಳನ್ನು ಬೆಂಗಳೂರಿನ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಚಂದ್ರಶೇಖರ್ ರೆಡ್ಡಿ ಅವರ ಮುಂದೆ ಹಾಜರುಪಡಿಸಿದರು.

ತುಮಕೂರಿನಲ್ಲಿ ಸರಕಾರದ ಸಾಧನಾ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ನೆಮ್ಮದಿ ಬದುಕಿಗೆ ಕಾಂಗ್ರೆಸ್ ಆಧಾರ



ಎರಡನೇ ಬೆಂಗಳೂರಾಗಿ ತುಮಕೂರು ಅಭಿವೃದ್ಧಿ

ಶಿಕ್ಷಣ ಕಾಶಿ, ಕಲ್ಪತರು ನಾಡು, ಧಾರ್ಮಿಕ, ಐತಿಹಾಸಿಕ, ದಕ್ಷಿಣದ ಕಾಶಿಯಂತೆ ಕಂಗೊಳಿಸುತ್ತಿರುವ ತುಮಕೂರನ್ನು ಎರಡನೇ ಬೆಂಗಳೂರಾಗಿ ನಿರ್ಮಾಣ ಮಾಡಲಾಗುವುದು. ಸಹೋದ್ಯೋಗಿ ಡಾ.ಜಿ.ಪರಮೇಶ್ವರ್ ಅವರು, ಬೆಂಗಳೂರಿನ ಜನಸಂಖ್ಯೆ ನಿಯಂತ್ರಣಕ್ಕೆ ತುಮಕೂರನ್ನು ಬೆಂಗಳೂರಾಗಿ ಪರಿವರ್ತನೆ ಮಾಡಬೇಕಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ತುಮಕೂರು: ನಿಮಗೆಲ್ಲ ಈ ಕಾಂಗ್ರೆಸ್ ಸರ್ಕಾರದ ಮೇಲೆ ನಂಬಿಕೆ ಇದೆ. ನಮ್ಮದು ಇತಿಹಾಸವಿರುವ ಪಕ್ಷ, ಬಡವರ ಬದುಕಿನಲ್ಲಿ ಬದಲಾವಣೆ ಮಾಡಿದ ಪಕ್ಷ. ಅದೇ ರೀತಿ ಈ ಜನರ ಬೇರಿಗೆ ನಿಮ್ಮ ಬದುಕಿಗೆ ಕಾಂಗ್ರೆಸ್ ಸರ್ಕಾರವೇ ಆಧಾರ ಎಂದು ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ನಡೆದ ಸಾರ್ಥಕ ಸೇವೆಯ ಸಮರ್ಪಣೆ ಸಮಾವೇಶದಲ್ಲಿ ಮಾತನಾಡಿ, ಅಂಬೇಡ್ಕರ್ ಅವರು ಹೇಳ್ತಾರೆ 'ಇತಿಹಾಸ ಮರೆತವನು ಇತಿಹಾಸವನ್ನು ಸೃಷ್ಟಿ ಮಾಡಲಿಕ್ಕೆ ಸಾಧ್ಯ ಇಲ್ಲ ಎಂದು ಹೇಳಿದ್ದಾರೆ. ಅದೇ ರೀತಿ ಮರಕ್ಕೆ ಬೇರು ಎಷ್ಟು ಮುಖ್ಯನೋ ಮನುಷ್ಯನಿಗೆ ನಂಬಿಕೆ ಕೂಡ ಅಷ್ಟೇ ಮುಖ್ಯ ಎಂದು ತಿಳಿಸಿದರು.

ಶಕ್ತಿ ಯೋಜನೆ ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಇತಿಹಾಸ ನಿರ್ಮಾಣ ಆಗಿದೆ. ಐದು ಸಾವಿರ ಹೊಸ ಬಸನ್ನು ಖರೀದಿ ಮಾಡಿದ್ದಾರೆ. ನನ್ನ ತಾಯಂದಿರು ಆತ್ಮವಿಶ್ವಾಸದಿಂದ ಓಡಾಡುತ್ತಿದ್ದಾರೆ. ದೇವರು ಕೊಟ್ಟಿರೋದು ಎರಡು ಆಯ್ಕೆ, ಒಂದು ಕೊಟ್ಟು ಹೋಗಬೇಕು. ಇಲ್ಲ ಬಿಟ್ಟು ಹೋಗಬೇಕು. ಅದೇ ರೀತಿ ಅಧಿಕಾರ ಸಿಕ್ಕಿರುವಾಗ ಎಲ್ಲ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಒಂದು ದೊಡ್ಡ ಸಾಧನೆಯನ್ನು ಮಾಡಿ ಜನರಿಗೆ ಶಕ್ತಿ ತುಂಬಿದ್ದಾರೆ ಎಂದರು.

ಈ ದೇಶಕ್ಕೆ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸಂವಿಧಾನ ಕೊಟ್ಟ ಪಕ್ಷ ನಮ್ಮದು. ಇಂತಹ ಒಂದು ಐತಿಹಾಸಿಕವಾದ ಪುಟಕ್ಕೆ ಬಿಜೆಪಿ ಸೇರಲು ಆಗಿಲ್ಲ. ಇದಕ್ಕೆ ನಿಮ್ಮ ಆಶೀರ್ವಾದ ಯಾವಾಗಲೂ ಇರಲಿ ಅಂತ ಹೇಳಿ ಪ್ರಾರ್ಥಿಸುತ್ತೇನೆ. ಈ ಕಾರ್ಯಕ್ರಮ ಆಯೋಜಿಸಿದ ಪರಮೇಶ್ವರ್ ಮತ್ತು ಈ ಜಿಲ್ಲೆಯ ಎಲ್ಲಾ ಶಾಸಕರಿಗೆ, ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಸಾರಿಗೆ ನೌಕರರ ಮುಷ್ಕರಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಸಿಬ್ಬಂದಿ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ನಾಳೆಯಿಂದ ಕರೆದಿದ್ದ ಸಾರಿಗೆ ನೌಕರರ ಮುಷ್ಕರಕ್ಕೆ ಹೈಕೋರ್ಟ್ ಮಂಗಳವಾರ ತಡೆಯೊಡ್ಡಿದೆ.

ಮುಷ್ಕರ ಪ್ರಶ್ನಿಸಿ ಮನೆಕೆಲಸ ಮಾಡುತ್ತಿರುವ ಬೆಂಗಳೂರಿನ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಎಂಬವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿಗಳಾದಸೂರಜ್‌ಗೋವಿಂದರಾಜ್ ಮತ್ತು ಡಾ.ಕೆ.ಮನ್ಮಥ ರಾವ್ ಅವರ ವಿಭಾಗೀಯ ಪೀಠ ನಡೆಸಿತು.

ವಿವಿಧ ಯೂನಿಯನ್‌ಗಳ ನೇತೃತ್ವ ವಹಿಸಿರುವ ಜಂಟಿ ಕ್ರಿಯಾ ಸಮಿತಿಯು ಏ.29 ರ ನೋಟಿಸ್ ಆಧರಿಸಿ ಮುಷ್ಕರ ನಡೆಸುವುದಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಪೀಠ ಆದೇಶಿಸಿತು. ಸಾರಿಗೆ ಸಚಿವರು ಮತ್ತು ಅಥವಾ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಯಾವಾಗ ಜಂಟಿ ಕ್ರಿಯಾ ಸಮಿತಿಯ ಜತೆ ಸಭೆ ನಡೆಸಲಾಗುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಅಡ್ವೋಕೇಟ್ ಜನರಲ್ ಸೂಚನೆ ಪಡೆದು ವಾದಿಸಲು ಎರಡು ದಿನ ಕಾಲಾವಕಾಶ ಕೋರಿದ್ದಾರೆ. ಅದಕ್ಕಾಗಿ ವಿಚಾರಣೆಯನ್ನು ಮೇ 21ಕ್ಕೆ ಮುಂದೂಡಿದೆ.

ಕೆಎಸ್‌ಆರ್‌ಟಿ ಸಿಬ್ಬಂದಿಯ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ಪರ ವಕೀಲ ಕ್ಲಿಫ್ಟನ್ ಡಿ ರೋಜಾರಿಯೋ ಅವರು ನಮ್ಮ ಬೇಡಿಕೆಗಳನ್ನು ಸರಿಯಾಗಿ ಈಡೇರಿಸಿಲ್ಲ, ಕಾನೂನಿನ ಪ್ರಕಾರವೇ ಮುಷ್ಕರ ನಡೆಸಲು ನೋಟಿಸ್ ನೀಡಲಾಗಿದೆ. ಅದನ್ನು ಪರಿಗಣಿಸದೇ ಸರ್ಕಾರವೇ ಈ ಸಂದರ್ಭ ನಿರ್ಮಾಣ ಮಾಡಿದೆ ಎಂದರು.

ಈ ಹಂತದಲ್ಲಿ ಪೀಠವು ಈಗ ಮುಷ್ಕರ ಬೇಡ. ಈಗಾಗಲೇ ನಿಮಗೆ ಶೇ.12.5ರಷ್ಟು ವೇತನ ಪರಿಷ್ಕರಣೆ ನೀಡಲಾಗಿದೆ. 450 ಕೋಟಿ ರೂ. ಅನ್ನು ಸರ್ಕಾರ ಬಿಡುಗಡೆ ಮಾಡಿದೆ. ಇನ್ನು 200 ಕೋಟಿ ರೂ. ಬಿಡುಗಡೆಗೆ ಪ್ರಯತ್ನಿಸೋಣ ಎಂದಿತು. ಅಲ್ಲದೇ, ಯಾವಾಗ ಸಭೆ ನಡೆಸುತ್ತೀರಿ? ಎಂದು ಸರ್ಕಾರಕ್ಕೆ ಪ್ರಶ್ನಿಸಿತು. ಸರ್ಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ತಾರಾನಾಥ್ ಅವರು ಎರಡು ದಿನ ಕಾಲಾವಕಾಶ ಕೋರಿದರು. ಇದನ್ನು ಆಲಿಸಿದ ಪೀಠವು ಮುಖ್ಯಮಂತ್ರಿ ಅಥವಾ ಸಾರಿಗೆ ಸಚಿವರು, ಸಾರಿಗೆ ಇಲಾಖೆ ಕಾರ್ಯದರ್ಶಿಯು ಜಂಟಿ ಕ್ರಿಯಾ ಸಮಿತಿ ಜತೆಗೆ ಯಾವಾಗ ಸಭೆ ನಡೆಸುತ್ತಿದೆ ಎಂಬುದನ್ನು ಗುರುವಾರದ ವಿಚಾರಣೆಯ ವೇಳೆ ತಿಳಿಸಬೇಕು ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.



ಡಾ.ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಅಕಾಡೆಮಿಯಾ-ಉದ್ಯಮ ಸಂವಾದ ಕಾರ್ಯಕ್ರಮವನ್ನು ಬ್ರಿಟಿಷ್ ಉಪ ಹೈ ಕಮಿಷನರ್ ಚಂದ್ರು ಅಯ್ಯರ್ ಚಾಲನೆ ನೀಡಿದರು. ಕುಲಪತಿ ಪ್ರೊ.ಕೆ.ವಿಶ್ವನಾಥ, ಕುಲಸಚಿವ ಮಮತಾ ಮೋಹನ್, ಹಣಕಾಸು ಅಧಿಕಾರಿ ಪ್ರಶಾಂತ್ ಕುಮಾರ್ ಉಪಸ್ಥಿತರಿದ್ದರು.

ಯಲಹಂಕ ಕ್ಷೇತ್ರದ ಶಾಸಕ ಅಧಿಕಾರಿಗಳಿಗೆ ಸೂಚನೆ

ಮೇಲ್ಸೇತುವೆ ಶೀಘ್ರ ಪೂರ್ಣಗೊಳ್ಳಲಿ

ಬೆಂಗಳೂರು: ಯಲಹಂಕ ಫ್ಲೈಓವರ್ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ಆರ್. ವಿಶ್ವನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆಯ ಯಲಹಂಕ ವಿಧಾನಸಭಾ ಕ್ಷೇತ್ರದ ಕಾಮಗಾರಿ ಪ್ರಗತಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ಯಲಹಂಕ ರೈಲ್ವೆ ಸ್ಟೇಷನ್‌ನಿಂದ ಜಕ್ಕೂರುವರೆಗೆ ಹೊಸ ರಸ್ತೆ ನಿರ್ಮಾಣ ಮಾಡುವ ಕುರಿತು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮುಂದಿನ ದಿನಗಳಲ್ಲಿ ಬೆಂಗಳೂರು ನಗರದ ಅತಿದೊಡ್ಡ ರೈಲ್ವೆ ಟರ್ಮಿನಲ್ ನಿರ್ಮಾಣವಾಗುವ ಹಿನ್ನೆಲೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಅಗಲವಾದ ರಸ್ತೆ, ಅಂಡರ್‌ಪಾಸ್ ಹಾಗೂ ಫ್ಲೈಓವರ್ ನಿರ್ಮಾಣದ ಅಗತ್ಯವಿದೆ ಎಂದು ತಿಳಿಸಿದರು.

ನಕ್ಷೆ ಅನುಮೋದನೆ ಇಲ್ಲದೆ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಬಾರದು ಹಾಗೂ ಖಾಸಗಿ ಸಂಸ್ಥೆಗಳ ನಿರ್ಮಾಣ ಕಾಮಗಾರಿಗಳೂ ಕಾನೂನುಬದ್ಧವಾಗಿಯೇ ನಡೆಯಬೇಕು ಎಂದು ಸೂಚಿಸಿದರು.

51 ಅಂಗಡಿಯನ್ನು ಒಳಗೊಂಡ ಫುಡ್ ಕೋರ್ಟ್ ಮತ್ತು ಫುಡ್ ಸ್ಟ್ರೀಟ್ ಅಭಿವೃದ್ಧಿ ಕುರಿತು ವಿವಿಧ ರೀತಿಯ ಆಹಾರ ಮಳಿಗೆಗಳಿಗೆ ಅವಕಾಶ ಕಲ್ಪಿಸಿ, ಸಾರ್ವಜನಿಕರಿಗೆ ಎಲ್ಲಾ ರೀತಿಯ ಸೌಲಭ್ಯಗಳೊಂದಿಗೆ ಮಾದರಿ ಫುಡ್ ಸ್ಟ್ರೀಟ್ ನಿರ್ಮಾಣ ಮಾಡುವಂತೆ ಸೂಚಿಸಿದರು.

ಪೋಸ್ಟರ್‌ಗಳ ವಿರುದ್ಧ ಕ್ರಮ

ಜಿಬಿಎ ನಿಯಮಾವಳಿಗಳ ಪ್ರಕಾರ ಅನುಮತಿ ಪಡೆದ ಸ್ಥಳಗಳನ್ನು ಹೊರತುಪಡಿಸಿ ಇತರೆಡೆ ಅಳವಡಿಸಲಾಗುತ್ತಿರುವ ಅನಧಿಕೃತ ಬ್ಯಾನರ್ ಹಾಗೂ ಪೋಸ್ಟರ್‌ಗಳನ್ನು ತಕ್ಷಣ ತೆರವುಗೊಳಿಸಿ, ಸಂಬಂಧಪಟ್ಟವರ ವಿರುದ್ಧ ದಂಡ ವಿಧಿಸಿ.ಸೂಚಿಸಿದರು. ವಿಶೇಷವಾಗಿ ಪಿಜಿ, ಅಂಗಡಿಗಳು ಹಾಗೂ ಇತರೆ ಖಾಸಗಿ ಸಂಸ್ಥೆಗಳ ಮೂಲಕ ಅಂಟಿಸಲಾಗುತ್ತಿರುವ ಅನಧಿಕೃತ ಪೋಸ್ಟರ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಎಸ್.ಆರ್. ವಿಶ್ವನಾಥ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಲವು ಮಾಂಸ ಹಾಗೂ ಮೀನಿನ ಅಂಗಡಿಗಳು ಮಾಂಸದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಖಾಲಿ ಜಾಗಗಳಲ್ಲಿ ಎಸೆಯುತ್ತಿರುವ ಅಂಗಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು, ಅಗತ್ಯವಿದ್ದಲ್ಲಿ ವ್ಯಾಪಾರ ಪರವಾನಗಿಯನ್ನು ರದ್ದುಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಹಲವಾರು ವ್ಯಾಪಾರಸ್ಥರು ಅಂಗಡಿ ಮುಂಭಾಗದ ಫುಟ್‌ಪಾತನ್ನು ಪಾರ್ಕಿಂಗ್ ಹಾಗೂ ಇತರೆ ಉದ್ದೇಶಗಳಿಗೆ ಬಳಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ.

ರಾಜಕೀಯ ವಿದ್ಯಮಾನ ಆಧರಿಸಿ ನಾಯಕತ್ವ ನಿರ್ಧಾರ

ಬೆಂಗಳೂರು: ಸರ್ಕಾರಕ್ಕೆ ಮೂರು ವರ್ಷ ಪೂರೈಸಿದ ಬೆನ್ನಲೇ ಸಂಪುಟ ವಿಸ್ತರಣೆಯೋ ನಾಯಕತ್ವ ಬದಲಾವಣೆಯೋ ಎಂಬ ಚರ್ಚೆಗೆಸ್ಪಷ್ಟನೆ ಸಿಗುವಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಸಚಿವರು ಅಲರ್ಟ್ ಆಗಿದೆ. ಬದಲಾಗುವ ರಾಜಕೀಯ ವಿದ್ಯಮಾನವನ್ನು ಆಧರಿಸಿ ಮುಂದೆ ತಗೆದುಕೊಳ್ಳಬಹುದಾದ ನಿರ್ಧಾರಗಳ ಬಗ್ಗೆ ತಮ್ಮ-ತಮ್ಮ ಆಪ್ತರ ಜತೆಗೆ ಮಾತುಕತೆ ಆರಂಭಿಸಿದ್ದಾರೆ.

ಸೋಮವಾರ ಕೇರಳ ಸಿಎಂ ಪದಗ್ರಹಣದಲ್ಲಿ ಭಾಗಿಯಾಗಿ ತಿರುವನಂತಪುರಂನಿಂದ ವಾಪಾಸ್ ಆದ ಬಳಿಕ ಇಂಧನ ಸಚಿವ ಕೆ.ಜೆ ಜಾರ್ಜ್ ನಿವಾಸದಲ್ಲಿ ಮಲ್ಲಿಕಾರ್ಜುನ್ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸಭೆ ನಡೆಸಿ ಮಾತುಕತೆ ನಡೆಸಿದ್ದಾರೆ. ಮೂರು ವರ್ಷ ಪೂರೈಸಿದ ಬಳಿಕ ಈ ಸಭೆ ನಡೆದಿದ್ದು, ಸಾಕಷ್ಟು ಕುತೂಹಲ ಮೂಡಿಸಿದೆ.

ಮಂಗಳವಾರ ತುಮಕೂರಿನಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ತೆರಳುವ ಮುನ್ನ ಬೆಂಗಳೂರಿನಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರ ನಿವಾಸದಲ್ಲಿ ಸಚಿವ ಡಾ. ಎಚ್.ಸಿ ಮಹದೇವಪ್ಪ, ಜಮೀರ್ ಅಹ್ಮದ್ ಮತ್ತು ವೆಂಕಟೇಶ್ ಅವರು ಮಾತುಕತೆ ನಡೆಸಿದ್ದಾರೆ.

ಸಮಾವೇಶಕ್ಕೆ ಆಗಮಿಸುವ ಮಾರ್ಗ ಮಧ್ಯದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕ್ಯಾತಸಂದ್ರದಲ್ಲಿರುವ ಮಾಜಿ ಸಚಿವ ಕೆ.ಎನ್ ರಾಜಣ್ಣ ನಿವಾಸಕ್ಕೆ ತೆರಳಿದ ವೇಳೆ ಸಚಿವ ಎಂ.ಬಿ ಪಾಟೀಲ, ಕೆ.ಜೆ ಜಾರ್ಜ್ ಮತ್ತು ಎಂ.ಸಿ ಸುಧಾಕರ್ ಸೇರಿದಂತೆ ಅನೇಕ ನಾಯಕರು ಉಪಸ್ಥಿತರಿದ್ದು, ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ದಿಲ್ಲಿಯಲ್ಲಿ ಅಂತಿಮ ನಿರ್ಧಾರ: ರಾಜ್ಯ ನಾಯಕರ ಸರಣಿ ಸಭೆಗಳು ಹೊಸ ರೂಪ ಪಡೆದುಕೊಳ್ಳುತ್ತಿರುವ ನಿಟ್ಟಿನಲ್ಲಿ ರಾಜ್ಯದಲ್ಲಿ ಉದ್ಭವಿಸಿರುವ ಗೊಂದಲ ಮತ್ತು ಬಿಕ್ಕಟ್ಟುಗಳನ್ನು ಅರಿತಿರುವ ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರು ಪಂಚ ರಾಜ್ಯಗಳ ಚುನಾವಣೆಯ ಹಿನ್ನಲೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ ಶಿವಕುಮಾರ್ ಅವರ ಭೇಟಿ ಅವಕಾಶ ನೀಡಿರಲಿಲ್ಲ, ಇದೀಗ ಸಿಎಂ ಸಿದ್ದರಾಮಯ್ಯ ಅವರು ಸಮಯ ಕೇಳಿರುವುದರಿಂದ ಸಮಯ ಸಿಕ್ಕ ನಂತರ ದಿಲ್ಲಿಗೆ ತೆರಳಿ ಚರ್ಚಿಸಲಿದ್ದು, ರಾಜ್ಯ ರಾಜಕಾರಣ ದಿಲ್ಲಿಗೆ ಶಿಫ್ಟ್ ಆಗಲಿದೆ.

ಕಿರುಸುದ್ದಿ

ಕುರುಬ ಸಂಘದ ಚುನಾವಣಾ ಕರಡು ಪ್ರತಿ ಸಿದ್ಧ: ಆಕ್ಷೇಪಣೆಗೆ ಆಹ್ವಾನ

ಹೊಸಕೋಟೆ: ತಾಲೂಕು ಕುರುಬರ ಸಂಘದ ಚುನಾವಣೆ ಸಂಬಂಧ ಮತದಾರರ ಹಾಗೂ ಸಂಘದ ನಿರ್ದೇಶಕ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸುವ ಸದಸ್ಯರ ಅರ್ಹತಾ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಅದರಲ್ಲಿ ಸಂಘದ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಲು ಅರ್ಹರಿರುವ 649 ಸದಸ್ಯರ ಕರಡು ಪಟ್ಟಿ ಹಾಗೂ ಮತದಾನದ ಹಕ್ಕು ಪಡೆದಿರುವ 1332 ಸಂಘದ ಸದಸ್ಯರ ಕರಡು ಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗಿದೆ. ಈ ಸಂಬಂಧ ಯಾರಾದರೂ ಆಕ್ಷೇಪಣೆ ಅರ್ಜಿ ಸಲ್ಲಿಸಲು ಲಿಖಿತ ಅರ್ಜಿಯೊಂದಿಗೆ ಸೂಕ್ತದಾಖಲೆಯನ್ನು ಸಂಘದ ಕಚೇರಿಗೆ ಸಲ್ಲಿಸಲು ಮೇ 31ರವರೆಗೆ ಅವಕಾಶ ನೀಡಲಾಗಿದೆ ಎಂದು ಚುನಾವಣಾಧಿಕಾರಿ ವಿ. ಶಿವಕುಮಾರ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ದೇವನಹಳ್ಳಿ: ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಕ್ಕೆ ಎಚ್‌ಎಂಐಎಸ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದರೆ, ಮ್ಯಾನುಯಲ್ ಮುಖೇನ ಪ್ರವೇಶ ಪಡೆಯಲು ಹತ್ತಿರವಿರುವ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರ ಕಚೇರಿಗೆ ಭೇಟಿ ನೀಡಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಂ:217 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ , ದೇವನಹಳ್ಳಿ ತಾಲೂಕು ದೂ. ಸಂಖ್ಯೆ: 080-29787447/9480843020, ಹಾಗೂ ದೇವನಹಳ್ಳಿ ತಾಲ್ಲೂಕು ಸಹಾಯಕ ನಿರ್ದೇಶಕರು ದೂ. ಸಂಖ್ಯೆ -080-27681784, ದೊಡ್ಡಬಳ್ಳಾಪುರ ದೂ. ಸಂಖ್ಯೆ -080-27623681, ಹೊಸಕೋಟೆ ದೂ. ಸಂಖ್ಯೆ -080-27931528, ನೆಲಮಂಗಲ ದೂ. ಸಂಖ್ಯೆ - 080-27723172 ಗೆ ಸಂಪರ್ಕಿಸಲು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಟಿ.ಎಲ್.ಎಸ್ ಪ್ರೇಮಾ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೀಟರ್ ಬಡ್ಡಿ: ಆತ್ಮಹತ್ಯೆ

ಬೆಂಗಳೂರು: ಮೀಟರ್ ಬಡ್ಡಿ ದಂಧೆಕೋರನ ಅತಿಯಾದ ಕಿರುಕುಳ ಹಾಗೂ ಹೆಚ್ಚಿನ ಬಡ್ಡಿ ಹಣವನ್ನು ಕಟ್ಟಲಾಗದೆ ಮನನೊಂದ ಕಾರು ಚಾಲಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ನಡೆದಿದೆ. ಈ ಸಂಬಂಧ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ. ಬಸವರಾಜ್ ಆತ್ಮಹತ್ಯೆಗೆ ಶರಣಾದ ದುರ್ದೈವಿ ಕಾರು ಚಾಲಕ ಎಂದು ಗುರುತಿಸಲಾಗಿದೆ. ಈತ ಮಹೇಂದ್ರ ಎಂಬಾತನಿಂದ ಕೈ ಸಾಲ ಪಡೆದಿದ್ದ ಎನ್ನಲಾಗಿದೆ. ಆದರೆ, ಮಹೇಂದ್ರ ವಿಧಿಸುತ್ತಿದ್ದ ಮೀಟರ್ ಬಡ್ಡಿಯನ್ನು ತಾಳಲಾರದೆ, ಹೆಚ್ಚಿನ ಬಡ್ಡಿ ಹಣವನ್ನು ತೀರಿಸಲು ಸಾಧ್ಯವಾಗದೆ ಬಸವರಾಜ್ ತೀವ್ರ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ಅತ್ಯಂತ ಭಾವುಕರಾಗಿ ಡೆತ್‌ನೋಟ್ ಒಂದನ್ನು ಬರೆದಿಟ್ಟಿದ್ದಾರೆ. ಅಷ್ಟೇ ಅಲ್ಲದೆ, ತಮ್ಮ ಅಳಲನ್ನು ತೋಡಿಕೊಂಡು ವಿಡಿಯೊವೊಂದನ್ನು ಸಹ ಮಾಡಿದ್ದು, ನನ್ನ ಸಾವಿಗೆ ಸಾಲ ನೀಡಿದ ಮಹೇಂದ್ರನೇ ನೇರ ಕಾರಣ ಎಂದು ಗಂಭೀರ ಆರೋಪ ಮಾಡಿದ್ದಾರೆ. ಸದ್ಯ ಈ ಡೆತ್‌ನೋಟ್ ಹಾಗೂ ವಿಡಿಯೋ ಆಧರಿಸಿ ಪೊಲೀಸರು ಕಾನೂನು ಕ್ರಮ ಜರುಗಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬಸವೇಶ್ವರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆಯೇ ಇತ್ತ ಆರೋಪಿ ಮಹೇಂದ್ರ ತಲೆಮರೆಸಿಕೊಂಡು ಪರಾರಿಯಾಗಿದ್ದಾನೆ. ತನಿಖೆ ತೀವ್ರಗೊಳಿಸಿರುವ ಪೊಲೀಸರು, ಮಹೇಂದ್ರನ ಸ್ನೇಹಿತರು ಹಾಗೂ ಸ್ಥಳೀಯ ನಿವಾಸಿಗಳಿಂದ ಆತನ ಚಲನವಲನಗಳ ಬಗ್ಗೆ ಪ್ರಮುಖ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಸದ್ಯ ಆರೋಪಿಯ ಮೊಬೈಲ್ ಟವರ್ ಲೊಕೇಶನ್ ಆಧರಿಸಿ ಆತನ ಪತ್ತೆಗಾಗಿ ಬಸವೇಶ್ವರ ನಗರ ಪೊಲೀಸರು ಬಲೆ ಬೀಸಿದ್ದಾರೆ.

ದತ್ತಿ ಪ್ರಶಸ್ತಿಗಾಗಿ ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುಸ್ತಕಗಳಿಗೆ ನೀಡಲಾಗುವ ವಿವಿಧ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಿಗಾಗಿ ಪುಸ್ತಕಗಳ ಆಹ್ವಾನ ಮಾಡಲಾಗಿದೆ. 2025 ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕವನ್ನು ಲೇಖಕರು ಅಥವಾ ಪ್ರಕಾಶಕರು ಕಳಿಸಿಕೊಡಬಹುದಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ ತಿಳಿಸಿದೆ. 2025ನೆಯ ಸಾಲಿನಲ್ಲಿ ಪ್ರಕಟಗೊಂಡಿರುವ ಒಟ್ಟು 55 ದತ್ತಿ ಪುಸ್ತಕಗಳಿಗೆ ವಿವಿಧ ದತ್ತಿ ಪುರಸ್ಕಾರವನ್ನು ಕಸಾಪ ನೀಡುತ್ತಿದೆ. ಅದಕ್ಕಾಗಿ ಬೇರೆ ಬೇರೆ ದತ್ತಿ ದಾನಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ನಿಧಿಯನ್ನು ಸ್ಥಾಪಿಸಿದೆ. ಇದಕ್ಕಾಗಿ 59 ವಿವಿಧ ಪ್ರಕಾರಗಳ ಪುಸ್ತಕವನ್ನು ಆಹ್ವಾನಿಸಲಾಗಿದೆ. ಪ್ರತಿ ದತ್ತಿ ಪ್ರಶಸ್ತಿಯ ಪ್ರವೇಶಕ್ಕೆ ತಲಾ ಮೂರು ಪುಸ್ತಕ , ಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ಬರೆದು ಆಡಳಿತಾಧಿಕಾರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು-560 018 ಅವರಿಗೆ ಕಳುಹಿಸಲು ಪ್ರಕಟಣೆಯಲ್ಲಿ ಕೋರಿದೆ.

ಬೆಂಗಳೂರಿನ ಕೈಗಾರಿಕೆಗಳಿಂದ ಹರಿದು ಬರುವ ತ್ಯಾಜ್ಯ। ರಸ್ತೆ ಬದಿ ಶೌಚಾಲಯದ ನೀರು ನದಿಗೆ ಸೇರ್ಪಡೆ

ಸಂಗಮದಲ್ಲಿ ಐಕ್ಯವಾಗುವ ಕಲುಷಿತ ನೀರು

ಎಸ್. ರುದ್ರೇಶ್ವರ

ದಿಗಂತ ವಿಶೇಷ

ರಾಮನಗರ: ಪ್ರವಾಸಿ ತಾಣವಾದ ಕನಕಪುರ ತಾಲೂಕಿನ ಸಂಗಮದಲ್ಲಿ ಕಾವೇರಿ ಮತ್ತು ಅರ್ಕಾವತಿ ನದಿ ಸಂಗಮವಾಗುತ್ತದೆ. ಇದರ ಜತೆಗೆ ಬೆಂಗಳೂರಿನ ಪ್ರಮುಖ ಕೈಗಾರಿಕಾ ಪ್ರದೇಶವಾಗಿರುವ ಪೀಣ್ಯದ ಮೂಲಕ ಹಾಯ್ದು ಬರುವ ತ್ಯಾಜ್ಯ ನೀರು ಅರ್ಕಾವತಿ ನದಿಯಲ್ಲಿ ಸೇರ್ಪಡೆಗೊಂಡು ಮಲಿನವಾಗುತ್ತಿದೆ.

ಈ ನದಿಗಳು ಮಲೀನವಾಗುವ ಕುರಿತು ಮಾಲಿನ್ಯ ನಿಯಂತ್ರಣ ಮಂಡಳಿ ಕೂಡ ಪ್ರತಿವರ್ಷವೂ ತನ್ನ ವರದಿಯಲ್ಲಿ ಹೇಳುತ್ತಿದೆ. ಆದರೂ ಕೂಡ ಬೆಂಗಳೂರು ನಗರದಿಂದಲೇ ಕಲುಷಿತಗೊಂಡು ಹರಿಯುವ ಅರ್ಕಾವತಿ ನದಿ, ರಾಮನಗರ ಪಟ್ಟಣದ ಮಧ್ಯಭಾಗದಲ್ಲಿ ಹರಿದು ಹೋಗುತ್ತದೆ.ಇಷ್ಟೇ ಅಲ್ಲದೆ, ರಾಮನಗರ ಪಟ್ಟಣದ ರಸ್ತೆಯ ಎರಡೂ ಬದಿಯಲ್ಲೂ ಇರುವ ಶೌಚಾಲಯದ ತ್ಯಾಜ್ಯವನ್ನು ನೇರವಾಗಿ ನದಿಗೆ ಬಿಡಲಾಗುತ್ತಿದೆ. ರಾಮನಗರ ಬಿಟ್ಟು ಮುಂದಕ್ಕೆ ಹರಿಯುವ ವೇಳೆಗೆ ಅರ್ಕಾವತಿ ಮಾಲಿನ್ಯ ಮತ್ತಷ್ಟು ಹೆಚ್ಚಾಗುತ್ತದೆ. ಕನಕಪುರ ತಾಲೂಕಿನ ದೊಡ್ಡಮುದವಾಡಿ ಗ್ರಾಮದ ಬಳಿ ಬೆಂಗಳೂರಿನ ಸಮಗ್ರ ತ್ಯಾಜ್ಯ ನೀರು ವೃಷಭಾವತಿ ನದಿ ಬೈರಮಂಗಲ ಕೆರೆ ಮೂಲಕ ಹಾಯ್ದು ಬಂದು ಅರ್ಕಾವತಿ ಯನ್ನು ಸೇರುತ್ತದೆ. ಇಲ್ಲಿಗೆ ಅರ್ಕಾವತಿ ನದಿ ಮಾಲಿನ್ಯ ದುಪ್ಪಟ್ಟಾಗುತ್ತದೆ. ಬೇಸಿಗೆಯ ಹಿನ್ನೆಲೆಯಲ್ಲಿ ಅರ್ಕಾವತಿ, ವೃಷಭಾವತಿ ನದಿಯಲ್ಲಿ ಮಳೆಯ ನೀರು ಹರಿಯುತ್ತಿಲ್ಲ, ಬಹುತೇಕ ಚರಂಡಿ ನೀರುಗಳೇ ತುಂಬಿವೆ. ಕಲುಷಿತ ನೀರಿನ ಆಗರವಾಗಿರುವ ಅರ್ಕಾವತಿ ನದಿ ಸಂಗಮದಲ್ಲಿ ಕಾವೇರಿ ನದಿಯನ್ನು ಸೇರುತ್ತದೆ. ಈ ಮೊದಲು ಕನಕಪುರ ತಾಲೂಕಿನ ಮಡಿವಾಳ ಗ್ರಾಮದ ಸಮೀಪ ಇರುವ ಅರಣ್ಯ ಪ್ರದೇಶವನ್ನು ಬಳಸಿಕೊಂಡು ಹೋಗಿ ಸಂಗಮದಲ್ಲಿ ಕಾವೇರಿಯೊಂದಿಗೆ ಲೀನವಾಗುತ್ತದೆ. ಮಗ್ಗೂರು ಅರಣ್ಯ ಪ್ರದೇಶ ಈ ಮಡಿವಾಳ ಗ್ರಾಮದ ಸಮೀಪವೇ ಇದೆ.





ನದಿ ಪಾತ್ರದ ಜನರ ಆರೋಗ್ಯದ ಮೇಲೂ ಪರಿಣಾಮ

ನದಿಯ ಕೆಳಭಾಗದಲ್ಲಿರುವ ಕನಕಪುರ ಜನರ ಆರೋಗ್ಯದ ಮೇಲೂ ಇದು ದುಷ್ಪರಿಣಾಮ ಬೀರಲಿದೆ. ಕಾಡಾನೆ ಸಾವಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುಮಾರಸ್ವಾಮಿ ತಿಳಿಸಿದರು. ಕನಕಪುರ ತಾಲೂಕಿನಲ್ಲಿ ಹರಿಯುವ ಕಾವೇರಿ ಮತ್ತು ಅರ್ಕಾವತಿ ನದಿಗಳ ನೀರಿನ ಗುಣಮಟ್ಟ ಪರಿಶೀಲಿಸಬೇಕು. ಬೆಂಗಳೂರು ಬಿಡಬ್ಲುಎಸ್‌ಬಿ ಕಲುಷಿತ ನೀರನ್ನು ಸ್ವಚ್ಛಗೊಳಿಸದೆ ಜನ ಮತ್ತು ಜಾನುವಾರು ಮತ್ತು ವನ್ಯಜೀವಿಗಳ ಜೀವಕ್ಕೆ ಎರವಾಗುತ್ತಿವೆ. ಮಾಲಿನ್ಯ ನಿಯಂತ್ರಣ ಮಂಡಳಿ ಮೌನವಾಗಿದೆ.ಕೂಡಲೇ ಕ್ರಮವಹಿಸಬೇಕು ಎಂದರು.

ವನ್ಯಜೀವಿಗಳ ಜೀವಕ್ಕೆ ಆಪತ್ತು: ಕಾವೇರಿ ವನ್ಯಜೀವಿ ವಲಯ ಮತ್ತು ಬನ್ನೇರುಘಟ್ಟ ವನ್ಯಜೀವಿ ವಲಯದ ನಡುವೆ ಸಂಪರ್ಕವಿದೆ. ಈ ಎರಡೂ ಅರಣ್ಯದ ನಡುವೆ ಕಾಡಾನೆಗಳ ಸಂಚಾರ ವ್ಯಾಪಕವಾಗಿರುತ್ತವೆ. ಈ ಎರಡೂ ಅರಣ್ಯ ಪ್ರದೇಶದಲ್ಲಿ 600ಕ್ಕೂ ಹೆಚ್ಚು ಕಾಡಾನೆಗಳಿವೆ ಎಂದು ಅಂದಾಜಿಸಲಾಗಿದೆ. ಇನ್ನು ಕನಕಪುರದ ಸಂಗಮ, ಮಗ್ಗೂರು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ನೂರಕ್ಕೂ ಹೆಚ್ಚು ಕಾಡಾನೆಗಳಿವೆ. ಬೇಸಿಗೆ ಹಿನ್ನೆಲೆಯಲ್ಲಿ ಅರಣ್ಯದೊಳಗಿನ ಕಟ್ಟೆಗಳಲ್ಲಿ ನೀರು ಬರಿದಾಗಿದೆ. ಕುಡಿಯುವ ನೀರಿಗಾಗಿ ಕಾಡಾನೆಗಳು ನದಿ ಪಾತ್ರಕ್ಕೆ ಹರಸಿಕೊಂಡು ಬರುತ್ತಿವೆ. ಇತ್ತೀಚಿಗೆ ಸಂಗಮದ ಬಳಿ ಕಾವೇರಿ ನದಿಯಲ್ಲಿ ಒಂಟಿಸಲಗ ಪ್ರವಾಸಿಗರನ್ನು ಅಟ್ಟಾಡಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ನೀರಿಗಾಗಿ ಹರಸಿ ಬರುವ ಕಾಡಾನೆಗಳು ಅನಿವಾರ್ಯವಾಗಿ ಅರ್ಕಾವತಿ ನದಿಯಲ್ಲಿನ ಕಲುಷಿತ ನೀರನ್ನು ಕುಡಿಯಬೇಕಾಗಿದೆ.

ಕಾಡಾನೆಗಳಿಗೂ ಬಹು ಅಂಗಾಂಗ ವೈಫಲ್ಯ

ಮಗ್ಗೂರು ಅರಣ್ಯ ಪ್ರದೇಶದಲ್ಲಿ ಕಾಡಾನೆ ಬಹು ಅಂಗಾಂಗ ವೈಫಲ್ಯದಿಂದ ಸಾವಿಗೀಡಾಗಿವೆ. ಅಂಗಾಂಗ ವೈಫಲ್ಯಕ್ಕೆ ನಿಖರವಾದ ಕಾರಣ ತಿಳಿಯಲು ಆನೆಯ ಹೊಟ್ಟೆಯಲ್ಲಿ ಸಿಕ್ಕ ನೀರು ಹಾಗೂ ಇನ್ನಿತರ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅಲ್ಲಿಂದ ವರದಿ ಬಂದ ಬಳಿಕ ಆನೆಯ ಸಾವಿಗೆ ಸ್ಪಷ್ಟಕಾರಣ ದೊರೆಯಲಿದೆ ಎಂದು ಮಗ್ಗೂರು ವಲಯದ ಕಾವೇರಿ ವನ್ಯಜೀವಿ ಧಾಮದ ಆರ್‌ಎಫ್‌ಒ ರಾಜೇಂದ್ರಸ್ವಾಮಿ ತಿಳಿಸಿದರು.

ಮೃತರ ಕುಟುಂಬಕ್ಕೆ ನೆರವು



ಹೊಸಕೋಟೆ: ತಾಲೂಕಿನ ದೊಡ್ಡ ಕೊರಟಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಶಶಿಕುಮಾರ್ ಅಕಾಲಿಕ ನಿಧನಹೊಂದಿದ ವಿಷಯ ತಿಳಿದ ಬಮುಲ್ ನಿರ್ದೇಶಕ ಬಿ.ವಿ ಸತೀಶ್‌ಗೌಡರು ಮೃತನ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ದೊಡ್ಡಕೊರಟಿ ಗ್ರಾಮದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶಶಿಕುಮಾರ್ ಅಕಾಲಿಕವಾಗಿ ನಿಧನರಾಗಿದ್ದಾರೆ. ಬಮುಲ್ ನಿರ್ದೇಶಕರಾದ ಬಿ.ವಿ ಸತೀಶ್‌ಗೌಡರು ವ್ಯಯುಕ್ತಿಕವಾಗಿ ಒಂದು ಲಕ್ಷ ರೂ. ಮೃತನ ಪತ್ನಿ ಗಾಯಿತ್ರಿ ಅವರಿಗೆ ವಿತರಿಸಿದರು. ಹಾಲು ಉತ್ಪಾದಕರ ಕಷ್ಟ, ಸುಖಗಳಿಗೆ ಬಮುಲ್ ಜತೆಯಾಗಿ ನಿಲ್ಲಲ್ಲಿದೆ. ಬೆಂಗಳೂರು ಹಾಲು ಒಕ್ಕೂಟದಿಂದ ಮೃತನ ಕುಟುಂಬಕ್ಕೆ ಸಿಗಬೇಕಿರುವ ಮರಣ ಪರಿಹಾರ ನಿಧಿಯನ್ನು ಶೀಘ್ರ ದೊರಕಿಸಿಕೊಡುವುದಾಗಿ ತಿಳಿಸಿದರು. ಹೊಸಕೋಟೆ ಡೇರಿ ವ್ಯವಸ್ಥಾಪಕ ಶ್ರೀರಾಮ್, ಬಮುಲ್ ವೈದ್ಯ ಡಾ.ಸಂತೋಷ್ ಕುಮಾರ್ ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

ಶಿಶು ಮರಣ ತಡೆಗೆ ಶ್ರಮಿಸಿ



ದೇವನಹಳ್ಳಿ: ಗ್ರಾಮಾಂತರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಾಸಂತಿ ಅಮರ್ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ಆರ್‌ಬಿಎಸ್‌ಕೆ 3ನೇ ಮತ್ತು 4ನೇ ತ್ರೈಮಾಸಿಕ ಸಭೆ ನಡೆಸಿದರು. ಡಾ. ವಾಸಂತಿ ಅಮರ್ ಅವರು ಮಾತನಾಡಿ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವನ್ನು ಬಲಪಡಿಸಲು ಮತ್ತು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಅಂಗನವಾಡಿಗಳು ಮತ್ತು ಶಾಲೆಗಳ ಮಕ್ಕಳಿಗೆ ಉತ್ತಮ ವೈದ್ಯಕೀಯ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದರಿಂದಾಗಿ ರೋಗಗಳನ್ನು ಆರಂಭಿಕ ಹಂತದಲ್ಲಿ ಗುರುತಿಸಲು ಮತ್ತು ಸಕಾಲಿಕ ಚಿಕಿತ್ಸೆ ನೀಡಲು ಸಾಧ್ಯ ಎಂದು ಹೇಳಿದರು. ಶಿಶು ಮರಣವನ್ನು ಕಡಿಮೆ ಮಾಡಲು ಸಹಾಯ ಮಾಡಲು ಹೃದಯ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ವಿಶೇಷ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಯನ್ನು ಒದಗಿಸಬೇಕು ಎಂದು ಸಲಹೆ ನೀಡಿದರು. ಸಭೆಯಲ್ಲಿ ಆರೋಗ್ಯ ಇಲಾಖೆ ಅಧಿಕಾರಗಳು ಮತ್ತು ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಶತಾಯುಷಿ ನಾರಾಯಣಸ್ವಾಮಿ ನಿಧನ



ತಾವರೆಕೆರೆ: ಹೊಸಕೋಟೆ ತಾಲೂಕು ಹರಳೂರು ಗ್ರಾಮದ ರಂಗ ಭೂಮಿ ಕಲಾವಿದ ಹಾಗೂ ಹಾರ್ಮೋನಿಯಂ ವಾದಕರು, ನಿವೃತ್ತ ಅರಣ್ಯ ರಕ್ಷಕರಾದ ಫಾರೆಸ್ಟ್ ನಾರಾಯಣಸ್ವಾಮಿ (104) ಅವರು ಮಂಗಳವಾರು ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರಿಗೆ ಐವರು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೊಸಕೋಟೆ ತಾಲೂಕು ಕಲಾವಿದರ ಕ್ಷೇಮಾಭಿವೃದ್ಧಿ ಸಂಘ ಸಂತಾಪ ಸೂಚಿಸಿದೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು. ಅಂತ್ಯಕ್ರಿಯೆಯಲ್ಲಿ ಅಪಾರ ಬಂಧು ಬಳಗ ಭಾಗವಹಿಸಿದ್ದರು.

ಕೊರಟಿ ಸರಕಾರಿ ಪ್ರೌಢ ಶಾಲೆಯಲ್ಲಿ ಗುರುವಂದನೆ

ಮಾರ್ಗದರ್ಶನದಿಂದ ಪ್ರಗತಿ

ತಾವರೆಕೆರೆ: ಕೊರಟಿ ಸರ್ಕಾರಿ ಪ್ರೌಢಶಾಲೆಯ 1997-98ನೇ ಸಾಲಿನ 10ನೇ ತರಗತಿಯ ಹಳೆಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ನೆರವೇರಿತು. ಸುಮಾರು 28 ವರ್ಷದ ನಂತರ ಒಂದೆಡೆ ಸೇರಿದ ಸಹಪಾಠಿಗಳು, ತಮಗೆ ಅಕ್ಷರ ಕಲಿಸಿದ ಗುರುವನ್ನು ಗೌರವಿಸಿ ಕೃತಜ್ಞತೆಯನ್ನು ಸಮರ್ಪಿಸಿದರು.

ತಾಲೂಕಿನ ನಂದಗುಡಿ ಹೋಬಳಿಯ ಕೊರಟಿ ಶಾಲಾ ಆವರಣದಲ್ಲಿ ನಡೆದ ಈ ವಿಶೇಷ ಸಮಾರಂಭವನ್ನು ಅಂದಿನ ಶಿಕ್ಷಕರಾದ ಚಿಕ್ಕಪ್ಪಯ್ಯ, ಭಾಸ್ಕರ್‌ಹೆಗ್ಡೆ, ವೆಂಕಟರಾಮನ್, ಮಲ್ಲಿಕಾರ್ಜುನ್, ಪರಮೇಶ್ವರ್ ನಾಯಕ್, ನಾರಾಯಣಸ್ವಾಮಿ ಸೇರಿದಂತೆ ವಿದ್ಯಾರ್ಥಿಗಳು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸನ್ಮಾನ ಸ್ವೀಕರಿಸಿದ ನಿವೃತ್ತ ಶಿಕ್ಷಕ ಚಿಕ್ಕಪ್ಪಯ್ಯ ಮಾತನಾಡಿ, 28ವರ್ಷ ಕಳೆದ ನಂತರವೂ ವಿದ್ಯಾರ್ಥಿಗಳು ನಮ್ಮನ್ನು ನೆನಪಿಟ್ಟುಕೊಂಡು, ಈ ರೀತಿ ಗೌರವಿಸುತ್ತಿರುವುದು ನಮ್ಮಜೀವನದ ಸಾರ್ಥಕ ಕ್ಷಣವಾಗಿದೆ ಎಂದರು. ಶಿಕ್ಷಕರಾದ ಭಾಸ್ಕರ್ ಹೆಗಡೆ ಮಾತನಾಡಿ, ಇಂತಹ ಗುರುವಂದನಾ ಕಾರ್ಯಕ್ರಮ ನಾನು ಎಲ್ಲಿಯೂ ನೋಡೆ ಇಲ್ಲ, ನಾನು ಬಾರದೆ ಹೋಗಿದ್ದರೆ ಅಪಾರ ನಷ್ಟವಾಗುತ್ತಿತ್ತು. ಕಾರ್ಯಕ್ರಮದಿಂದ ನನಗೆ ಬಹಳ ಸಂತೋಷವಾಯಿತು ಎಂದರು. ಸಹಪಾಠಿಗಳು ದಶಕಗಳ ಬಳಿಕ ಪರಸ್ಪರ ಕೈಕುಲುಕಿ, ಆಲಂಗಿಸಿ ಬಾಲ್ಯದ ದಿನಗಳಿಗೆ ಜಾರಿದ್ದರು. ಗುರು ಬ್ರಹ್ಮಗುರು ವಿಷ್ಣು ಎಂಬ ಶ್ಲೋಕದೊಂದಿಗೆ ಆರಂಭವಾದ ಕಾರ್ಯಕ್ರಮ ಹಳೆಯ ವಿದ್ಯಾರ್ಥಿಗಳ ಒಗ್ಗಟ್ಟು ಮತ್ತು ಗುರುಗಳ ಮೇಲಿರುವ ಭಕ್ತಿಗೆ ಕನ್ನಡಿಯಾಗಿತ್ತು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಚಿಕ್ಕಪ್ಪಯ್ಯ, ಭಾಸ್ಕರ್ ಹೆಗ್ಡೆ, ವೆಂಕಟರಾಮನ್, ಮಲ್ಲಿಕಾರ್ಜುನ್, ಪರಮೇಶ್ವರ್ ನಾಯಕ್, ನಾರಾಯಣಸ್ವಾಮಿ, 1997-98ನೇ ಸಾಲಿನ ಹಳೆಯ ವಿದ್ಯಾರ್ಥಿಗಳಾದ ಮುನಿರಾಜು, ಆನಂದ, ಮುನಿವೆಂಕಟರಾಜು, ಮಂಜುನಾಥ್, ಶ್ರೀನಿವಾಸ್, ನಂಜುಂಡಸ್ವಾಮಿ, ಎಂ.ಕೆ.ಶ್ರೀನಿವಾಸ್, ನಾಗೇಶ್, ನಾರಾಯಣಸ್ವಾಮಿ, ಚನ್ನಮರಿ, ಸುರೇಶ್, ಮಾರೇಗೌಡ, ವಿನೋದಾ, ಯಶೋಧಾ, ಮಾಲಾ, ರಾಧಾ, ಮಂಜುಳಾ, ಮಮತಾ, ಶೈಲ ಸೇರಿದಂತೆ ವಿದ್ಯಾರ್ಥಿಗಳ ಕುಟುಂಬಸ್ಥರು ಹಾಜರಿದ್ದರು.



ಜೈಲಿನಲ್ಲಿ ಕುಟುಂಬದ ಜತೆ ದರ್ಶನ್ ಮಾತುಕತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್‌ನನ್ನು ಮಂಗಳವಾರ ಅವರ ಪತ್ನಿ ವಿಜಯಲಕ್ಷ್ಮೀ, ಮಗ ವಿನೀಶ್ ಸೇರಿದಂತೆ ಒಟ್ಟು ನಾಲ್ವರು ಕುಟುಂಬಸ್ಥರು ಮುಖಾಮುಖಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಕೊಲೆ ಆರೋಪದ ಹಿನ್ನೆಲೆಯಲ್ಲಿ ಎರಡನೇ ಬಾರಿ ಜೈಲು ಸೇರಿದ ಬಳಿಕ, ಬರೋಬ್ಬರಿ ಎಂಟು ತಿಂಗಳ ನಂತರ ತಮ್ಮ ಕುಟುಂಬದವರ ಮುಖ ನೋಡಿದ ದರ್ಶನ್ ಭಾವುಕರಾಗಿದ್ದಾರೆ. ಮೇ.19ರಂದು ದರ್ಶನ್ ದಂಪತಿಯ 23ನೇ ವಿವಾಹ ವಾರ್ಷಿಕೋತ್ಸವವಾಗಿದ್ದರಿಂದ ಪತ್ನಿ ವಿಜಯಲಕ್ಷ್ಮೀ ಹಾಗೂ ಮಗ ವಿನೀಶ್ ಅವರು ದರ್ಶನ್‌ಗೆ ಸಿಹಿ ತಿನ್ನಿಸಿ ಶುಭಾಶಯ ಕೋರಿದ್ದಾರೆ. ತಮ್ಮನ್ನು ನೋಡಲು ಬಂದ ಪತ್ನಿ ಮತ್ತು ಮಗನನ್ನು ಕಂಡೊಡನೆ ದರ್ಶನ್ ಅವರನ್ನು ತಬ್ಬಿಕೊಂಡು ಕಣ್ಣೀರು ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಭೇಟಿಯ ಸಂದರ್ಭದಲ್ಲಿ ದರ್ಶನ್ ಅವರ ಆರೋಗ್ಯ ಮತ್ತು ಜೈಲಿನ ಒಳಗಿನ ಪರಿಸ್ಥಿತಿಯ ಕುರಿತು ಕುಟುಂಬಸ್ಥರು ಸುದೀರ್ಘವಾಗಿ ಚರ್ಚಿಸಿದ್ದಾರೆ ಎನ್ನಲಾಗಿದೆ. ದರ್ಶನ್ ಅವರ ಮಾನಸಿಕ ಸ್ಥೈರ್ಯ ತುಂಬುವ ಅಗತ್ಯವಿದೆ. ವಿಶೇಷ ಸಂದರ್ಶನಕ್ಕೆ ಅವಕಾಶ ಮಾಡಿಕೊಡಬೇಕು ಎಂದು ದರ್ಶನ್ ಪತ್ನಿ ಅವರು ಜೈಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದರು. ಈ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಭೇಟಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿದ್ದರು. ಜೈಲಿನ ನಿಯಮಾವಳಿಗಳ ಅನ್ವಯ ನಿಗದಿತ ಸಮಯಕ್ಕೆ ಸರಿಯಾಗಿ ವಿಜಯಲಕ್ಷ್ಮೀ ಅವರು ಕಾರಾಗೃಹಕ್ಕೆ ಆಗಮಿಸಿದ್ದರು. ಪೊಲೀಸರು ಕಟ್ಟುನಿಟ್ಟಾಗಿ ತಪಾಸಣೆ ನಡೆಸಿದ್ದಾರೆ. ಮನೆಯಿಂದ ತಂದಿದ್ದ ಹಣ್ಣು ಹಾಗೂ ಸಿಹಿ ಪದಾರ್ಥಗಳ ಬ್ಯಾಗ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಒಳಗಡೆ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಯಿತು.

ನಟ ದರ್ಶನ್ ವಿವಾಹ ವಾರ್ಷಿಕೋತ್ಸವ

ಕಣ್ಣೇಗೌಡನಹಳ್ಳಿಯಲ್ಲಿ ರಂಗೋಲಿ ಸ್ಪರ್ಧೆ: 750 ಮಹಿಳೆಯರು ಭಾಗಿ

ನಾಡಿನ ಸಂಸ್ಕೃತಿಯ ಪ್ರತೀಕ ರಂಗೋಲಿ

ನೆಲಮಂಗಲ: ರಂಗೋಲಿ ಹಿಂದೂಸಂಸ್ಕೃತಿಯ ಪ್ರತೀಕವಾಗಿದ್ದು ನೆಲಮಂಗಲಉತ್ಸವದ ಪ್ರಯುಕ್ತ ರಂಗೋಲಿ ಸ್ಪರ್ಧೆ ಮಾಡಿರುವುದುಸಂತೋಷವಾಗಿದೆಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಕಣ್ಣೇಗೌಡನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ನೆಲಮಂಗಲ ಉತ್ಸವದ ಹಿನ್ನೆಲೆಯಲ್ಲಿ ಆಯೋಜನೆ ಮಾಡಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡಿ, ಗ್ರಾಮೀಣ ಹೆಣ್ಣುಮಕ್ಕಳು ರಂಗೋಲಿ ಬಿಡುವುದನ್ನು ಹಬ್ಬದಂತೆ ಆಚರಣೆ ಮಾಡುವುದನ್ನು ಕಣ್ಣಾರೆ ಕಂಡಿದ್ದೇವೆ. ಅವರ ಕ್ರಿಯಾಶೀಲತೆ ಶ್ಲಾಘನೀಯ, ಕ್ಷೇತ್ರಕ್ಕೆ 1500 ಕೋಟಿಗೂ ಹೆಚ್ಚು ಅನುದಾನತಂದು ಕೆಲಸ ಪ್ರಗತಿಯಲ್ಲಿದೆ, ಕೇವಲ ಕೆಲಸಗಳಿಗೆ ಮಾತ್ರಸೀಮಿತವಾಗಬಾರದೆಂದರು.

ನೆಲಮಂಗಲ ಉತ್ಸವ ಮಾಡಲಾಗುತ್ತಿದೆ. ಮತ ಕೇಳಲು ಮಾತ್ರ ಶಾಸಕರು ಮನೆ ಬಾಗಿಲಿಗೆ ಬರಬಾರದು, ಅವರ ಕಷ್ಟಸುಖ ಕೇಳಲು ಬರಬೇಕು. ರಂಗೋಲಿ ಸ್ಪರ್ಧೆ ಮೂಲಕ ಪ್ರತಿ ಗ್ರಾಮದ ಮಹಿಳೆಯರನ್ನು ಭೇಟಿ ಮಾಡಲಾಗುತ್ತಿದೆಂದರು. ಮಹಿಳೆಯರು ಬಹಳಷ್ಟು ಆಸಕ್ತಿ ವಹಿಸಿ ರಂಗೋಲಿ ಬಿಡುವ ಜತೆ ತಮ್ಮ ಗ್ರಾಮದಲ್ಲಿ ಆಗಬೇಕಾದ ಕೆಲಸಕಾರ್ಯದ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಸಾವಿರಾರು ಮಹಿಳೆಯರು, ಹೆಣ್ಣು ಮಕ್ಕಳು, ವೃದ್ಧೆಯರು ಸಹ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದಕ್ಕೆ ವಿಶೇಷ ಧನ್ಯವಾದವನ್ನು ತಿಳಿಸುತ್ತೇನೆಂದರು.



ಕಣ್ಣೇಗೌಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷೆ ಲಕ್ಷ್ಮೀದೇವಮ್ಮ ಕೃಷ್ಣಪ್ಪ ಮಾತನಾಡಿ, ಸ್ಪರ್ಧೆ ಮಾಡುವ ಮೂಲಕ ಗ್ರಾಮದಲ್ಲಿ ಮಹಿಳೆಯರು,ಹೆಣ್ಣು ಮಕ್ಕಳು ರಂಗೋಲಿ ಬಗ್ಗೆ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಿದ್ದಾರೆಂದರು. ಕಣ್ಣೇಗೌಡನಹಳ್ಳಿ ಗ್ರಾಮ ಪಂಚಾಯಿತಿಯ ಕೆ.ಜಿ.ಶ್ರೀನಿವಾಸಪುರ, ಕಣ್ಣೇಗೌಡನಹಳ್ಳಿ, ಗಂಗಾಧರನ ಪಾಳ್ಯ, ವೀರನಂಜೀಪುರ, ಓಬ ನಾಯಕನಹಳ್ಳಿ, ವೀರರಾಘವನಪಾಳ್ಯ, ಗಂಡರ ಗೊಳಿಪುರ, ಹುರುಳಿಹಳ್ಳಿಯಲ್ಲಿ 750ಕ್ಕೂ ಹೆಚ್ಚು ಮಹಿಳೆಯರು ರಂಗೋಲಿಯನ್ನು ಬಿಟ್ಟಿದ್ದರು. ಪ್ರಥಮ ಬಹುಮಾನ ಲಾವಣ್ಯ, ರೇಣುಕಾ, ಶೋಭಾ, ನಾರಾಯಣಮ್ಮ, ಲಕ್ಷ್ಮೀ, ರಶ್ಮಿತ, ಸಿಂಧೂ ಶ್ರೀನಿವಾಸ್, ಆಶಾ ಪಡೆದರು. ದ್ವಿತೀಯಬಹುಮಾನವನ್ನು ಸುಮಂಗಳಾ, ಗಂಗಮ್ಮ , ಉಷಾನಾರಾಯಣಸ್ವಾಮಿ, ಮಂಜುಳಾ, ಅನಿತಾ, ಲಾವಣ್ಯ, ಸುಜಾತಾ, ಸೌಮ್ಯ ಪಡೆದುಕೊಂಡಿದ್ದಾರೆ. ತೃತೀಯ ಸ್ಥಾನವನ್ನು ವನಜಾ, ಮಂಗಳಾ, ಉಮಾಲಕ್ಷ್ಮೀ.ವಿ, ಲಿಖಿತಾ. ಎಂ, ರಮ್ಯಾ, ಮಂಜುಳಾ, ಮಮತಾ, ಯಶೋಧಾ ಪಡೆದು ಕೊಂಡಿದ್ದಾರೆ. 750ಕ್ಕೂ ಮಹಿಳೆಯರಿಗೂ ಸಮಾಧಾನಕರ ಬಹುಮಾನ ವಿತರಣೆ ಮಾಡಲಾಯಿತು. ಎನ್‌ಪಿಎ ಅಧ್ಯಕ್ಷ ಎಂ.ಕೆ.ನಾಗರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು, ಕಣ್ಣೇಗೌಡನಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಾರೇಗೌಡ, ಉಷಾ ನಾರಾಯಣಸ್ವಾಮಿ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ, ಯುವಮುಖಂಡ ಶೇಖರ್, ಆನಂದ್, ಮುಖಂಡರಾದ ಚಿಕ್ಕಹನುಮೇಗೌಡ, ಶಿವಣ್ಣ, ಮಂಜುನಾಥ, ಮುನಿರಾಜು, ನರಸಿಂಹಮೂರ್ತಿ, ಮುನಿರಾಮು, ಮನುಕಾಚನಹಳ್ಳಿ ಸೇರಿ ಹಲವರಿದ್ದರು.

ಕನ್ನಡ ಜಾಗೃತಿ ವೇದಿಕೆಯಿಂದ ಕಾನೂನು ಅರಿವು ಕಾರ್ಯಾಗಾರ

ನಾಡುನುಡಿ ಉಳಿವಿಗೆ ಒಗ್ಗಟ್ಟಿನಿಂದ ಶ್ರಮಿಸಿ

ದೊಡ್ಡಬಳ್ಳಾಪುರ: ನಮ್ಮ ಸಂಘಟನೆಯ 33ವರ್ಷದಿಂದ ಕನ್ನಡ ನಾಡು ನುಡಿ ಜಲ ಭಾಷೆ ಗಡಿ ವಿಷಯವಾಗಿ, ಹಾಗೂ ಮಹಿಳೆಯರ ರೈತರ, ದಿನದಲಿತರ ಪರವಾಗಿ, ಸಾಮಾಜಿಕವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ ಎಂದು ಕನ್ನಡ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಮಂಜುನಾಥ ದೇವ್ ಹೇಳಿದರು.

ನಗರದ ಹೊರವಲಯದಲ್ಲಿ ಖಾಸಗಿ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಾಗಾರದಲ್ಲಿ ಮಾತನಾಡಿ, ಕರ್ನಾಟಕದಲ್ಲಿ ಕನ್ನಡಿಗನೆ ಸಾರ್ವಭೌಮತ್ವ ಆಗಬೇಕು. ಕನ್ನಡಿಗರ ಅಸ್ತಿತ್ವ, ಕನ್ನಡಿಗರ ಅಸ್ಮಿತೆ, ನಾಡು ನುಡಿ ಜಲ ಭಾಷಾ ಗಡಿ ವಿಷಯಕ್ಕೆ ಧಕ್ಕೆ ಆದಲ್ಲಿ ಪ್ರತಿಯೊಬ್ಬರೂ ಸಿಡಿದೇಳಬೇಕು ಎಂದರು.

ಅಲ್ಲದೆ, ನಮ್ಮ ಮುಂದಿನ ಹೋರಾಟ, ಖಾಸಗಿ ಕಂಪನಿಯಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ, ಕನ್ನಡ ಶಾಲೆಯನ್ನು ಮುಚ್ಚುತ್ತಿರುವ ಸರ್ಕಾರದ ವಿರುದ್ಧ ಎಂದು ತಿಳಿಸಿದರು. ನಂತರ ಕಾನೂನು ಸಲಹೆಗಾರ ಡಾ.ಎಚ್.ಎಮ್. ವೆಂಕಟೇಶಮೂರ್ತಿ ಮಾತನಾಡಿ, ಸಂಘಟನೆಯ ಹೋರಾಟ, ಪ್ರತಿಭಟನೆ, ಚಳವಳಿಯನ್ನು ಕಾನೂನಿನ ಚೌಕಟ್ಟಿನಲ್ಲಿ ಸಂವಿಧಾನ ಕ್ಕೆ ಧಕ್ಕೆ ಆಗದ ರೀತಿಯಲ್ಲಿ ಮಾಡಬೇಕು. ಮಹಿಳೆಯರು ಮಕ್ಕಳ ಬಗ್ಗೆ ಮತ್ತು ಹಿರಿಯ ನಾಗರಿಕರು ದೇಶದ ಕಾನೂನುಗಳ ಬಗ್ಗೆ ಪ್ರತಿಯೊಬ್ಬರಿಗೂ ಮಾಹಿತಿ ಇರಬೇಕು ಎಂದರು.

ಮಹಿಳಾ ಕಾನೂನು ಸಲಹೆಗಾರದ ಲಕ್ಷ್ಮಿ ಬಡಿಗೇರಿ ಮಾತನಾಡಿ, ಮಹಿಳೆಯರು, ವರದಕ್ಷಣೆ, ಶೋಷಣೆ, ಹೆಣ್ಣು ಮಕ್ಕಳ ರಕ್ಷಣೆ, ಪೋಕ್ಸೋ ಕಾಯ್ದೆ ವಿಷಯಗಳ ಬಗ್ಗೆ ಮಾಹಿತಿ ಹಾಗೂ ಯಾವುದೇ ಸಂದರ್ಭದಲ್ಲಿ ಮಹಿಳೆ ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸಬೇಕು. ಸಂವಿಧಾನದಲ್ಲಿ ಮಹಿಳೆಯರಿಗೆ ಇರುವ ವಿಶೇಷ ಕಾನೂನು ಹಕ್ಕು ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಜಾಗೃತ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕವಿತಾ ಪೇಟೆ ಮಠ, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ವತ್ಸಲ, ಕಾರ್ಯಾಧ್ಯಕ್ಷೆ ಸುಮಾಲಿನಿ ರಾಮಾಚಾರಿ, ಸಂಘಟನಾ ಕಾರ್ಯದರ್ಶಿ ಅಗ್ನಿ ವೆಂಕಟೇಶ್, ಗ್ರಾಮಾಂತರ ಜಿಲ್ಲಾಧ್ಯಕ್ಷರಾದ ನಾಗರಾಜ, ಕಾನೂನು ಸಲಹೆಗಾರರಾದ ವೆಂಕಟೇಶ್ ಮೂರ್ತಿ, ಲಕ್ಷ್ಮಿ ಬೆಟಗೇರಿ ಇದ್ದರು.



ಹಾಲಿನ ದರ ಹೆಚ್ಚಿಸಿ, ಪಶು ಆಹಾರ ದರ ಉಳಿಸಲು ಆಗ್ರಹ

ಬಮುಲ್ ಬಳಿ ಗೋಪಾಲಕರ ಪ್ರತಿಭಟನೆ

ಆನೇಕಲ್: ಹಾಲಿನ ದರವನ್ನು 35ರಿಂದ 50ರೂ. ವರೆಗೆ ಹೆಚ್ಚಿಸಬೇಕು. ಪಶು ಆಹಾರ ದರ (ಕೆಎಂಎಫ್ ಆಹಾರ) ಇಳಿಸಬೇಕೆಂದು ಆಗ್ರಹಿಸಿ ಕರುನಾಡು ರೈತ ಗೋಪಾಲಕರ ಸಂಘ ತಾಲೂಕು ಕಚೇರಿ ಮುಂಭಾಗ ಹಾಲಿನ್ನು ತಲೆ ಮೇಲೆ ಸುರಿದುಕೊಂಡು ಪ್ರತಿಭಟನೆ ನಡೆಸಿದರು.

ಕರುನಾಡು ರೈತ ಗೋಪಾಲಕರ ಸಂಘದ ನೂರಾರು ಕಾರ್ಯಕರ್ತರು, ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ವೇಳೆ ಬಮುಲ್ ನಿರ್ದೇಶಕ ಆರ್. ಕೆ.ರಮೇಶ್ ಮನವಿ ಪತ್ರ ಸ್ವೀಕರಿಸಿ, ಮಾತನಾಡಿ, ಗೋಪಾಲಕರ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು. ಗೋಪಾಲರು ಹಾಲಿನ ದರ ಹೆಚ್ಚಿಸಬೇಕೆಂದು ಹಲವು ಸಲ ಬೇಡಿಕೆ ಸಲ್ಲಿಸಿದ್ದಾರೆ. ಆ ಬೇಡಿಕೆ ನ್ಯಾಯಯುತವೂ ಆಗಿದೆ. ಈ ನಿಟ್ಟಿನಲ್ಲಿ ಕೆಎಂಎಫ್ ಸಭೆಯಲ್ಲಿ ಗೋಪಾಲಕರ ಬೇಡಿಕೆಯನ್ನು ಪ್ರಸ್ತಾಪಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಬಮುಲ್ ಆನೇಕಲ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ನಂತರ ರೈತ ಗೋಪಾಲಕರು, ತಾಲೂಕು ಕಚೇರಿವರೆಗೂ ಪ್ರತಿಭಟನಾ ಜಾಥಾ ನಡೆಸಿ ತಹಶೀಲ್ದರ್ ಶಶಿಧರ್ ಮಾಡ್ಯಳ್ ಅವರಿಗೆ ಮನವಿಪತ್ರ ಸಲ್ಲಿಸಿದರು. ಇಂದು ಹಾಲಿನ ದರ ಹೆಚ್ಚಳಕ್ಕೆ ಒತ್ತಾಯಿಸಿ ತಲೆಮೇಲೆ ಹಾಲು ಸುರಿದುಕೊಂಡಿದ್ದೇವೆ. ಮುಂದಿನ 15ದಿನದೊಳಗೆ ಹಾಲಿನ ದರ ಹೆಚ್ಚಿಸದಿದ್ದರೆ ಕೆಎಂಎಫ್ ಕೇಂದ್ರ ಕಚೇರಿ ಮುಂಭಾವ ಉಪಾವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಕರುನಾಡು ಗೋಪಾಲಕರ ಸಂಘದ ರಾಜ್ಯಾಧ್ಯಕ್ಷ ಎಸ್.ಮುನಿರಾಜು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಕರುನಾಡು ರೈತ ಗೋಪಾಲಕರ ಸಂಘದ ಉಪಾಧ್ಯಕ್ಷ ಮುರುಗೇಶ್, ಕಾರ್ಯದರ್ಶಿ ವೆಂಕಟೇಶ್, ಶ್ರೀನಿವಾಸ್, ಚಿಕ್ಕಣ್ಣ, ನಾರಾಯಣಪ್ಪ, ಮುನಿರಾಜು(ರಾಜಣ್ಣ), ಹರ್ಷ, ಅಮರನಾಥ್, ಮುನಿವೆಂಕಟಪ್ಪ, ರಮೇಶ್ ರೆಡ್ಡಿ , ತಾಲೂಕು ಘಟಕದ ಅಧ್ಯಕ್ಷ ದಿಲೀಪ್‌ಗೌಡ, ಗೌರವಾಧ್ಯಕ್ಷ ನಾಗಪ್ಪ, ದರ್ಶನ್, ಪ್ರವೀಣ್(ಅಪ್ಪ), ಮನೋಜ್, ಲಕ್ಷ್ಮಣ್, ಅಶೋಕಣ್ಣ, ಅಭಿ, ಜೋಗಿ, ಅಳ್ಳಳ್ಳಪ್ಪ , ಉಪ ವ್ಯವಸ್ಥಾಪಕ ಡಾ.ಸಿ.ಜಿ.ಸುರೇಶ್, ಹಾಗೂ ರೈತರು ಹಾಜರಿದ್ದರು.



ಹೆಸರು ಬದಲಾವಣೆ

[illegible]

ಗೌರವಾನ್ವಿತ ಮಾನ್ಯ 41ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬೆಂಗಳೂರು ನಗರ
ಸಿ.ಮಿಸ್.ನಂ: 5137/2026

[illegible]

ಅರ್ಜಿದಾರರ ಪರ ವಕೀಲರು: ಬಿ. ಅಂಜನಪ್ಪ

ಗೌರವಾನ್ವಿತ 25ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬೆಂಗಳೂರು ನಗರ
C.MISC. No. 6444/2025

[illegible]

ಅರ್ಜಿದಾರರ ಪರ ವಕೀಲರು: ಬಿ. ಅಂಜನಪ್ಪ

IN THE COURT OF MOTOR ACCIDENT CLAIMS TRIBUNAL AT BENGALURU
MISC NO.004/2026 (SCCH-17)

BETWEEN: P. Lilly ... PETITIONER
AND: A.Y. Akshay Prasad & another ... RESPONDENTS

NOTICE TO RESPONDENT No.1

A.Y. Akshay Prasad, S/o: Yadavendra Prasad M.N, No.711, 9th Cross, 8th Main, B.T.M. Layout, 2nd Stage, Bengaluru-560076.

Take notice that the petitioner has filed the above claim petition against the Respondents for the compensation of Rs.8,00,000/- for the injury sustained by the petitioner in a Road Traffic Accident that occurred on 11-11-2022 at about 9.00 p.m., On 14th main road, 12th cross junction, J.P. Nagar, Bengaluru, Involving Vespa Scooter bearing No. KA-03-KD-3899. The Respondent No.1 above named are hereby directed to appear before this Hon'ble Court either in person or through the pleader on **22/06/2026** before SCCH-17 at **11:00 A.M.**, to defend the above case failing which the matter will be determined as Ex-parte.

Given under my hand & seal of the court on this 04/05/2026

By order of the Court, Assistant Registrar, Court of Small Causes, Bangalore

M. SHIVARAMA, Advocate
No.119, 1st Floor, Amar Tower, Gandhinagar, Bengaluru

ಫಾರ್ಮ್ ನಂ. ಯುಆರ್‌ಸಿ–2
ಚಾಪ್ಟರ್ 21, ಭಾಗ 1ರ ಅಡಿಯಲ್ಲಿ ನೋಂದಣಿ ಕುರಿತಂತೆ ನೀಡುವ ಜಾಹೀರಾತು
[ಕಂಪನಿಗಳ ಕಾಯ್ದೆ–2013ರ ಸೆಕ್ಷನ್ 374(ಬಿ) ಮತ್ತು ಕಂಪನಿಗಳ (ರಿಜಿಸ್ಟ್ರಾರ್ ಅವರ ಅಧಿಕಾರ) ನಿಯಮಾವಳಿ–2014ರ ನಿಯಮ 4(1) ಅನುಸಾರ ಪಾರ್ಟ್ 1 ಚಾಪ್ಟರ್ 21ರ ಅಡಿಯಲ್ಲಿ]

1. ಕಂಪನಿಗಳ ಕಾಯ್ದೆ–2013ರ ಸೆಕ್ಷನ್ 366ರ ಉಪ ಸೆಕ್ಷನ್ (2) ರ ಅನ್ವಯ ಈ ಮೂಲಕ ನೋಟಿಸ್ ನೀಡಲಾಗುತ್ತಿದ್ದು, ರಿಜಿಸ್ಟ್ರಾರ್ ಆಫ್ ಕಂಪನೀಸ್ ಬೆಂಗಳೂರು ಅವರಿಗೆ ಕರಿಷ್ಮಾಸ್ ಹೋಂ ಡೆಕೋರ್ ಎಲ್‌ಎಲ್‌ಪಿ (ಎಲ್‌ಎಲ್‌ಪಿಐಎನ್: ಎಎಎ–0673), ಎಂಬ ಲಿಮಿಟೆಡ್ ಲಯಾಬಿಲಿಟಿ ಪಾರ್ಟ್‌ನರ್‌ಶಿಪ್ ಹೆಸರಿನ ಕಂಪನಿಯನ್ನು ಲಿಮಿಟೆಡ್ ಲಯಾಬಿಲಿಟಿ ಪಾರ್ಟ್‌ನರ್‌ಶಿಪ್ ಕಾಯ್ದೆ–2008ರ ಅಡಿಯಲ್ಲಿ, ಕಂಪನಿಗಳ ... [illegible]

[illegible]

ಅರ್ಜಿದಾರರ ಹೆಸರು: ಕರಿಷ್ಮಾಸ್ ಹೋಂ ಡೆಕೋರ್ ಎಲ್‌ಎಲ್‌ಪಿ
ದಿನಾಂಕ: 20ನೇ ಮೇ 2026

IN THE COURT OF THE III ADDITIONAL PRINCIPAL JUDGE FAMILY COURT AT BENGALURU
MC No. 5350/2025

BETWEEN : Anusha. U ...Petitioner
AND : Vinay. V ...Respondent

NOTICE TO RESPONDENT

Sri. Vinay. V Aged about 28 years, S/o. Venkatesh. S, R/at 9, Hindustani Granet Cross Road, Uttarahalli, Bengaluru-560061.

Whereas, the petitioner has filed the above case against you seeking Decree of Divorce. You are hereby summoned to appear before this Hon'ble Court in person or by a pleader duly instructed and able to answer all material question relating to above case, **on 09.07.2026 at about 11.00 A.M** to defend the above case.

If you fail to appear before this court on that day either in person or through your counsel, the case will be heard and determined in your absence.

Given under my hand and seal of the court this 23rd day of April 2026.

By Order of the Court, Sheristedar, Family Court, Bengaluru.

Address of the Petitioner Advocate
V. Mahesh, Advocate
No. 18, 2nd 'A' Main, Ashwathkatte Road, Ittamadu, Bengaluru-560085.
Ph. No. 9945017272

ಜಾಹೀರಾತಿಗಾಗಿ ಸಂಪರ್ಕಿಸಿ:
9845438807, 9611755391

IN THE COURT OF THE HON'BLE VI ADDL PRINCIPAL JUDGE FAMILY COURT, NYAYADEGULA, AT BENGALURU M.C. No. 6068/2025

BETWEEN:
Mrs. JENNIFER MERCY.D Aged about 25 years, D/o Daniel. S.Residing at No 28, 1st Cross, Friend Circle Laggere, Rajarajeshwarinagar BANGALORE - 58. **..PETITIONER**
AND
Mr. Rangaswamy A.k.aged About 35 Years,s/o Kariyappa, Agrahara, Nagenahalli,Chikkamagalur-577168..**Respondent**

Summons To Respondent Through Paper Publication

To: Mr. Rangaswamy A.k.aged About 35 Years,s/o Kariyappa, Agrahara, Nagenahalli, Chikkamagalur-577168

Where as the aforementioned Petitioner Mrs. Jennifer Mercy. D, has filed a petition in M.C. No. 6068 of 2025 before the Hon'ble VI Addl Principal Judge Family court, against you for the Divorce under section 27,(1), (B), (D) R/w sec 7 of F C act and Special Marriage act and other Consequential relief the above Case is posted for appearance of respondent. Therefore, you are hereby summoned to appear before this Hon'ble Court on 17.06.2026 at 11.00 A.M., Either in person or by Pleader duly instructed without fail, failing which matter will be heard and determined in your absence. Given under my hand and seal of the court, is 09/04/of 2026.

By the Order of the Court
ADDRESS FOR SERVICE,
S. RAGHUNANDAN, Advocate. MOB: 7019390793
Office: 16th 'B' Main Road, 3rd Stage, 16th 'B' Cross, Yelahanka New Town, BANGALORE-560064

IN THE COURT OF THE PRINCIPAL CIVIL JUDGE AND JMFC, AT MAGADI
CRL.MISC.No.85 /2026

BETWEEN: 1. Siddalingappa, S/o Late. Revanna, aged about 63 Years, R/at Near Maramma Temple, Huskur Village, Dasanapura Hobli, Bengaluru North Taluk, Bengaluru Urban District, **2. Shanthamma,** W/o Late A.R. Nanjundappa, aged about 66 years, R/at No.26, 1st Main, 1st Cross, Near Auto Stand, MG Layout, Halagevaderahalli, Rajarajeshwarinagar, Bengaluru South - 560098, **3. Vanajakshamma,** W/o Shiva Madhu, D/o Late. Revanna, aged about 51 years, R/at Motaganahalli Village, Magadi Taluk, Bengaluru South District - 562127 **...PETITIONERS**

AND: The Tahasildar, Registrar of Birth and Deaths, Magadi Taluk, Bengaluru South District **...RESPONDENT**

PUBLIC NOTICE

WHEREAS the petitioner has filed the above petition Under Section 13 (3) Of REGISTRATION OF BIRTH AND DEATH ACT 1969 for seeking direction to the Respondent authority to issue death certificate of the father of 1st petitioner and 3rd petitioner, father-in-law of 2nd petitioner by named **Revanna** S/o late Siddalingaiah was died on 10.07.2005 at Atthimgere Village, Madabal Hobli, Magadi Taluk, Bengaluru South District and this Hon'ble Court has posted the above petition to **22/06/2026**, for hearing of the petition and that if any person/s desire to oppose the said petition or claim or interest shall appear before the Hon'ble Court in person or by pleader duly instructed at **11:00 AM** failing which the above said petition will be heard disposed on enquiry.

Given under my hand and seal of the Court on this 15/05/2026

By order of the Court, Sheristedar, Civil Judge & JMF Court, Magadi

Advocate for Petitioner: **B.H. PRAVEEN KUMAR**
No.2, First Floor, Lakshmamma Muraraiah Complex, Sondekoppa Main Road, Nelamangala- 562 123.

IN THE COURT OF MOTOR ACCIDENT CLAIMS TRIBUNAL AT BENGALURU (SCCH-04)
MVC NO.6001/2024

BETWEEN: Muzammil Khan ... PETITIONER
AND: Vinay Kumar .R & another ... RESPONDENTS

NOTICE TO RESPONDENT No.1

Vinay Kumar .R, S/o: K. Rangaswamy, R/at: No.96, 10th Cross, Maruthi Nagar, Yelahanka, Bengaluru-560064.

Take notice that the petitioner has filed the above claim petition against the Respondents for the compensation of Rs.25,00,000/- for the grievous injuries sustained by the petitioner in a Road Traffic Accident on 18-05-2024 at about 9.20 P.M, Near Balepur to C.R. Patna road, Nallappanahalli gate, Bengaluru District, by your offending Bolero Pick-up bearing No. KA-50-B-1371. The Respondent No.1 above named are hereby directed to appear before this Hon'ble Court either in person or through the pleader on the **08/06/2026** before SCCH-04 at **11:00 A.M.**, to defend the above case, failing which the matter will be determined as Ex-parte.

Given under my hand & seal of the court on this 10/04/2026

By order of the Court, Assistant Registrar, Court of Small Causes, Bangalore

NAGENDRA .M, Advocate
No.37, 1st Main, 12th A Cross, Defence Colony, Bagalagunte, Nagasandra Post, Bengaluru-560073

IN THE COURT OF THE PRINCIPAL CIVIL JUDGE AND JMFC AT HOSAKOTE
O.S. No. 14/2025

BETWEEN : Sri. K. RAJAREDDY S/o K. Venkatareddy, Aged about 53 years, R/at Tavarekere Village, Nandagudi Hobli, Hosakote Taluk, Bangalore Rural Dist. **...Plaintiff**
AND : Sri. T.S. MANJUNATH and others **...Defendants**

NOTICE

To, 2. Smt. T.S. MALA D/o late T.M. Shankarappa, Aged about 42 years, R/at Tavarekere Village, Nandagudi Hobli, Hosakote Taluk, Bangalore Rural Dist-562122.

Whereas, above named Sri. K. RAJAREDDY S/o K. Venkatareddy, plaintiff has instituted the above suit for declaration and demolition of illegal construction in land bearing old Sy.No.137/5 and now New Sy.No.137/7, measuring to an extent of 0.03.12 guntas, situated at Tavarekere Village, Nandagudi Hobli, Hosakote Taluk, Bangalore Rural Dist, you are hereby summoned to appear before the Hon'ble Principal Civil Judge & JMFC at Hoskote in person or by a Pleader **on the 30th day of June 2026 at 11 'o' Clock,** to answer the same, failing which the suit/application will be disposed of exparte.

Given under my hand and the seal of the Court, this 11th day of May 2026.

By Order of the Court, Sheristedar, Civil Judge & JMFC, Hoskote.

CHANGE OF NAME

I, **NISHA PATNI** W/o CHIRAG PATNI, aged 41 years, residing at NO 288, 2ND BLOCK, 3RD CROSS, RMV EXTN, OPP RAMAIAH MEDICAL COLLEGE, BANGALORE NORTH, PO; RMV EXTENSION II STAGE, BENGALURU KARNATAKA-560094, do hereby declare that I have changed my name from **NISHA SAINI** TO **NISHA PATNI**, henceforth, and I shall be known and called as **NISHA PATNI**, for all purposes, vide affidavit dated 19/05/2026, sworn before Advocate and Notary **R VISHWANATH** at Bangalore.

IN THE COURT OF THE HON'BLE DEPUTY COMMISSIONER AT KOLAR
R.A No. 482/2025

APPELLANT : Sujatha and others.
V/S
RESPONDENTS : The Assistant Commissioner, Kolar and others.

APPLICATION UNDER ORDER 5 RULE 20 READ WITH SECTION 151 OF THE CIVIL PROCEEDURE CODE THE APPELLANTS ABOVE NAMED BEGS TO SUBMIT AS FOLLOWS:

That for the reasons stated in the accompanying affidavit of appellants that this Hon'ble court may be pleased to permit to take steps through Paper Publication against respondent No.3 daily Kannada state news paper i.e., "HOSA DIGANTHA" and call upon the respondent No.3 to contest the case on merits and allow this application in the interest law justice and equity.

ADDRESS OF THE OF RESPONDENT No.3

Sri. SHANKRAPPA, S/o Late Ramaiah, R/at Talagunda Village,Vakkalere Hobli, Kolar Taluk,

Whereas the petitioner filed this petitioner against the respondents before this Hon'ble Court by challenging the appeal against orders passed by the 1st respondent in favour of respondent No.3 in R.A. No. 591/2024 dated: 6-6-2025 concerned to land bearing Sy. No. 87/4 to an extent of 1.00 acres 0.12 guntas in RRT DIS CR No.404/2022-23 dated::2-11-2023 of Talagunda Village, Vakkalere Hobli, Kolar Taluk, but the respondent No. 3 is evading receiving the notice issued by this Hon'ble court. Hence you are hereby directed to appear before this Hon'ble court on:9-6-2026. This Hon'ble court has been posted the above case on your appearance either personally or through advocate at 3.PM, before this Hon'ble court.

If you failed to appear before this Hon'ble court, you will be placed ex parte and case and case will be proceeded in your absence according to law.

Given under my seal and signature on this day.15.5. of 2026 at Kolar.

By order of the court
DEPUTY COMMISSIONER

Advocate for petitioner
S.D Chowde Gowda, ADVOCATE
Kolar, Date : 28.04.2026

IN THE COURT OF THE M.A.C.T AT BENGALURU
MVC No. 8467 of 2025 (SCCH-13)

PETITIONERS: Shobha .R and others -V/s-
RESPONDENT: Shivakumar & another

NOTICE TO RESPONDENT No 1

Shivakumar, S/o.Shivanna, R/At No.14/21,Mathru Nilaya, 2nd cross, JaiMaruthi Nagar, Nandhini Layout, Bangalore-560096. (Two Wheeler Bearing Reg No.KA-01-EU-0092)

Whereas the petitioner's had filed the above claim petition against you for compensation of death of Umesh H.L @ Honnegowda H.L in a road accident occurred on 11-05-2025 at about 08.30 p.m. at SH-84, Sira Nanjanagudu Road, near Hanumapura Amruthuru Hobli Kunigal Taluku, Tumakuru Dist. Deceased was travelling as a pillion rider at your bike, at that time rider of the two wheeler ridden is two wheeler in a rash and neglegent manner and lost the control over the two wheeler and capazsized the two wheeler and cause the accident .due to this accident the umesh was died. your two wheeler No. bearing Registration No. KA-01-EU-0092 for compensation of Rs.1,00,00,000/- (Rupees One crore only) and it stands posted to **06-06-2026**

You are hereby summoned to appear on **06-06-2026** at 11:00 AM before the said court (SCCH-13) in-person or through duly instructed Advocate failing which the application will be allowed. Which matter will be decided Ex-party.

Given under my hand and seal of this court on 07-05-2026.

By order of the court, Assistant Registrar, Court of Small Causes, Bangalore.

G.P. SHIVAPRASAD, Advocate
Opp. court B.M.Road, Kunigal, TumaKuru Dist.

IN THE COURT OF THE PRL CIVIL JUDGE AND JMFC AT KOLAR
O.S.NO.526/2023

Plaintiff: Munilakshamma
v/s
Defendants: Krishnegowda and others

PUBLIC NOTICE TO THE DEFENDANT No. 11 UNDER ORDER 5 RULE 20 OF CPC

11. Pradip Kumar Karmakar S/o Sadhana Chandra Karmakar, Aged about 44 years, R/at F1, 2nd Floor Sri Sai Sannidhi, Nandi Reachers Garden, Near Anjaneya Temple NRI Layout Kalkere, Bangalore-560 043./

The Plaintiffs have filed above suit against the defendants for the relief of partition and such other reliefs. This Hon'ble court be pleased to issued notice to you defendant No. 11 but the same is not served on you. Hence you the defendant No. 11 is hereby summoned to appear before this Hon'ble court to answer all such questions relating to the above proceedings in order to Enable the court effectually and completely to adjudicate upon and settled all the questions involved.

The above matter is coming up for hearing on Defendant No.11 may appear before this court in person or through their advocate on 04-07-2026 that day at 11.00 AM to file their objections if any. Failing which the matter will be heard and determined exparte in your absence.

Given under my hand and seal of this court, this 18.05.2026.

By order of the Court
Sheristedar, Prl. Civil Judge & JMFC Kolar

ADVOCATE FOR PLAINTIFFS
N.Srinivasagowda, Advocate, Kolar.
Kolar, Date: 25.04.2026

PUBLIC NOTICE

Notice is hereby given that I, Mr. Harohalli Vasudevamurthy Murulidhar (DIN: 09287906), have resigned from the post of Director of GSSI Emprise Private Limited (CIN: U51909KA2021PTC150901), having its registered office at No. 119, Kamadhenu Nagar BNP, W.F. Road, Opp. Govt. High School, Bengaluru-560016, Karnataka, with effect from 20.04.2026.

I hereby declare that I am no longer associated with the management or affairs of the Company from the aforesaid date and shall not be responsible or liable for any acts, transactions, decisions, or obligations of the Company thereafter.

All concerned, including the general public, banks, financial institutions, customers, vendors, and Shareholders, are requested to take note accordingly.

Sd/- **HAROHALLI VASUDEVAMURTHY MURULIDHAR**
Former Director

IN THE COURT OF THE II ADDITIONAL CIVIL JUDGE AND J.M.F.C AT HOSAKOTE
C.MISC. No. 162/2026

Between : 1. SMT. KENCHAMMA, W/o late Venkataramanappa, Aged about 65 years, R/at Bisanahalli Village, Hosakote Taluk, Bangalore Rural District. **2. SMT. RATHNAMMA,** D/o late Venkataramanappa, Aged about 42 years, R/at. Jigani, Bangalore-560105. **...Petitioners**

And : The Thasildar, Hosakote, HosakoteTaluk, Bangaluru Rural District. **...Respondent**

PUBLIC NOTICE

Whereas the Petitioners have filed the above petition seeking the direction to the Thasildhar / Registrar of Birth and Deaths to issue the death certificate of husband of the 1st petitioner, father of the 2nd petitioner by name **VENKATARAMANAPPA S/o late Thoti Papanaa was died 01/06/1997** at Bisanahalli Village, Jadigenahalli Hobli, Hosakote Taluk, Bengaluru Rural District. The case is posted for appearance of interested parties. Therefore interested parties are required to appear in person through advocate **on 16.07.2026 at 11.00 A.M** before the IIND ADDITIONAL CIVIL JUDGE AND JMFC AT HOSKOTE failing which the above case will be disposed as exparte.

Given under my hand seal and the court this day of 18.05.2026.

By Order of the Court, Sheristedar, Civil Judge & J.M.F.C., Hosakote.
Advocate for Petitioners

IN THE COURT OF THE ASSISTANT COMMISSIONER, AT KOLAR R.A No. 47/2026

BETWEEN: Sri. M.R Muniyappa S/o late Ramappa, A/a 63 years, R/at Muduvathi village, Vakkaleri hobli Kolar taluk and Dist. ..Appellant

-:V/s:-

1. The Tahsildar, Kolar Taluk, Kolar district.
2. Revenue inspector, Vakkaleri hobli, Kolar taluk. **3. Smt. Geethadevi** W/o M.V Bhaskarachar, R/a No.384, 13th cross, Doddaballapura road, Hosa hudya Marasandra, Bengaluru rural district.

..Respondents

Notice

hereby inform that the appellant has filed the above appeal against the respondents by challenging the order passed by the respondent No.1, in RRT/CR (Dis) No.335/2025, in respect of Sy.No.163/6, measuring 0.06 guntas, of Muduvathi Village, Vakkaleri Hobli, Kolar Taluk, Kolar district.

Take notice that if the respondent No.3 having any interest or claim whatsoever are hereby summoned to appear before this Hon'ble court in person or through advocate on 04/06/2026 at 3 pm, otherwise the appeal will be disposed as per law in your absence,

Given under my hand and seal this office on 29.04.2026 at Kolar.

By Order of the Court
THASILDAR, Office of the Assistant commissioner, At Kolar

Advocate for petitioner **H.V Krishnegowda** Advocate, Maruthi complex, Achari beedhi, K.T Street, Kolar. Ph: 9481415999

IN THE COURT OF THE ASSISTANT COMMISSIONER, AT KOLAR
R.A No: 425/2025

BETWEEN: Smt. Leelavathi.B @ Leelamma D/o late Chikkabasappa, A/a 63 years, R/at Hedaginabele village, Kasaba hobli, Malur taluk and Kolar Dist. Appellant

V/s:-

1. The Tahsildar, Malur Taluk, Kolar district. **2. Sri. J.M Bharath Kumar** S/o late J.N Muneendran, Major, R/at Hosakote town, Hosakote taluk, Bengaluru rural district.

Respondents

Notice

It is hereby inform that the appellant has filed the above appeal against the respondents by challenging the order passed by the respondent No.1, in RRT/CR (Dis) No. 784/2024, dated 03.03.2025, dated: 27.11.2024, in respect of Sy.No. 110, measuring 2 acres out of it 0.15 guntas, of Huralagere Village, Kasaba Hobli, Malur Taluk, Kolar district.

Take notice that if the respondent No.2 having any interest or claim whatsoever are hereby summoned to appear before this Hon'ble court in person or through advocate on 04.06.2016 at 3 pm, otherwise the appeal will be disposed as per law in your absence.

Given under my hand and seal this office on 29.04.2026 at Kolar.

By Order of the Court
THASILDAR, Office of the Assistant commissioner, At Kolar

Advocate for petitioner **H.V Krishnegowda** Advocate, Maruthi complex, Achari beedhi, K.T Street, Kolar
Ph: 9481415999

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)
ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222

ನಂ: ಭಕಾಪ್ರಾ/ಇ.ವಿಭಾಗ/ಶಾಂ.ಶಾ.ಖಾ/ಮರು ಟೆಂಡರ್/2026–27/93
ದಿನಾಂಕ: 18.05.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ CALL-4 (IFT - 04/2026-27)

Head of Account :- 2705-115

ಮಾನ್ಯ ಅಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ 2026–27 (ದಿನಾಂಕ: 01.04.2026 ರಿಂದ 31.03.2027 ರವರೆಗೆ) ನೇ ಸಾಲಿಗೆ ಆಡಳಿತಾಧಿಕಾರಿಗಳು, ಭದ್ರಾ ಕಾಡಾ, ಶಿವಮೊಗ್ಗ, ಕಾರ್ಯಪಾಲಕ ಇಂಜನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ /ಸಿದ್ದಾಪುರ ಮತ್ತು ಕೃಷಿ ಮತ್ತು ಸಹಕಾರ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಅಧ್ಯಕ್ಷರ ಆಪ್ತ ಶಾಖೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಿಗೆ ಕೊರತೆಯಿರುವ ಸಿಬ್ಬಂದಿಗಳನ್ನು ಹಾತ್ಕಾಲಿಕವಾಗಿ ಮಾನವ ಶಕ್ತಿ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಕಿಪಿಪಿ ಪೋರ್ಟಲ್‌ನಲ್ಲಿ ವಿದ್ಯುನ್ಮಾನ ಸ್ಪರ್ಧಾತ್ಮಕ ಅಲ್ಪಾವಧಿ ಮರು ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆಪಿಪಿ–ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 18.05.2026 ರಿಂದ ದಿ: 25.05.2026 ರವರೆಗೆ. **2.** ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 25.05.2026 ಸಂಜೆ 5.00 ಗಂಟೆವರೆಗೆ **3.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 26.05.2026 ಸಂಜೆ 5.30 ಗಂಟೆಗೆ **4.** ಆರ್ಥಿಕ ಬಿಡ್ ತೆರೆಯುವ ದಿ: 29.05.2026 ಬೆಳಗ್ಗೆ 11.30 ಗಂಟೆಯ ನಂತರ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿವಮೊಗ್ಗ/ಡಿಐಪಿ/ಶಿಎ/ಎಂ.ಎ/26–27/84/05/251

ಕರ್ನಾಟಕ ಸರ್ಕಾರ (Govt. of Karnataka)
ಕಾವೇರಿ ನೀರಾವರಿ ನಿಗಮ ನಿಯಮಿತ, ಜಲಸಂಪನ್ಮೂಲ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ, ಹಾಸನ ಜಿಲ್ಲೆ–573211

Office of the Executive Engineer, Hemavathy Right Bank Canal, Division, Holenarasipura, Hassan District-573211

ದೂ.: 08175-273238 e-mail: eehrbchnp@gmail.com
Phone: 08175-273238

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27
ದಿನಾಂಕ: 18.05.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಅರ್ಹ ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ '3' ಮತ್ತು ಮೇಲ್ಪಟ್ಟ ದರ್ಜೆಯಲ್ಲಿ ನೊಂದಣಿ ಹೊಂದಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯಿದೆ KW-3 ಅನ್ವಯ ಐಟಂವಾರು ಟೆಂಡರ್‌ಗಳನ್ನು https://kppp.karnataka.gov.in Plat form ನಲ್ಲಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೊಸೆಸ್ಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು 2.Karnataka Public Procurement portal (https://kppp.karnataka.gov.in) ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ ದಿನಾಂಕ:18.05.2026 ರಿಂದ 25.05.2026 ಸಂಜೆ 4.00 ಘಂಟೆಯವರೆಗೆ 3.ಮೊದಲನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ:27.05.2026 ರ 11.00 ರ ನಂತರ 4.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ:29.05.2026 ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ, 5.ಕಾಮಗಾರಿಗಳ ಸಂಖ್ಯೆ: 02 ಕಾಮಗಾರಿ 6.ಕೆಲಸದ ರೀತಿ: ಕಟ್ಟಡ ಕಾಮಗಾರಿ 7.ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ: ತಲಾ ರೂ. 90.00 ಲಕ್ಷಗಳು 8.ಇ. ಎಂ. ಡಿ.: The prescribed format EMD declaration, as per Govt., order fd675exp-12/2020 Bangalore dated: 22.12.2020 9.ಗುತ್ತಿಗೆದಾರರ ವರ್ಗ : III ಮತ್ತು ಮೇಲ್ಪಟ್ಟು ಸೂಚನೆ 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು Karnataka Public Procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇ.ಬ.ನಾಲಾ ವಿಭಾಗ, ಹೊಳೆನರಸೀಪುರ

ವಾಸಾಸಂಇ/ಸಿಸನಿ/ಹಾಸನ/147/ಕೆಪಿಎಂಸಿಎ/2025–26

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ(ಪರಿಸರ), ಹುಬ್ಬಳ್ಳಿ – 580029.

ನಂ:ಎಚ್.ಡಿ.ಎಂ.ಸಿ/74/2026–27/ ದಿನಾಂಕ: 19–05–2026.

ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ನಿಧಿ ಅನುದಾನದಡಿ ಟ್ರ್ಯಾಕ್ಟರ್ ಕಮ್ ಟ್ರೇಲರ್ ವಾಹನಗಳನ್ನು ಭಾಡಿಗೆ ಆಧಾರದ ಮೇಲೆ ಪೂರೈಸಿಕೊಳ್ಳಲು ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ	ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/SE7009/CALL-3	6553575.00	1,31,071.00	28.05.2026 ಸಮಯ ಸಂಜೆ 4.00 ಗಂಟೆ	30.05.2026 ಸಮಯ ಸಂಜೆ 4.30 ಗಂಟೆ
2	DMA/2025-26/SE7013/CALL-3	5825400.00	1,16,508.00		
3	DMA/2025-26/SE7014/CALL-3	5097225.00	1,01,944.00		
4	DMA/2025-26/SE7015/CALL-3	3640875.00	91,022.00		
5	DMA/2025-26/SE7016/CALL-3	6553575.00	1,31,071.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ದಿನಾಂಕ: 20.05.2026 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು(ಪರಿಸರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಸಂ.ಇ/ಧಾರವಾಡ/209/ದೇಶಪಾಂಡೆಪಬ್ಲಿಸಿಟಿ/2026–27

onmobile
ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್

ನೋಂದಾಯಿತ ಕಚೇರಿ: ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್, ಇ–ಸಿಟಿ, ಟವರ್–1, 94/1ಸಿ & 94/2, ವೀರಸಂದ್ರ ವಿಲೇಜ್, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಎಲೆಕ್ಟ್ರಾನಿಕ್ ಸಿಟಿ ಫೇಸ್–1, ಬೆಂಗಳೂರು–560 100, ಕರ್ನಾಟಕ, ಭಾರತ
ಕಾರ್ಪೊರೇಟ್ ಐಡೆಂಟಿಟಿ ನಂ. (ಸಿಐಎನ್): L64202KA2000PLC027860
ದೂ.: + 91 80 4009 6000 ಫ್ಯಾಕ್ಸ್: + 91 80 4009 6009
ಇ–ಮೇಲ್: Investors@onmobile.com ವೆಬ್‌ಸೈಟ್: www.onmobile.com

ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ಮೊತ್ತ ₹ ಮಿಲಿಯನ್‌ಗಳಲ್ಲಿ

ವಿವರಗಳು	ಅಂತ್ಯಗೊಂಡ ತ್ರೈಮಾಸಿಕ			ವರ್ಷಾಂತ್ಯ	
	ಮಾರ್ಚ್ 31, 2026 (ಪರಿಶೋಧಿತ)	ಡಿಸೆಂಬರ್ 31, 2025 (ಅಪರಿಶೋಧಿತ)	ಮಾರ್ಚ್ 31, 2025 (ಪರಿಶೋಧಿತ)	ಮಾರ್ಚ್ 31, 2026 (ಪರಿಶೋಧಿತ)	ಮಾರ್ಚ್ 31, 2025 (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	1,405.24	1,456.97	1,581.25	5,717.82	5,782.93
ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಐಟಂಗಳ ಮೊದಲು)	(401.31)	49.15	(67.51)	(83.27)	(224.43)
ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಐಟಂಗಳ ನಂತರ)	(401.79)	44.54	(67.51)	(87.88)	(346.95)
ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/ (ನಷ್ಟ)	(365.34)	35.13	(79.32)	(114.86)	(405.41)
ಅವಧಿಯ ಒಟ್ಟು ಸಮಗ್ರ ಆದಾಯ	(431.23)	121.36	(6.12)	(13.42)	(335.38)
ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ಪ್ರತಿಯೊಂದಕ್ಕೆ ₹10)	1,063.21	1,063.21	1,063.21	1,063.21	1,063.21
ಮರುಮೌಲೀಕೃತ ಮೀಸಲುಗಳನ್ನು ಹೊರುತಪಡಿಸಿ ಮೀಸಲುಗಳು	-	-	-	5,182.23	5,164.28
ಪ್ರತಿ ಷೇರಿನ ಗಳಿಕೆ (₹ 10 ರ ಪ್ರತಿಯೊಂದಕ್ಕೆ) (ಮಾರ್ಚ್ 31, 2026 ಮತ್ತು ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವರ್ಷವನ್ನು ಹೊರತುಪಡಿಸಿ ವಾರ್ಷಿಕಗೊಳಿಸಿಲ್ಲ)					
(ಎ) ಮೂಲ	(3.43)	0.33	(0.75)	(1.07)	(3.78)
(ಬಿ) ವಿಭಜಿತ	(3.43)	0.33	(0.75)	(1.07)	(3.78)

ಟಿಪ್ಪಣಿಗಳು:
1. (ಎ) ಮೇಲಿನ ವಿವರಗಳು 2015ರ ಸೆಬಿಯ ನಿಯಂತ್ರಣಗಳ (ಪಟ್ಟಿ ಬಾಧ್ಯತೆ ಮತ್ತು ಪ್ರಕಟಣೆಗಳ ಅಗತ್ಯಕ್ಕಾಗಿ) 33ನೇ ನಿಯಂತ್ರದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.nseindia.com and www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.onmobile.com ನಲ್ಲಿ ಲಭ್ಯವಿದೆ.
   (ಬಿ) ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳನ್ನು ಮೇ 18, 2026ರಂದು ಕ್ರಮವಾಗಿ ನಡೆದ ಲೆಕ್ಕಪರಿಶೋಧನಾ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗಿದೆ ಮತ್ತು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. ಮೇಲಿನ ಫಲಿತಾಂಶಗಳ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೀಲಿಸಲ್ಪಟ್ಟಿದೆ. ಈ ಫಲಿತಾಂಶಗಳ ಕುರಿತು ಶಾಸನಬದ್ಧ ಲೆಕ್ಕಪರಿಶೋಧಕರು ಮಾರ್ಪಡಿಸದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
2. ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಪ್ರಮುಖ ಅಂಕಿಅಂಶಗಳು ಈ ಕೆಳಗಿನಂತಿವೆ:

ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ಮೊತ್ತ ₹ ಮಿಲಿಯನ್‌ಗಳಲ್ಲಿ

ವಿವರಗಳು	ಅಂತ್ಯಗೊಂಡ ತ್ರೈಮಾಸಿಕ			ವರ್ಷಾಂತ್ಯ	
	ಮಾರ್ಚ್ 31, 2026 (ಪರಿಶೋಧಿತ)	ಡಿಸೆಂಬರ್ 31, 2025 (ಅಪರಿಶೋಧಿತ)	ಮಾರ್ಚ್ 31, 2025 (ಪರಿಶೋಧಿತ)	ಮಾರ್ಚ್ 31, 2026 (ಪರಿಶೋಧಿತ)	ಮಾರ್ಚ್ 31, 2025 (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	501.71	461.04	726.92	2,217.70	2,498.48
ತೆರಿಗೆಯ ಮೊದಲು ಅವಧಿಯ ನಿವ್ವಳ ಲಾಭ/(ನಷ್ಟ)	(459.76)	64.17	32.32	(34.75)	112.43
ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ)	(399.33)	27.15	24.89	(35.49)	84.45
ಅವಧಿಯ ಒಟ್ಟು ಸಮಗ್ರ ಆದಾಯ	(402.60)	28.66	5.00	(26.34)	57.80

ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್‌ನ ಮೇಲೆ ಸೂಚಿಸಿದ ಅವಧಿಯ ಪ್ರತ್ಯೇಕ ಫಲಿತಾಂಶವು ಕಂಪನಿಯ ವೆಬ್‌ಸೈಟ್ www.onmobile.com ನಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.nseindia.com and www.bseindia.com ನಲ್ಲಿ ಲಭ್ಯವಿರುತ್ತದೆ.

ಸ್ಥಳ : ಮ್ಯಾಡ್ರಿಡ್
ದಿನಾಂಕ : ಮೇ 18, 2026

ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/–
ಫ್ರಾಂಕೋಯಿಸ್–ಚಾರ್ಲ್ಸ್ ಸಿರೋಯ್ಸ್
ಎಕ್ಸಿಕ್ಯೂಟಿವ್ ಚೇರ್‌ಮನ್ ಮತ್ತು ಸಿಇಒ

digitide
ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್

CIN: L62099KA2024PLC184626
ನೋಂದಾಯಿತ ಮತ್ತು ಕಾರ್ಪೋರೇಟ್ ಕಚೇರಿ: ಹೊಸ ಮುನಿಸಿಪಲ್ ನಂ. 1, ಶ್ರೀ ಸುಬ್ರಮಣ್ಯ ಪ್ಲಾಜಾ (ಎಸ್‌ಎಸ್ ಪ್ಲಾಜಾ), 29ನೇ ಮುಖ್ಯರಸ್ತೆ, ಬಿಟಿಎಂ ಲೇಔಟ್, 1ನೇ ಹಂತ, ವರ್ತುಲ ರಸ್ತೆ, ಬೆಂಗಳೂರು–560068, ಕರ್ನಾಟಕ. ದೂ.: +91 80 6105 6000
ವೆಬ್‌ಸೈಟ್: www.digitide.com; ಇ–ಮೇಲ್: corporatesecretarial@digitide.com

ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ನಾಲ್ಕನೇ ತ್ರೈಮಾಸಿಕ ಹಾಗೂ ವಾರ್ಷಿಕ ಕ್ರೋಢೀಕೃತ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶಗಳು

(ಪ್ರತಿ ಷೇರಿನ ಗಳಿಕೆಯ ದತ್ತಾಂಶ ಹೊರತುಪಡಿಸಿ ರೂ. ಮಿಲಿಯನ್‌ಗಳಲ್ಲಿ)

ಕ್ರ. ಸಂ.	ವಿವರಗಳು	ಅಂತ್ಯಗೊಂಡ ತ್ರೈಮಾಸಿಕ 31.03.2026 (ಟಿಪ್ಪಣಿ 3.1 ನೋಡಿ)	ವರ್ಷಾಂತ್ಯ 31.03.2026 (ಪರಿಶೋಧಿತ)	ಅಂತ್ಯಗೊಂಡ ತ್ರೈಮಾಸಿಕ 31.03.2025 (ಟಿಪ್ಪಣಿ 3.2 ನೋಡಿ)
1	ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	8,051.51	30,965.39	7,388.55
2	ಅವಧಿಯ ನಿವ್ವಳ ಲಾಭ (ತೆರಿಗೆ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ)	120.29	963.30	289.33
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ)	(40.89)	315.71	(5.65)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ (ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ)	(50.05)	55.45	(13.88)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯ ಕ್ರೋಢೀಕೃತ ಲಾಭ (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(72.73)	216.33	(37.58)
6	ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಪ್ರತಿ ಷೇರಿನ ಮುಖ ಬೆಲೆ ರೂ. 10/–)	1,490.01	1,490.01	1,489.49
7	ಮೀಸಲುಗಳು (ಮರುಮೌಲೀಕೃತ ಮೀಸಲುಗಳನ್ನು ಹೊರತುಪಡಿಸಿ) ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ	-	6,891.08	-
8	ಪ್ರತಿ ಷೇರಿನ ಗಳಿಕೆ (ರೂ.ಗಳಲ್ಲಿ) (ಪ್ರತಿ ಷೇರಿನ ಮುಖ ಬೆಲೆ ರೂ. 10/–) (ಮುಂದುವರೆದ ಮತ್ತು ಮುಂದುವರಿಸದ ಕಾರ್ಯಾಚರಣೆಗಳಿಗೆ)	(ವಾರ್ಷಿಕ ಗೊಳಿಸದ)	(ವಾರ್ಷಿಕ ಗೊಳಿಸದ)	(ವಾರ್ಷಿಕ ಗೊಳಿಸದ)
	(ಎ) ಮೂಲ	(0.85)	(1.10)	(0.62)
	(ಬಿ) ವಿಭಜಿತ**	(0.85)	(1.10)	(0.62)

** ಮೂಲ ಇಪಿಎಸ್ ಋಣಾತ್ಮಕವಾಗಿರುವುದರಿಂದ, 31 ಮಾರ್ಚ್ 2026, 31 ಮಾರ್ಚ್ 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು 31 ಮಾರ್ಚ್ 2026ಕ್ಕೆ ಅಂತ್ಯಗೊಂಡ ವಾರ್ಷಿಕದಲ್ಲಿ ಪ್ರತಿ ಷೇರಿಗೆ ವಿಭಜಿತಗೊಳಿಸಿದ ನಷ್ಟವು ಪ್ರತಿ ಷೇರಿಗೆ ಮೂಲ ನಷ್ಟದಂತೆಯೇ ಇರುತ್ತದೆ.

ಸೂಚನೆ:
1. ಕಂಪೆನಿಗಳ ಕಾಯ್ದೆ 2013ರ ಸೆಕ್ಷನ್ 133ರ ಅಡಿಯಲ್ಲಿ ಸೂಚಿಸಲಾದ ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳಿಗೆ ('ಐಎನ್‌ಡಿ ಎಎಸ್') ಅನುಸಾರವಾಗಿ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಓದಿಕೊಂಡಂತೆ ಮತ್ತು ಸೆಬಿಯ ನಿಯಂತ್ರಣ 33ರ ಪ್ರಕಾರ (ಪಟ್ಟಿಮಾಡುವ ಬಾಧ್ಯತೆಗಳು ಮತ್ತು ಘೋಷಣೆಗಳ ಅಗತ್ಯತೆಗಳು) ನಿಯಮಗಳು, 2015ರಂತೆ ಈ ಆರ್ಥಿಕ ಫಲಿತಾಂಶಗಳನ್ನು ಸಿದ್ಧಪಡಿಸಲಾಗಿದೆ. ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ನಾಲ್ಕನೇ ತ್ರೈಮಾಸಿಕ ಹಾಗೂ ವಾರ್ಷಿಕ ಕ್ರೋಢೀಕೃತ ಮತ್ತು ಪ್ರತ್ಯೇಕ ಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ಶಿಫಾರಸು ಮಾಡಿದೆ ಹಾಗೂ 18 ಮೇ 2026ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ನಾಲ್ಕನೇ ತ್ರೈಮಾಸಿಕ ಹಾಗೂ ವಾರ್ಷಿಕ ಆರ್ಥಿಕ ಫಲಿತಾಂಶಗಳ ಕುರಿತು ಶಾಸನಬದ್ಧ ಲೆಕ್ಕಪರಿಶೋಧಕರು ಅಮಾರ್ಪಡಿತ ವಿಮರ್ಶೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.
2. 21 ನವೆಂಬರ್ 2025 ರಿಂದ ಜಾರಿಗೆ ಬರುವಂತೆ, ಭಾರತ ಸರ್ಕಾರವು ಅಸ್ತಿತ್ವದಲ್ಲಿರುವ 29 ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿ, ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು ಪ್ರಕಟಿಸಿತು. ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿದ ಮಾರ್ಗಸೂಚಿಯ ಆಧಾರದ ಮೇಲೆ, ಕೇಂದ್ರದ ನಿಯಮಗಳ ಕರಡು ಮತ್ತು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಬಿಡುಗಡೆ ಮಾಡಿದ FAQ ಗಳೊಂದಿಗೆ, ಪ್ರಸ್ತುತ ಲಭ್ಯವಿರುವ ಅತ್ಯುತ್ತಮ ಮಾಹಿತಿಯನ್ನು ಬಳಸಿಕೊಂಡು ಈ ಬದಲಾವಣೆಗಳಿಂದ ಉಂಟಾಗುವ ತನ್ನ ಉದ್ಯೋಗಿ ಲಾಭದ ಹೊಣೆಗಾರಿಕೆಗಳ ಮೇಲಿನ ಹೆಚ್ಚುತ್ತಿರುವ ಪರಿಣಾಮವನ್ನು ಸಮೂಹವು ನಿರ್ಣಯಿಸಿದೆ ಮತ್ತು ಬಹಿರಂಗಪಡಿಸಿದೆ. 31 ಮಾರ್ಚ್ 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳಲ್ಲಿ "ಅಸಾಧಾರಣ ವಸ್ತುಗಳು" ಅಡಿಯಲ್ಲಿ ರೂ. 158.45 ಮಿಲಿಯನ್ ಹಾಗೂ ರೂ. 412.23 ಮಿಲಿಯನ್ ಹೆಚ್ಚುತ್ತಿರುವ ಪರಿಣಾಮವನ್ನು ಸಮೂಹವು ಗುರುತಿಸಿದೆ.
3. ಪರಿಶೋಧಿತ ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಹೆಚ್ಚುವರಿ ಮಾಹಿತಿ ಈ ರೀತಿ ಇದೆ:

(ಪ್ರತಿ ಷೇರಿನ ಗಳಿಕೆಯ ದತ್ತಾಂಶ ಹೊರತುಪಡಿಸಿ ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಅಂತ್ಯಗೊಂಡ ತ್ರೈಮಾಸಿಕ 31.03.2026 (ಟಿಪ್ಪಣಿ 3.1 ನೋಡಿ)	ವರ್ಷಾಂತ್ಯ 31.03.2026 (ಪರಿಶೋಧಿತ)	ಅಂತ್ಯಗೊಂಡ ತ್ರೈಮಾಸಿಕ 31.03.2025 (ಟಿಪ್ಪಣಿ 3.2 ನೋಡಿ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	5,343.51	20,081.63	4,647.80
ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ	129.94	323.71	(89.62)
ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ	68.53	211.95	(60.43)
ಅವಧಿಯ ಇತರೆ ಸಮಗ್ರ ಆದಾಯ, ತೆರಿಗೆಯ ನಿವ್ವಳ	(56.15)	40.35	(12.31)
ಅವಧಿಯ ಒಟ್ಟು ಸಮಗ್ರ ಆದಾಯ	12.38	252.30	(72.74)

3.1 ಈ ಸಾರಾಂಶವು ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಫಲಿತಾಂಶಗಳನ್ನು ಒಳಗೊಂಡಿದೆ, ಇದು ಪೂರ್ಣ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧಿತ ಅಂಕಿಅಂಶಗಳು ಮತ್ತು ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದವರೆಗಿನ ಪ್ರಕಟಿತ ಲೆಕ್ಕಪರಿಶೋಧಿಸದ ವರ್ಷದಿಂದ ಇಲ್ಲಿಯವರೆಗಿನ ಅಂಕಿಅಂಶಗಳ ಸಮತೋಲನ ಅಂಕಿಅಂಶವಾಗಿದೆ.

3.2 ಈ ಸಾರಾಂಶವು ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಫಲಿತಾಂಶಗಳನ್ನು ಪೂರ್ಣ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಸಮತೋಲನ ಅಂಕಿಅಂಶಗಳು ಮತ್ತು ಟಿಪ್ಪಣಿ 3.3ರಲ್ಲಿ ವಿವರಿಸಿದಂತೆ ಸ್ಕೀಮ್ ಆಫ್ ಅರೇಂಜ್‌ಮೆಂಟ್ ಜಾರಿಗೆ ಬಂದ ನಂತರ ಡಿಸೆಂಬರ್ 31, 2024ಕ್ಕೆ ಅಂತ್ಯಗೊಂಡ ಅವಧಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಿತ ಅಂಕಿಅಂಶಗಳನ್ನು ಒಳಗೊಂಡಿದೆ. ಮಾಹಿತಿ ಜ್ಞಾಪಕ ಪತ್ರವನ್ನು ಸಲ್ಲಿಸುವ ಉದ್ದೇಶಕ್ಕಾಗಿ 10 ಫೆಬ್ರವರಿ 2024ರಿಂದ 31 ಡಿಸೆಂಬರ್ 2024ರವರೆಗಿನ ಅವಧಿಗೆ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

3.3 ಕ್ವೆಸ್ ಕಾರ್ಪ್ ಲಿಮಿಟೆಡ್ ("ಡಿಮರ್ಜ್ಡ್ ಕಂಪನಿ"), ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ ("ರಿಸಲ್ಟಿಂಗ್ ಕಂಪನಿ 1") ಮತ್ತು ಬ್ಲಿಸ್ಸಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ ("ರಿಸಲ್ಟಿಂಗ್ ಕಂಪನಿ 2") ಮತ್ತು ಅವರ ಆಯಾ ಷೇರುದಾರರು ಮತ್ತು ಸಾಲಿಗರು ("ಸ್ಕೀಮ್ ಆಫ್ ಅರೇಂಜ್‌ಮೆಂಟ್") [illegible]

4. ಮೇಲಿನ ಸಾರಾಂಶವು 2015ರ ಸೆಬಿಯ ನಿಯಂತ್ರಣಗಳ (ಪಟ್ಟಿಮಾಡುವ ಬಾಧ್ಯತೆಗಳು ಮತ್ತು ಘೋಷಣೆಗಳ ಅಗತ್ಯತೆಗಳು) ನಿಯಮಗಳು 2015ರ ನಿಯಂತ್ರಣ 33ರ ಅಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಹಾಗೂ ಕಂಪನಿಯ ವೆಬ್‌ಸೈಟ್ www.digitide.com ನಲ್ಲಿ ಸಹ ಲಭ್ಯವಿದೆ. ಒದಗಿಸಲಾಗಿರುವ ಕ್ಯೂಆರ್ ಕೋಡನ್ನು ಸ್ಕ್ಯಾನ್ ಮಾಡುವ ಮೂಲಕ ಅದನ್ನು ಪ್ರವೇಶಿಸಬಹುದು.

ಸ್ಥಳ : ಬೆಂಗಳೂರು
ದಿನಾಂಕ : 18.05.2026

ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್‌ನ ಮಂಡಳಿಯ ಆದೇಶದ ಮೇರೆಗೆ
ಸಹಿ/–
ಗುರ್‌ಮೀತ್ ಸಿಂಗ್ ಚಹಾಲ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ (DIN: 10997957)

ರೈಲು ಯೋಜನೆ ಕಾಮಗಾರಿಗೆ ಮತ್ತಷ್ಟು ವೇಗ
ಆರು ಪ್ರಮುಖ ಇ-ಟೆಂಡರ್‌ಗೆ ಆಹ್ವಾನ

• **ಬೆಂಗಳೂರು:** ಬಹುನಿರೀಕ್ಷಿತ ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕಾಮಗಾರಿಗಳಿಗೆ ಮತ್ತಷ್ಟು ವೇಗ ಸಿಗುವ ಸಾಧ್ಯತೆ ಇದೆ. ವಿವಿಧ ಕಾರಿಡಾರ್‌ಗಳ ಸಿವಿಲ್ ಮತ್ತು ಮೂಲ ಸೌಕರ್ಯ ಕಾಮಗಾರಿಗಳಿಗಾಗಿ ಒಟ್ಟು ಆರು ಪ್ರಮುಖ ಇ-ಟೆಂಡರ್‌ಗಳನ್ನು ಕೆ-ರೈಡ್ ಆಹ್ವಾನಿಸಿದೆ.

ವಿವಿಧ ಪ್ಯಾಕೇಜ್‌ಗಳ ಅಡಿಯಲ್ಲಿ ಎಲಿವೇಟೆಡ್ ರಸ್ತೆಗಳು, ರೈಲ್ವೆ ಮೇಲ್ಸೇತುವೆಗಳು, ಕೆಳಸೇತುವೆಗಳು ಹಾಗೂ ರೈಲ್ವೆ ಹಳಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಡ್‌ಗಳನ್ನು ಆಹ್ವಾನಿಸಲಾಗಿದ್ದು, ಜೂನ್ ತಿಂಗಳಲ್ಲಿ ಸಲ್ಲಿಕೆಗೆ ಕೊನೆಯ ದಿನಾಂಕ ನಿಗದಿಪಡಿಸಲಾಗಿದೆ.

ಪ್ರಮುಖ ಕಾಮಗಾರಿಗಳು ಮತ್ತು ವಿವರ: ಕಾರಿಡಾರ್-2 (ಬಾಣಸವಾಡಿಯಿಂದ ಸ್ಟೀಲ್‌ಯಾರ್ಡ್)ರಲ್ಲಿ 7.765 ಕಿ.ಮೀ ಉದ್ದದ ಎಲಿವೇಟೆಡ್ ವಯಾಡಕ್ಟ್, ಮೆಟ್ರೋ ಮತ್ತು ರಸ್ತೆ ಸೇರಿ ಡಬಲ್ ಡೆಕ್ಕರ್ ವಯಾಡಕ್ಟ್, ಮತ್ತಿಕೆರೆಯಲ್ಲಿ ಡಬಲ್ ಡೆಕ್ಕರ್ ನಿಲ್ದಾಣ ಹಾಗೂ ರ್‍ಯಾಂಪ್ ನಿರ್ಮಾಣ ಕಾಮಗಾರಿಗಳು. ಕಾರಿಡಾರ್-3 (ಹೀಲಲಿಗೆಯಿಂದ ಬಿಡದಿ) ರಲ್ಲಿ 12.832 ಕಿ.ಮೀ ಉದ್ದದ ಮಾರ್ಗದಲ್ಲಿ ಹಳಿ ಪಥ ನಿರ್ಮಾಣ, ಬೌಂಡರಿ ಗೋಡೆ, ಚರಂಡಿ ಹಾಗೂ ವಯಾಡಕ್ಟ್ ಕಾಮಗಾರಿಗಳು. ಕಾರಿಡಾರ್-4 (ಬೊಮ್ಮಸಂದ್ರದಿಂದ ಹೀಲಲಿಗೆ) ರಲ್ಲಿ 15.354 ಕಿ.ಮೀ ಉದ್ದದ ಮಾರ್ಗ ನಿರ್ಮಾಣ ಮತ್ತು 3.851 ಕಿ.ಮೀ ಉದ್ದದ ನಾಲ್ಕು ಪಥಗಳ ವಯಾಡಕ್ಟ್ ವಿನ್ಯಾಸ ಮತ್ತು ನಿರ್ಮಾಣ. ಕಂಟೋನ್‌ಮೆಂಟ್ ಮತ್ತು ರಾಜಾನುಕುಂಟೆ ಮತ್ತು ಚಿಕ್ಕಬೆಟ್ಟಹಳ್ಳಿ-ಹೀಲಲಿಗೆಯಿಂದ ರಾಜಾನುಕುಂಟೆ ಮಾರ್ಗಗಳಲ್ಲಿ ಲೆವೆಲ್ ಕ್ರಾಸಿಂಗ್‌ಗಳ ಬದಲಿಗೆ ಒಟ್ಟು 4 ರಸ್ತೆಗಳ ಮೇಲ್ಸೇತುವೆ ಮತ್ತು 3 ರಸ್ತೆಗಳ ಕೆಳಸೇತುವೆ ಹಾಗೂ ಸಂಪರ್ಕ ರಸ್ತೆಗಳ ನಿರ್ಮಾಣ. ಅಲ್ಲದೆ ಡಿಪೋ ಆವರಣದಲ್ಲಿ ಸುಮಾರು 1 ಹೆಕ್ಟೇರ್ ಸುತ್ತಳತೆಯ ತಡೆಗೋಡೆ ನಿರ್ಮಾಣಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.



84 ಗ್ರಾಂ ಚಿನ್ನದ ಗಟ್ಟಿ ಕಳವು: ಮೂವರು ಆರೋಪಿಗಳ ಸೆರೆ

• **ಬೆಂಗಳೂರು:** ಕಟ್ಟಡವೊಂದರ ಶೌಚಾಲಯದ ಕಿಟಕಿಯಿಂದ ಒಳನುಗ್ಗಿ, ಗೋಲ್ಡ್ ರಿಫೈನರಿ ಮಾಡಲು ಸಂಗ್ರಹಿಸಿಟ್ಟಿದ್ದ 24 ಕ್ಯಾರೆಟ್‌ನ ಚಿನ್ನದ ಗಟ್ಟಿಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ಒಟ್ಟು 12 ಲಕ್ಷ ರೂ. ಮೌಲ್ಯದ 84 ಗ್ರಾಂ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಳ್ಳಲಾಗಿದೆ.

ಶ್ರೀರಾಮಪುರ ನಿವಾಸಿಗಳಾದ ಅರ್ಜುನ್ (28), ರಾಕ್ (26) ಮತ್ತು ನಾಗರಾಜು (26) ಬಂಧಿತರು. ನಗರತಪೇಟೆ ಮುಖ್ಯರಸ್ತೆಯಲ್ಲಿ ಮೊಹದಿ ಹಸನ್ ಎಂಬುವರು ಜ್ಯುವೆಲರಿ ಅಂಗಡಿಯನ್ನಿಟ್ಟುಕೊಂಡು ಚಿನ್ನದ ರಿಫೈನರಿ ಕೆಲಸ ಮಾಡುತ್ತಿದ್ದರು. ಆರೋಪಿಗಳು ಮೇ 6ರಂದು ರಾತ್ರಿ, ಕಂಪನಿಯ ಕಟ್ಟಡದ 5ನೇ ಮಹಡಿಯ ಶೌಚಾಲಯದ ಕಿಟಕಿಯ ಮೂಲಕ ಕಳ್ಳರು ಒಳನುಗ್ಗಿದ್ದರು. ಅಲ್ಲಿ ಗೋಲ್ಡ್ ರಿಫೈನರಿ ಮಾಡಲು ಇಟ್ಟಿದ್ದ ಚಿನ್ನದ ಗಟ್ಟಿಯನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಖಚಿತ ಮಾಹಿತಿಯನ್ನಾಧರಿಸಿ ಮೂವರು ಆರೋಪಿಗಳನ್ನು ಶ್ರೀರಾಮಪುರ ಬಳಿ ವಶಕ್ಕೆ ಪಡೆದಿದ್ದಾರೆ. ವಿಚಾರಣೆಗೆ ಒಳಪಡಿಸಿದಾಗ, ಸುಲಭವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಚಿನ್ನದ ಗಟ್ಟಿಗಳನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಆರೋಪಿಯೊಬ್ಬನ ಸ್ನೇಹಿತನಿಂದ 15ಗ್ರಾಂ ಚಿನ್ನದ ಗಟ್ಟಿ ಹಾಗೂ ಓಕಳಿಪುರದ ಆರೋಪಿಯೊಬ್ಬನ ವಾಸದ ಮನೆಯಿಂದ 69 ಗ್ರಾಂ ಚಿನ್ನದ ಗಟ್ಟಿ ಸೇರಿದಂತೆ ಒಟ್ಟು 84 ಗ್ರಾಂ ಚಿನ್ನದ ಗಟ್ಟಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಅರಿವು



ಬೆಂಗಳೂರು ಉತ್ತರ ನಗರ ಪಾಲಿಕೆ ವತಿಯಿಂದ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಹೀಟ್-ಹೆಲ್ತ್ ಪ್ರೋಟೋಕಾಲ್ ಕಾರ್ಯಕ್ರಮದ ಅಂಗವಾಗಿ ಆಶಾ ಕಾರ್ಯಕರ್ತೆಯರು, ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ಸಿಬ್ಬಂದಿ ಹಾಗೂ ಪೌರಕಾರ್ಮಿಕರಿಗೆ ಬಿಸಿಲಿನ ಪರಿಣಾಮಗಳ ಬಗ್ಗೆ ಅರಿವು ನೀಡಲಾಯಿತು. ಆರೋಗ್ಯ ರಕ್ಷಣೆಗಾಗಿ ವಿವಿಧ ಸಾಮಗ್ರಿ ವಿತರಿಸಲಾಯಿತು.

ಕಿರುಸುದ್ದಿ

ಕನ್ನಡ ಕಲಿಕೆ ವಿರುದ್ಧ ಸಿಬಿಎಸ್‌ಇ ನಡೆಗೆ ಆಕ್ಷೇಪ

• **ಬೆಂಗಳೂರು:** ರಾಜ್ಯದಲ್ಲಿ ಜಾರಿಯಲ್ಲಿರುವ ಕನ್ನಡ ಭಾಷಾ ಕಲಿಕಾ ಕಾಯ್ದೆಗೆ ವಿರುದ್ಧವಾಗಿ ಸಿಬಿಎಸ್‌ಇ ಮಂಡಳಿ ನಡೆದುಕೊಳ್ಳುತ್ತಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ. ಈ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿರುವ ಪ್ರಾಧಿಕಾರವು, ಮೇ 15ರಂದು ಸಿಬಿಎಸ್‌ಇ ಹೊರಡಿಸಿರುವ ಆದೇಶವನ್ನು ತಕ್ಷಣ ಹಿಂಪಡೆದು ಪರಿಷ್ಕರಿಸುವಂತೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ಹೇರಬೇಕು. 2015ರಿಂದ ಜಾರಿಯಲ್ಲಿರುವ ಕನ್ನಡ ಭಾಷಾ ಕಲಿಕಾ ಕಾಯ್ದೆಯ ಪ್ರಕಾರ ರಾಜ್ಯದ ಎಲ್ಲ ಶಾಲೆಗಳಲ್ಲೂ ಕನ್ನಡ ಕಲಿಕೆ ಕಡ್ಡಾಯವಾಗಿದೆ. ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಆಯ್ಕೆ ಮಾಡುವುದು ಅನಿವಾರ್ಯವಾಗಿದ್ದು, ಸಿಬಿಎಸ್‌ಇ ಮಂಡಳಿಯ ಹೊಸ ಸೂಚನೆ ಈ ಕಾನೂನಿನ ಆಶಯಕ್ಕೆ ವಿರುದ್ಧವಾಗಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ. ಸಿಬಿಎಸ್‌ಇ ಶಾಲೆಗಳ ಸಂಖ್ಯೆ ರಾಜ್ಯದಲ್ಲಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಒಮ್ಮೆ ಎನ್‌ಒಸಿ ನೀಡಿದ ಬಳಿಕ ಶಿಕ್ಷಣ ಇಲಾಖೆಯ ನಿಯಂತ್ರಣ ಸೀಮಿತವಾಗುತ್ತಿರುವುದು ಗಂಭೀರ ವಿಷಯ. ಕನ್ನಡ ಅನುಷ್ಠಾನದಲ್ಲಿ ಲೋಪ ಕಂಡುಬಂದರೆ ಎನ್‌ಒಸಿ ರದ್ದುಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರ ಕಾಯ್ದಿರಿಸಿಕೊಳ್ಳಬೇಕೆಂದು ಒತ್ತಾಯಿಸಿದೆ.

ಬಾಲಕಿ ಪದ್ಮಾವತಿಗೆ ಪ್ರಶಸ್ತಿ

• **ಯಲಹಂಕ:** ಯಲಹಂಕದ ವೆಂಕಟಾಲ ಗ್ರಾಮದ ಸರ್ಕಾರಿ ಶಾಲೆಯ ಎಂಟು ವರ್ಷದ ಪದ್ಮಾವತಿ ಪ್ರತಿಷ್ಠಿತ ಎಐಟಿಎ (ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಷನ್)ನ ಅಂಡರ್-10 ವಿಭಾಗದ ರಾಷ್ಟ್ರೀಯ ಪ್ರಶಸ್ತಿ ಗೆಲ್ಲುವ ಮೂಲಕ ಅಪ್ರತಿಮ ಸಾಧನೆಗೆ ಭಾಜನಳಾಗಿದ್ದಾಳೆ. ಅಮೋಘ ಸ್ಪೋರ್ಟ್ಸ್, ಅಖಿಲ ಭಾರತ ಟೆನ್ನಿಸ್ ಅಸೋಸಿಯೇಷನ್(ಎಐಟಿಎ), ಮತ್ತು ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಸಹಯೋಗ ದಲ್ಲಿ ಬೆಂಗಳೂರಿನ ಫಾರ್ಚೂನ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಮೇ.15 ರಿಂದ 17 ರವರೆಗೆ ನಡೆದ ಪ್ರತಿಷ್ಠಿತ ಎಐಟಿಎ ರಾಷ್ಟ್ರ ಮಟ್ಟದ ಅಂಡರ್-10 ಟೆನ್ನಿಸ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗೆಲ್ಲುವ ಮೂಲಕ ತಾನು ಓದಿದ ಶಾಲೆಗೆ ಮತ್ತು ಪೋಷಕರಿಗೆ ಕೀರ್ತಿ ತಂದು ಕೊಟ್ಟಿದ್ದಾಳೆ.

ಕ್ವಾಟರರ್ ಫೈನಲ್ಸ್ ನಲ್ಲಿ ತಮಿಳುನಾಡಿನ ಅರ್ಚಿತಿ ಹರಿಧ್ರ ಪ್ರಸನ್ನ ಅವರನ್ನು 8-0ಅಂತರದಲ್ಲಿ ಸೋಲಿಸಿ ಸೆಮಿಫೈನಲ್ಸ್‌ಗೆ ಆಯ್ಕೆಯಾದ ಪದ್ಮಾವತಿ, ಸೆಮಿಫೈನಲ್ಸ್ ಹಂತದಲ್ಲಿ ಅಮೈರಾ ಜಿ ಆನಂದ್ ಅವರನ್ನು 4-1, 1-4, 12-10ಅಂತರದಲ್ಲಿ ಸೋಲಿಸಿ ಫೈನಲ್ಸ್‌ಗೆ ಆಯ್ಕೆಯಾಗಿ, ಅಂತಿಮ ಸುತ್ತಿನ ಫೈನಲ್ಸ್ ನಲ್ಲಿ ಕಿಮಯಾ ಅವರನ್ನು ಒಂದು ಸೆಟ್ ಅನ್ನು ಸಹ ಕಳೆದುಕೊಳ್ಳದೆ ಸೋಲಿಸುವ ಮೂಲಕ ಟ್ರೋಫಿ ಮುಡಿಗೇರಿಸಿಕೊಂಡರು.

ಚಾಲಕನ ಮೇಲೆ ಹಲ್ಲೆ: ಆರೋಪಿಗೆ ಶೋಧ

• **ಬೆಂಗಳೂರು:** ರಸ್ತೆಯಲ್ಲಿ ಓವರ್ ಟೇಕ್ ಮಾಡುವ ವಿಚಾರಕ್ಕೆ ಬಿಎಂಟಿಸಿ ಬಸ್ ಅಡ್ಡಗಟ್ಟಿ ಚಾಲಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ ಆರೋಪಿಗಳ ಪೈಕಿ ಒಬ್ಬನನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ. ಇನ್ನುಳಿದ ಆರೋಪಿಗಳ ಪತ್ತೆಗಾಗಿ ಶೋಧ ಮುಂದುವರಿಸಿದ್ದಾರೆ. ಬಿಳೇಕಹಳ್ಳಿಯ ನಿವಾಸಿಯಾದ ಮುಹಮ್ಮದ್ ರೊಜೇಜ್ (22) ಬಂಧಿತ ಆರೋಪಿ. ಮೇ.12 ರಂದು ಮಧ್ಯಾಹ್ನ 2.30 ರ ಸುಮಾರಿನಲ್ಲಿ ಬನಶಂಕರಿಯಿಂದ ಬನ್ನೇರುಘಟ್ಟಕ್ಕೆ ಬಿಎಂಟಿಸಿ ಬಸ್ ಹೋಗುತ್ತಿತ್ತು. ಬನ್ನೇರುಘಟ್ಟ ಮುಖ್ಯ ರಸ್ತೆಯ ಗೊಟ್ಟಿಗೆರೆ ಬಳಿ ಓವರ್ ಟೇಕ್ ಮಾಡುವ ವಿಚಾರಕ್ಕೆ ಒಂದೇ ಬೈಕಿನಲ್ಲಿ ಬಂದ ಮೂವರು ದುಷ್ಕರ್ಮಿಗಳು ಬಸ್ಸನ್ನು ಅಡ್ಡಗಟ್ಟಿದ್ದಾರೆ.

378 ಕೋಟಿ ರೂ. ವೆಚ್ಚದ ಮಹತ್ವದ ಕಾಮಗಾರಿ | ಹೊರವರ್ತುಲ ರಸ್ತೆಗೆ ವೈಟ್ ಟಾಪಿಂಗ್
ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆ

• **ಬೆಂಗಳೂರು:** ನಗರದ ಅತ್ಯಂತ ಪ್ರಮುಖ ಆರ್ಥಿಕ ವಲಯವಾಗಿರುವ ಹೊರ ವರ್ತುಲ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ (ವೈಟ್ ಟಾಪಿಂಗ್) ಮಾರ್ಪಡಿಸಲು ಸರ್ಕಾರ ಮುಂದಾಗಿದ್ದು, ಅಂದಾಜು 378 ಕೋಟಿ ರೂಪಾಯಿ ವೆಚ್ಚದ ಈ ಕಾಮಗಾರಿಯಿಂದಾಗಿ ಮುಂದಿನ ಕನಿಷ್ಠ ಒಂದು ವರ್ಷಗಳ ಕಾಲ ಮತ್ತಷ್ಟು ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂವರೆಗಿನ 17.1 ಕಿಲೋಮೀಟರ್ ಉದ್ದದ ಐಟಿ ಕಾರಿಡಾರ್ ರಸ್ತೆಯನ್ನು ಸಂಪೂರ್ಣವಾಗಿ ಅಗೆದು, ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸಲು ಸರ್ಕಾರ ಬೃಹತ್ ಯೋಜನೆ ರೂಪಿಸಿದೆ. ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ನೇತೃತ್ವದಲ್ಲಿ ಈ ಕಾಮಗಾರಿ ನಡೆಯುತ್ತಿದ್ದು, ಸದ್ಯ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ಇರುವ ಡಾಂಬರು ರಸ್ತೆಯನ್ನು ಕಿತ್ತುಹಾಕಿ, 190 ಮಿಲಿಮೀಟರ್ ದಪ್ಪದ ಬಲಿಷ್ಠ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಲಾಗುತ್ತಿದೆ. ಒಟ್ಟು 17.1 ಕಿ.ಮೀ ವ್ಯಾಪ್ತಿಯನ್ನು ಎರಡು ಹಂತದಲ್ಲಿ ಅಭಿವೃದ್ಧಿಪಡಿಸಲು ಬಿ-ಸ್ಮೈಲ್ ಮುಂದಾಗಿದೆ. ಮೊದಲ ಹಂತದಲ್ಲಿ ಸಿಲ್ಕ್ ಬೋರ್ಡ್‌ನಿಂದ ಇಬ್ಲೂರು ವರೆಗೆ 5.4



ಕಿ.ಮೀ, ಎರಡನೇ ಹಂತದಲ್ಲಿ ಇಬ್ಲೂರಿನಿಂದ ಕೆ.ಆರ್.ಪುರಂ ವರೆಗೆ 11.6 ಕಿ.ಮೀ ಕಾಂಗಾರಿ ನಡೆಯಲಿದೆ.

ಈ ಯೋಜನೆಯಲ್ಲಿ ಕೇವಲ ರಸ್ತೆ ಮಾತ್ರವಲ್ಲದೆ ಸಿಲ್ಕ್ ಬೋರ್ಡ್, ಎಚ್‌ಎಸ್‌ಆರ್ ಲೇಔಟ್, ಅಗ್ರಹಾರ, ಇಬ್ಲೂರು, ಮಾರತ್‌ಹಳ್ಳಿ ಮತ್ತು ಲೌರಿ ಜಂಕ್ಷನ್ ಸೇರಿದಂತೆ ಆರು ಪ್ರಮುಖ ಜಂಕ್ಷನ್‌ಗಳನ್ನು ಸಹ ನವೀಕರಿಸಲಾಗುತ್ತಿದೆ. ಅಲ್ಲದೆ, ಫುಟ್‌ಪಾತ್ ಅಭಿವೃದ್ಧಿ, ರಸ್ತೆ ದೀಪಗಳು ಮತ್ತು ಒಳಚರಂಡಿ ವ್ಯವಸ್ಥೆಗಾಗಿ ಕೋಟ್ಯಂತರ ರೂಪಾಯಿ ಮೀಸಲಿಡಲಾಗಿದೆ.

ಟ್ರಾಫಿಕ್ ಬಿಸಿ ಸಾಧ್ಯತೆ: ಈ ಹೊರವರ್ತುಲ ರಸ್ತೆಯು ಬೆಂಗಳೂರಿನ ಜೀವನಾಡಿಯಾಗಿದ್ದು, ಸುಮಾರು 23 ಟೆಕ್ ಪಾರ್ಕ್‌ಗಳು ಹಾಗೂ 450ಕ್ಕೂ ಹೆಚ್ಚು ಐಟಿ ಕಂಪನಿಗಳು ಇಲ್ಲಿವೆ. ಪ್ರತಿದಿನ ಎಂಟು ಲಕ್ಷಕ್ಕೂ ಅಧಿಕ ಉದ್ಯೋಗಿಗಳು ಮತ್ತು ವಾಹನ ಸವಾರರು ಈ ರಸ್ತೆಯನ್ನು ಅವಲಂಬಿಸಿದ್ದಾರೆ. ಕಾಮಗಾರಿ ಆರಂಭವಾದರೆ ರಸ್ತೆಯ ಅರ್ಧದಷ್ಟು ಭಾಗ ಬಂದ್ ಆಗುವುದರಿಂದ, ಕಚೇರಿಗೆ ಹೋಗುವವರು ಗಂಟೆಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕಬೇಕಾಗಬಹುದು ಎಂದು ಹೇಳಲಾಗುತ್ತಿದೆ.

ಮೊದಲು ಸರ್ವಿಸ್ ರಸ್ತೆ, ಆಮೇಲೆ ಮೇನ್ ರೋಡ್

ಕಾಮಗಾರಿ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಪ್ಲಾನ್ ಮಾಡಲಾಗಿದೆ.ಮೊದಲಿಗೆ ಸರ್ವಿಸ್‌ರಸ್ತೆಗಳು, ಫುಟ್‌ಪಾತ್ ಮತ್ತು ಚರಂಡಿ ಕೆಲಸವನ್ನು ಮುಗಿಸಲಾಗುತ್ತದೆ. ಸರ್ವಿಸ್ ರಸ್ತೆ ಸಿದ್ಧವಾದ ಬಳಿಕ, ಮುಖ್ಯ ರಸ್ತೆಯ ಸಂಚಾರವನ್ನು ಸರ್ವಿಸ್ ರಸ್ತೆಗೆ ಡೈವರ್ಟ್ ಮಾಡಿ ಕಾಂಕ್ರೀಟ್ ಕೆಲಸ ಆರಂಭಿಸಲಾಗುತ್ತದೆ. ಮುಂಗಾರು ಮಳೆ ಹತ್ತಿರ ಬರುತ್ತಿದ್ದರೂ ಕೆಲಸವನ್ನು ವಿಳಂಬ ಮಾಡದೆ, 9ರಿಂದ 12 ತಿಂಗಳೊಳಗೆ ಮುಗಿಸುವ ಗುರಿಯನ್ನು ಹೊಂದಲಾಗಿದೆ. ಟ್ರಾಫಿಕ್ ಪೊಲೀಸರು ಪರ್ಯಾಯ ಮಾರ್ಗಗಳ ಬಗ್ಗೆ ಇನ್ನು ಕೆಲವೇ ದಿನದಲ್ಲಿ ಅಧಿಕೃತ ಪ್ರಕಟಣೆ ಹೊರಡಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ವಿವಿಧೆಡೆ ದ್ವಿಚಕ್ರವಾಹನ ಕಳವು
ಹತ್ತು ದ್ವಿಚಕ್ರವಾಹನ ವಶ: ಬಂಧನ

• **ಬೆಂಗಳೂರು:** ನಗರದ ವಿವಿಧ ಭಾಗಗಳಲ್ಲಿ ದ್ವಿಚಕ್ರ ವಾಹನವನ್ನು ಕಳವು ಮಾಡುತ್ತಿದ್ದ ಅಂತಾರಾಜ್ಯ ಕಳ್ಳನೊಬ್ಬನನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ಒಟ್ಟು 5.30 ಲಕ್ಷ ರೂ. ಮೌಲ್ಯದ 10 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ಆಂಧ್ರಪ್ರದೇಶದವನಾದ ಖಾದರ್‌ಬಾಷಾ (29) ಬಂಧಿತ ಆರೋಪಿ. ಈತ ಮಂಗಮ್ಮನಪಾಳ್ಯದಲ್ಲಿ ವಾಸವಾಗಿದ್ದುಕೊಂಡು ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನ ಸೆಕ್ಟರ್ 7 ರ ನಿವಾಸಿ ಮಹೇಶ್ ಎಂಬವರು ರಾತ್ರಿ ತಮ್ಮ ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದರು. ಆದರೆ, ಬೆಳಗಾಗುವಷ್ಟರಲ್ಲಿ ವಾಹನ ಕಳವಾಗಿದ್ದು, ಈ ಬಗ್ಗೆ ಅವರು ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಮಾಹಿತಿ ಕಲೆಹಾಕಿದ್ದರು. ಖಚಿತ ಮಾಹಿತಿ ಮೇರೆಗೆ ಆಕ್ಸ್‌ಫರ್ಡ್ ಕಾಲೇಜು ಮೈದಾನದ ಹತ್ತಿರ ದ್ವಿಚಕ್ರ ವಾಹನ ಸಮೇತ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದರು.

ಆತನನ್ನು ವಿಚಾರಣೆಗೆ ಒಳಪಡಿಸಿದಾಗ, ನಗರದ ವಿವಿಧ ಕಡೆಗಳಲ್ಲಿ ದ್ವಿಚಕ್ರ ವಾಹನವನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಕದ್ದ ವಾಹನಗಳನ್ನು ಮಾರಾಟ ಮಾಡುವ ಸಲುವಾಗಿ ಎಚ್‌ಎಸ್‌ಆರ್ ಲೇಔಟ್‌ನ ಸೆಕ್ಟರ್ 1ರ ಮಿಲಿಟರಿ ಕಾಂಪೌಂಡ್ ಬಳಿ ಹಾಗೂ ಆಗರದಲ್ಲಿರುವ ಖಾಲಿ ಜಾಗದಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿದ್ದಾನೆ. ಆರೋಪಿ ನೀಡಿದ ಮಾಹಿತಿಯಂತೆ ಆ ಎರಡು ಜಾಗಗಳಿಂದ ಸುಮಾರು 5.30 ಲಕ್ಷ ರೂ. ಮೌಲ್ಯದ 10 ದ್ವಿಚಕ್ರ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆರೋಪಿಯ ಬಂಧನದಿಂದ ಎಚ್‌ಎಸ್‌ಆರ್ ಲೇಔಟ್ ಠಾಣೆಯ 8 ಪ್ರಕರಣಗಳು, ಎಲೆಕ್ಟ್ರಾನಿಕ್ ಸಿಟಿ ಮತ್ತು ವರ್ತೂರು ಠಾಣೆಯ ತಲಾ ಒಂದು ಪ್ರಕರಣಗಳು ಸೇರಿದಂತೆ ಒಟ್ಟು 10 ಕಳವು ಪ್ರಕರಣಗಳು ಪತ್ತೆಯಾಗಿವೆ.

ಅಮೆರಿಕ ನಿರ್ಮಿತ ಗುಂಡು ಸಹಿತ ಪಿಸ್ತೂಲ್ ಮ್ಯಾಗಝೀನ್ ಪತ್ತೆ
ವಸತಿಗೃಹ ಮಾಲೀಕನಿಂದ ದೂರು: ಬಂಧನ

• **ಬೆಂಗಳೂರು:** ನಗರದ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ಅಮೆರಿಕ ನಿರ್ಮಿತ ಜೀವಂತ ಗುಂಡುಗಳಿದ್ದ ಪಿಸ್ತೂಲ್ ಮ್ಯಾಗಝೀನ್ ಪತ್ತೆಯಾಗಿದೆ. ಈ ಸಂಬಂಧ ಜೆ.ಸಿ. ನಗರ ಪೊಲೀಸರು ಆರೋಪಿ ಅರ್ಮಾನ್ ಮುತಾಹರ್ ಎಂಬಾತನನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗಟ್ಟಿದ್ದಾರೆ.

ಯುವತಿಯೊಬ್ಬಳೊಂದಿಗೆ ಲಾಡ್ಜ್‌ಗೆ ಬಂದಿದ್ದ ಆರೋಪಿಯು ತಂಗಿದ್ದ ಕೊಠಡಿಯಲ್ಲೇ ಪಿಸ್ತೂಲ್ ಮ್ಯಾಗಜೀನ್ ಅನ್ನು ಮರೆತು ಬಿಟ್ಟು ಹೋಗಿದ್ದ ಎನ್ನಲಾಗಿದೆ. ಏ. 27ರಂದು ರಾತ್ರಿ ಆರೋಪಿ ಅರ್ಮಾನ್ ಮುತಾಹರ್ ಯುವತಿಯೊಬ್ಬಳ ಜತೆ ಬಂದು ಖಾಸಗಿ ಹೋಟೆಲ್‌ನ ಕೊಠಡಿಯೊಂದನ್ನು ಬುಕ್ ಮಾಡಿದ್ದ. ಗುರುತಿನ ಚೀಟಿಗಾಗಿ ತನ್ನ ಪಾಸ್‌ಪೋರ್ಟ್ ನೀಡಿದ್ದ ಆತ, ಮರುದಿನ ಬೆಳಗ್ಗೆ ಕೊಠಡಿಯಿಂದ ಚೆಕ್-ಔಟ್ ಆಗಿದ್ದ ಎಂದು ಹೋಟೆಲ್ ಮ್ಯಾನೇಜರ್ ತಿಳಿಸಿದ್ದಾರೆ.

ಹೋಟೆಲ್‌ನಿಂದ ನಿರ್ಗಮಿಸಿದ ಸ್ವಲ್ಪ ಹೊತ್ತಿನ ಬಳಿಕ ರಿಸೆಪ್ಷನ್‌ಗೆ ಕರೆ ಮಾಡಿದ್ದ ಅರ್ಮಾನ್, ಜೀವಂತ ಗುಂಡುಗಳಿರುವ ತನ್ನ ಪಿಸ್ತೂಲಿನ ಮ್ಯಾಗಜೀನ್ ಅನ್ನು ರೂಮ್‌ನಲ್ಲೇ ಮರೆತು ಬಿಟ್ಟು ಬಂದಿರುವುದಾಗಿ ತಿಳಿಸಿ, ಅದನ್ನು ಎತ್ತಿಡುವಂತೆ ಕೋರಿದ್ದನು. ಅದರಂತೆ ಹೌಸ್ ಕೀಪಿಂಗ್ ಸಿಬ್ಬಂದಿ ಕೊಠಡಿಯನ್ನು ಪರಿಶೀಲಿಸಿದಾಗ ಜೀವಂತ ಗುಂಡುಗಳಿದ್ದ ಮ್ಯಾಗಜೀನ್ ಪತ್ತೆಯಾಗಿದೆ. ಒಂದೆರಡು ದಿನದಲ್ಲಿ ಬಂದು ಪಡೆದುಕೊಳ್ಳುವುದಾಗಿ ಹೇಳಿದ್ದ ಆರೋಪಿ, ಹೋಟೆಲ್ ಸಿಬ್ಬಂದಿ ಹಲವು ಬಾರಿ ಕರೆ ಮಾಡಿ ನೆನಪಿಸಿದರೂ ವಾಪಸ್ ಪಡೆಯಲು ಬಂದಿರಲಿಲ್ಲ.

ಕೊನೆಗೆ ಮೇ 4ರಂದು ಹೋಟೆಲ್ ಮ್ಯಾನೇಜರ್ ಕರೆ ಮಾಡಿ, ನಿಮ್ಮ



ಮ್ಯಾಗಜೀನ್ ಅನ್ನು ನಾವು ಪೊಲೀಸರಿಗೆ ಒಪ್ಪಿಸುತ್ತಿದ್ದೇವೆ ಎಂದು ಎಚ್ಚರಿಸಿದಾಗ, ಸರಿ, ನಾನು ಪೊಲೀಸ್ ಠಾಣೆಯಿಂದಲೇ ಪಡೆದು ಕೊಳ್ಳುತ್ತೇನೆ ಎಂದು ಅರ್ಮಾನ್ ಉತ್ತರ ನೀಡಿದ್ದ ಎನ್ನಲಾಗಿದೆ. ಆರೋಪಿಯ ಈ ಬೇಜವಾಬ್ದಾರಿ ವರ್ತನೆಯಿಂದ ಅನುಮಾನಗೊಂಡ ಹೋಟೆಲ್ ಮ್ಯಾನೇಜರ್ ತಕ್ಷಣವೇ ಜೆ.ಸಿ.ನಗರ ಪೊಲೀಸ್ ಠಾಣೆಗೆ ದೂರು ನೀಡಿ ಮ್ಯಾಗಜೀನ್ ಅನ್ನು ಪೊಲೀ ಸರಿಗೆ ಹಸ್ತಾಂತರಿಸಿದ್ದಾರೆ.

ವಿವಿ ಸಿಂಡಿಕೇಟ್‌ಗೆ ಎಚ್.ಜೆ.ಕೃಷ್ಣ ನೇಮಕ

• **ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಂಡಳಿಯ ಸದಸ್ಯರಾಗಿ ಡಾ.ಎಚ್.ಜೆ.ಜೈಕೃಷ್ಣ ಅವರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದ್ದಾರೆ.



ಡಾ. ಎಚ್.ಜೆ. ಜೈಕೃಷ್ಣ ಅವರ ಅಧಿಕಾರ ಅವಧಿಯು ಮೂರು ವರ್ಷಗಳವರೆಗೆ ಇರಲಿದೆ. ದಂತ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಡಾ. ಎಚ್.ಜೆ. ಕೃಷ್ಣ ಅವರು ಎಂಡಿಎಸ್ ಮತ್ತು ರಾಷ್ಟ್ರೀಯ ಕಾನೂನು ಶಾಲೆಯಿಂದ ಪದವಿ ಪಡೆದಿದ್ದಾರೆ. ಶೈಕ್ಷಣಿಕ ಮತ್ತು ಆಡಳಿತಾತ್ಮಕ ರಂಗದಲ್ಲಿ ದೀರ್ಘಕಾಲದ ಅನುಭವ ಹೊಂದಿರುವ ಇವರು, ಈ ಹಿಂದೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಹೊಸ ತಂತ್ರಜ್ಞಾನದ ಮೇಲೆ ಹೆಚ್ಚಿನ ನಿಗಾ

• **ಬೆಂಗಳೂರು:** ವಿದ್ಯಾರ್ಥಿಗಳನ್ನು ಭವಿಷ್ಯದ ತಂತ್ರಜ್ಞಾನಕ್ಕೆ ಸಜ್ಜುಗೊಳಿಸುವ ಶಿಕ್ಷಣ ನೀಡಬೇಕೆನ್ನುವ ಆಶಯದಿಂದ ಎಂಐಟಿ ಬೆಂಗಳೂರು ಸೆಮಿಕಂಡಕ್ಟರ್ ತಯಾರಿಕೆ, ಎಐ ಹಾಡ್‌ವೇರ್, ಎಲೆಕ್ಟ್ರಿಕ್ ವಾಹನಗಳ ಚಿಪ್ ವ್ಯವಸ್ಥೆ ಮತ್ತು ಅತ್ಯಾಧುನಿಕ ಎಲೆಕ್ಟ್ರಾನಿಕ್ಸ್ ಉತ್ಪಾದನೆಯಂತಹ ಹೊಸ ತಂತ್ರಜ್ಞಾನಗಳ ಮೇಲೆ ಹೆಚ್ಚಿನ ಗಮನ ಹರಿಸಿದೆ.

» ಟಿಐಎಸ್‌ಎಂಸಿ ಜತೆ ಎಂಐಟಿ ಬೆಂಗಳೂರು ಶೈಕ್ಷಣಿಕ ಒಪ್ಪಂದ

ಈ ನಿಟ್ಟಿನಲ್ಲಿ ವಿಶ್ವದ ಪ್ರಮುಖ ಚಿಪ್ ತಯಾರಿಕಾ ಸಂಸ್ಥೆ ಟಿಐಎಸ್‌ಎಂಸಿ ಜತೆ ಎಂಐಟಿ ಬೆಂಗಳೂರು ಶೈಕ್ಷಣಿಕ ಒಪ್ಪಂದ ಮಾಡಿಕೊಳ್ಳಲಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅಂತರರಾಷ್ಟ್ರೀಯ ಮಟ್ಟದ ಉದ್ಯೋಗಾವಕಾಶಗಳಿಗೆ ದಾರಿಯಾಗಲಿದೆ. ಸುಧಾರಿತ ಫ್ಯಾಬ್ರಿಕೇಷನ್ ಪ್ರಕ್ರಿಯೆಗಳು ಭವಿಷ್ಯದ ಡೀಪ್-ಟೆಕ್ ಉದ್ಯಮಗಳ ನೇರ ಅನುಭವ ವಿದ್ಯಾರ್ಥಿಗಳಿಗೆ ದೊರೆಯಲಿದೆ.

ಈ ಬಗ್ಗೆ ಮಾತನಾಡಿದ ಬೆಂಗಳೂರು ಸಹ ಕುಲಪತಿ ಪ್ರೊ.ಮಧುವೀರರಾಘವನ್, ಭಾರತದ ಸೆಮಿಕಂಡಕ್ಟರ್ ಕ್ಷೇತ್ರದ ಯಶಸ್ಸು ನೀತಿಗಳಿಂದಷ್ಟೇ ಸಾಧ್ಯವಿಲ್ಲ. ಅದಕ್ಕೆ ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳು, ಸುಧಾರಿತ ಉತ್ಪಾದನಾ ಸಾಮರ್ಥ್ಯ ಮತ್ತು ಜಾಗತಿಕ ಮಟ್ಟದ ಪ್ರತಿಭೆಗಳ ಅಗತ್ಯವಿದೆ. ಹೊಸ ತಂತ್ರಜ್ಞಾನಗಳಿಗೆ ವಿದ್ಯಾರ್ಥಿಗಳ ಸಜ್ಜುಗೊಳಿಸಬೇಕು. ಶಿಕ್ಷಣ ಸಂಸ್ಥೆ, ಉದ್ಯಮ ಕ್ಷೇತ್ರ ಮತ್ತು ಅಂತಾರಾಷ್ಟ್ರೀಯ ಸಹಭಾಗಿತ್ವ ಹೇಗೆ ಒಟ್ಟಾಗಿ ಕೆಲಸ ಮಾಡಬಹುದು ಎಂಬುದನ್ನು ಇಂತಹ ಪ್ರಯತ್ನಗಳು ತೋರಿಸುತ್ತವೆ ಎಂದರು.

ಸಮಾಜ ಶಾಸ್ತ್ರ ವಿಭಾಗದಲ್ಲಿ ರಾಜ್ಯಮಟ್ಟದ ಕಾರ್ಯಾಗಾರ
ಡಿಜಿಟಲ್ ಯುಗದಲ್ಲಿ ಹಲವು ಸವಾಲು

• **ಬೆಂಗಳೂರು:** ಡಿಜಿಟಲೀಕರಣ ಯುಗದ ಹೊಸ ಸವಾಲುಗಳಿಗೆ ಮುಖಾಮುಖಿಯಾಗಿ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧನೆಗೆ ಸೂಕ್ತ ಕಾಯಕಲ್ಪ ಒದಗಿಸುವ ಅಗತ್ಯವಿದೆ ಎಂದು ವಿಧಾನ ಪರಿಷತ್ತಿನ ಸದಸ್ಯ ಪುಟ್ಟಣ್ಣ ಪ್ರತಿಪಾದಿಸಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಇಂದಿನ ಪೀಳಿಗೆಯ ಮಕ್ಕಳಲ್ಲಿ ಸಹಜವಾಗಿ ಕುಡಿಯೊಡೆದಿರುವ ತೀಕ್ಷ್ಣ ಬುದ್ಧಿಮತ್ತೆ ಮತ್ತು ಅನ್ವೇಷಣಾತ್ಮಕ ಪ್ರತಿಭೆಗೆ ಪೂರಕವಾದ ಶೈಕ್ಷಣಿಕ ವಾತಾವರಣ ನಿರ್ಮಿಸುವ ಹೊಣೆ ವಿಶ್ವವಿದ್ಯಾಲಯಗಳ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಉನ್ನತ ಶಿಕ್ಷಣ ಹಂತದಲ್ಲಿ ಮಾನವಿಕ ವಿಜ್ಞಾನ ವಿಷಯಗಳ ಪಠ್ಯಕ್ರಮದ ಆಮೂಲಾಗ್ರ ಪರಿಷ್ಕರಣೆಯ ಜೊತೆಗೆ ತಂತ್ರಜ್ಞಾನ ಕಲಿಕೆಯನ್ನೂ ಬೆಸೆದು ಉದ್ಯೋಗ ಲಭ್ಯತೆಯ ಆಯಾಮ ನೀಡಬೇಕೆಂದು ಹೇಳಿದರು. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಡಾ.ಲಕ್ಷ್ಮೀಪತಿ. ಸಿ.ಜಿ. ಮಾತನಾಡಿ, ತಾಂತ್ರಿಕತೆ ಇಂದಿನ ಸಮಾಜವನ್ನು



ನಿಯಂತ್ರಿಸುತ್ತಿದ್ದು ಕೃತಕ ಮತ್ತು ಅಸಹಜ ಸಂಬಂಧಗಳ ಸೃಷ್ಟಿಗೂ ಕಾರಣವಾಗಿದೆ ಎಂದು ಎಚ್ಚರಿಸಿದರು.

ಕುಲಪತಿಗಳಾದ ಪ್ರೊ.ರಮೇಶ್.ಬಿ.ಮಾತನಾಡಿ, ಸಮಾಜ ವಿಜ್ಞಾನ ಹಾಗೂ ಮೂಲ ವಿಜ್ಞಾನಗಳನ್ನು ಜಡತ್ವದ ಚಿಪ್ಪಿನಿಂದ ಮುಕ್ತಗೊಳಿಸಿ ನಾವೀನ್ಯತೆಯ ಸ್ಪರ್ಶದ ಮೂಲಕ ಪ್ರಸ್ತುತಗೊಳಿಸಬೇಕಾದ ಅಗತ್ಯವಿದೆ. ಮಕ್ಕಳ ಮೇಲೂ ಅಪಾರ ಪ್ರಭಾವ ಬೀರುತ್ತಿರುವ ಡಿಜಿಟಲ್ ತಂತ್ರಜ್ಞಾನವನ್ನು ವಿವೇಚನಾಯುತವಾಗಿ ಬಳಸುವ ಮೂಲಕ ಸಾಮಾಜಿಕ ಸಂರಚನೆಯ ಸ್ವರೂಪವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ ಎಂದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ನಿರ್ಮಲಾ.ಎಂ., ಉಪನ್ಯಾಸಕರಾದ ಆರ್.ಕೆ.ನಾಗರಾಜ್ ಉಪಸ್ಥಿತರಿದ್ದರು.

ಮಳೆಗಾಗಿ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ
ಕುಡಿಯುವ ನೀರಿನ ಬವಣೆ ನೀಗಲು ಸಂಕಲ್ಪ

• **ಕೆಂಗೇರಿ:** ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ನೀರಿನ ಬವಣೆ ನೀಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕಗ್ಗಲೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಿಕ್ಕರಾಜು ಹೇಳಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಚೇಪಾಳ್ಯ ಗ್ರಾಮದ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಳೆ ಬರುವಿಕೆಗೆ ಮತ್ತು ನೀರಿನ ಬವಣೆ ನೀಗಿಸಲು ಗ್ರಾಮದ ಎಲ್ಲ ಮುಖಂಡರು ಸೇರಿ ವಿಶೇಷ ಪೂಜೆ ಸಲ್ಲಿಸಿ ಸಂಕಲ್ಪ ಮಾಡಲಾಯಿತು ಎಂದು ತಿಳಿಸಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಾಮಕೃಷ್ಣ ಮಾತನಾಡಿ, ಮಳೆ ಇಲ್ಲದೆ ಅಂತರ್ಜಲ ಮಟ್ಟ ಕುಸಿದಿರುವ ಹಿನ್ನೆಲೆಯಲ್ಲಿ ಸುಮಾರು 50ಕ್ಕಿಂತ ಹೆಚ್ಚು ಹೊಸ ಬೋರ್‌ವೆಲ್‌ಗಳು ಸ್ಥಗಿತಗೊಂಡು ಸಾರ್ವಜನಿಕರಿಗೆ ನೀರಿನ ಹಾಹಾಕಾರ ತಲೆದೂರಿದ ಹಿನ್ನೆಲೆಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಕುಂಬಳಗೋಡು ಗ್ರಾಮ ಪಂಚಾಯಿತಿಯ ಸಹಯೋಗದಲ್ಲಿ ಅಂಚೇಪಾಳ್ಯದ ಚಂದ್ರಮೌಳೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ




ಸಲ್ಲಿಸಿ, ಬೋರ್ ವೆಲ್ ಕೊರೆಸಿದಾಗ ಉತ್ತಮ ನೀರು ಬಂದ ಕಾರಣ ಹೊಸ ಬೋರ್‌ವೆಲ್ ಉದ್ಘಾಟಿಸಿ ಸಾರ್ವಜನಿಕರಿಗೆ ನೀರು ಪೂರೈಕೆಗೆ ಚಾಲನೆ ನೀಡಿ ಗ್ರಾಮೀಣ ಪ್ರದೇಶದ ಜನರಿಗೆ ನೀರಿನ ಬವಣೆ ನೀಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಣ್ಣಿನ ಮಗ ರಾಮಕೃಷ್ಣ, ನಂದಕುಮಾರ್, ಅನೀಸ್, ಜಮಿಲ್ ತಾಜ್, ಸನ್ನಾಉಲ್ಲಾ, ಶ್ರೀನಿವಾಸ್, ರಾಜಣ್ಣ, ಶಿವಮ್ಮ, ಭಾಗ್ಯಮ್ಮ, ಅನುಸೂಯ, ಶ್ವೇತಾ, ಶಾರದಾ, ಧರ್ಮಯ್ಯ, ಮೀನಾಕ್ಷಮ್ಮ, ಗೋವಿಂದಪ್ಪ ರಾಮೇಗೌಡ, ಮೂರ್ತಿ ಹಬೀಬ್ ಜಾನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಶೃಂಗೇರಿ ಶಂಕರ ಮಠದ ವತಿಯಿಂದ ಆದಿಶಂಕರಾಚಾರ್ಯರ ಸ್ಮರಣೆ ಅಂಗವಾಗಿ ನಮಃ ಶಂಕರಾಯ ಜಪ ಯಜ್ಞ, ಸ್ಥಳ : ಶೃಂಗೇರಿ ಶಂಕರ ಮಠ, ಬೆಳಗ್ಗೆ 6
- ವಿಶ್ವ ಜೇನು ದಿನಾಚರಣೆ. ಸ್ಥಳ: ನಾರ್ಥ್ ಬ್ಲಾಕ್ ಸಭಾಂಗಣ, ಜಿಕೆವಿಕೆ, ಬೆಳಗ್ಗೆ 10.30
- ಯಶೋಧರಾ ದಾಸಪ್ಪ ಪ್ರಶಸ್ತಿ ಪ್ರದಾನ-ಸುಗಮ ಸಂಗೀತ ಕಾರ್ಯಕ್ರಮ. ಸ್ಥಳ: ಕುವೆಂಪು ಸಭಾಂಗಣ,ಕಸಾಪ, ಚಾಮರಾಜಪೇಟೆ ಸಂ. 5ಗಂಟೆ
- ಶ್ರೀಮದ್ಭಾಗವತ ಸಪ್ತಾಹ ಕುರಿತು ಧಾರ್ಮಿಕ ಪ್ರವಚನ, ಸ್ಥಳ : ಭೀಮನಕಟ್ಟೆ ರಾಘವೇಂದ್ರ ಸ್ವಾಮಿಗಳ ಮಠ, ವಿದ್ಯಾರಣ್ಯಪುರ, ಸಂಜೆ 6.30

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಬುಧವಾರ, 20 ಮೇ 2026
ಬೆಂಗಳೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ಪಂಜಾಬ್	13	6	6	1	13	+0.227
ರಾಜಸ್ಥಾನ	12	6	6	0	12	+0.082
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಕಿರುಸುದ್ದಿ

ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಭಾರತದ ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಐದನೇ ಸುತ್ತಿನ ಪಂದ್ಯದಲ್ಲಿ ಡ್ರಾ ಮಾಡಿಕೊಂಡರು. ಮೊದಲ ಸುತ್ತಿನ ಪಂದ್ಯದಿಂದಲೂ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರಜ್ಞಾನಂದ ಅಮೆರಿಕದ ವೇಸ್ಲಿ ಸೋ ವಿರುದ್ಧ ಆಡಿದರು. ರೂಯಿ ಲೋಪೆಜ್‌ನಿಂದ ಶುರುವಾದ ಪಂದ್ಯದಲ್ಲಿ ಸ್ಪರ್ಧೆ ಸಮವಾಗಿತ್ತು. ಎರಡೂ ಕಡೆಯಿಂದಲೂ ಚಾಣಾಕ್ಷ ಪ್ರದರ್ಶನ ಕಂಡು ಬಂತು. ಎದುರಾಳಿ ಹೇರಿದ ಎಲ್ಲಾ ಒತ್ತಡಗಳನ್ನೂ ನೀಗಿಸಿದ ಪ್ರಜ್ಞಾನಂದ ಪಂದ್ಯವನ್ನು ಡ್ರಾಗೆ ಮುಗಿಸಿದರು. ಪಂದ್ಯಾವಳಿಯಲ್ಲಿ ಅವರು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಇಲ್ಲಿವರೆಗಿನ ಪಂದ್ಯಗಳಲ್ಲಿ ಅವರು, ನಾಲ್ಕು ಡ್ರಾ ಮತ್ತು ಒಂದು ಗೆಲುವಿನೊಂದಿಗೆ 3 ಅಂಕಗಳನ್ನು ಗಳಿಸಿದ್ದು, ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ವ್ಯಾನ್ ಫಾರೆಸ್ಟ್, ಅನೀಶ್ ಗಿರಿ ಮತ್ತು ವಿನ್ಸೆಂಟ್ ಕೀಮರ್ 3.5 ಅಂಕಗಳೊಂದಿಗೆ ಮೊದಲನೇ ಸ್ಥಾನದಲ್ಲಿದ್ದಾರೆ.

ಮೇ 29ರಿಂದ ಸರ್ಫಿಂಗ್ ಓಪನ್

ಬೆಂಗಳೂರು: ಪ್ರತಿಷ್ಠಿತ ಏಳನೇ ಇಂಡಿಯನ್ ಓಪನ್ ಸರ್ಫಿಂಗ್ ಕೂಟ ಮೇ 29ರಿಂದ 31ರವರೆಗೆ ಮಂಗಳೂರಿನ ಬ್ಲ್ಯೂ ಬೇ ತಣ್ಣೀರಭಾವಿಯಲ್ಲಿ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಸರ್ಫಿಂಗ್ ಸ್ಪರ್ಧೆ ನಡೆಯಲಿದೆ. ಹೀಗಿರುವಾಗ ಭಾರತ ಸರ್ಫಿಂಗ್ ಸಂಸ್ಥೆಯು ಭಾರತದ ಬದ್ಧತೆ ಮತ್ತು ಆಯ್ಕೆಯ ಭಾಗವಾಗಿ ಈ ಕೂಟವನ್ನು ಆಯೋಜಿಸಲಿದೆ. ಸರ್ಫಿಂಗ್ ಸ್ವಾಮಿ ಫೌಂಡೇಶನ್, ಮಂತ್ರಾ ಸರ್ಫ್ ಕ್ಲಬ್ ಜತೆಗೆ ಕರ್ನಾಟಕ ಸರ್ಫಿಂಗ್ ಸಂಸ್ಥೆ ಕೂಡ ಇದರ ಆಯೋಜಕತ್ವ ಪಡೆದಿದೆ. ಈ ಬಗ್ಗೆ ಮಂಗಳವಾರದಂದು ಘೋಷಿಸಿ ಮಾತನಾಡಿರುವ ಸಂಸ್ಥೆಯ ಸಂಸ್ಥೆಯ ಉಪಾಧ್ಯಕ್ಷ ರಾಮ್ ಮೋಹನ್, ಸರ್ಫಿಂಗ್ ಓಪನ್ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪ್ರದರ್ಶನವನ್ನು ಗಟ್ಟಿಗೊಳಿಸಲಿದೆ. ನಮ್ಮ ಸ್ಪರ್ಧಿಗಳ ಪ್ರದರ್ಶನದ ಮೇಲೆ ಸಕಾರಾತ್ಮಕ ಪರಿಣಾಮ ನೀಡಲಿದೆ, ಇದು ಅಷ್ಟೇ ಅಲ್ಲದೆ, ಅಭ್ಯಾಸ ಕೂಟವಾಗಿಯೂ ಪಾತ್ರ ವಹಿಸಲಿದೆ ಎಂದರು.

ಟೆನಿಸ್ ಓಪನ್: ಭಾರತೀಯರ ಉತ್ತಮ ಪ್ರದರ್ಶನ



ಬೆಂಗಳೂರು: ಮೂರು ದಿನಗಳ ಹಿಂದಷ್ಟೇ ಇಲ್ಲೇ ನಡೆದಿದ್ದ ಬೆಂಗಳೂರು ಓಪನ್ ಪಂದ್ಯಾವಳಿಯಲ್ಲಿ ಗೆದ್ದಿದ್ದ ಅಮೆರಿಕದ ಕೀಗನ್ ಸ್ಮಿತ್ ಅವರನ್ನು ಸೋಲಿಸಿರುವ ಭಾರತದ ಮನೀಶ್ ಸುರೇಶ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್. ಎಮ್. ಕೃಷ್ಣ ಸ್ಮರಣಾರ್ಥ ಓಪನ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದರು. ಮಂಗಳವಾರದ ಪಂದ್ಯದಲ್ಲಿ ಅವರು, 6-4, 2-6, 6-2ರಿಂದ ಗೆದ್ದರು. ಇನ್ನುಳಿದ ಪಂದ್ಯಗಳಲ್ಲೂ ಭಾರತದ ಟೆನಿಸ್ ಆಟಗಾರರು ಉತ್ತಮ ಪ್ರದರ್ಶನ ನೀಡಿದರು. ಸಿದ್ಧಾರ್ಥ್ ರಾವತ್ ಓಮರ್ ಜಸಿಕಾ ವಿರುದ್ಧ 7-6(4), 6-3ರಿಂದ ಗೆದ್ದುಕೊಂಡರು. ಮುಕುಂದ್ ಶಶಿಕುಮಾರ್ ಕೂಡ ಥೈಲ್ಯಾಂಡ್‌ನ ಮ್ಯಾಕ್ಸಿಮಸ್ ಜೋನಸ್ ವಿರುದ್ಧ 7-6(5), 7-6(5) ರಿಂದ ಗೆದ್ದು ಮಿಂಚಿದರು. ಇದಲ್ಲದೆ, ಕ್ರಿಶ್ ತ್ಯಾಗಿ ಕೂಡ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದರು. ತೈವಾನ್‌ನ ಕೌನ್ ಯಿಲೀ ವಿರುದ್ಧ ಗೆದ್ದ ಅವರು, 7-6(8), 7-6(4) ರಿಂದ ಪ್ರಾಬಲ್ಯ ಸಾಧಿಸಿದರು.

ಲಖನೌದಿಂದ ರಾಜಸ್ಥಾನ ರಾಯಲ್ಸ್‌ಗೆ 221 ರನ್ ಗುರಿ

ಮಾರ್ಷ್-ಇಂಗ್ಲಿಸ್ ಅಬ್ಬರ



ಜೈಪುರ: ಜೋಶ್ ಇಂಗ್ಲಿಸ್(60) ಮತ್ತು ಮಿಚೆಲ್ ಮಾರ್ಷ್(96) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ಮತ್ತೆ ಅಬ್ಬರಿಸಿರುವ ಲಖನೌ ಸೂಪರ್ ಜೇಂಟ್ಸ್ ರಾಜಸ್ಥಾನ ತಂಡಕ್ಕೆ ದೊಡ್ಡ ಗುರಿ ನೀಡಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹೊರಬಿದ್ದಿರುವ ಪಂತ್ ಪಡೆ ರಾಜಸ್ಥಾನಕ್ಕೂ ದೊಡ್ಡ ಸವಾಲು ಹಾಕಿದೆ.

ಮಂಗಳವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಜೇಂಟ್ಸ್ 20 ಓವರ್‌ಗಳಲ್ಲಿ 220 ರನ್ ಗಳಿಸಿತು. ಮಾರ್ಷ್-ಇಂಗ್ಲಿಸ್ ಉತ್ತಮ ಆರಂಭ ಕೊಟ್ಟ ನಂತರ ಮಧ್ಯಮ ಕ್ರಮಾಂಕದಲ್ಲಿ ಪಂತ್ ಕೂಡ ಒಂದಿಷ್ಟು ರನ್ ಜೋಡಿಸಿದರು. ಅಂತಿಮ ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ಮಾರ್ಷ್ 3 ರನ್‌ಗಳಿಂದ ಮಾತ್ರವೇ ಶತಕ ವಂಚಿತರಾದರು. ಇತ್ತ ರಾಜಸ್ಥಾನ ಪರ ಯಶ್ ರಾಜ್ ಪೂಂಜಾ 2, ಆರ್ಚರ್ 1 ವಿಕೆಟ್ ಪಡೆದರು.

ಇಂಗ್ಲಿಸ್ ಆರ್ಭಟ: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಲಖನೌಗೆ ಅಬ್ಬರದ ಆರಂಭ ಸಿಕ್ಕಿತು. ಮೊದಲಿನ ಓವರ್‌ಗಳಲ್ಲೇ ಬಿರುಸಿನ ಬ್ಯಾಟಿಂಗ್‌ಗೆ ಮುಂದಾದ ಜೋಶ್ ಇಂಗ್ಲಿಸ್ ಮಿಂಚಿದರು. ರಾಜಸ್ಥಾನದ ಅನುಭವ ಇಲ್ಲದ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದರು. ಅತ್ತ ಮಾರ್ಷ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರು ಓವರ್‌ವರೆಗೂ ದಂಡಿಸಿದ ಈ ಜೋಡಿ ಪವರ್‌ಪ್ಲೇನಲ್ಲಿ 83 ರನ್ ಚಚ್ಚಿತು. 23 ಬಾಲ್‌ಗಳಲ್ಲಿ ಸ್ಫೋಟಕ ಅರ್ಧ ಶತಕ ಬಾರಿಸಿದ ಇಂಗ್ಲಿಸ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ ಮಾರ್ಷ್ ಕೂಡ ಲಯಕ್ಕೆ ಮರಳಿದರು. ಆರಂಭಿಕ ಜೋಡಿಯೇ ನೂರರ ಗಡಿ ದಾಟಿಸಿತು. 109 ರನ್‌ಗಳಿಸಿದಾಗ 29 ಬಾಲ್‌ಗಳಲ್ಲಿ 60 ರನ್ ಗಳಿಸಿದ್ದ ಇಂಗ್ಲಿಸ್ ವಿಕೆಟ್ ಒಪ್ಪಿಸಿದರು.

ಮಾರ್ಷ್ ಮಿಂಚಿನಾಟ: ಮಧ್ಯಮ ಓವರ್‌ಗಳಲ್ಲಿ ಮಾರ್ಷ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. 25 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಕಾಣಿಸಿಕೊಂಡರು. ಪೂರಣ್ ಕೂಡ ಒಂದೆರಡು ಸಿಕ್ಸರ್‌ಗಳ ಮೂಲಕ ಮಿಂಚಿದರು. ಆದರೆ 16 ರನ್‌ಗಳಿಗೆ ಅವರು ವಿಕೆಟ್ ಕೊಟ್ಟರು. ಬಳಿಕ ಬಂದ ರಿಷಭ್ ಪಂತ್ ಸೆಟ್ ಆಗುವ ಔಪಚಾರಿಕತೆಗೆ ಬಂದರು. ಆದಾಗ್ಯೂ 14ರ ಸನಿಹವಿದ್ದ ಲಖನೌ ಸೂಪರ್ ಜೇಂಟ್ಸ್ ರನ್‌ರೇಟ್ ಕುಗ್ಗಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಲಖನೌ 99 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಪಂತ್ ಕೂಡ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. 2 ಸಿಕ್ಸರ್, 2 ಬೌಂಡರಿ ಬಾರಿಸಿದ ಅವರು, 35 ರನ್ ಗಳಿಸಿ ರನ್‌ಔಟ್‌ಗೆ ಬಲಿಯಾದರು. ಶತಕದ ಅಂಚಿನಲ್ಲಿದ್ದ ಮಾರ್ಷ್ ಕೊನೆಯ ಓವರ್‌ನಲ್ಲಿ ಸ್ಫೋಟಕ ಬೌಂಡರಿ ಬಾರಿಸಿದ ಮಾರ್ಷ್ 57 ಬಾಲ್‌ಗಳಲ್ಲಿ 96 ರನ್ ಬಾರಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 11 ಬೌಂಡರಿ, 5 ಸಿಕ್ಸರ್‌ಗಳು ಸೇರಿವೆ. ಕೊನೆಯಲ್ಲಿ ಲಖನೌ 220 ರನ್ ಗಳಿಸಿತು.

ರಿಯಾನ್‌ಗೆ ಗಾಯ: ಜೈಸ್ವಾಲ್‌ಗೆ ನಾಯಕತ್ವ

ರಾಜಸ್ಥಾನ ಹಾಗೂ ಲಖನೌ ನಡುವೆ ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುನ್ನಡೆಸಿದರು. ಕಾಲಿಗೆ ಆದ ಗಾಯದ ಕಾರಣದಿಂದಾಗಿ ನಾಯಕ ರಿಯಾನ್ ಪರಾಗ್ ಲಭ್ಯವಿರಲಿಲ್ಲ. ಇದರೊಂದಿಗೆ ರಾಜಸ್ಥಾನ ತಂಡವನ್ನು ಮುನ್ನಡೆಸಿದ 8ನೇ ನಾಯಕ ಅನಿಸಿಕೊಂಡರು. ಇದು ಜೈಸ್ವಾಲ್ ಅವರಿಗೆ ಮೊದಲ ಜವಾಬ್ದಾರಿಯೂ ಹೌದು.

ಇಂದು ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸು

ಕೆಕೆಆರ್‌ಗೆ ಅಳಿವು-ಉಳಿವಿನ ಸವಾಲು

ಕೋಲ್ಕತ್ತಾ: ಪ್ಲೇಆಫ್ ರೇಸ್‌ನಲ್ಲಿರುವ ಕೆಕೆಆರ್ ಮತ್ತು ಹೊರಬಿದ್ದ ಮುಂಬೈ ಇಂಡಿಯನ್ಸ್ ತಂಡವು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕೊನೆಯ ಅವಕಾಶಕ್ಕಾಗಿ ಕೆಕೆಆರ್ ಸಿದ್ಧವಾಗುತ್ತಿದೆ. ಮುಂಬೈ ಗೆಲುವಿನ ವಿದಾಯಕ್ಕೆ ಅಣಿಯಾಗುತ್ತಿದೆ.

ಐಪಿಎಲ್‌ನಲ್ಲಿ 3 ತಂಡಗಳು ಈಗಾಗಲೇ ಪ್ಲೇಆಫ್‌ಗೆ ಲಗ್ಗೆ ಹಾಕಿವೆ. ಮಿಕ್ಕಿರುವ ಒಂದು ಜಾಗಕ್ಕಾಗಿ ಐದು ತಂಡಗಳು ಪೈಪೋಟಿ ನಡೆಸುತ್ತಿವೆ. ಸದ್ಯ ಪಂಜಾಬ್ ನಾಲ್ಕನೇ ಸ್ಥಾನದಲ್ಲಿದೆ. ಆರ್‌ಆರ್ ಕೂಡ ಅವಕಾಶ ಹೊಂದಿದೆ. ಕೆಕೆಆರ್ 15 ಅಂಕ ಗಳಿಸಬಹುದಾದ ಅವಕಾಶ ಹೊಂದಿದ್ದು, ಇದ್ದಿರುವ ತಂಡಗಳಲ್ಲಿ ಹೆಚ್ಚು ಸಾಧ್ಯತೆ ಹೊಂದಿದೆ. ಮುಂಬೈ ವಿರುದ್ಧ ಗೆದ್ದರೆ ಕೆಕೆಆರ್ ಅವಕಾಶಗಳು ಹೆಚ್ಚಾಗಲಿವೆ. ಅತ್ತ ಮುಂಬೈ ಕಳೆದ ಪಂದ್ಯದಲ್ಲಿ ಪಂಜಾಬ ತಂಡವನ್ನು ಸೋಲಿಸಿದ್ದು, ಗೆಲುವಿನ ಅಂತ್ಯಕ್ಕಾಗಿ ಫೈಟ್ ಮಾಡುತ್ತಿದೆ. ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ಪಂದ್ಯ ನಡೆಯಲಿದೆ.

ಕೆಕೆಆರ್‌ಗೆ ಗೆಲುವಿನ ತವಕ: ಫಿನ್ ಅಲೆನ್ ಹಾಗೂ ರಘುವಂಶಿ ಅವರ ಭರ್ಜರಿ ಪ್ರದರ್ಶನದೊಂದಿಗೆ ಕೋಲ್ಕತ್ತಾ ನೈಟ್ ರೈಡರ್ಸ್ ಭರ್ಜರಿ ಪ್ರದರ್ಶನ ನೀಡುತ್ತಿದೆ. ಗುಜರಾತ್ ವಿರುದ್ಧದ ಪಂದ್ಯದಲ್ಲಿ ಅದೇ ಪ್ರದರ್ಶನದೊಂದಿಗೆ ಗೆದ್ದರೂ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಮುಖ್ಯವಾಗಿ ಫಿನ್ ಅಲೆನ್ ಹಾಗೂ ರಘುವಂಶಿ ಭರ್ಜರಿ ಲಯದಲ್ಲಿದ್ದಾರೆ. ಆದಾಗ್ಯೂ, ಅವರಿಬ್ಬರನ್ನು ಹೊರತುಪಡಿಸಿದರೆ, ಇನ್ನುಳಿದ ಆಟಗಾರರು ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಅಜಿಂಕ್ಯಾ ರಹಾನೆ ಲಯಕ್ಕಾಗಿ ಪರದಾಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್, ಮನೀಶ್ ಪಾಂಡೆ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ, ಸುನಿಲ್ ನರೈನ್, ವರುಣ್ ಮಿಂಚಿದ್ದರೆ, ವೇಗಿ ಕಾರ್ತಿಕ್ ತ್ಯಾಗಿ ಲಯದಲ್ಲಿದ್ದಾರೆ.

ಮುಂಬೈಗೆ ಗೆಲುವಿನ ವಿಶ್ವಾಸ

ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಬೆನ್ನಲ್ಲೇ ಮುಂಬೈ ಇಂಡಿಯನ್ಸ್ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಇತ್ತ ಬೂಮ್ರಾ ನಾಯಕತ್ವದಲ್ಲಿ ಮುಂಬೈ ಮಿಂಚಿತ್ತು. ರಯಾನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದ್ದಾರೆ. ರೋಹಿತ್ ಶರ್ಮಾ ಕೂಡ ಉತ್ತಮ ಟಚ್‌ನಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ಮುಂಬೈ ತಂಡಕ್ಕೆ ದೊಡ್ಡ ಬಲ ತಂದಿದೆ. ಸೂರ್ಯ ಕಳೆದ ಪಂದ್ಯದಲ್ಲಿ ಆಡಿರಲಿಲ್ಲ. ನಮನ್, ರುದರ್‌ಫೋರ್ಡ್ ಮಿಂಚಬೇಕಿದೆ. ಬೌಲಿಂಗ್ ವಿಚಾರದಲ್ಲಿ ಶರ್ದೂಲ್ ಠಾಕೂರ್, ದೀಪಕ್ ಚಾಹರ್ ಲಯಕ್ಕೆ ಮರಳಿದ್ದಾರೆ. ಇತ್ತ ಬೂಮ್ರಾಗೆ ವಿಕೆಟ್ ಬೀಳುತ್ತಿಲ್ಲವಾದರೂ ದುಬಾರಿ ಯಾಗುತ್ತಿಲ್ಲ. ಸ್ಪಿನ್ ವಿಭಾಗ ದಲ್ಲಿ ರಘು ಮತ್ತು ಜ್ಯಾಕ್ಸ್ ಸೇರಿದಂತೆ ಘಜನ್‌ಫರ್ ಕೂಡ ವಿಕೆಟ್ ಕಿತ್ತಬೇಕಿದೆ.

ಪಿಚ್: ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಅಬ್ಬರಿಸುವ ಅವಕಾಶ. ಬೌಂಡರಿಗಳು ಹತ್ತಿರ ಇರುವುದರಿಂದ ಫೀಲ್ಡಿಂಗ್ ಮತ್ತು ಬೌಲಿಂಗ್‌ಗೆ ಕಷ್ಟವಾಗಬಹುದು. ಮೊದಲು ಬೌಲಿಂಗ್ ಮಾಡಿದವರಿಗೆ ಅಲ್ಪ ಲಾಭ ಸಿಗಲಿದೆ.

ಪಂದ್ಯದ ವಿವರ
ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
ಸಮಯ: ಸಂಜೆ 7:30

ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲು

ಪ್ಲೇಆಫ್‌ಗೆ ಹೈದರಾಬಾದ್

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 5 ವಿಕೆಟ್‌ಗಳಿಂದ ಸೋಲಿಸಿರುವ ಹೈದರಾಬಾದ್ ತಂಡವು ಪ್ಲೇಆಫ್ ಗೇರಿದ್ದಲ್ಲದೆ, ಗುಜರಾತ್‌ಗೂ ಹಾದಿ ಮಾಡಿಕೊಟ್ಟಿತು. ಗೆಲ್ಲಲೇಬೇಕಾದ ಪಂದ್ಯದಲ್ಲಿ ಭಾರೀ ಸೋಲನುಭವಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಂತಿದೆ.

ಸೋಮವಾರದ ಪಂದ್ಯದಲ್ಲಿ ಟಾಸ್ ಗೆದ್ದ ಚೆನ್ನೈ ಅಚ್ಚರಿಯ ನಿರ್ಧಾರದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಸಂಜು(27), ಕಾರ್ತಿಕ್(32) ಮತ್ತು ಬ್ರೇವಿಸ್(44) ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 180 ರನ್ ಗಳಿಸಿತು. ಹೈದರಾಬಾದ್ ಪರ ಪ್ಯಾಟ್ ಕಮ್ಮಿನ್ಸ್ 3, ಸಾಕಿಬ್ ಹುಸೈನ್ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಹೈದರಾಬಾದ್ ಇಶಾನ್ ಕಿಶನ್(70), ಕ್ಲಾಸೆನ್ (47) ಅವರ ನೆರವಿನಿಂದ ಪಂದ್ಯ ಗೆದ್ದುಕೊಂಡಿತು. ಚೆನ್ನೈ ಪರ ಮುಖೇಶ್ ಚೌದರಿ 36/2 ಹೋರಾಡಿದರು.

ಇಶಾನ್ ಕಿಶನ್ ಪಂದ್ಯದ ಬೆಸ್ಟ್ ಬ್ಯಾಟರ್ ಅನಿಸಿಕೊಂಡಿದ್ದಲ್ಲದೆ, ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾದರು. ಪ್ಯಾಟ್ ಕಮ್ಮಿನ್ಸ್ ಗೆಲುವಿನಲ್ಲಿ ಮಿಂಚಿದರು. ಚೆನ್ನೈ ಪರ ಸಂಜು ಸ್ಯಾಮ್ಸನ್ ಸ್ಫೋಟಕ ಆರಂಭ ಕೊಟ್ಟರೆ, ಮಧ್ಯಮ ಕ್ರಮಾಂಕದಲ್ಲಿ ಡೇವಾಲ್ಡ್ ಬ್ರೇವಿಸ್ ಅಬ್ಬರಿಸಿದರು. ಈ ಗೆಲುವಿನೊಂದಿಗೆ ಪ್ಲೇಆಫ್‌ಗೆ ಮೂರು ತಂಡಗಳು ಹೋಗುವುದು ಖಚಿತವಾಗಿದೆ. ಉಳಿದ 7 ಪಂದ್ಯಗಳಲ್ಲಿ ಇನ್ನೊಂದು ತಂಡದ ಭವಿಷ್ಯ ನಿರ್ಧಾರವಾಗಲಿದೆ.

ಪ್ಲೇಆಫ್‌ನಿಂದ ಚೆನ್ನೈ ಔಟ್?: ಪಂದ್ಯಾವಳಿಯ ಆರಂಭದಿಂದಲೂ ಸೋಲುಗಳಲ್ಲಿ ಮುಳಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸತತ 3 ಪಂದ್ಯಗಳಲ್ಲಿ ಗೆದ್ದು ಪ್ಲೇಆಫ್‌ಗೆ ಹತ್ತಿರವಾಗಿತ್ತು. ಆದರೂ ಗೆಲ್ಲಬೇಕಿದ್ದ ಲಖನೌ, ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಇದರೊಂದಿಗೆ ರಾಜಸ್ಥಾನ, ಕೆಕೆಆರ್, ದಿಲ್ಲಿ ಮತ್ತು ಪಂಜಾಬ್ ಪ್ಲೇಆಫ್ ಅವಕಾಶಗಳು ಹೆಚ್ಚಳಗೊಂಡಿವೆ. ಆದಾಗ್ಯೂ ಚೆನ್ನೈ ಅಧಿಕೃತವಾಗಿ ಹೊರಬಿದ್ದಿಲ್ಲ. 14 ಅಂಕಗಳನ್ನು ಗಳಿಸುವ ಅವಕಾಶ ಹೊಂದಿರುವ ಚೆನ್ನೈ ಸೂಪರ್ ಕಿಂಗ್ಸ್ ಉಳಿದ ಪಂದ್ಯದಲ್ಲಿ ದೊಡ್ಡ ರನ್‌ರೇಟ್‌ನಿಂದ ಗೆಲ್ಲಬೇಕಿದೆ. ಹೀಗಾದರೂ, ಪಂಜಾಬ್, ಕೆಕೆಆರ್, ದಿಲ್ಲಿ ಹಾಗೂ ಆರ್‌ಆರ್ ತಮ್ಮ ಪಂದ್ಯಗಳಲ್ಲಿ ಸೋಲಬೇಕು. ಇದರಲ್ಲಿ ಟ್ವಿಸ್ಟ್‌ಗಳಿವೆ. ಒಂದು ಹಂತದಲ್ಲಿ ಚೆನ್ನೈ ಪ್ಲೇಆಫ್ ಗೇರಬೇಕಾದರೆ ಮಿರ್‍ಯಾಕಲ್ ನಡೆಯಬೇಕೆಂದರೆ ತಪ್ಪಿಲ್ಲ.



ಸಂಕ್ಷಿಪ್ತ ಸ್ಕೋರ್:
ಚೆನ್ನೈ 20 ಓವರ್‌ಗಳಲ್ಲಿ 180/7: ಬ್ರೇವಿಸ್ 44, ಕಾರ್ತಿಕ್ 32; ಕಮ್ಮಿನ್ಸ್ 28/3
ಹೈದರಾಬಾದ್ 19 ಓವರ್‌ಗಳಲ್ಲಿ 181/5: ಕಿಶನ್ 70, ಕ್ಲಾಸೆನ್ 47; ಮುಖೇಶ್ 36/2

ಮಲೇಷ್ಯಾ ಮಾಸ್ಟರ್ಸ್: ಮುಖ್ಯ ಡ್ರಾಗೆ ಅಶ್ಮಿತಾ

ಅರ್ಹತಾ ಸುತ್ತಲ್ಲಿ ತೈವಾನ್‌ನ ಪೈ ಯು ವಿರುದ್ಧ ಜಯ

ಕೌಲಲಂಪೂರ: ತೈವಾನ್‌ನ ಪೈ ಯು-ಪೊ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಭಾರತದ ಶಟ್ಲರ್ ಅಶ್ಮಿತಾ ಚಲಿಹಾ ಪ್ರತಿಷ್ಠಿತ ಮಲೇಷ್ಯಾ ಮಾಸ್ಟರ್ಸ್ ಪಂದ್ಯಾವಳಿಯ ಮುಖ್ಯ ಸುತ್ತಿನ ಪಂದ್ಯಗಳಿಗೆ ಅರ್ಹತೆ ಪಡೆದುಕೊಂಡಿದ್ದಾರೆ. ಕೌಲಲಂಪೂರದಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಭಾರತದ ಉದಯೋನ್ಮುಖ ಆಟಗಾರರು ಸ್ಪರ್ಧಿಸಿಲಿದ್ದಾರೆ. ಅಶ್ಮಿತಾ ಅರ್ಹತಾ ಸುತ್ತಿನ ಪಂದ್ಯದಲ್ಲಿ ತೈವಾನ್‌ನ ಪೈ ಅವರನ್ನು ಎದುರಿಸಿದ್ದರು. 56 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿ 21-23, 21-16, 21-16ರಿಂದ ಗೆಲುವು ಸಾಧಿಸಿದರು. ಮುಖ್ಯ ಡ್ರಾದಲ್ಲಿ ಅವರು, ವಿಶ್ವದ 56ನೇ ಶ್ರೇಯಾಂಕದ ಥಾಲಿತಾ ರಮಂಧನಿ ಅವರೊಂದಿಗೆ ಆಡಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಇನ್ನೋರ್ವ ಭಾರತದ ಆಟಗಾರ್ತಿ ಆಕರ್ಷಿ ಕಶ್ಯಪ್ ಪಾರ್ಕ್‌ಗಾ ಅವರೊಂದಿಗೆ 21-15, 20-22, 7-21ರಿಂದ ಸೋತರು.

ಅಫ್ಘಾನ್ ಟೆಸ್ಟ್-ಏಕದಿನ ಸರಣಿಗೆ ಭಾರತ ತಂಡ ಪ್ರಕಟ

ಟೆಸ್ಟ್‌ಗೆ ರಾಹುಲ್ ಉಪನಾಯಕ

- ಬೂಮ್ರಾಗೆ ವಿರಾಮ, ಏಕದಿನಕ್ಕೆ ರೋ-ಕೊ
- ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಆಯ್ಕೆ
- ಪ್ರಿನ್ಸ್ ಯಾದವ್, ಹರ್ಷ ದುಬೆಗೂ ಅವಕಾಶ
- ಪಂತ್‌ಗೆ ಹಿನ್ನಡೆ, ಏಕದಿನಕ್ಕೆ ಕಿಶನ್ ವಾಪಸ್

ಮುಂಬೈ: ವೇಗಿ ಜಸ್‌ಪ್ರೀತ್ ಬೂಮ್ರಾಗೆ ವಿರಾಮ ನೀಡಲಾಗಿದ್ದರೆ, ಕೆ.ಎಲ್. ರಾಹುಲ್ ಅವರಿಗೆ ಟೆಸ್ಟ್ ತಂಡದ ಉಪನಾಯಕತ್ವ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಅಫ್ಘಾನಿಸ್ತಾನ-ಭಾರತ ನಡುವಿನ ಒಂದು ಟೆಸ್ಟ್ ಹಾಗೂ ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಟೆಸ್ಟ್ ಪಂದ್ಯಕ್ಕಾಗಿ ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಮತ್ತು ಹರ್ಷ ದುಬೆ ಅವರನ್ನು ಇದೇ ಮೊದಲ ಬಾರಿಗೆ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರಿಗೆ ಭಾರೀ ಶಾಕ್ ಕೊಟ್ಟಿರುವ ಬಿಸಿಸಿಐ ಏಕದಿನ ತಂಡದಿಂದ ಹೊರಹಾಕಿದ್ದಲ್ಲದೆ, ಟೆಸ್ಟ್ ತಂಡದ ಉಪನಾಯಕತ್ವವನ್ನು ಕಸಿದುಕೊಂಡಿದೆ.

ನವೆಂಬರ್‌ನಲ್ಲಿ ನಡೆದಿದ್ದ ದ.ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯಗಳ ನಂತರ ಮೊದಲ ಬಾರಿಗೆ ಬಿಳಿ ಜೆರ್ಸಿಯೊಂದಿಗೆ ಭಾರತ ಕಣಕ್ಕಿಳಿಯಲಿದೆ. ಬೂಮ್ರಾ ಅಲ್ಲದೆ, ರವೀಂದ್ರ ಜಡೇಜಾ, ಆಕಾಶ್‌ದೀಪ್, ಅಕ್ಷರ್ ಪಟೇಲ್‌ಗೂ ಕೊಕ್ ನೀಡಲಾಗಿದೆ. ಹೊಸ ಆಯ್ಕೆಗಳಲ್ಲಿ ಟೆಸ್ಟ್ ಹಾಗೂ ಏಕದಿನ ಎರಡೂ ತಂಡಗಳಿಗೂ ಗುರ್ನೂರ್ ಬ್ರಾರ್‌ರನ್ನು ಆಯ್ಕೆ ಮಾಡಲಾಗಿದೆ.

ರಿಷಭ್ ಪಂತ್‌ಗೆ ಕೊಕ್: ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಸರು ಮಾಡಿರುವ ರಿಷಭ್ ಪಂತ್‌ಗೆ ದೊಡ್ಡ ಹಿನ್ನಡೆಯಾಗಿದೆ. ಐಪಿಎಲ್‌ನಲ್ಲಿ ಲಯಕ್ಕಾಗಿ ಪರದಾಟ ನಡೆಸಿರುವ ಅವರು, ಭಾರತ ಏಕದಿನ ತಂಡದಿಂದ ಹೊರಬಿದ್ದಿದ್ದಾರೆ. ಹಿಂದಿನ ಸರಣಿಗಳಲ್ಲಿ ಅವರನ್ನು ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿತ್ತು. ಆದರೆ ಕೆ.ಎಲ್. ರಾಹುಲ್ ಉತ್ತಮ ಪ್ರದರ್ಶನ ನೀಡಿರುವ ಬೆನ್ನಲ್ಲೇ ಯಾವುದೇ ಅವಕಾಶ ಪಡೆದಿರಲಿಲ್ಲ. ಆದಾಗ್ಯೂ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಆಯ್ಕೆಯಾಗಿ ಪರಿಗಣಿಸಿತ್ತು. ಗಿಲ್‌ಗೆ ನಾಯಕತ್ವ ನೀಡುವಾಗ ಪಂತ್ ಅವರನ್ನು ಉಪನಾಯಕರನ್ನಾಗಿ ಮಾಡಿತ್ತು. ಐಪಿಎಲ್‌ನಲ್ಲಿ ಹೇಳಿಕೊಳ್ಳುವ ಪ್ರದರ್ಶನ ನೀಡದಿರುವ ಪಂತ್ ಉಪನಾಯಕತ್ವ ಕಳೆದುಕೊಂಡಿದ್ದಾರೆ. ಅವರ ಬದಲಿಗೆ ಕನ್ನಡಿಗ ಕೆ.ಎಲ್. ರಾಹುಲ್‌ಗೆ ಅವಕಾಶ ನೀಡಲಾಗಿದೆ. ಏಕದಿನದ ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಇಶಾನ್ ಕಿಶನ್ ಅವರನ್ನು ಆಯ್ಕೆ ಮಾಡಲಾಗಿದೆ.



ತಂಡಗಳು

ಏಕದಿನಕ್ಕೆ: ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಕೆ.ಎಲ್. ರಾಹುಲ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಪ್ರಿನ್ಸ್ ಯಾದವ್, ಗುರ್ನೂರ್ ಬ್ರಾರ್, ಹರ್ಷ ದುಬೆ.

ಟೆಸ್ಟ್: ಶುಭಮನ್ ಗಿಲ್(ನಾಯಕ), ಕೆ.ಎಲ್. ರಾಹುಲ್(ಉಪನಾಯಕ), ರಿಷಭ್ ಪಂತ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಮಾನವ್ ಸುಥಾರ್, ಗುರ್ನೂರ್ ಬ್ರಾರ್, ಹರ್ಷ ದುಬೆ, ಧ್ರುವ್ ಜುರೇಲ್.

ದೇಶಿ ಕ್ರಿಕೆಟಿಗರಿಗೆ ಅವಕಾಶ: ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಹರ್ಷ ದುಬೆ, ಮಾನವ್ ಸುಥಾರ್, ಗುರ್ನೂರ್ ಬ್ರಾರ್ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವ್ ಸುಥಾರ್ ಸ್ಪಿನ್ ಮೂಲಕ ಮಿಂಚಿದದ್ದರು. ರಣಜಿ ಹೀರೋ ಆಕೀಬ್ ನಬಿ ಅವರನ್ನು ತಂಡಕ್ಕೆ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ ಅಚ್ಚರಿಯಲ್ಲಿ ಅವರನ್ನು ಆಯ್ಕೆ ಮಾಡಲಾಗಿಲ್ಲ. ಇನ್ನು ಏಕದಿನ ತಂಡಕ್ಕೆ ಪ್ರಿನ್ಸ್ ಯಾದವ್ ಅವರನ್ನು ಇದೇ ಮೊದಲ ಬಾರಿಗೆ ಆಯ್ಕೆ ಮಾಡಲಾಗಿದೆ. ಲಖನೌ ತಂಡದ ಪರ ಮಿಂಚಿರುವ ಅವರು, ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಟೆಸ್ಟ್ ತಂಡದಲ್ಲಿರುವ ಗುರ್ನೂರ್ ಬ್ರಾರ್ ಕೂಡ ತಂಡಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿ | ಸಿದ್ಧಾರ್ಥ ನಾಯರ್‌ಗೆ ಗೆಲುವು

ಬೆಂಗಳೂರು ಶಟ್ಲರ್‌ಗಳ ಮಿಂಚಿನಾಟ

ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿವಿಧ ನಗರಗಳ ಬಾಲಕ-ಬಾಲಕಿಯರು ಮಿಂಚಿದರು. 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ವೈಭವ ಸಾವಿಗೌಡ ವಿರುದ್ಧ 21-9, 21-10 ಅಂತರದಿಂದ ಗೆದ್ದರು. ಬೆಂಗಳೂರಿನ ಪ್ರಥಮ್ ಹರ್ಷ ಅವರು ಮಂಡ್ಯದ ದೇವಿನ್ ಚಂದ್ರ ಜೆಸಿ ವಿರುದ್ಧ 14-21, 21-16, 21-04, ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಎಸ್. ಅವರು ಬೆಳಗಾವಿಯ ಸಮನ್ಯು ವಿರುದ್ಧ 21-13, 21-8, ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ಅವರು ಮೈಸೂರಿನ ಮಯೂರ ಜಿ. ವಿರುದ್ಧ 21-17, 21-16 ಅಂತರದಿಂದ ಜಯಿಸಿದರು.



ಬಾಲಕಿಯರ ವಿಭಾಗದಲ್ಲಿ: 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮಹಿತಾ ನಾಯ್ಡು ಸುರಿ ಶೆಟ್ಟಿ ಅವರು ಸೆಜಲ್ ವಿ. ದಾವಸ್ಕರ್ ವಿರುದ್ಧ 21-8, 21-10 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರಿನ ದಕ್ಷಿತಾ ಮುಂಡ್ಲಾ ಅವರು ಆರನಾ ಸಾಗರ ಆರ್. ವಾಕ್ ವೋವರ್ ಮೂಲಕ ಜಯಗಳಿಸಿದರು. 15 ವರ್ಷದೊಳಗಿನ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ದಕ್ಷಿಣ ಕನ್ನಡದ ಅನ್ನವಿಕಾ ರಾಜ್ ಮತ್ತು ದಿಯಾ ಸುನೀಲ್ ಶೆಣೈ ಅವರು ದಾವಣಗೆರೆಯ ಶ್ರಾವಣಿ ಗೌಡಪ್ಪಳವರ ಮತ್ತು ಬೆಂಗಳೂರಿನ ಛಾಯಾ ಎನ್. ಶೆಟ್ಟಿ ವಿರುದ್ಧ 21-19, 21-10 ಅಂತರದಲ್ಲಿ ಜಯಗಳಿಸಿದ್ದಾರೆ.


ಬೆಂಗಳೂರು ಗ್ರಾಮಾಂತರದ ನಿಧಿ ಗೌರಿಶಂಕರ ಮತ್ತು ನಿತ್ಯಾಶ್ರೀ ಅವರು ಬೆಂಗಳೂರಿನ ಆನ್ಯಾ ವಷಿಷ್ಠ ಅರ್ಜುನ ಮತ್ತು ಪೂರ್ವಿ ಸಾಗರ ವಿರುದ್ಧ 21-15, 20-22, 21-13 ಅಂತರದಿಂದ ಜಯಗಳಿಸಿದ್ದಾರೆ.

ಡಬಲ್ಸ್: 15 ವರ್ಷದೊಳಗಿನ ಮಿಶ್ರಡಬಲ್ಸ್ ವಿಭಾಗದಲ್ಲಿ ರಾಯಚೂರಿನ ಯುವನ್ ಕೃಷ್ಣ ರವೆಲ್ಲಾ ಮತ್ತು ನಿಹಾರಿಕಾ ಎ.ಪಿ. ಅವರು ಬೆಂಗಳೂರಿನ ಅಚ್ಯುತ್ ತನ್ಮಯಿ ಯಲೂರು, ದೇವಾಂಶಿ ಮಿತ್ತಲ್ ವಿರುದ್ಧ 21-14, 21-16 ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ಬೆಂಗಳೂರಿನ ಮಿನಾದ್ ಜಿ.ಕೆ. ಮತ್ತು ರುಶಿತಾ ಗೋಪಿನಾಥ್ ಅವರು ಬೆಂಗಳೂರು ಗ್ರಾಮಾಂತರದ ಶೈಲೈಶ್ ಶ್ರವಣ ಮತ್ತು ಕವಿನಯಶ್ರೀ ಎಸ್. ವಿರುದ್ಧ 21-14, 12-21, 26-24 ಅಂತರದಿಂದ ಜಯಗಳಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5989

ಎಡದಿಂದ ಬಲಕ್ಕೆ
1.ಟೆಲಿವಿಷನ್ ಕನ್ನಡದಲ್ಲಿ (7)
3.ಹರಕೆ ಹೊತ್ತದ್ದು ಈ ಶಿವನಿಗೆ (2)
4.ಗಾಯಕ್ಕೆ ಕಟ್ಟುವ ಬಟ್ಟೆಯಿದು (2)
5.ದರವನ್ನು ಕೇಳಿದ್ದು ಈ ಚಪ್ಪರದ ಕೆಳಗೆ (3)
7.ವಾಣಿ ನಡುವೆ ತಿರುಗಿ ಅಂತಃಪುರವಾಯ್ತು (4)
9.ಬಿಳಿಯ ಬಣ್ಣದ ಸಾಂಬಾರಕಾಳು (4)
11.ಒಂದರ ಮೇಲೊಂದು ಪೇರಿಸಿಡುವುದು (4)
13.ತಪ್ಪನ್ನು ಹೊರಿಸಲ್ಪಟ್ಟವನು (4)
15.ನದಿ ಒಳಗೊಂಡ ದಾಖಲೆ ಮಾಡು (4)
16.ಜೋಡಿಸು-ಬಾರಿಸು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
1.ಧ್ವನಿ ಕೇಳಿಸುವ-ಸ್ವೀಕರಿಸುವ ಸಂವಹನಾ ಸಾಧನ (4)
2.ಅಚ್ಚು ಮಾಡಿ ಹಂಚುವ ಚಿಕ್ಕ ಪ್ರಕಟಣೆ ತಲೆಕೆಳಗಾಗಿದೆ (4)
5.ನೀರು-ಹಾಲು ಬೇರ್ಪಡಿಸುತ್ತದೆಯೆನ್ನುವ ಹಕ್ಕಿ (2)
6.ಕೈಯಿಂದ ಕಟ್ಟಿದ ತೆರಿಗೆ ತಲೆಕೆಳಗಾಗಿದೆ (2)
8.ಚಲಿಸಲು ಸಹಾಯ ಮಾಡುವಂಥಾದ್ದು (3)
10.ಸಿಹಿಖಾದ್ಯವಿಲ್ಲಿ ತಲೆಕೆಳಗಾಗಿದೆ (3)
11.ಇರುವ ಮಾನವನ್ನೇಕೆ ಒತ್ತೆ ಇಟ್ಟಿದ್ದಾರೆ? (4)
12.ಕೊಳ್ಳೆಹೊಡೆ-ಲೂಟಿ ಮಾಡು ಎಂಬರ್ಥದ ಶಬ್ದ (4)
13.ಆಲದ ನಡುವೆ ಕಷ್ಟದ ವೇಳೆಯಿದೆ (4)
14.ಮನಸ್ಸಿನಲ್ಲಿ ತೀವ್ರವಾಗಿ ಬಯಸುವದು (4)

5988 ಉತ್ತರ

ಎಡದಿಂದ ಬಲಕ್ಕೆ:
:2.ಅನಂಗ 5.ಮಂಜುಗಿರಿ 6.ದಳವಾಯಿ 7.ಸತತ 9.ನಾಣ್ಣುಡಿ 10.ಅಪಾದಿಸು 12.ಕೌಟನೀತಿ 14.ದಿವಿಜ 15.ಶತಮಾನ 16.ನಗೆಗೇಡಿ

ಮೇಲಿನಿಂದ ಕೆಳಕ್ಕೆ:
:1.ಸಮಂಜಸ 2.ಅರಿವು 3.ಗದರು 4.ತಾಯಿನುಡಿ 8.ತಳಹದಿ 9.ನಾಗಾಲೋಟ 10.ಆಕ್ರೋಶ 11.ಸುದಿನ 12.ಕೂಜನ 13.ತಿಕಡಿ

ಕಿರುಸುದ್ದಿ

ಬಡವರಿಗೆ ಸರ್ಕಾರದ ಯೋಜನೆ ತಲುಪಿಸಿ

ಸೊರಬ: ರೈತಾಪಿ ವರ್ಗದವರಿಗೆ ಹಾಗೂ ಬಡವರಿಗಾಗಿ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಜನತೆಗೆ ತಲುಪಿಸಬೇಕು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಎಸ್. ಮಧುಬಂಗಾರಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸೋಮವಾರ ತಾಲೂಕಿನ ಜಡೆ ಗ್ರಾಮದ ಗ್ರಾಪಂ ಆವರಣದಲ್ಲಿ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡ ಜನಸ್ಪಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸರ್ಕಾರ ಜನಸ್ಪಂದನಾ ಕಾರ್ಯಕ್ರಮವನ್ನು ಆಯೋಜನೆ ಮಾಡಿದೆ. ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ನಡುವೆ ನೇರ ಸಂಪರ್ಕ ಸಾಧಿಸಲು ಮತ್ತು ಸಮಸ್ಯೆಗಳನ್ನು ಅರಿಯಲು ಸಹಕಾರಿಯಾಗಲಿದೆ. ಜನತೆ ಸರ್ಕಾರದ ಸೌಲಭ್ಯಗಳಿಗೆ ಕಚೇರಿಗಳಿಗೆ ಅಲೆದಾಡುವುದು ತಪ್ಪಿಸುವುದು ಇದರ ಮಹತ್ವದ ಉದ್ದೇಶವಾಗಿದೆ. ಆದ್ದರಿಂದ ಜಡೆ ಹೋಬಳಿ ವ್ಯಾಪ್ತಿಯ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲು ಮತ್ತು ಸಾಧ್ಯವಾದಷ್ಟು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಜಯಶೀಲಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಪಿ. ರುದ್ರಗೌಡ, ಕೆಡಿಪಿ ಸದಸ್ಯ ಸದಾನಂದಗೌಡ ಬಿಳಗಲಿ, ಕೋಟೆ ಬಸವಂತಪ್ಪ, ಶಿವಲಿಂಗೇಗೌಡ, ಕೇಶವರಾಯ್ಕರ್, ಆರ್. ಟಿ. ಮಂಜುನಾಥ್, ರಾಜು, ತಹಸೀಲ್ದಾರ್ ಕೆ. ಪುರಂದರ, ತಾಪಂ ಇಒ ಕೆ.ಜಿ. ಶಶಿಧರ್, ಸಿಪಿಐ ಮಹಾಂತೇಶ್ ಲಂಬಿ, ಪಿಎಸ್ಐ ಚಂದನ್, ಸಿಡಿಪಿಒ ಸೋಮಶೇಖರ್, ಸಮಾಜ ಕಲ್ಯಾಣ ಇಲಾಖೆಯ ಇಕ್ಬಾಲ್ ಜಾತಿಗೇರ್, ಬಿಇಒ ಆರ್. ಪುಷ್ಪಾ ಮತ್ತಿತರರು ಉಪಸ್ಥಿತರಿದ್ದರು.

ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

ಶಿವಮೊಗ್ಗ : ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಉತ್ತರ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಶಿವಪ್ಪ ನಾಯಕ ಪ್ರತಿಮೆ ಬಳಿ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸಭೆ ಉದ್ದೇಶಿಸಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎನ್. ರಮೇಶ್, ಪ್ರಶ್ನೆ ಪತ್ರಿಕೆ ಸೋರಿಕೆ ಇದು ಮೊದಲ ಬಾರಿಯಲ್ಲ. ಸರ್ಕಾರ ತನಿಖೆ ಮಾಡುತ್ತೇವೆ ಎನ್ನುತ್ತದೆ. ಆದರೆ ಈವರೆಗೆ ಸೋರಿಕೆ ಮಾಡಿದ ಯಾರಿಗೂ ಶಿಕ್ಷೆ ಆಗಿಲ್ಲ. ಪ್ರಶ್ನೆ ಪತ್ರಿಕೆ ಸೋರಿಕೆಗೆ ಸರ್ಕಾರದ ಜೊತೆಗೆ ಇರುವವರು, ಕೋಚಿಂಗ್ ಸೆಂಟರ್‌ಗಳು ಕಾರಣ. ಸೋರಿಕೆ ಬಗ್ಗೆ ಕೇಂದ್ರ ಸರ್ಕಾರ, ಶಿಕ್ಷಣ ಸಚಿವರು ಸಮರ್ಪಕವಾಗಿ ಉತ್ತರಿಸುತ್ತಿಲ್ಲ. ಪರಿಣಾಮ ಲಕ್ಷಾಂತರ ವಿದ್ಯಾರ್ಥಿಗಳು ಅನ್ಯಾಯಕ್ಕೆ ಒಳಗಾಗಿದ್ದಾರೆ ಎಂದು ದೂರಿದರ.

ಅವೈಜ್ಞಾನಿಕ ಚರಂಡಿ ನಿರ್ಮಾಣದಿಂದ ತೊಂದರೆ | ಸಕಾಲಿಕ ನಿರ್ವಹಣೆ ಕೊರತೆ | ಆರೋಗ್ಯ ಸಮಸ್ಯೆ

ಮಳೆ ಅವಾಂತರಕ್ಕೆ ಅಧಿಕಾರಿಗಳೇ ಹೊಣೆ

ಹೊಸಕೋಟೆ: ಕೇವಲ ಒಂದು ಗಂಟೆ ಸುರಿದ ಸಾಧಾರಣ ಮಳೆಯಿಂದ ನಗರದ ಬಹುತೇಕ ರಸ್ತೆಗಳಲ್ಲಿ ಚರಂಡಿ ನೀರು ತುಂಬಿ ಕೆರೆಯಂತಾಗಿ, ಸಂಚಾರ ಅಸ್ತವ್ಯಸ್ತವಾಗಿತು.


ರಸ್ತೆಯಲ್ಲಿ ನೀರು ಹರಿದು ಸಾರ್ವಜನಿಕರು ಹೈರಾಣಾದರು. ಬೀದಿ ಬದಿ ವ್ಯಾಪಾರಿಗಳು, ರಸ್ತೆ ಸಂಚಾರಿ ಸಾರ್ವಜನಿಕರು ವಾಹನ ಸವಾರರು ರಸ್ತೆಯಲ್ಲಿ ಹರಿಯುತ್ತಿದ್ದ ಚರಂಡಿ ನೀರಿನಿಂದ ಕೆಲ ಕಾಲ ಸಮಸ್ಯೆಯ ಸುಳಿಯಲ್ಲಿ ಸಿಲುಕಿದರು. ಈ ಅವಾಂತರಕ್ಕೆ ನಗರಸಭೆ ಅಧಿಕಾರಿಗಳು, ಜನಪ್ರತಿನಿಧಿಗಳು ಚರಂಡಿ ಸ್ವಚ್ಛತೆಯಲ್ಲಿ ಮಾಡುವಲ್ಲಿ ನಿರ್ಲಕ್ಷ್ಯ ಧೋರಣೆ ತಳೆದಿರುವುದು ಕಾರಣ ಎಂದು ಸಾರ್ವಜನಿಕರ ಆರೋಪವಾಗಿದೆ.



ಚರಂಡಿಯಲ್ಲಿ ಕಲ್ಲು, ಪ್ಲಾಸ್ಟಿಕ್ ಕವರ್ ಗಳು ಹೀಗೆ ಹಲವಾರು ರೀತ್ಯ ತ್ಯಾಜ್ಯ ತುಂಬಿಕೊಂಡು ಸರಾಗವಾಗಿ ಹರಿಯಬೇಕಿದ್ದ ನೀರು ಹರಿಯಲು ಸೂಕ್ತ ಸ್ಥಳಾವಕಾಶ ಇಲ್ಲದೆ ಕಾರಣ ಕೊಳಚೆ ನೀರು ರಸ್ತೆಗಳ ಮೇಲೆ ಹರಿಯುತ್ತಿದೆ.

ದೊಡ್ಡನಾಲ ಸ್ವಚ್ಛಗೊಂಡು ವರ್ಷವೇ ಕಳೆದಿದೆ: ನಗರದ ಮಧ್ಯದಲ್ಲಿ ಹಾದು ಹೋಗಿರುವ ದೊಡ್ಡ ನಾಲಾವನ್ನು ಸ್ವಚ್ಛ ಮಾಡಿ ಹಲವಾರು ವರ್ಷಗಳೇ ಕಳೆದಿವೆ. ನಗರದ ಚರಂಡಿ ನೀರು ಸರಾಗವಾಗಿ ಹರಿಯಲಿ ಎಂಬ ಉದ್ದೇಶದಿಂದ ದಶಕದ ಹಿಂದೆ ನಿರ್ಮಿಸಲಾಗಿತ್ತು. ಆದರೆ, ಅದರ ಸೂಕ್ತ ನಿರ್ವಹಣೆ ಮಾಡದೆ ದೊಡ್ಡ ನಾಲಾದ ತಡೆ ಗೋಡೆಗಳು ಹಾನಿಗೊಳಗಾಗಿದೆ.

ಸೊಳ್ಳೆಗಳ ಕಾಟದಿಂದ ಆರೋಗ್ಯ ಸಮಸ್ಯೆ: ದೊಡ್ಡನಾಲ ಸೂಕ್ತ ನಿರ್ವಹಣೆ ಇಲ್ಲದೆ ದುರ್ವಾಸನೆ ಬೀರುತ್ತಿದೆ. ಇದರಿಂದ ಆರೋಗ್ಯದಲ್ಲಿ ಸಮಸ್ಯೆ ಹೆಚ್ಚಾಗುತ್ತಿದೆ. ಹಿರಿಯರಲ್ಲಿ ಹಾಗೂ ಮಕ್ಕಳಲ್ಲಿ ಹೆಚ್ಚು ಶ್ವಾಸಕೋಶ ಸೊಂಕು ಕಾಣಿಸಿಕೊಳ್ಳುತಿದೆ. ಸೊಳ್ಳೆಗಳ ಕಾಟದಿಂದ ಡೆಂಗ್ಯು, ಮಲೇರಿಯ ಹರಡುವ ಆತಂಕ ಇದೆ ಎಂದು ಈ ಭಾಗದ ಸಾರ್ವಜನಿಕರು ತಿಳಿಸಿದ್ದಾರೆ.







ಅವೈಜ್ಞಾನಿಕ ಚರಂಡಿ ನಿರ್ಮಾಣ: ನಗರದ 22 ನೇ ವಾರ್ಡ್ ನಲ್ಲಿ ಚರಂಡಿ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಇಲ್ಲದಂತಾಗಿದೆ. ಚರಂಡಿ ನಿರ್ಮಾಣದ ವೇಳೆ ಚರಂಡಿಯ ನೀರು ಸರಾಗವಾಗಿ ಹರಿದು ಹೊರ ಹೋಗುವ ರೀತಿ ನಿರ್ಮಾಣ ಮಾಡದೆ ಹಿಮ್ಮುಖವಾಗಿ ಮತ್ತೆ ಮನೆಗಳ ಮುಂದೆ ನಿಲ್ಲುತ್ತದೆ. ಮಳೆ ಬಂದರೆ ಚರಂಡಿ ನೀರು ರಸ್ತೆ ಹಾಗೂ ಮನೆಗಳಿಗೆ ನುಗ್ಗುತ್ತಿದೆ. ಕಳೆದ ಐದು ವರ್ಷದಿಂದ ನಗರಸಭೆಗೆ ದೂರು ನೀಡಿದರೂ ಈ ವರೆಗೆ ಯಾವುದೇ ಕ್ರಮವಹಿಸಿಲ್ಲ ಎಂದು ಸ್ಥಳೀಯ ನಿವಾಸಿಗಳು ತಮ್ಮ ಸಮಸ್ಯೆಯನ್ನು ಹೇಳಿಕೊಂಡಿದ್ದಾರೆ.

ರಾಜಕಾಲುವೆಗಳ ಸ್ವಚ್ಛತೆ ಮರೆತ ನಗರಾಡಳಿತ: ನಗರದಲ್ಲಿ ಹಾದು ಹೋಗುವ ಬಹುತೇಕ ರಾಜ ಕಾಲುವೆಗಳು ಸೂಕ್ತ ನಿರ್ವಹಣೆ ಇಲ್ಲದೆ ಹಾಳಾಗಿದೆ. ಪ್ರತಿಯಿಂದರಲ್ಲೂ ಕಸದ ರಾಶಿ ತುಂಬಿದೆ. ಕೆಲ ಭಾಗದಲ್ಲಿ ರಾಜಕಾಲುವೆಗಳು ಒತ್ತುವರಿಯಾಗಿದೆ. ಇನ್ನು ಕೆಲ ರಾಜಕಾಲುವೆಗಳಿಗೆ ಅಪಾರ್ಟ್‌ಮೆಂಟ್‌ಗಳ ಮೂಲ ತ್ಯಾಜ್ಯ ಸಂಪರ್ಕಗೊಳಿಸಿರುವುದರಿಂದ ರಾಜಕಾಲುವ ಅಕ್ಕ ಪಕ್ಕ ನಿವಾಸಿಗಳಿಗೆ ದುರ್ವಾಸನೆ ಬೀರುತ್ತಿದೆ.

ಲೋಕಾಯುಕ್ತಕ್ಕೂ ದೂರು: ಕಳೆದ ಐದು ವರ್ಷದಿಂದ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬೇಸತ್ತು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಸದ್ಯದಲ್ಲೇ ಸಂಬಂಧಪಟ್ಟ ನಗರಸಭೆ ಅಧಿಕಾರಿಗಳ ವಿರುದ್ಧ ಕ್ರಮದ ಭರವಸೆಯನ್ನು ಲೋಕಾಯುಕ್ತ ಅಧಿಕಾರಿಗಳು ನೀಡಿದ್ದಾರೆ, ಸಾರ್ವಜನಿಕರ ಶಾಪ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ಸುಮ್ಮನೆ ಬಿಡುವುದಿಲ್ಲ ಎಂದು 22ನೇ ವಾರ್ಡಿನ ನಿವಾಸಿ ವೆಂಕಟೇಶ್ ಶಾಸ್ತ್ರಿ ಹೇಳಿದರು.

ಬಿಡದಿ ಟೌನ್‌ಶಿಪ್ ಯೋಜನೆ ರೈತ ವಿರೋಧಿ

ಶಿವಮೊಗ್ಗ : ರಾಮನಗರ ಸಮೀಪದ ಬಿಡದಿ ಟೌನ್‌ಶಿಪ್ ಯೋಜನೆಗೆ ನೀಡಿರುವ ಸಂಪುಟ ಅನುಮೋದನೆಯನ್ನು ವಾಪಾಸ್ ಪಡೆಯಬೇಕು ಎಂದು ರಾಜ್ಯ ರೈತಸಂಘ ಒತ್ತಾಯಿಸಿದೆ.



ರೈತಸಂಘ, ಹಸಿರುಸೇನೆ ಹಾಗೂ ವಿವಿಧ ಸಂಘಟನೆಗಳ ಸಂಯುಕ್ತ ಹೋರಾಟ ಸಮಿತಿ ವತಿಯಿಂದ ಮಂಗಳವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಹೆಚ್. ಆರ್. ಬಸವರಾಜಪ್ಪ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆ ರೈತ ವಿರೋಧಿಯಾಗಿದೆ. ಜೀವ ಪರಿಸರ ವ್ಯವಸ್ಥೆಗೆ ವಿನಾಶಕಾರಿಯಾಗಿದೆ. ಸುಮಾರು 9640 ಎಕರೆ ಭೂಸ್ವಾಧೀನ ಪ್ರಕ್ರಿಯೆ ನಡೆದಿದೆ. ಈಗಾಗಲೇ ಸಂಪುಟ ಅನುಮೋದನೆ ಕೂಡ ನೀಡಿದೆ. ಇದನ್ನು ಸರ್ಕಾರ ಕೂಡಲೇ ವಾಪಾಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಬಿಡದಿ ಹೋಬಳಿ ಬೈರಹೊಂಗಲ ಹಾಗೂ ಕಂಚುಗಾರನಹಳ್ಳಿ ಗ್ರಾ.ಪಂ.ವ್ಯಾಪ್ತಿಯ 25 ಗ್ರಾಮಗಳ ಕೃಷಿಭೂಮಿಯನ್ನು ಇದು ಒಳಗೊಂಡಿದೆ. ನೀರಾವರಿ ಜಮೀನಾಗಿರುವ ಇಲ್ಲಿ ತೆಂಗು, ಅಡಿಕೆ, ಬಾಳೆ, ಮಾವು ಸೇರಿದಂತೆ ತೋಟಗಾರಿಕೆ ಬೆಳೆ ಕೂಡ ಇದೆ. ಇದು ಸಮೃದ್ಧ ಹಸಿರಿನ ಪ್ರದೇಶ. ಇಂತಹ ಭೂಮಿಯಲ್ಲಿ ಟೌನ್‌ಶಿಪ್ ಮಾಡುವುದು ಸರಿಯಲ್ಲ. ಇದು ರಿಯಲ್ ಎಸ್ಟೇಟ್ ದಂಧೆಗೆ ದಾರಿಯಾಗುತ್ತದೆ. ಇದನ್ನು ಪರಿಸರ ವಿರೋಧಿಗಳು, ಸಾಹಿತಿಗಳು ಮತ್ತು ರೈತ ಸಂಘದ ಸಂಯುಕ್ತ ಹೋರಾಟ ಒಕ್ಕೂಟ ಖಂಡಿಸಿವೆ. ರೈತರು ಕೂಡ ತಿಂಗಳುಗಳಿಂದ ಹೋರಾಟ ನಡೆಸುತ್ತಲೇ ಬಂದಿದ್ದಾರೆ ಎಂದರು.

2012ರಲ್ಲಿ ಕೆ.ಐ.ಎ.ಡಿ.ಬಿ. ಮೂಲಕ ಕೈಗಾರಿಕಾ ಸ್ಥಾಪನೆಗಾಗಿ ಮಿಥಲ್ ಕಂಪನಿಗಾಗಿ ಅಂದಿನ ಸರ್ಕಾರ 12,500 ಎಕರೆ ರೈತರ ಭೂಮಿಯನ್ನು ಬಲವಂತವಾಗಿ ವಶಕ್ಕೆ ಪಡೆದಿತ್ತು. ಆದರೆ 15 ವರ್ಷವಾದರೂ ಯಾವುದೇ ಕೈಗಾರಿಕೆ ಅಲ್ಲಿ ಸ್ಥಾಪಿಸಿಲ್ಲ. ಅದರ ಬದಲು ಈ ಭೂಮಿಯನ್ನು ಅನ್ಯ ಉದ್ದೇಶಕ್ಕಾಗಿ ಜಿಂದಾಲ್ ಕಂಪನಿಗೆ ಮಾರಾಟ ಮಾಡಲು ಹೊರಟಿರುವುದು ಕಾನೂನುಬಾಹಿರ ಹಾಗೂ ಭ್ರಷ್ಟಾಚಾರದ ಕೃತ್ಯ. ಹೋರಾಟನಿರತ ರೈತರ ಮೇಲೆ ಪೊಲೀಸ್ ದೌರ್ಜನ್ಯ ತಕ್ಷಣ ನಿಲ್ಲಬೇಕು. ರೈತರಿಗೆ ಭೂಮಿ ವಾಪಾಸ್ ಮಾಡಬೇಕು ಎಂದರು.

ವಿವಿಧ ಸಂಘಟನೆಗಳ ಎಂ.ನಾರಾಯಣ, ಟಿ.ಹೆಚ್. ಹಾಲೇಶಪ್ಪ, ಹನುಮಮ್ಮ, ಟಿ.ಎಂ.ಚಂದ್ರಪ್ಪ, ಸಿ.ಚಂದ್ರಪ್ಪ, ಹನುಮಂತಪ್ಪ, ಷಣ್ಮುಖಪ್ಪ, ಮಂಜಪ್ಪ ಮೊದಲಾದವರಿದ್ದರು.

ಶ್ರೀರಾಘವೇಂದ್ರಸ್ವಾಮಿ ಮಠಕ್ಕೆ ನುಗ್ಗಿದ ಮಳೆ ನೀರು

ಶಿಕಾರಿಪುರ : ಕಳೆದ 2 ದಿನದ ಹಿಂದೆ ಸುರಿದ ಧಾರಾಕಾರ ಮಳೆಯಿಂದ ಪಟ್ಟಣದ ಶ್ರೀ ದತ್ತ ಕೇವಲಾನಂದಾಶ್ರಮ ಹಾಗೂ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ನುಗ್ಗಿ ಸಂಪೂರ್ಣ ಅಸ್ತವ್ಯಸ್ತವಾದ ಹಿನ್ನಲೆಯಲ್ಲಿ ಸಂಸದ ರಾಘವೇಂದ್ರ ಖುದ್ದು ಪುರಸಭಾ ಅಧಿಕಾರಿಗಳ ಜತೆ ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಪುನರಾವರ್ತನೆಯಾಗದಂತೆ ಕ್ರಮ ಕೈಗೊಳ್ಳಲು ಅಗತ್ಯವಾದ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದರು. ಶ್ರೀ ದತ್ತ ಕೇವಲಾನಂದಾಶ್ರಮಕ್ಕೆ ಭೇಟಿ ನೀಡಿದಾಗ ಹಾಜರಿದ್ದ ವಿಪ್ರ ಸಮಾಜದ ಪ್ರಮುಖರು ಸಮೀಪದಲ್ಲಿನ ಹೊಸ ಸಂತೆ ಮೈದಾನದ ಮೂಲಕ ಹರಿದ ಮಳೆಯ ನೀರು ತಗ್ಗು ಪ್ರದೇಶದಲ್ಲಿರುವ ಆಶ್ರಮದ ಮುಖ್ಯ ದ್ವಾರದ ಬಳಿಯ ಬಾಕ್ಸ್ ಚರಂಡಿ ಎತ್ತರದಲ್ಲಿರುವ ಹಿನ್ನಲೆಯಲ್ಲಿ ನೇರವಾಗಿ ಆಶ್ರಮಕ್ಕೆ ನುಗ್ಗಿ ಅಸ್ತವ್ಯಸ್ಥಗೊಂಡ ಬಗ್ಗೆ ಗಮನ ಸೆಳೆದರು. ಕೂಡಲೇ ಸಂಸದರು ಸ್ಥಳದಲ್ಲಿದ್ದ ಪುರಸಭಾ ಮುಖ್ಯಾಧಿಕಾರಿ ಭರತ್‌ರವರಿಗೆ ಪರಿಸ್ಥಿತಿ ಪುನರಾ ವರ್ತನೆಯಾಗದಂತೆ ಕೈಗೊಳ್ಳ ಬಹುದಾದ ತುರ್ತು ಕ್ರಮಗಳ ಬಗ್ಗೆ ಚರ್ಚಿಸಿದರು. ಕೂಡಲೇ ಬಾಕ್ಸ್ ಚರಂಡಿ ಎತ್ತರವನ್ನು ಕಡಿತಗೊಳಿಸಿ ಚರಂಡಿಯಲ್ಲಿನ ಕಸ ಮತ್ತಿತರ ತ್ಯಾಜ್ಯವನ್ನು ತೆಗೆದು ಶುಚಿಗೊಳಿಸಲು ಸೂಚಿಸಿದರು.

ನಂತರ ಸಮೀಪದಲ್ಲಿನ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ತೆರಳಿ ಪರಿಸ್ಥಿತಿ ಅವಲೋಕಿಸಿ ತಗ್ಗು ಪ್ರದೇಶದಲ್ಲಿನ ಮಠದ ಸುತ್ತ ಬಾಕ್ಸ್ ಚರಂಡಿ ಎತ್ತರ ಹೆಚ್ಚಿಸಿ ನೀರು ಮಠಕ್ಕೆ ನುಗ್ಗದ ರೀತಿಯಲ್ಲಿ ತುರ್ತು ಕ್ರಮಕ್ಕೆ ಸೂಚಿಸಿದರು.

ಮಾರ್ನಿಂಗ್ ಶೋ

ನೀನಿದ್ದರೆ ಆಲ್ಬಂ ಸಾಂಗ್ ಬಿಡುಗಡೆ

ಮೊಗಾಚಿ ಲಾರಂ ಕ್ರಿಯೇಶನ್ಸ್ ಅಡಿ ನೂರ್ ಬರ್ಟ್ ಅವರು ನಿರ್ಮಾಣ ಮಾಡಿರುವ 'ನೀನಿದ್ದರೆ' ಎಂಬ 5.52 ನಿಮಿಷದ ಆಲ್ಬಂ ಹಾಡು ಸಿರಿ ಮ್ಯೂಸಿಕ್ ಅಡಿಯಲ್ಲಿ ಹೊರಬಂದಿದೆ. ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಹಿರಿಯನಟ ರಮೇಶ್‌ಭಟ್ ಅವರು ಈ ಆಲ್ಬಮ್ ಹಾಡನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ನಿರ್ಮಾಪಕರು ನನ್ನನ್ನು ಫಾದರ್ ಅಂತ ಸಂಬೋಧಿಸುತ್ತಾರೆ. ಆದರೆ ನನಗೆ ಅವರು ಗಾಡ್ ಫಾದರ್. ಮಂಗಳೂರಿಗೆ ಶೂಟಿಂಗ್ ಅಂತ ಹೋದಾಗ, ತಪ್ಪದೆ ಭೇಟಿಯಾಗುವುದು ಅಲ್ಲದೆ ಒಳ್ಳೇ ಉಡುಗೊರೆ ಸಹ ನೀಡುತ್ತಾರೆ. ಇಂತಹವರ ಋಣ ತೀರಿಸಲು ಬ್ಯುಸಿ ಇದ್ದರೂ ನಾನೀ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಸದ್ಯ ಒಂದು ವೆಬ್ ಸೀರೀಸ್‌ನಲ್ಲಿ ಅಭಿನಯಿಸುತ್ತಿದ್ದೇನೆ ಎಂದು ಹೇಳಿದರು. ಈ ವೇದಿಕೆಯಲ್ಲಿ ಹಿರಿಯನಟ ಟೆನ್ನಿಸ್ ಕೃಷ್ಣ ಮತ್ತು ಸಿರಿ ಮ್ಯೂಸಿಕ್ ಮಾಲೀಕರಾದ ಸುರೇಶ್ ಚಿಕ್ಕಣ್ಣ ಅವರು ಉಪಸ್ಥಿತರಿದ್ದರು.





ಮಂಗಳೂರು ಮೂಲದ, ಸದ್ಯ ಆಸ್ಟೇಲಿಯಾದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರಾದ ನೂರ್‌ಬರ್ಟ್ ಅವರು ಈ ಆಲ್ಬಮ್ ಸಾಂಗನ್ನು ನಿರ್ಮಾಣ ಮಾಡಿದ್ದಾರೆ. ವಿನ್ಸೆಂಟ್ ಫರ್ನಾಂಡಿಸ್ ಕಾಸ್ಸಿಯಾ ಅವರ ಪರಿಕಲ್ಪನೆ, ಸಾಹಿತ್ಯ ಸಂಗೀತದಲ್ಲಿ ಮೂಡಿಬಂದಿರುವ ನೀನಿದ್ದರೆ ಆಲ್ಬಮ್ ಹಾಡಿಗೆ ಅವರೇ ಆಕ್ಷನ್ ಕಟ್ ಹೇಳಿದ್ದಾರೆ.

ಆಕೆ ಮನೆಯಲ್ಲಿ ಬ್ರೇಸ್ಲೆಟ್ ನೋಡುತ್ತಾ ಹಿಂದಿನದನ್ನು ನೆನಪಿಸಿಕೊಳ್ಳುವ ದೃಶ್ಯಗಳೊಂದಿಗೆ ಈ ಆಲ್ಬಮ್ ಹಾಡು ಸಾಗುತ್ತದೆ. ಈ ಹಾಡಲ್ಲಿ ತಾಯಿ, ಮಗಳು ನಟಿಸಿರುವುದು ವಿಶೇಷ. ನಾಯಕನಾಗಿ ಅವಿಲ್ ರೋಡ್ರೀಗಸ್, ನಾಯಕಿಯಾಗಿ ಕೆರನ್ ಪಿಂಟೋ ಹಾಗೂ ಮಾಜಿ ಪ್ರೇಯಸಿಯಾಗಿ ಸ್ಮಿತಾ ಪಿಂಟೋ ಅವರು ಅಭಿನಯಿಸಿದ್ದಾರೆ.

ಲಕ್ಷ್ಮೀಕಾಂತ್ ಅವರ ಛಾಯಾಗ್ರಹಣ, ರಾಜೇಶ್ ಚೌಹಾಣ್ ಅವರ ಸಂಕಲನ, ಶಿಲ್ಪ ಕುಟೀನ್ಹ ಅವರ ಕಂಠ ಈ ಹಾಡಿಗಿದೆ. ಹಿಮಗಿರಿ ಎಸ್ಟೇಟ್ ಸುತ್ತಮುತ್ತ ಈ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಈ ಹಾಡು ಎಲ್ಲಾ ಕಡೆ ವೈರಲ್ ಆಗಿರುವುದು ತಂಡಕ್ಕೆ ಸಂತಸ ತಂದಿದೆ.

ನಿರ್ದೇಶಕರು ಹೇಳುವಂತೆ, ಮೊದಲು ಒಂದು ಹಾಡು ಮಾಡುವುದೆಂದು ಯೋಜನೆ ಹಾಕಲಾಗಿತ್ತು. ಮುಂದೆ ಅದು ಐದಕ್ಕೆ ಮುಂದುವರೆಯಿತು. ಇದನ್ನೇ ಸಿನಿಮಾ ಯಾಕೆ ಮಾಡಬಾರದು ಎಂಬ ಆಲೋಚನೆ ಬಂತು, ಅದಕ್ಕೂ ನಿರ್ಮಾಪಕರಿಂದ ಹಸಿರು ನಿಶಾನೆ ಸಿಕ್ಕಿದೆ. ಎಲ್ಲಾ ಅಂದುಕೊಂಡಂತೆ ಆದರೆ, ಮೂರು ತಿಂಗಳಲ್ಲಿ ನಮ್ಮ ಚಿತ್ರ ಸೆಟ್ಟೇರಲಿದೆ. ಹನ್ನೊಂದು ವರ್ಷದ ಪ್ರತಿಭೆ ಕೆಮರಿಲ್ ಪಿಂಟೋ ಈ ಹಾಡಿಗೆ ಡ್ರಮ್ ಬಾರಿಸಿದ್ದಾನೆ ಎಂದು ನಿರ್ದೇಶಕ ವಿನ್ಸೆಂಟ್ ಫರ್ನಾಂಡಿಸ್ ಕಾಸ್ಸಿಯಾ ಆತನನ್ನು ಪರಿಚಯಿಸಿದರು.



ಮಕ್ಕಳ ಮೊಬೈಲ್ ಚಟದ ಸುತ್ತ ಅಡಿಕ್ಷನ್



ನೈಜಘಟನೆ ಆಧಾರಿತ ಚಿತ್ರದ ವಿಶೇಷ ಪಾತ್ರದಲ್ಲಿ ರಾಘವೇಂದ್ರ ರಾಜಕುಮಾರ್



ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಚಟಕ್ಕೆ ಹೇಗೆಲ್ಲ ಅಡಿಕ್ಟ್ ಆಗುತ್ತಿದ್ದಾರೆ, ಅದರ ಪರಿಣಾಮಗಳೇನು ಎಂಬ ವಿಷಯದ ಮೇಲೆ ನಿರ್ಮಾಣವಾಗಿರುವ ಚಿತ್ರ ಅಡಿಕ್ಷನ್. ಎಸ್.ಬಿ.ವಿ. ಪ್ರೊಡಕ್ಷನ್ಸ್ ಅಡಿಯಲ್ಲಿ ಬೃಂದಾ ಎನ್. ಜಯರಾಮ್ ಅವರ ನಿರ್ಮಾಣದ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ ಮಕ್ಕಳ ಚಿತ್ರ ಎಂಬ ಪ್ರಮಾಣ ಪತ್ರವೂ ದೊರೆತಿದೆ. ಜೂನ್‌ನಲ್ಲಿ ಬಿಡುಗಡೆಯಾಗಲಿರೋ ಈ ಚಿತ್ರದಲ್ಲಿ ಮಕ್ಕಳ ಮೊಬೈಲ್ ಚಟದ ಕುರಿತಾದ ಕಥಾಹಂದರ ಇದ್ದು, ನೈಜ ಘಟನೆಗಳನ್ನು ಆಧರಿಸಿ ಈ ಚಿತ್ರಕಥೆಯನ್ನು ರಚಿಸಲಾಗಿದೆ. ಈ ಚಿತ್ರಕ್ಕೆ ಅಜಯ್ ಕುಮಾರ್ ಎ.ಜೆ. ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಇತ್ತೀಚೆಗೆ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಗಿದೆ, ಮುಖ್ಯ ಪಾತ್ರದಲ್ಲಿ ಸುಂದರ ಕೃಷ್ಣ ಅರಸ್ ಅವರ ಮೊಮ್ಮಗ, ನಾಗೇಂದ್ರ ಅರಸ್ ಅವರ ಮಗ ವಿಧು ಸುಂದರಕೃಷ್ಣ ಅರಸ್ ನಟಿಸಿದ್ದಾರೆ. ಈ ಮೂಲಕ ಸುಂದರಕೃಷ್ಣ ಅರಸ್ ಅವರ ಮೂರನೇ ತಲೆಮಾರಿನ ಕುಡಿಯೂ ಚಿತ್ರರಂಗ ಪ್ರವೇಶಿಸಿದಂತಾಗಿದೆ. ಹಾಗೆಯೇ ಅತಿಥಿ ಪಾತ್ರದಲ್ಲಿ ಹಿರಿಯನಟ ರಾಘವೇಂದ್ರ ರಾಜಕುಮಾರ್, ವಿಶೇಷ ಪಾತ್ರದಲ್ಲಿ ಡಾ. ಸಿ.ಆರ್. ಚಂದ್ರಶೇಖರ್ ಹಾಗೂ ಲವ್‌ಯು ಮುದ್ದು ಖ್ಯಾತಿಯ ಸಿದ್ದು ಮೂಲಿಮನಿ ಅವರು ಕಾಣಿಸಿಕೊಂಡಿದ್ದಾರೆ. ಉಳಿದಂತೆ ನಾ ನಿನ್ನ ಬಿಡಲಾರೆ ಖ್ಯಾತಿಯ ರಿಷಿಕ, ಅಣ್ಣಯ್ಯ ಖ್ಯಾತಿಯ ಬೇಬಿ ಅಂಕಿತಗೌಡ. ಮಾಸ್ಟರ್ ಆರುಷ್ ಗುಣಕಿಮಠ, ಶಾಮ್‌ಸುಂದರ್, ಸುಂದರ್ ವೀಣಾ, ಹರೀಶ್ ರೈ, ಸಿತಾರಾ, ತನುಶ್ರೀ, ಅನುಪಮಾ ಪಂಚಾಕ್ಷರಿ, ಶೈಲೇಶ್ ಮುಂತಾದವರಿದ್ದಾರೆ. ಜೂನ್‌ನಲ್ಲಿ ತೆರೆಕಾಣಲಿರುವ ಈ ಚಿತ್ರಕ್ಕೆ ಗುಂಡ್ಲುಪೇಟೆ ಸುರೇಶ್ ಛಾಯಾಗ್ರಹಣ, ದಿನೇಶ್‌ಕುಮಾರ್ ಸಂಗೀತ ಸಂಯೋನೆಯಿದೆ.

ವಿಜಯಲಕ್ಷ್ಮೀ ದರ್ಶನ್ ಭಾವುಕ ಪೋಸ್ಟ್

ಸದ್ಯ ದರ್ಶನ್ ಜೈಲಿನಿಂದ ಹೊರಬರುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ರೇಣುಕಾಸ್ವಾಮಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯೂ ಸಹ ರಿಜೆಕ್ಟ್ ಆಗಿದೆ. ಪದೇ ಪದೇ ಕಹಿ ವಿಷಯಗಳನ್ನೇ ಕೇಳುತ್ತಿರುವ ದರ್ಶನ್ ಮಾನಸಿಕವಾಗಿ ಕುಗ್ಗಿಹೋಗಿದ್ದು ಕಟುನಿರ್ಧಾರ ತೆಗೆದುಕೊಳ್ಳಲು ಹೋಗಿದ್ದರೆಂಬ ಸುದ್ದಿಯೂ ಹರಿದಾಡಿತ್ತು. ನಂತರ ಅದಕ್ಕೆ ಕಾರಾಗೃಹದ ಡಿಜಿಪಿ ಅಲೋಕ್‌ಕುಮಾರ್ ಅವರು ಇದೆಲ್ಲ ಗಾಳಿಸುದ್ದಿ, ಆ ಥರದ ಯಾವುದೇ ಘಟನೆ ನಡೆದಿಲ್ಲ ಎಂದು ಸ್ಪಷ್ಟನೆ ನೀಡಿದರು,

ಇತ್ತ ವಿಜಯಲಕ್ಷ್ಮಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಅರ್ಜಿ ವಜಾ ಆದಲ್ಲಿಂದ ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ದರ್ಶನ್ ಬಗ್ಗೆ ಪೋಸ್ಟ್ ಮಾಡುತ್ತಿದ್ದಾರೆ. ಮೇ 19ರಂದು ದರ್ಶನ್ ಹಾಗೂ ವಿಜಯಲಕ್ಷ್ಮಿ ಅವರ 23ನೇ ವಿವಾಹ ವಾರ್ಷಿಕೋತ್ಸವ ಇತ್ತು. ಹಾಗಾಗಿ ದರ್ಶನ್ ಭೇಟಿ ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ವಿಜಯಲಕ್ಷ್ಮಿ ಅವರು ಮನವಿ ಮಾಡಿಕೊಂಡಿದ್ದರು. ಅದಕ್ಕೆ ಅನುಮತಿ ಕೂಡ ಸಿಕ್ಕಿತ್ತು. ದರ್ಶನ್‌ರ ಕಷ್ಟ ಕಾಲದಲ್ಲಿ ವಿಜಯಲಕ್ಷ್ಮಿ ಸದಾ ಬೆಂಬಲವಾಗಿ ನಿಂತಿದ್ದಾರೆ. ಅದೆಂಥಾ ವಿವಾದದಲ್ಲಿ ಸಿಲುಕಿದರೂ ಪತ್ನಿಯಾಗಿ ಅದರಿಂದ ಹೊರ ಕರೆದುಕೊಂಡು ಬಂದಿದ್ದಾರೆ. ಈಗ ರೇಣುಕಾಸ್ವಾಮಿ ಪ್ರಕರಣದಲ್ಲೂ ಅದೇ ಆಗಿದೆ. ದರ್ಶನ್ ಅವರನ್ನು ಹೇಗಾದರೂ ಮಾಡಿ ಜೈಲಿಂದ ಹೊರಗೆ ಕರೆತರಬೇಕೆಂದು ತುಂಬಾ ಕಷ್ಟಪಡುತ್ತಿದ್ದಾರೆ. ವಿವಾಹ ವಾರ್ಷಿಕೋತ್ಸವದ ಬೆನ್ನಲ್ಲೇ ದರ್ಶನ್ ಕುರಿತು ಭಾವನಾತ್ಮಕವಾಗಿ ತನ್ನ ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ಪೋಸ್ಟ್ ಮಾಡಿದ್ದಾರೆ.



ಪ್ರತಿಬಾರಿ ಎದುರಾಗುವ ಬಿರುಗಾಳಿಯಲ್ಲೂ, ಪ್ರತಿಯೊಂದು ಮೌನದಲ್ಲೂ ನಿನ್ನ ಕೈಹಿಡಿಯುತ್ತೇನೆ. ಅದೆಂಥ ಪರಿಸ್ಥಿತಿಗಳು ನಮ್ಮಿಬ್ಬರನ್ನೂ ಬೇರೆ ಮಾಡುವುದಕ್ಕೆ ಮಾಡಲು ಮುಂದಾದರೂ, ನನ್ನ ಹೃದಯ ಮಾತ್ರ ಎಂದಿಗೂ ನಿನ್ನನ್ನೇ ಆರಿಸಿಕೊಳ್ಳುತ್ತೆ. ಎಂದು ವಿಜಯಲಕ್ಷ್ಮಿ ದರ್ಶನ್ ಭಾವುಕರಾಗಿ ಪೋಸ್ಟ್ ಮಾಡಿದ್ದಾರೆ. ಹಾಗೇ ಇಡೀಜಗತ್ತು ನಿನ್ನ ವಿರುದ್ಧವಾಗಿ ನಿಂತರೂ, ನಾನು ಮಾತ್ರ ನಿಮ್ಮ ಪಕ್ಕದಲ್ಲಿ ನಿಂತಿರುತ್ತೇನೆ. ನಿನ್ನನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ ಎಂದು ವಿಜಯಲಕ್ಷ್ಮಿ ದರ್ಶನ್ ಬರೆದುಕೊಂಡಿದ್ದಾರೆ. ಈ ಇನ್ಸ್ಟಾ ಸ್ಟೋರಿ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದ್ದು, ದರ್ಶನ್ ಅಭಿಮಾನಿಗಳು ಭಾವುಕರಾಗಿ ಕಾಮೆಂಟ್ ಮಾಡುತ್ತಿದ್ದಾರೆ. ಹಾಗೇ ವಿಜಯಲಕ್ಷ್ಮಿ ದರ್ಶನ್ ಅವರ ಬೆಂಬಲಕ್ಕೆ ನಿಲ್ಲುವುದಾಗಿ ಹೇಳಿದ್ದಾರೆ.

ವಿಜಯಲಕ್ಷ್ಮಿ ಹಾಗೂ ದರ್ಶನ್ ಮನವಿ ಮಾಡಿಕೊಂಡಂತೆ ಅವರ ವಿವಾಹ ವಾರ್ಷಿಕೋತ್ಸವದಂದು ಮಗನೊಂದಿಗೆ ದರ್ಶನ್ ಭೇಟಿ ಮಾಡುವುದಕ್ಕೆ ಒಂದು ಗಂಟೆಯ ಕಾಲ ಅವಕಾಶ ನೀಡಲಾಗಿತ್ತು. ಇದೇ ವೇಳೆ ದರ್ಶನ್ ಮಾನಸಿಕವಾಗಿ ಕುಗ್ಗಿದ್ದಾರೆಂಬ ಸುದ್ದಿನೂ ಹಬ್ಬಿತ್ತು. ಅದಕ್ಕೆ ಜೈಲಿನ ವೈದ್ಯರ ತಂಡ ಭೇಟಿ ಕೊಟ್ಟು ಪರಿಶೀಲನೆ ಮಾಡಿದ್ದು, ಅದೆಲ್ಲ ವದಂತಿ ಅಷ್ಟೇ ಎಂದು ಹೇಳಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಗರಿಷ್ಠ 31° | ಕನಿಷ್ಠ 23°
ಹೊಸ ದಿಗಂತ
ಬುಧವಾರ 20 ಮೇ 2026

ಮೈಸೂರು

ಪ್ರತಿಭಾ ಪುರಸ್ಕಾರ ..



ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದಿಂದ ಎಸ್‌ಎಸ್‌ಎಸಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಹಿರಿಯ ಪತ್ರಕರ್ತ ಡಾ.ಬಿ.ಕೆ. ಗಣಪತಿ ಹಾಗೂ ರಾಜಶೇಖರ ಕೋಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಸ್ಟಾರ್ ಆಫ್ ಮೈಸೂರು ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಆಂದೋಲನ ಪತ್ರಿಕೆ ಸಂಪಾದಕ ರವಿ ಕೋಟಿ, ಮೈಸೂರು ಜಿಲ್ಲೆ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಹಿರಿಯ ವಕೀಲರಾದ ಎಚ್.ಎನ್.ವೆಂಕಟೇಶ್ ಇದ್ದರು.

ಮಳೆಗೆ ಅರಿಶಿಣ, ಬೆಳ್ಳುಳ್ಳಿ ಫಸಲು ನಾಶ | ೨
ಕಳಪೆ ಕಾಮಗಾರಿಗೆ ಗ್ರಾಮಸ್ಥರ ಆಕ್ರೋಶ | ೩
ಪೋಕ್ಸೋ ಪ್ರಕರಣ ತಡೆಯಿರಿ: ಡಿಸಿ ೪

ಕಿರುಸುದ್ದಿ

ಮೇ 22ಕ್ಕೆ ಬಸವ ಜಯಂತಿ

ಮೈಸೂರು: ಇಲ್ಲಿನ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್, ಮೈಸೂರು ಇದರ ಆಶ್ರಯದಲ್ಲಿ ಮೇ 22 ರಂದು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಬಸವ ಜಯಂತಿ, ವಾರ್ಷಿಕೋತ್ಸವ ಸಮಾರಂಭವು ನಡೆಯಲಿದೆ.ಅಂದು ಸಂಜೆ 6 ಗಂಟೆಗೆ ಸುತ್ತೂರು ಮಠದ ಪೀಠಾಧಿಪತಿಗಳಾದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಸಮಾರಂಭವನ್ನು ಕೈಗಾರಿಕೋದ್ಯಮಿ ಡಾ. ಎಂ.ಜಗನ್ನಾಥ್ ಶೆಣೈ ಉದ್ಘಾಟಿಸಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಉಪನ್ಯಾಸ ನೀಡಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ವಿದ್ವಾನ್ ಬಳ್ಳಾರಿ ಎಂ.ರಾಘವೇಂದ್ರರಿಂದ ವಚನ ಗಾಯನ ನಡೆಯುಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಂಗಭೂಮಿ ಸಮಾವೇಶದ ಸರ್ವಾಧ್ಯಕ್ಷರ ಆಯ್ಕೆ

ಮೈಸೂರು: ನಗರದ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರು ಕರ್ನಾಟಕ ರಂಗಭೂಮಿ ಸಂಘಟಕರ ಸಮಾವೇಶದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕರ್ನಾಟಕ ರಂಗ ಪರಿಷತ್ತಿನ ಆಶ್ರಯದಲ್ಲಿ ಮೇ 25ರಂದು ಬೆಂಗಳೂರಿನ ಕನ್ನಡ ಭವನದಲ್ಲಿ ಸಮಾವೇಶ ನಡೆಯಲಿದೆ. ರಂಗಭೂಮಿಯಲ್ಲಿ ಕಳೆದ ಆರು ದಶಕಗಳಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುವ ರಾಜಶೇಖರ ಕದಂಬ ಅವರು, ನೂರೆಂಟು ರಂಗಮುಖಿಗಳು, ರಂಗದಂಗಳ, ಬಣ್ಣದ ಮುಖಿಗಳು ಕೃತಿಗಳನ್ನು ಹೊರತಂದಿದ್ದಾರೆ. 'ನೂರೆಂಟು ರಂಗಮುಖಿಗಳು' ಕೃತಿಗೆ ನಾಟಕ ಅಕಾಡೆಮಿ ಪ್ರಶಸ್ತಿ ದೊರತಿದೆ. ಜನುಮದ ಜೋಡಿ, ವಂಶಿ, ಯಜಮಾನ, ಚಂದನದ ಗೊಂಬೆ, ಮೇಘ ಬಂತು ಮೇಘ ಮುಂತಾದ 50 ಚಲನಚಿತ್ರಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ 2004 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.ನಾಟಕ ಅಕಾಡೆಮಿ ಪ್ರಶಸ್ತಿ, ಸುವರ್ಣ ಕರ್ನಾಟಕ ರಂಗ ಪ್ರಶಸ್ತಿ, ಕೆ.ವಿ.ಶಂಕರ ಗೌಡ ರಾಜ್ಯ ರಂಗಭೂಮಿ ಪ್ರಶಸ್ತಿ ಇವರಿಗೆ ಸಂದಿವೆ.

ಕಾರು-ಬೈಕ್ ಡಿಕ್ಕಿ: ಸವಾರ ಸಾವು

ಮೈಸೂರು: ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ, ಬೈಕ್ ಸವಾರ ಮೃತಪಟ್ಟಿರುವ ಘಟನೆ ಮೈಸೂರು ನಗರದಲ್ಲಿ ನಡೆದಿದೆ.ಬೆಂಗಳೂರು ನಿವಾಸಿ ಮಂಜು(23) ಸಾವಿಗೀಡಾವರು. ಇವರು ಮೈಸೂರು ನಗರದ ಬನ್ನೂರು ರಸ್ತೆಯಲ್ಲಿರುವ ಕೆಇಬಿ ಸ್ಟೇಷನ್‌ನಲ್ಲಿ ನಡೆಯುತ್ತಿದ್ದ ಕಾಮಗಾರಿಯ ಕೆಲಸಕ್ಕೆ ಬಂದಿದ್ದರು. ಮಂಜು ಹಾಗೂ ಅವರ ಸ್ನೇಹಿತ ವಿಕಾಸ್ ಎಂಬವರು ಊಟ ಮಾಡಲೆಂದು ನಗರದ ದೇವೇಗೌಡ ವೃತ್ತದ ಬಳಿಯ ಹೋಟೆಲ್‌ವೊಂದಕ್ಕೆ ಬಂದಿದ್ದು, ಬಳಿಕ ಬೈಕ್‌ನಲ್ಲಿ ಮನೆಗೆ ವಾಪಸ್ ತೆರಳುತ್ತಿದ್ದಾಗ ಬನ್ನೂರು ಮುಖ್ಯರಸ್ತೆಯ ಎಟಿಎಂಇ ಕಾಲೇಜಿನ ಬಳಿ ವೇಗವಾಗಿ ಬಂದ ಕಾರು ಬೈಕ್‌ಗೆ ಗುದ್ದಿದ್ದು, ಇಬ್ಬರೂ ಬೈಕ್‌ನಿಂದ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಮಂಜು ಅವರಿಗೆ ತಲೆಯ ಭಾಗಕ್ಕೆ ಗಂಭೀರ ಪೆಟ್ಟಾದ ಕಾರಣ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಪಡಿತರ ಅಕ್ಕಿ ಅಕ್ರಮ ಸಾಗಣೆ: ಮೂವರ ಸೆರೆ

ಮೈಸೂರು: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಮೂವರನ್ನು ಮೈಸೂರಿನ ದಕ್ಷಿಣ ಗ್ರಾಮಾಂತರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಫಯಾಜ್ ಪಾಷಾ, ಸಿದ್ದಿಕಿ ಪಾಷಾ ಹಾಗೂ ಮುಬಾರಕ್ ಪಾಷಾ ಬಂಧಿತರಾಗಿದ್ದು, ಅವರಿಂದ 10 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆದಿದ್ದಾರೆ. ಮೈಸೂರು ತಾಲೂಕಿನ ಹಂಚ್ಯಾ ಗ್ರಾಮದ ಬಳಿ ಪಡಿತರ ಅಕ್ಕಿಯನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಆಹಾರ ನಿರೀಕ್ಷಕ ಮಂಜುನಾಥ್ ಅವರಿಗೆ ಬಂದಿದೆ. ಕೂಡಲೇ ಅವರು ದಕ್ಷಿಣ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ನಂತರ ಪೊಲೀಸರ ಸಹಕಾರದೊಂದಿಗೆ ಸ್ಥಳಕ್ಕೆ ತೆರಳಿ ಅಕ್ಕಿಯನ್ನು ಸಾಗಿಸುತ್ತಿದ್ದ ಆಟೋವನ್ನು ತಡೆದಿದ್ದಾರೆ. ಅಲ್ಲಿದ್ದ ಫಯಾಜ್ ಪಾಷಾ, ಸಿದ್ದಿಕಿ ಪಾಷಾ ಹಾಗೂ ಮುಬಾರಕ್ ಪಾಷಾ ಎಂಬವರನ್ನು ಬಂಧಿಸಿ ಅಕ್ಕಿಯ ಚೀಲಗಳನ್ನು ವಶಕ್ಕೆ ಪಡೆದಿದ್ದಾರೆ. ದಕ್ಷಿಣ ಗ್ರಾ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಭೆಯಲ್ಲಿ ಅಧಿಕಾರಿಗಳಿಗೆ ಹೆಚ್ಚುವರಿ ಎಸ್ಪಿ ಮಲ್ಲಿಕ್ ಸೂಚನೆ

ಡ್ರಗ್ಸ್ ಮಾರಾಟ ತಡೆಯಿರಿ



ಮೈಸೂರು: ಮಾದಕ ವಸ್ತುಗಳ ಸೇವನೆ ಸಮಾಜಕ್ಕೆ ಮಾರಕವಾಗಿದ್ದು, ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆಯನ್ನು ತಡೆಗಟ್ಟಲು ಜಾಗೃತಿ ಕಾರ್ಯಕ್ರಮ ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ತಿಳಿಸಿದರು.

ಮಂಗಳವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಾರ್ಕೋರ್ಡ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೂನ್ 26 ರಂದು ಮಾದಕ ವಸ್ತು ವಿರೋಧಿ ದಿನಾಚರಣೆ ಆಚರಿಸಲಾಗುತ್ತಿದ್ದು, ಸದರಿ ಮಾಹೆಯಲ್ಲಿ ವಿವಿಧ ಇಲಾಖೆಯಿಂದ ಹೆಚ್ಚಾಗಿ ಕಾಲೇಜುವಿದ್ಯಾರ್ಥಿಗಳನ್ನು ತೊಡಗಿಸಿಕೊಂಡು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ತಿಳಿಸಿದರು.

ಮೇ 31 ರಂದು ತಂಬಾಕು ಮುಕ್ತ ದಿನಾಚರಣೆ

ಧೂಮಪಾನ ಸೇವನೆಯಿಂದ ಧೂಮಪಾನ ಮಾಡುವ ವ್ಯಕ್ತಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಅವರ ಜೊತೆ 5 ರಿಂದ 6 ಗಂಟೆ ಇರುವವರ ಮೇಲು ಪರಿಣಾಮ ಬೀರುತ್ತದೆ.

ಮೇ 31 ರಂದು ತಂಬಾಕು ಮುಕ್ತ ದಿನಾಚರಣೆ ಕಾರ್ಯಕ್ರಮವಿದ್ದು, ಈ ಬಾರಿ ವಿನೂತನವಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಿ ಎಂದರು. ಚೆಂಡು ಹೂ ಹಾಗೂ ತೊಗರಿ ಗಿಡಗಳ ಮಧ್ಯೆ ಗಂಜಾ ಗಿಡಗಳನ್ನು ಬೆಳೆಯುವ ಸಾಧ್ಯತೆ ಹೆಚ್ಚಿದ್ದು, ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅವರು ಸ್ಥಳ ಭೇಟಿ ಮಾಡಿದ ಸಂದರ್ಭದಲ್ಲಿ ಪರಿಶೀಲನೆ ನಡೆಸುವಂತೆ ತಿಳಿಸುವಂತೆ ತಿಳಿಸಿದರು.

ಆರೋಗ್ಯ ಇಲಾಖೆಯ ಕೋಟ್ಪ್ ವಿಭಾಗದಿಂದ ಏಪ್ರಿಲ್ ಮಾಹೆಯಲ್ಲಿ 561 ದೂರು ದಾಖಲಿಸಿ 1,25,000 ರೂ ದಂಡ ಸಂಗ್ರಹಿಸಲಾಗಿದೆ. ಅಬಕಾರಿ ಇಲಾಖೆ ವತಿಯಿಂದ ಮೈಸೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 20 ಎನ್.ಡಿ.ಪಿ.ಎಸ್. ಪ್ರಕರಣಗಳನ್ನು ದಾಖಲಿಸಿ 14 ಆರೋಪಿಗಳನ್ನು ಬಂಧಿಸಿ, 58.335 ಕೆ.ಜಿ. ಗಾಂಜಾ ಹಾಗೂ 50 ಹಸಿ ಗಾಂಜಾ ಗಿಡಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆಯಾ ಇಲಾಖೆಯವರು ಸಭೆಗೆ ಮಾಹಿತಿ ನೀಡಿದರು.ಸಭೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ಎಸಿಪಿ ಮನೋಜ್ ಕುಮಾರ್, ಸಹಾಯಕ ಔಷಧ ನಿಯಂತ್ರಕರಾದ ಆಶಾಲತಾ, ವಾಸೀಂ ಷರೀಫ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಹಾಸ್ಟಲ್ ವಿದ್ಯಾರ್ಥಿಗಳ ಮೇಲೆ ನಿಗಾ

ಹಾಸ್ಟಲ್‌ಗಳಲ್ಲಿ ಸಿಸಿ ಟಿವಿ ಕ್ಯಮರಾ ಅಳವಡಿಸಿ, ವಿದ್ಯಾರ್ಥಿಗಳ ಕಾರ್ಯಚಟುವಟಿಕೆಗಳ ಹಾಗೂ ಅವರ ವರ್ತನೆಯ ಬದಲಾವಣೆಗಳು ಹಾಗೂ ವಿದ್ಯಾರ್ಥಿಗಳು ಹೊರಗಿನಿಂದ ಪಾರ್ಸಲ್ ಮೂಲಕ ಖರೀದಿಸುವ ಆಹಾರ ಪದಾರ್ಥಗಳ ಬಗ್ಗೆ ನಿಗಾ ವಹಿಸಿ ಎಂದು ಅಧಿಕಾರಿಗಳಿಗೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಮಲ್ಲಿಕ್ ಸೂಚಿಸಿದರು.

> ಜಿಲ್ಲೆಯಲ್ಲಿ ಬಹಳಷ್ಟು ಖಾಸಗಿ ವ್ಯಸನ ಮುಕ್ತ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೇಂದ್ರಗಳ ಕಾರ್ಯನಿರ್ವಹಣೆಗೆ ಇರುವ ಷರತ್ತುಗಳು ಹಾಗೂ ಅವುಗಳ ಪಾಲನೆಯ ಬಗ್ಗೆ ಅಧಿಕಾರಿಗಳು ನಿಗಾವಹಿಸಬೇಕು.
> ■ ಸಿ.ಮಲ್ಲಿಕ್. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಐಜಿಪಿ ಡಾ.ಬೋರಲಿಂಗಯ್ಯ ಅಭಿಮತ

ಯಶಸ್ಸಿಗೆ ಪಠ್ಯೇತರ ಚಟುವಟಿಕೆ ಅಗತ್ಯ



ಮೈಸೂರು: ಮಕ್ಕಳು ಜೀವನದಲ್ಲಿ ಯಶಸ್ಸು ಸಾಧಿಸಲು ಕ್ರೀಡೆ ಮಹತ್ವದ ಪಾತ್ರ ವಹಿಸುತ್ತದೆ'' ಎಂದು ಮೈಸೂರು ವಲಯ ಐಜಿಪಿ ಡಾ. ಬೋರಲಿಂಗಯ್ಯ ಹೇಳಿದರು.

ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ವಿದ್ಯಾಪೀಠ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಸ್ಥೆಯ ಸಹಕಾರ ಮತ್ತು ಸಹಯೋಗದೊಂದಿಗೆ ರಾಷ್ಟ್ರೀಯ ಸ್ಪೋರ್ಟ್ಸ್ ಏರೋಬಿಕ್ಸ್ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಏರೋಬಿಕ್ಸ್ ಹಾಗೂ ಹಿಪ್ ಹಾಪ್ ಚಾಂಪಿಯನ್‌ಶಿಪ್‌ನ್ನು ಉದ್ಘಾಟಿಸಿ ಮಾತನಾಡಿದರು.

ಸಮಾರಂಭದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಆಡಳಿತಾಧಿಕಾರಿ ಉದಯ ಶಂಕರ್, ಸಹಾಯಕ ಆಡಳಿತಾಧಿಕಾರಿ ತ್ರಿಪುರಾಂತಕ, ಖ್ಯಾತ ವೈದ್ಯ ಡಾ. ಸುದರ್ಶನ್, ರಾಷ್ಟ್ರೀಯ ಏರೋಬಿಕ್ಸ್ ಸಂಸ್ಥೆ ಅಧ್ಯಕ್ಷ ಸಂತೋಷ್ ಖೈನಾರ್, ಕಾರ್ಯದರ್ಶಿ ಶುಭರಾಣಿ ಬಿ.ಪಿ., ಖಜಾಂಚಿ ಸುರಯ್ಯಾ ಖೈನಾರ್ ಹಾಗೂ ಪ್ರಧಾನ ಆಯೋಜಕ ಪ್ರಭು ಉಪಸ್ಥಿತರಿದ್ದರು.

ಸ್ಪೋರ್ಟ್ ಏರೋಬಿಕ್ಸ್, ಫಿಟ್ನೆಸ್ ಏರೋಬಿಕ್ಸ್, ಸ್ಟೆಪ್ ಏರೋಬಿಕ್ಸ್ ಹಾಗೂ ಹಿಪ್ ಹಾಪ್ ವಿಭಾಗಗಳಲ್ಲಿ ವಿವಿಧ ವಯೋಮಿತಿಯ ಸ್ಪರ್ಧೆಗಳು ನಡೆದವು. ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ತಮಿಳುನಾಡು ಪಡೆದುಕೊಂಡರೆ, ಮಹಾರಾಷ್ಟ್ರ ದ್ವಿತೀಯ, ಕರ್ನಾಟಕ ತೃತೀಯ ಹಾಗೂ ರಾಜಸ್ಥಾನ ನಾಲ್ಕನೇ ಸ್ಥಾನ ಪಡೆದವು.

ಪದಕ ವಿಜೇತರು ನ್ಯೂಜಿಲ್ಯಾಂಡ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

300 ಸ್ಪರ್ಧಿಗಳು ಭಾಗಿ: ಚಾಂಪಿಯನ್ ಶಿಪ್‌ನಲ್ಲಿ ಆತಿಥೇಯ ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಪಶ್ಚಿಮ ಬಂಗಾಳ, ರಾಜಸ್ಥಾನ, ದೆಹಲಿ ಹಾಗೂ ಉತ್ತರಾಖಂಡ ಸೇರಿದಂತೆ ವಿವಿಧ ರಾಜ್ಯಗಳ 300ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು.

'ಚೋದ್ಯ' ಕಥಾಸಂಕಲನಕ್ಕೆ ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ

ಮೈಸೂರು: ಮೈಸೂರಿನ ಸಮತಾ ಅಧ್ಯಯನ ಕೇಂದ್ರವು ನೀಡುವ 2026 ನೇ ಸಾಲಿನ ಡಾ. ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿಗೆಕತೆಗಾರ್ತಿ ಅನುಪಮಾ ಪ್ರಸಾದ್ ಅವರ 'ಚೋದ್ಯ' ಕಥಾ ಸಂಕಲನವು ಆಯ್ಕೆಯಾಗಿದೆ. ಬೆಂಗಳೂರಿನ 'ಅಮೂಲ್ಯ ಪುಸ್ತಕ' ಪ್ರಕಾಶನವು ಈ ಸಂಕಲನವನ್ನು ಪ್ರಕಟಿಸಿದೆ.

- ಕಥಾ ಸಂಕಲನಗಳಿಗೆ ಆಹ್ವಾನ ನೀಡಿದ್ದ ಮಮತಾ ಅಧ್ಯಯನ ಕೇಂದ್ರ
- 63 ಸಂಕಲನಗಳು ಸ್ಪರ್ಧೆಗೆ



ಮೈಸೂರಿನ ಸಮತಾ ಅಧ್ಯಯನಕೇಂದ್ರವು ಈ ಬಾರಿ 2022– 25ರ ಅವಧಿಯಲ್ಲಿ ಲೇಖಕಿಯರು ಪ್ರಕಟಿಸಿದ ಕಥಾ ಸಂಕಲನಗಳನ್ನು ಆಹ್ವಾನಿಸಿತ್ತು. ಲೇಖಕಿಯರು, ಪ್ರಕಾಶಕರಿಂದ 63 ಸಂಕಲನಗಳು ಸ್ಪರ್ಧೆಗೆ ಬಂದಿದ್ದವು. ಹಿರಿಯ ಲೇಖಕರಾದ ಡಾ. ಸಬಿತಾ ಬನ್ನಾಡಿ, ಸ್ವಾಮಿ ಪೊನ್ನಾಚಿ, ಡಾ. ಎಂ.ಎಸ್. ವೇದಾ ಅವರಿದ್ದ ತೀರ್ಪುಗಾರರ ಸಮಿತಿಯು 'ಚೋದ್ಯ' ಸಂಕಲನವನ್ನು ಪ್ರಶಸ್ತಿಗೆ ಆಯ್ಕೆಮಾಡಿದೆ. 25 ಸಾವಿರ ರೂ. ನಗದನ್ನು ಪ್ರಶಸ್ತಿ ಒಳಗೊಂಡಿದೆ.

ಅಧ್ಯಯನ ಕೇಂದ್ರವು ಡಾ.ವಿಜಯಾ ದಬ್ಬೆ ಅವರ ನೆನಪಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕವನ ಮತ್ತು ಲಲಿತಪ್ರಬಂಧ ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಲಾಗಿದೆ. 20 ರಿಂದ 35 ವಯೋಮಾನದ ವಿದ್ಯಾರ್ಥಿ, ಯುವಜನರಿಗೆ ಆಯೋಜಿಸಿದ್ದ ಕವನ ಸ್ಪರ್ಧೆಯಲ್ಲಿ ಕೇರಳ ಕೇಂದ್ರೀಯ ವಿವಿ ಕನ್ನಡ ವಿಭಾಗದ ವಿದ್ಯಾರ್ಥಿ ದರ್ಶನ್ ಕುಮಾರ್ ಮತ್ತು ಜ್ಯೋತಿರ್ಲಕ್ಷ್ಮಿ ಕ್ರಮವಾಗಿ ಪ್ರಥಮ, ದ್ವಿತೀಯ ಬಹುಮಾನ, ಬೆಂಗಳೂರು ಗವಿಪುರಂ ಬಡಾವಣೆಯ ಅಚಲ ಬಿ.ಹೆನ್ನಿ ತೃತೀಯ ಬಹುಮಾನ ಪಡೆದಿದ್ದಾರೆ. ಅಥಣಿ ತಾಲೂಕು ಶೇಗುಣಸೆಯ ಸೀಮಾ ಶಿರಗುಪ್ಪಿ, ಬೆಂಗಳೂರು ಹನುಮಂತ ನಗರದ ವೈ. ಎಸ್. ಸುಪ್ರಿಯಾ ಅವರ ಕವನಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ. 20 ರಿಂದ 40 ವಯೋ ಮಾನದ ಲೇಖಕಿಯರಿಗೆ ಆಯೋಜಿಸಿದ್ದ ಲಲಿತ ಪ್ರಬಂಧ ಸ್ಪರ್ಧೆಯಲ್ಲಿ ಬೆಂಗಳೂರಿನ ಅಚಲ ಬಿ.ಹೆನ್ನಿ ಪ್ರಥಮ, ಕುಂದಾಪುರ ತಾಲೂಕು ಅಮಾಸೆ ಬೈಲಿನ ರಾಧಿಕಾ ಎಸ್. ದ್ವಿತೀಯ ಬಹುಮಾನ ಪಡೆದಿದ್ದಾರೆ.

ಸ್ಪರ್ಧೆಗಳಲ್ಲಿ ವಿಜೇತರು ಮತ್ತು ಆಸಕ್ತ ಲೇಖಕಿಯರಿಗೆ ಸಮತಾ ಅಧ್ಯಯನ ಕೇಂದ್ರವು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಮೇ 31, ಜೂ.1 ರಂದು ಮೈಸೂರಿನಲ್ಲಿ ಕಾವ್ಯ ಕಮ್ಮಟ ಏರ್ಪಡಿಸಿದೆ. ಜೂ.1ರ ಸಂಜೆ 4 ಗಂಟೆಗೆ ಪ್ರಶಸ್ತಿ ಪ್ರದಾನ, ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದೆ ಎಂದು ಕೇಂದ್ರದ ಅಧ್ಯಕ್ಷೆ ಡಾ. ಸಬಿಹಾ ಭೂಮಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಂ ಸೂರ್ಯಘರ್ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಸೂಚನೆ

ಸೋಲಾರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಲಿ

ಮೈಸೂರು: ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದ್ದು, ಹೆಚ್ಚಿನ ಗ್ರಾಹಕರು ಯೋಜನೆಯ ಸೌಲಭ್ಯ ಪಡೆಯುವಂತೆ ಅಧಿಕಾರಿಗಳು ಹಾಗೂ ಪೂರೈಕೆದಾರರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಮೈಸೂರು ವಿಭಾಗ ಪ್ರಾದೇಶಿಕ ಆಯುಕ್ತರೂ ಆದ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ನಿತೇಶ್ ಪಾಟೀಲ್ ಸೂಚಿಸಿದರು.

ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಪ್ರಧಾನ ಕಚೇರಿಯಲ್ಲಿ ಅಧಿಕಾರಿಗಳು ಹಾಗೂ ಪೂರೈಕೆದಾರರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು,

2024ರಲ್ಲಿ ಯೋಜನೆ ಆರಂಭವಾಗಿದ್ದರೂ ಈವರೆಗೂ ನಿರೀಕ್ಷಿತ ಅರ್ಜಿಗಳು ಬಂದಿಲ್ಲ. ವಿದ್ಯುತ್ ದರ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಸೋಲಾರ್ ರೂಫ್ ಟಾಪ್ ಅಳವಡಿಸಿಕೊಂಡರೆ, ಗ್ರಾಹಕರಿಗೆ ವಾರ್ಷಿಕವಾಗಿ ಅಂದಾಜು ಕನಿಷ್ಠ 25 ಸಾವಿರ ರೂ. ಉಳಿತಾಯವಾಗುವ ಸಾಧ್ಯತೆ ಇದೆ. ಯೋಜನೆಯ ಅನುಷ್ಠಾನಕ್ಕೆ ಸರ್ಕಾರದಿಂದ ಸಬ್ಸಿಡಿ ಸೌಲಭ್ಯವಿದ್ದು, ಯೋಜನೆ ಗ್ರಾಹಕರಿಗೆ ಲಾಭದಾಯಕವಾಗಿದೆ. ಈ ಬಗ್ಗೆ ಜನರಿಗೆ ಸಮರ್ಪಕ ಮಾಹಿತಿ ನೀಡುವ ಮೂಲಕ ಹೆಚ್ಚು ಗ್ರಾಹಕರು ಯೋಜನೆಯ ಬಳಕೆಗೆ ಮುಂದಾಗುವಂತೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.



ಗ್ರಾಹಕರಿಗೆ ವೆಂಡರ್‌ಗಳ ಮಾಹಿತಿ ಸುಲಭವಾಗಿ ದೊರೆಯುವ ವ್ಯವಸ್ಥೆ ಆಗಬೇಕಿದೆ. ಇದರಿಂದಾಗಿ ಗ್ರಾಹಕರು ತಮ್ಮ ಅಗತ್ಯತೆ ಮತ್ತು ಅನುಕೂಲಕ್ಕೆ ತಕ್ಕಂತೆ ವೆಂಡರ್‌ಗಳ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮತ್ತೊಂದೆಡೆ ಸೋಲಾರ್ ರೂಫ್ ಟಾಪ್ ಅಳವಡಿಕೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಕೂಡಲೇ, ಸೆಸ್ಕ್ ಅಧಿಕಾರಿಗಳು ಅರ್ಜಿ ಪರಿಶೀಲಿಸುವ ಪ್ರಕ್ರಿಯೆ ತ್ವರಿತವಾಗಿ ನಡೆಯಬೇಕು ಎಂದು ಸೂಚಿಸಿದರು.

ಗ್ರಾಹಕರಿಗೆ ವಿಶ್ವಾಸ ಮೂಡಿಸಿ

ನಗರಪಾಲಿಕೆ, ಜಿಲ್ಲಾಡಳಿತ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಯೋಜನೆ ಜಾರಿಗೊಳಿಸಬೇಕು. ಸಂಭಾವ್ಯ ಗ್ರಾಹಕರನ್ನು ಭೇಟಿಯಾಗಿ, ವೆಂಡರ್‌ಗಳು ಯೋಜನೆಯ ಲಾಭಗಳ ಬಗ್ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಬೇಕು. ವೆಂಡರ್‌ಗಳು ಅರ್ಜಿ ಪರಿಶೀಲನೆಯಾದ 5 ದಿನಗಳಲ್ಲಿ ಸ್ಮಾರ್ಟ್ ಮೀಟರ್ ಸೇರಿದಂತೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಮುಗಿಸಬೇಕು. ಸೋಲಾರ್ ರೂಫ್ ಟಾಪ್ ಅಳವಡಿಸಿಕೊಳ್ಳಲು ಗ್ರಾಹಕರಿಗೆ ವಿಶ್ವಾಸ ಮೂಡಿಸಬೇಕು ಎಂದು ನಿತೇಶ್ ಪಾಟೀಲ್ ಹೇಳಿದರು.

ಸಭೆಯಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್. ಜಂಗಿನ, ಮುಖ್ಯ ಇಂಜಿನಿಯರ್ ಎಲ್. ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್, ಪ್ರಧಾನ ವ್ಯವಸ್ಥಾಪಕರಾದ ಎಚ್.ಆರ್. ದಿನೇಶ್, ಆರ್. ರಾಮಸ್ವಾಮಿ ಇತರರಿದ್ದರು.

ನಗರ ಬಿಜೆಪಿ ಮೋರ್ಚಾಗಳಿಗೆ ಪದಾಧಿಕಾರಿಗಳ ನೇಮಕ

ಮೈಸೂರು: ಮೈಸೂರು ನಗರ ಬಿಜೆಪಿಯ ವಿವಿಧ ಮೋರ್ಚಾಗಳಿಗೆ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ. ಪಕ್ಷದ ಸಂಘಟನೆ, ವರ್ಧನೆಗಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ನಗರಾಧ್ಯಕ್ಷ ಎಲ್ ನಾಗೇಂದ್ರ ತಿಳಿಸಿದ್ದಾರೆ.

ಯುವ ಮೋರ್ಚಾ ಅಧ್ಯಕ್ಷರಾಗಿ ರಾಕೇಶ್, ಪ್ರಧಾನ ಕಾರ್ಯದರ್ಶಿಯಾಗಿ ರೋಹಿತ್, ಸಚಿನ್, ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮೋನಿಕಾ, ಪ್ರಧಾನ ಕಾರ್ಯದರ್ಶಿಯಾಗಿ ಕಾವೇರಿ, ರಶ್ಮಿ, ರೈತ ಮೋರ್ಚಾ ಅಧ್ಯಕ್ಷರಾಗಿ ಸುರೇಶ್ ದೇವದತ್ತ, ಪ್ರಧಾನ ಕಾರ್ಯದರ್ಶಿಯಾಗಿ ವೀರಭದ್ರ, ವಿನಯ್. ಎಸ್‌ಟಿ ಮೋರ್ಚಾ ಅಧ್ಯಕ್ಷರಾಗಿ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿಯಾಗಿ ಕೃಷ್ಣನಾಯಕ, ನಾಗೇಶ್ ನಾಯಕ, ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಕಾರ್ತಿಕ್ ಮರಿಯಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ವಡಿವೇಲು, ಸ್ವಾಮಿ, ಒಬಿಸಿ ಮೋರ್ಚಾ ಅಧ್ಯಕ್ಷರಾಗಿ ಜಗದೀಶ್, ಪ್ರಧಾನ ಕಾರ್ಯದರ್ಶಿಯಾಗಿ ಸತೀಶ್, ನಾಗೇಶ್ ಯಾದವ್, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾಗಿ ವಿನೋದ್ ಜೈನ್, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ಕುಮಾರ್‌ಪೌಲ್, ತಸ್ವೀರ್ ಅವರನ್ನು ನೇಮಕ ಮಾಡಲಾಗಿದೆ.

ನಗರ ಸಹ ವಕ್ತಾರರಾಗಿ ಜಯಶೇಖರ್, ಮಾಧ್ಯಮ ಸಹ ಪ್ರಮುಖ್ ಆಗಿ ಸಂತೋಷ್ ಕುಮಾರ್, ಪ್ರಕೋಷ್ಠ ಸಹ ಸಂಚಾಲಕರಾಗಿ ರಂಗಸ್ವಾಮಿ ಅವರನ್ನು ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ–2026 ಬೇಸಿಗೆ ರಂಗ ಶಿಬಿರದ ಸಮಾರೋಪ

ಸೃಜನಶೀಲತೆಗೆ ರಂಗಭೂಮಿಯ ಸ್ಪರ್ಶ

ಮೈಸೂರು: ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಸಂಸ್ಥೆಯು ಕಳೆದ ಒಂದು ತಿಂಗಳಿನಿಂದ ಮಕ್ಕಳಿಗಾಗಿ ಆಯೋಜಿಸಿದ್ದ 'ಸಂಕ್ಷಿಪ್ತ' ಬೇಸಿಗೆ ರಂಗ ಶಿಬಿರವು ಸಮಾರೋಪಗೊಂಡಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೀಪಕ್ ಮೈಸೂರು ಮಾತನಾಡಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ರಂಗ ಶಿಬಿರಗಳು ಅತ್ಯಂತ ಅಗತ್ಯ. ನಾಟಕ, ಸಂಗೀತ, ನೃತ್ಯ, ಕ್ರಾಫ್ಟ್ ವರ್ಕ್ ಸೇರಿದಂತೆ ವಿವಿಧ ಕಲಾ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ, ಕಲ್ಪನಾ ಶಕ್ತಿ ಮತ್ತು ಸಾಮಾಜಿಕ ಮನೋಭಾವ ಬೆಳೆಯುತ್ತದೆ ಎಂದು ತಿಳಿಸಿದರು.

ಇಂದಿನ ಪೋಷಕರು ಕೇವಲ ಅಂಕಗಳ ಹಿಂದೆ ಓಡದೇ, ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಇಂತಹ ಶಿಬಿರಗಳಲ್ಲಿ ಭಾಗವಹಿಸಲು ಉತ್ತೇಜಿಸಬೇಕು. ಜೊತೆಗೆ, ಮಕ್ಕಳನ್ನು ಮೊಬೈಲ್ ಮತ್ತು ದೂರದರ್ಶನದ ಅತಿಯಾದ ಬಳಕೆಯಿಂದ ದೂರವಿಟ್ಟು ಗ್ರಂಥಾಲಯಗಳು, ಉದ್ಯಾನವನಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳತ್ತ ಕರೆದೊಯ್ಯಬೇಕು ಎಂದರು.



ನಾಟಕ ಪ್ರದರ್ಶನ

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ದೀಪಕ್ ಮೈಸೂರು ಅವರ ನಿರ್ದೇಶನದಲ್ಲಿ, ಖ್ಯಾತ ನಾಟಕಕಾರ ಸಫ್ದರ್ ಹಶ್ಮಿ ರಚಿಸಿದ ಹಾಗೂ ನಟರಾಜ್ ಹೊನ್ನವಳ್ಳಿ ಅವರು ಕನ್ನಡಕ್ಕೆ ಅನುವಾದಿಸಿದ 'ಕೆಂಪು ಹೂವು' ನಾಟಕದ ಪ್ರದರ್ಶನ ನಡೆಯಿತು.

ಗ್ರಂಥಾಲಯಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ಪೂರಕವಾದರೆ, ಉದ್ಯಾನವನಗಳು ಅವರ ದೈಹಿಕ ಚಟುವಟಿಕೆಗಳಿಗೆ ವೇದಿಕೆಯಾಗುತ್ತವೆ. ಓದು, ಆಟ, ವ್ಯಾಯಾಮ ಮತ್ತು ಕಲಾ ಚಟುವಟಿಕೆಗಳ ಸಮತೋಲನವೇ ಮಕ್ಕಳ ಸಮಗ್ರ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ'' ಎಂದು ಹೇಳಿದರು. ರಂಗ ಕಲಾವಿದೆ ಶೀಲಾ ದೀಪಕ್ ಅವರು ಮಕ್ಕಳಿಗೆ ನೈತಿಕ ಮೌಲ್ಯಗಳನ್ನು ಬೋಧಿಸುವ ಮನಮುಟ್ಟುವ ಕಥೆಯನ್ನು ಹೇಳುವ ಮೂಲಕ ಉತ್ತಮ ಬದುಕಿನ ಪಾಠವನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಯಾಮ ಟ್ರಸ್ಟ್‌ನ ಟ್ರಸ್ಟಿ ಲಕ್ಷ್ಮಮ್ಮ ವಹಿಸಿದ್ದರು. ಆಯಾಮ ಅಕಾಡೆಮಿಯ ಕಾರ್ಯದರ್ಶಿ ಡಾ. ಶಾಂಭವಿ ಸ್ವಾಮಿ, ಅಧ್ಯಕ್ಷ ಸಾ.ವೆ.ರ ಸ್ವಾಮಿಯವರು, ಚಲನಚಿತ್ರ ಕಲಾವಿದ ಬಲ ರಾಜವಾಡಿ, ನಿರಂತರ ಸಂಸ್ಥೆಯ ನಿರ್ದೇಶಕ ಶ್ರೀನಿವಾಸ್ ಪಾಲಹಳ್ಳಿ ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದರು.

ರಾಘವೇಂದ್ರ ಸ್ವಾಮಿ ಮಠದ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅಭಿಮತ

ಹಿಂದು ಧರ್ಮದ ಪ್ರಚಾರ ನಡೆಯಲಿ

ಮೈಸೂರು: 'ಸನಾತನ ಹಿಂದು ಧರ್ಮದ ಪ್ರಚಾರ ನಿರಂತರವಾಗಿ ನಡೆಯಬೇಕು ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಸುಬುಧೇಂದ್ರ ತೀರ್ಥ ಸ್ವಾಮಿ ಹೇಳಿದರು.

ಮೈಸೂರಿನ ಸರಸ್ವತಿಪುರಂನ ಕೃಷ್ಣಧಾಮ ದಲ್ಲಿ ಸೋಮವಾರ ಆರಂಭವಾದ 'ಶ್ರೀಕೃಷ್ಣ ಮಿತ್ರ ಮಂಡಳಿ'ಯ ಸುವರ್ಣ ಸಂಭ್ರಮದಲ್ಲಿ ಪತ್ರಕರ್ತ ರವೀಂದ್ರ ಜೋಶಿ ಅವರಿಗೆ 'ಶ್ರೀಕೃಷ್ಣಾನುಗ್ರಹ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, 'ದೇಶಭಕ್ತಿ ಮರೆತಿದ್ದೇವೆ. ಆರ್ಥಿಕ ಸುಭದ್ರತೆಗಾಗಿ ಅನಗತ್ಯ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ಪ್ರಯಾಣ ಹಾಗೂ ಚಿನ್ನ ಖರೀದಿಯನ್ನು ಮುಂದೂಡಬೇಕೆಂಬ ಪ್ರಧಾನಿ ನರೇಂದ್ರ ಮೋದಿ ಅವರ ಮಾತನ್ನು ಪಾಲಿಸಬೇಕು ಎಂದರು.ಸುವರ್ಣಮಯ ಶ್ರೀಲಂಕಾವನ್ನು ಗೆದ್ದ ರಾಮ ಅಲ್ಲಿಯೇ ಇರಬಹುದಿತ್ತು. ಆದರೆ, ಹೆತ್ತ ತಾಯಿ, ಹುಟ್ಟಿದ ನೆಲ ಸ್ವರ್ಗಕ್ಕಿಂತಲು ಮಿಗಿಲೆಂದು ಲಕ್ಷ್ಮಣನಿಗೆ ಹೇಳಿ ಮರಳಿದ. ರಾಮನ ಆದರ್ಶವನ್ನು ನಾವು ಪಾಲಿಸಬೇಕು' ಎಂದು ಹೇಳಿದರು.ಸನಾತನ ಹಿಂದೂ ಧರ್ಮದ ಪ್ರಚಾರವನ್ನು ನಿರಂತರವಾಗಿ ಶ್ರೀಕೃಷ್ಣ ಮಿತ್ರ ಮಂಡಳಿಯು ಕಳೆದ 50 ವರ್ಷದಿಂದ ವೈಭವದಿಂದ ನಡೆಸಿಕೊಂಡು ಬಂದಿದೆ' ಎಂದು ಶ್ಲಾಘಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ 'ಸನಾತನ ಧರ್ಮದ ನಂಬಿಕೆಗಳ ಮೇಲೆ ಕೆಲ ದುಷ್ಟಶಕ್ತಿಗಳು ಮೊದಲಿನಿಂದಲೂ ಗದಾಪ್ರಹಾರ ನಡೆಸಿವೆ. ತಿರುಪತಿ, ಶಬರಿಮಲೆ, ಧರ್ಮಸ್ಥಳ ಕ್ಷೇತ್ರದ ಮೇಲೆ ಅಪಚಾರ ಮಾಡಿವೆ. ಪರೀಕ್ಷಾ ಕೇಂದ್ರಗಳಲ್ಲಿ ಮಕ್ಕಳ ಜನಿವಾರ ತೆಗೆಸಲಾಗಿದೆ. ಧರ್ಮದ ಉಳಿವಿಗೆ ಎಲ್ಲರೂ ಒಂದಾಗಬೇಕು ಎಂದರು.



ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮಿ ಮಾತನಾಡಿ, 'ಕೃಷ್ಣನಲ್ಲಿ ಕೆಳಗೆ ಬಿದ್ದವರನ್ನು ಮೇಲೆತ್ತುವ ಆಕರ್ಷಣ ಶಕ್ತಿಯಿತ್ತು. ಜರಾಸಂಧ. ನರಕಾಸುರರನ್ನು ಸಂಹರಿಸಿದರೂ ಅವರ ವಂಶದವರಿಗೆ ರಾಜ್ಯ ಮರಳಿಸಿದ. ಅವನಿಗೆ ಲೋಭದ ದೃಷ್ಟಿ ಇರಲಿಲ್ಲ, ಧರ್ಮದೃಷ್ಟಿಯಿತ್ತು. ಕೃಷ್ಣನನ್ನು ನೆನೆಯುತ್ತಲೇ ದೇಶ ರಕ್ಷಣೆ ಮಾಡಬೇಕು. ಸಹಕಾರ ತತ್ವದಲ್ಲಿ ಅಭಿವೃದ್ಧಿ ಸಾಧಿಸಬೇಕು' ಎಂದರು.

ಕಿರುಸುದ್ದಿ

ಸಬ್ಸೆ-ಡೋರ್ ಸಬ್ಸೆ ಪೆಹಲೆ ಅಭಿಯಾನ ಆರಂಭ

ಚಾಮರಾಜನಗರ: ಜನ್ ಭಾಗೀದಾರಿ ಸಬ್ಸೆ-ಡೋರ್ ಸಬ್ಸೆ-ಪೆಹಲೆ ಅಭಿಯಾನವನ್ನು ಮಂಗಳವಾರ ಚಾಮರಾಜನಗರ ತಾಲೂಕಿನ ಪರಿಶಿಷ್ಟ ಪಂಗಡ ಸಮುದಾಯದ ಹೆಚ್ಚು ಜನರ ವಾಸವಾಗಿರುವ ಕಣ್ಣೇಗಾಲ, ಯಾನಗಳ್ಳಿ, ಮೇಲ್ ಮಾಳ, ಬೇಡಗುಳಿ ಗ್ರಾಮದಲ್ಲಿ ಆರಂಭಿಸಲಾಯಿತು. ಗ್ರಾಮಗಳಲ್ಲಿ ಗಿಡ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಅಭಿಯಾನದ ಅಂಗವಾಗಿ ಆರೋಗ್ಯ ಇಲಾಖೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು ಸಿಕಲ್ ಸೆಲ್ ಅನಿಮೀಯ ತಪಾಸಣೆ ಹಾಗೂ ಸಾಮಾನ್ಯ ಆರೋಗ್ಯ ಪರೀಕ್ಷಿಸಲಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯಲು ಬೇಕಾಗುವ ದಾಖಲಾತಿಗಳನ್ನು ಒದಗಿಸುವ ಸಂಬಂಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಗ್ರಾಮ ಮಟ್ಟದಲ್ಲಿ ಅರಿವು ಹಾಗೂ ಸೌಲಭ್ಯ ಕುರಿತ ಶಿಬಿರಗಳ ಆಯೋಜನೆ ಹಾಗೂ ಪಿಎಂ ಜನ್ ಮನ್ ಹಾಗೂ ದರ್ತಿ ಅಬಾ ಜನ್ ಜಾತಿಯ ಗ್ರಾಮ ಉತ್ಕರ್ಷ್ ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಅದರಂತೆ ಜನ್ ಭಾಗೀದಾರಿ ಸಬ್ಸೆ-ಡೋರ್ ಸಬ್ಸೆ-ಪೆಹಲೆ ಅಭಿಯಾನ ಸಹ ಮೇ 25ರವರೆಗೆ ಆಯೋಜಿತವಾಗಿದೆ. ಕಾರ್ಯಕ್ರಮದಲ್ಲಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಅಧೀಕ್ಷಕರಾದ ಸುರೇಶ್, ವೈದ್ಯಾಧಿಕಾರಿಗಳಾದ ಡಾ. ಶಿವಕುಮಾರ್, ಆಹಾರ ಇಲಾಖೆ ಇನ್ಸ್ ಪೆಕ್ಟರ್ ಚಿಕ್ಕಣ್ಣ, ಗ್ರಾಪಂ ಕಾರ್ಯದರ್ಶಿ ಸಿದ್ದಪ್ಪ, ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಹಿಳೆ ಆತ್ಮಹತ್ಯೆ

ಹನೂರು: ಮಹಿಳೆಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಗೆ ಶರಣಾಗಿರುವ ಘಟನೆ ನಾಗಣ್ಣ ನಗರ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ನಾಗಣ್ಣ ನಗರ ನಿವಾಸಿ ಐಶ್ವರ್ಯ (20) ಎಂಬಾಕೆಯೇ ಆತ್ಮಹತ್ಯೆಗೆ ಶರಣಾಗಿರುವ ದುರ್ದೈವಿ. ಈ ಮಹಿಳೆಯು ಜಿ ಆರ್ ನಗರದ ನವೀನ ಎಂಬಾತನೊಂದಿಗೆ ಕಳೆದ 2025ರ ಜನವರಿಯಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು, ಈಕೆ ತನ್ನ ತಂದೆಯ ತೋಟದ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಐಶ್ವರ್ಯ ತಂದೆ ಪಳನಿಸ್ವಾಮಿ ರಾಮಪುರ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಹಾಗೂ ಗ್ರಾಮದ ಕಟ್ಟೆ ಪಂಚಾಯಿತಿಯಲ್ಲಿ ನಿಲ್ಲಿಸಿದ್ದರಿಂದ ಅವಮಾನ ಸಹಿಸಲಾಗದೆ ನನ್ನ ಮಗಳು ಸಾವನ್ನಪ್ಪಿದ್ದಾಳೆ ಎಂದು ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಐಶ್ವರ್ಯ ಳ ಗಂಡ ನವೀನ್, ಮಾವ ಮಾದೇಶ್, ಅತ್ತೆ ಈಶ್ವರಿ ಮೇಲೆ ರಾಮಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಮರಳು ಅಕ್ರಮ ಸಾಗಣೆ: ಮೂರು ಎತ್ತಿನಗಾಡಿ ಜಪ್ತಿ

ಕೊಳ್ಳೇಗಾಲ: ತಾಲೂಕಿನ ಹರಳೆ ಕ್ರಾಸ್ ಬಳಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ ಮೂರು ಮರಳು ತುಂಬಿದ್ದ ಎತ್ತಿನಗಾಡಿಯ ಮೇಲೆ ಗ್ರಾಮಾಂತರ ಪೊಲೀಸರು ದಾಳಿ ನಡೆಸಿರುವ ಘಟನೆ ಇಂದು ಜರುಗಿದೆ. ದಾಳಿಯ ವೇಳೆ ಆರೋಪಿಗಳಾದ ಹಳೇ ಅಣಗಳ್ಳಿ ಗ್ರಾಮದ ರಾಜೇಶ್, ದಿಲೀಪ್, ಮಲ್ಲಿಕಾರ್ಜುನ ಪರಾರಿಯಾಗಿದ್ದರಿಂದ ಎತ್ತಿನ ಸಮೇತ ಮರಳು ತುಂಬಿದ ಗಾಡಿಯನ್ನು ಜಪ್ತಿ ಮಾಡಲಾಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಜರುಗಿಸಲಾಗಿದೆ. ದಾಳಿಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಎಸ್ಐ ಸುಪ್ರೀತ್, ಗುಪ್ತ ಮಾಹಿತಿ ಕಾನ್ಸಟೇಬಲ್ ರಾಜೇಶ್, ಪ್ರಭು, ಕಿರಣ್, ಚೌಹಾನ್ ಇದ್ದರು.

ತೈಲೋತ್ಪನ್ನ ದರ ಕಡಿಮೆ ಮಾಡಿ: ಶುಭಗೌಡ

ಪಿರಿಯಾಪಟ್ಟಣ: ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಕಡಿಮೆ ಮಾಡಲಿ ಎಂದು ಪಿರಿಯಾಪಟ್ಟಣ ತಾಲೂಕು ಬಿಜೆಪಿ ಮಹಿಳಾ ಘಟಕದ ಮಾಜಿ ಉಪಾಧ್ಯಕ್ಷೆ ಶುಭಗೌಡ ಆಗ್ರಹಿಸಿದ್ದಾರೆ. ಪತ್ರಿಕೆ ಹೇಳಿಕೆ ನೀಡಿರುವ ಅವರು ಮಧ್ಯ ಪ್ರಾಚ್ಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲೂ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳವಾಗಿದೆ. ಕೇಂದ್ರ ಸರ್ಕಾರಕ್ಕಿಂತ ಹೆಚ್ಚಿನ ಮಾರಾಟ ತೆರಿಗೆಯನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ವಿಧಿಸುತ್ತಿದೆ ಜನರಿಗೆ ಸಂಕಷ್ಟದ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇದನ್ನ ಮನಗಂಡು ಮಾರಾಟ ತೆರಿಗೆಯನ್ನು ಕಡಿತಗೊಳಿಸಬೇಕು ದಿನೇ ದಿನೇ ಹೆಚ್ಚಾಗುತ್ತಿರುವಂತಹ ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಪ್ರಯತ್ನ ಪಡಬೇಕು ಎಂದರು.





ಚಾಮರಾಜನಗರದಲ್ಲಿ ಜನ್ ಭಾಗೀದಾರಿ ಸಬ್ಸೆ-ಡೋರ್ ಸಬ್ಸೆ-ಪೆಹಲೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಜೂ.7 ರಂದು ಪ್ರತಿಭಾ ಪುರಸ್ಕಾರ

ಚಾಮರಾಜನಗರ: ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟವು ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.60 ರಷ್ಟು ಅಂಕ ಪಡೆದಿರುವ ಸಮುದಾಯದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬರುವ ಜೂ.7ರಂದು ನಗರದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ ತಿಳಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ನಗರದ ಡಾ.ರಾಜ್ ಕುಮಾರ್ ರಂಗಮಂದಿರದಲ್ಲಿ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗುತ್ತದೆ. ನಮ್ಮ ಸಂಘಟನೆ ಮೂಲ ಉದ್ದೇಶ ಸಮುದಾಯ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು ಮೊದಲ ಆದ್ಯತೆಯಾಗಿದ್ದು, ಅದರಂತೆ ಸಮುದಾಯ ಪ್ರತಿಭಾ ವಿದ್ಯಾರ್ಥಿಗಳಿಗೆ ಒಕ್ಕೂಟದ ವತಿಯಿಂದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ. ಸಮುದಾಯದ ವಿದ್ಯಾರ್ಥಿಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು ಮಾತನಾಡಿದರು. ಹೆಚ್ಚಿನ ಮಾಹಿತಿಗಾಗಿ : ಗುಂಡ್ಲುಪೇಟೆ ತಾಲೂಕು ಹಸಗೂಲಿ ಸಿದ್ದಯ್ಯ- 9591930446, ಚಾಮರಾಜನಗರ ತಾಲೂಕು ಶಿವಕುಮಾರ್ -7483934405, ಯಳಂದೂರು ತಾಲೂಕು ಬಸವರಾಜು-9986216352, ಕೊಳ್ಳೇಗಾಲ ತಾಲೂಕು ಗೋಪಾಲ್- 6360318044, ಹನೂರು ತಾಲೂಕು ಬಿ.ಸಿ.ಸುರೇಶ್-9945622014 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು ಎಂದರು.



ಚಾಮರಾಜನಗರದ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಗೌರವ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿದರು. ಒಕ್ಕೂಟದ ಅಧ್ಯಕ್ಷ ಎಚ್.ಎಚ್.ನಾಗರಾಜು, ಗೌರವಾಧ್ಯಕ್ಷ ಬಸವನಪುರ ರಾಜಶೇಖರ, ಗೌರವ ಸಲಹೆಗಾರ ಅರಕಲವಾಡಿ ಜವರಯ್ಯ ಇತರರು ಇದ್ದರು.

ಗುಂಡ್ಲುಪೇಟೆ ವಿವಿಧೆಡೆ ಸುರಿದ ಧಾರಾಕಾರ ಮಳೆಗೆ ಜನ ತತ್ತರ

ಅರಿಶಿಣ, ಈರುಳ್ಳಿ ಫಸಲು ನಾಶ

ಗುಂಡ್ಲುಪೇಟೆ: ತಾಲೂಕಿನ ವಿವಿಧೆಡೆ ಸುರಿದ ಧಾರಾಕಾರ ಮಳೆಗೆ ಹಲವು ಫಸಲು ನಾಶವಾಗಿವೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಹಿಮವದ್ ಗೋಪಾಲಸ್ವಾಮಿಬೆಟ್ಟ ತಪ್ಪಲು, ಕಾಡಂಚಿನ ಹೊನ್ನೇಗೌಡನಹಳ್ಳಿ, ಗೋಪಾಲಪುರ, ದೇವರಹಳ್ಳಿ, ಹೊಂಗಹಳ್ಳಿ, ಬರಗಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಒಂದು ಗಂಟೆಗೂ ಅಧಿಕ ಕಾಲ ಜೋರು ಮಳೆಯಾಗಿದ್ದು ಜಮೀನಿನಲ್ಲಿ ಬೆಳೆಯಲಾಗಿದ್ದ ಹಲವು ಫಸಲು ನಾಶವಾಗಿವೆ. ತಾಲೂಕಿನ ಹೊನ್ನೇಗೌಡನಹಳ್ಳಿ ಗ್ರಾಮದಲ್ಲಿ ಮಳೆಯಿಂದ ಈರುಳ್ಳಿ, ಬೆಳ್ಳುಳ್ಳಿ, ಟೊಮೋಟೊ, ಬೀನ್ಸ್, ಸೂರ್ಯಕಾಂತಿ, ಹಲಸಂದೆ ಸೇರಿದಂತೆ ವಿವಿಧ ಫಸಲುಗಳಿದ್ದ ಜಮೀನಿಗೆ ನೀರು ನುಗ್ಗಿದ್ದು, ಬೆಳೆಗಳು ಕೊಚ್ಚಿ ಹೋಗಿದೆ. ಭೀಮನಬೀಡು ಗ್ರಾಮದಲ್ಲಿ ಇದೀಗ ತಾನೇ ನಾಟಿ ಮಾಡಿದ್ದ ಮಹದೇವ್ ಎಂಬುವವರ ಒಂದೂವರೆ ಎಕರೆ ಬೆಳ್ಳುಳ್ಳಿ, ಈರುಳ್ಳಿ, ಅರಿಶಿಣ ಮಳೆ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ. ಜೋರು ಮಳೆಯಿಂದ ರೈತರಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ.

ಧಾರಾಕಾರ ಮಳೆಗೆ ಬಂಡೀಪುರ ಕಾಡಂಚಿನ ಬೇರಂಬಾಡಿಯ ಕೆಂಪು ಸಾಗರ ಕೆರೆ, ಹಂಗಳ ಹಿರಿಕೆರೆ, ಬರಗಿ ಕೆರೆ ಸೇರಿದಂತೆ ವಿವಿಧ ಕೆರೆಗಳಿಗೆ ನೀರು ಹರಿದು ಬರುತ್ತಿದೆ. ಇನ್ನೂ ಸಣ್ಣಪುಟ್ಟ ಹಲವು ಕೆರೆಗಳು ತುಂಬಿದೆ. ಇದರಮಧ್ಯೆ ಕೆಲ ಗ್ರಾಮಗಳಲ್ಲಿ ಮಳೆ ಸುರಿದಿರುವುದರಿಂದ ಬಿಸಿಲಿನಿಂದ ತತ್ತರಿಸಿದ್ದ ಜನರ ಮೊಗದಲ್ಲಿ ಮಂದಹಾಸವು ಸಹ ಮೂಡಿದೆ.

ಪರಿಹಾರಕ್ಕೆ ಒತ್ತಾಯ: ಅಕಾಲಿಕ ಮಳೆಗೆ ಜಮೀನಿನಲ್ಲಿ ಬೆಳೆದಿದ್ದ ಈರುಳ್ಳಿ, ಬೆಳ್ಳುಳ್ಳಿ, ಟೊಮೋಟೊ, ಬೀನ್ಸ್, ಸೂರ್ಯಕಾಂತಿ, ಹಲಸಂದೆ ಫಸಲು ನಾಶವಾಗಿದ್ದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕೂಡಲೇ ಭೇಟಿ ನೀಡಿ ಸೂಕ್ತ ಪರಿಹಾರ ದೊರಕಿಸಿ ರೈತರ ನೆರವಿಗೆ ಧಾವಿಸಬೇಕೆಂದು ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು ಒತ್ತಾಯಿಸಿದ್ದಾರೆ.



ಕಾಡಾನೆ ದಾಳಿ: ಬಾಳೆ, ಜೋಳ ಬೆಳೆ ನಾಶ

ಗುಂಡ್ಲುಪೇಟೆ: ಕಾಡಾನೆ ದಾಳಿಗೆ ಬಾಳೆ ಹಾಗೂ ಮುಸುಕಿನ ಜೋಳ ಹಾಗೂ ತೆಂಗಿನ ಸಸಿಗಳು ನಾಶವಾಗಿರುವ ಘಟನೆ ತಾಲೂಕಿನ ಗೋಪಾಲಪುರ ಗ್ರಾಮದಲ್ಲಿ ನಿನ್ನೆ ತಡರಾತ್ರಿ ನಡೆದಿದೆ. ಗ್ರಾಮದ ಭೋಗಯ್ಯ ಎಂಬುವವರಿಗೆ ಸೇರಿದ ಜಮೀನಿಗೆ ಲಗ್ಗೆಯಿಟ್ಟ ಕಾಡಾನೆ ಜಮೀನಿನಲ್ಲಿ ಬೆಳೆದಿದ್ದ ಫಸಲುಗಳನ್ನು ತಿಂದು ಜಮೀನಿಗೆ ಅಳವಡಿಸಿದ್ದ ತಂತಿ ಬೇಲಿ, ಡ್ರಿಪ್ ಪೈಪ್‌ಗಳನ್ನು ತುಳಿದು ನಾಶಪಡಿಸಿದೆ. ಕಾಡಾನೆ ದಾಳಿಯಿಂದ ಫಸಲು ಹಾಗೂ ಡ್ರಿಪ್ ಪೈಪುಗಳು ಸಂಪೂರ್ಣವಾಗಿ ನಾಶವಾಗಿದ್ದು ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿದ್ದು ಸೂಕ್ತ ಪರಿಹಾರ ಕೊಡಿಸಬೇಕು ಎಂದು ರೈತ ಸಂಘ ಆಗ್ರಹಿಸಿದೆ. ಗೋಪಾಲಪುರ ಸೇರಿದಂತೆ ಬಂಡೀಪುರದ ಗೋಪಾಲಸ್ವಾಮಿಬೆಟ್ಟ ವಲಯ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಕಾಡುಪ್ರಾಣಿಗಳು ಪ್ರತಿನಿತ್ಯ ರೈತರ ಜಮೀನುಗಳು ಬಂದು ಫಸಲನ್ನು ನಾಶಪಡಿಸುತ್ತಿವೆ. ವನ್ಯಜೀವಿಗಳ ದಾಳಿ ತಡೆಯಲು ನಿರ್ಮಿಸಿರುವ ಬಹುತೇಕ ಕಂದಕಗಳು ಮಳೆಗೆ ಮುಚ್ಚಿ ಹೋಗಿವೆ. ಇದರಿಂದ ಕಾಡಾನೆಗಳು ಸುಲಭವಾಗಿ ರೈತರ ಜಮೀನುಗಳತ್ತ ಬಂದು ಫಸಲನ್ನು ನಾಶಪಡಿಸುತ್ತಿವೆ. ಅರಣ್ಯ ಇಲಾಖೆಯವರು ಕೂಡಲೇ ವನ್ಯಜೀವಿಗಳ ಹಾವಳಿಗೆ ಕಡಿವಾಣ ಹಾಕುವಂತೆ ರೈತರು ಒತಾಯಿಸಿದಾರೆ.



ಶೈಕ್ಷಣಿಕ ಪ್ರಗತಿಯಲ್ಲಿ ಹನೂರು ಜಿಲ್ಲೆಗೆ 2ನೇ ಸ್ಥಾನ

ಹನೂರು: ನನ್ನ ಅಧಿಕಾರದ ಅವಧಿಯಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಮೂಲಕ ಹಾಗೂ ಕ್ಷೇತ್ರದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ನೀಡುವ ಮೂಲಕ ಹನೂರು ಶೈಕ್ಷಣಿಕ ವಲಯವನ್ನು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದು ತುಂಬಾ ಖುಷಿ ಕೊಟ್ಟಿದೆ ಎಂದು ನಿರ್ಗಮಿತ ಪ್ರಭಾರ ಬಿಇಒ ಮಹೇಶ್ ತಿಳಿಸಿದರು.

ಪಟ್ಟಣದ ಬಿಇಒ ಕಚೇರಿಯಲ್ಲಿ ನೂತನ ಬಿಇಒ ಪ್ರತಿಭಾ ಅವರಿಗೆ ಅಧಿಕಾರ ಹಸ್ತಾಂತರ ಮಾಡಿ ನಂತರ ಅವರು ಮಾತನಾಡಿದರು.

ಎರಡು ಬಾರಿ ಹನೂರು ತಾಲೂಕಿನ ಶೈಕ್ಷಣಿಕ ವಲಯಕ್ಕೆ ಪ್ರಭಾರ ಬಿಇಒ ಆಗಿ ಕೆಲಸ ನಿರ್ವಹಿಸುವ ಸೌಭಾಗ್ಯ ನನ್ನ ಪಾಲಿಗೆ ಒದಗಿ ಬಂದಿತು. ನನಗೆ ಸಿಕ್ಕಿರುವ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಹನೂರು ತಾಲೂಕಿನ ಗುಡ್ಡಗಾಡು ಪ್ರದೇಶಗಳಿಗೂ ಸಹ ಭೇಟಿ ನೀಡಿ ಶೈಕ್ಷಣಿಕ ಪ್ರಗತಿಗೆ ಸಾಕಷ್ಟು ಅವಿರತಶ್ರಮ ಹಾಕುವ ಮೂಲಕ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಜೊತೆಗೆ ಮುಂದಿನ ದಿನಗಳಲ್ಲಿ ಸಹ ಇದೇ ರೀತಿಯ ಸಹಕಾರ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇರಲಿದೆ ಎಂದರು.

ನೂತನ ಬಿಇಒ ಪ್ರತಿಭಾ ಮಾತನಾಡಿ, ಹನೂರು ಶೈಕ್ಷಣಿಕ ವಲಯ ಶೈಕ್ಷಣಿಕವಾಗಿ ಸಹ ಸಾಕಷ್ಟು ಮುಂದುವರೆದಂತಹ ವಲಯವಾಗಿದೆ. ಇಲ್ಲಿರುವಂತಹ ಎಲ್ಲಾ ಅಧಿಕಾರಿ ವರ್ಗದವರು ಹಾಗೂ ಶಿಕ್ಷಕರು ಸಹ ಮುಂದಿನ ದಿನಗಳಲ್ಲಿ ಈ ಶೈಕ್ಷಣಿಕ ವಲಯವನ್ನು ಮೊದಲ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಉತ್ತಮವಾದ ಸಹಕಾರ ನೀಡಬೇಕು. ನಾವು ನೀವು ಎಲ್ಲರೂ ಸೇರಿ ಮಕ್ಕಳ ಶೈಕ್ಷಣಿಕ ಪ್ರಗತಿಯತ್ತ ಗಮನ ವಹಿಸೋಣ ಎಂದರು.

ಬಿಆರ್‌ಸಿ ವೆಂಕಟೇಶ್, ಶಿಕ್ಷಕರ ಸಂಘದ ಸದಸ್ಯರಾದ ಮಾದೇಶ್, ಶಿವರಾಜಮ್ಮ, ಶಿವಕುಮಾರಿ, ಗಿರೀಶ್, ಇಸಿಒ ಗಳಾದ ಚಿನ್ನಪ್ಪಯ್ಯ, ಮಹೇಶ್, ಅಶೋಕ್, ರವೀಂದ್ರ ಸೇರಿದಂತೆ ಇನ್ನಿತರರು ಇದ್ದರು.



ಶಿಕ್ಷಣ ಬಡತನ ನಿರ್ಮೂಲನೆ ಅಸ್ತ್ರ



ಚಾಮರಾಜನಗರ: ನಿವೃತ್ತ ಕೆಎಂಎಫ್ ಉಪನಿರ್ದೇಶಕ ಅರಕಲವಾಡಿ ಜವರಯ್ಯ ಅವರ ಪುತ್ರ ಅಭಿಷೇಕ ಸ್ಮರಣಾರ್ಥ ಗ್ರಾಮದ ಮಕ್ಕಳಿಗೆ ನೋಟ್ ಪುಸ್ತಕ, ಲೇಖನ ಸಾಮಾಗ್ರಿಗಳು ಹಾಗೂ ಪ್ರೋತ್ಸಾಹ ಧನ ವಿತರಿಸಲಾಯಿತು.

ತಾಲೂಕಿನ ಅರಕಲವಾಡಿ ಗ್ರಾಮದ ಎನ್.ಆರ್.ಬಡಾವಣೆಯ

ಶ್ರೀರಾಮಲಿಂಗೇಶ್ವರ, ಮಂಟೇಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ ಮಾತನಾಡಿ, ಇಲ್ಲದ ಮಗನ್ನು ಎಲ್ಲ ಮಕ್ಕಳಲ್ಲಿ ಕಾಣಬೇಕು ಎಂಬ ಅಭಿಲಾಷೆಯಿಂದ ಜವರಯ್ಯ ಅವರು ತಮ್ಮ ಮಗ ಅಭಿಷೇಕ್ ಅಕಾಲಿಕ ಮರಣದಿಂದ ಬಂದ ಹಣವನ್ನು ಬ್ಯಾಂಕ್ ಠೇವ ಣಿ ಇಟ್ಟು, ಅದರಲ್ಲಿ ಬಂದ ಲಾಭದಿಂದ ಮಗನ ಸ್ಮರಣಾರ್ಥವಾಗಿ ಗ್ರಾಮದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡುತ್ತಿರುವುದು ತುಂಬಾ ಅರ್ಥಪೂರ್ಣ ಮತ್ತು ಶ್ಲಾಘನೀಯವಾದ ಮಾದರಿ ಕಾರ್ಯಕ್ರಮ ವಾಗಿದೆ. ಬಡತನ ನಿರ್ಮೂಲನೆ ಏಕೈಕ ಅಸ್ತ್ರ. ಶಿಕ್ಷಣ. ಶಿಕ್ಷಣ ಉತ್ತಮ ಜೀವನವನ್ನು ರೂಪಿಸಿಕೊಟ್ಟಿದೆ. ಪೋಷಕರು ಕೂಡ ಮಕ್ಕಳ ಶಿಕ್ಷಣದ ಕಡೆ ಹೆಚ್ಚು ಗಮನ ಹರಿಸಬೇಕು ಎಂದರು.

ದಿವಂಗತ ಅಭಿಷೇಕ್‌ರವರ ದುಃಖದ ಸಾವಿನ ನೋವು ಮರೆಯುವಂತಹ ಒಂದು ಕಾರ್ಯಕ್ರಮವಾಗಿದ್ದು ಈ ಮುಖೇನ ತಮ್ಮ ಮಗನನ್ನು ಕಳೆದುಕೊಂಡಂತಹ ನೋವನ್ನು ಈ ಮಕ್ಕಳಲ್ಲಿ ಕಾಣುವಂತಹ ಚಿಂತನೆಯನ್ನ ಮಾಡಿ ಮಗನಿಗೆ ಅವರ ಸಂಸ್ಥೆಯು ನೀಡಿದಂತಹ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಿ ಅದರಲ್ಲಿ ಬಂದ ಹಣದಿಂದ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಹಾಯ ಮಾಡಿರುವಂತಹ ಒಂದು ಉದಾರ; ಮನೋಭಾವನ್ನ ಬೆಳೆಸಿಕೊಂಡಿದ್ದು ಈ ಒಂದು ಸಹಾಯವನ್ನು ಈ ಬಡಾವಣೆಯ ಮಕ್ಕಳು ಸದುಪಯೋಗಪಡಿಸಿಕೊಂಡು ಶೈಕ್ಷಣಿಕಾಗಿ ಮುಂದೆ ಬಂದು ಈ ಗ್ರಾಮಕ್ಕೆ ಒಂದು ಒಳ್ಳೆಯ ಹೆಸರನ್ನು ತರಲಿ ಎಂದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಕಾನೂನು ಅಧಿಕಾರಿ ರಾಜು ಮಾತನಾಡಿದರು.

ನಿವೃತ್ತ ವೈದ್ಯರಾದ ಬಸವಯ್ಯ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರೇಷ್ಮೆ ಇಲಾಖೆಯ ಜಂಟಿ ನಿರ್ದೇಶಕ ಎನ್.ಮಹದೇವಯ್ಯ, ಅರಕಲವಾಡಿ ನಾಗೇಂದ್ರ, ಬಾಬು ಜಗಜೀವನ್ ರಾಮ್ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ನಾಗರಾಜು, ಬಿಸಿಎಂ ಇಲಾಖೆಯ ತಾಲೂಕು ಕಲ್ಯಾಣಾಧಿಕಾರಿ ಲಿಂಗರಾಜು, ತಾಯಿ ಸುಮಿತ್ರ, ಕುಟುಂಬದವರು ಮತ್ತು ಬಡಾವಣೆಯ ಯಜಮಾನರುಗಳು ಹಾಜರಿದ್ದರು.

ನೀಟ್ ಪರೀಕ್ಷೆ ಕುರಿತು ಪ್ರಧಾನಮಂತ್ರಿಗೆ ಮನವಿ

ಚಾಮರಾಜನಗರ: ವೈದ್ಯಕೀಯ ವಿದ್ಯಾಭ್ಯಾಸದ ಪ್ರವೇಶಕ್ಕೆ ಸಂಬಂಧಿಸಿದಂತೆ ನಡೆಸುವ ನೀಟ್ ಪರೀಕ್ಷೆಗಳನ್ನು ಆಯಾಯ ರಾಜ್ಯ ಸರ್ಕಾರಗಳೇ ನಡೆಸಲು ಆದೇಶ ನೀಡುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಾರಿಯ ವೈದ್ಯಕೀಯ ವಿದ್ಯಾಭ್ಯಾಸದ ಪ್ರವೇಶಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ನಡೆದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಾಶವಾಗಿದೆ ಮತ್ತು ಈ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಅರ್ಹ ವಿದ್ಯಾರ್ಥಿಗಳು ಬಹಳ ಜನ ಆತ್ಮಹತ್ಯೆಯನ್ನು ಸಹ ಮಾಡಿಕೊಂಡಿರುತ್ತಾರೆ. ಇದು ಅತ್ಯಂತ ಖಂಡನೀಯ. ಕೇಂದ್ರ ಸರ್ಕಾರ ಇದರ ಬಗ್ಗೆ ತೀವ್ರವಾಗಿ ನಿಗಾವಹಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಮತ್ತು ಮುಂದೆ ಇಂತಹ ಅನಾಹುತಗಳು ನಡೆಯದ ರೀತಿಯಲ್ಲಿ ಮುನ್ನೆಚ್ಚರಿಕೆ ಕ್ರಮವನ್ನು ಕೇಂದ್ರ ಸರ್ಕಾರ ವಹಿಸಬೇಕು. ಕೇಂದ್ರ ಶಿಕ್ಷಣ ಸಚಿವರು ಇದರ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಇನ್ನು ಮುಂದೆ ಕೇಂದ್ರ ಸರ್ಕಾರ ಈ ವೈದ್ಯಕೀಯ ವಿದ್ಯಾಭ್ಯಾಸದ ಪರೀಕ್ಷೆಗಳನ್ನು ಇನ್ನು ಮುಂದೆ ಆಯಾಯ ರಾಜ್ಯ ಸರ್ಕಾರಗಳಿಗೆ ನಡೆಸುವಂತೆ ಆದೇಶ ನೀಡಬೇಕಾಗಿದೆ. ಈ ಹಿಂದೆ ಈ ನೀಟ್ ಪರೀಕ್ಷೆಗಳನ್ನು ಆಯಾ ರಾಜ್ಯ ಸರ್ಕಾರಗಳೇ ನಡೆಸುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಈ ನೀಟ್ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಆದರೆ ಇದು ಇಡೀ ದೇಶಾದ್ಯಂತ ಈ ನೀಟ್ ಪರೀಕ್ಷೆಗಳು ಅವ್ಯವಸ್ಥೆಯಿಂದ ಕೂಡಿದ್ದು ವಿದ್ಯಾರ್ಥಿಗಳಿಗೆ ಒಂದು ರೀತಿಯ ಮರಣ ಶಾಸನವಾಗಿದೆ. ಆದ್ದರಿಂದ ಈ ತಕ್ಷಣ ತಾವು ಮುಂದಿನ ವರ್ಷದಿಂದ ಈ ನೀಟ್ ಪರೀಕ್ಷೆಗಳನ್ನು ಆಯಾಯ ರಾಜ್ಯ ಸರ್ಕಾರಗಳೇ ನಡೆಸುವಂತೆ ಅನುಮತಿ ನೀಡುವಂತೆ ಪ್ರಧಾನಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಎಡಿಸಿ ಜವರೇಗೌಡ, ಪಣ್ಯದಹುಂಡಿ ರಾಜು, ಹೊಮ್ಮ ಲೋಕೇಶ್,ಅರುಣ್ ಕುಮಾರ್ ಗೌಡ, ರವಿಚಂದ್ರಪ್ರಸಾದ್ ಕಹಲೆ, ರಾಜಪ್ಪ, ಶಿವು ಇದ್ದರು.



ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ: ಶಿಕ್ಷಕ ಗಿರೀಶ್

ಹನೂರು: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಅನೇಕ ಸೌಲಭ್ಯಗಳು ಸಿಗುತ್ತಿದ್ದು ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಮಂಗಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಗಿರೀಶ್ ತಿಳಿಸಿದರು.

ತಾಲೂಕಿನ ಮಂಗಲ ಗ್ರಾಮದ ಮನೆ ಮನೆಗೆ ತೆರಳಿ ಮಕ್ಕಳನ್ನು ದಾಖಲಾತಿ ಮಾಡಿಕೊಂಡು ನಂತರ ಅವರು ಮಾತನಾಡಿದರು.

ನಮ್ಮ ಶಾಲೆಯಲ್ಲಿ ಕಳೆದ ವರ್ಷವೇ ಆಂಗ್ಲ ಮಾಧ್ಯಮದ ಮುಂದಿನ ತರಗತಿ ಪ್ರಾರಂಭವಾಗಿದ್ದು ಈ ಶೈಕ್ಷಣಿಕ ಸಾಲದ 2026 - 27 ಕ್ಕೆ ಒಂದು ಮತ್ತು ಎರಡನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭವಾಗಲಿದ್ದು ಈಗಾಗಲೇ ಅನೇಕ ಮಕ್ಕಳು ದಾಖಲಾತಿ ಪಡೆದುಕೊಂಡಿದ್ದು ಆದಷ್ಟು ಬೇಗ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾತಿ ಮಾಡಿಕೊಳ್ಳುವ ಮೂಲಕ ಸರ್ಕಾರದ ಈ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಜೊತೆಗೆ ಒಂದರಿಂದ ಏಳನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಇರುವಂತಹ ಮಕ್ಕಳಿಗೂ ಸಹ ದಾಖಲಾತಿ ಪ್ರಾರಂಭವಾಗಿದ್ದು ಆದಷ್ಟು ಬೇಗ ಎಲ್ಲ ಪೋಷಕರು ಈ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ,ಸಮವಸ್ತ್ರ ಹಾಗೂ ಗುಣಮಟ್ಟದ ಶಿಕ್ಷಣ ಜೊತೆಗೆ ಮಧ್ಯಾಹ್ನದ ಬಿಸಿ ಊಟ ಕ್ರೀಡಾ ಕೂಟ ಸಾಂಸ್ಕೃತಿಕ ಕಾರ್ಯಕ್ರಮ ಹೀಗೆ ಹತ್ತಲುವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಹಣ ಕೊಡುತ್ತಿವೆ . ಹಾಗಾಗಿ ಪೋಷಕರು ಖಾಸಗಿ ಶಾಲೆಯ ವ್ಯಾಮೋಹ ತ್ಯಜಿಸಿ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ದಾಖಲು ಮಾಡಬೇಕು. ಖಾಸಗಿ ಶಾಲೆಗಿಂತಲೂ ಹೆಚ್ಚಿನ ಪ್ರೀತಿಯಲ್ಲಿ ಆಂಗ್ಲ ಮಾಧ್ಯಮದ ಶಿಕ್ಷಕರು ಬೋಧನೆ ಮಾಡದಿದ್ದು ಚಟುವಟಿಕೆ ಆಧಾರಿತ ಕಲಿಕೆಯನ್ನು ಕಲಿಸುತ್ತಿದ್ದು ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಶಿಕ್ಷಕರು ಅವಿರತ ಶ್ರಮ ಹಾಕುತ್ತಿದ್ದಾರೆ ಎಂದು ಮನವರಿಕೆ ಮಾಡಿಕೊಟ್ಟರು. ಮಂಗಲ ಗ್ರಾಮದ ಪೋಷಕರು, ಎಸ್‌ಡಿಎಂಸಿ ಸಮಿತಿಯವರು, ಶಿಕ್ಷಕ ಮಹಾದೇವಸ್ವಾಥ್ ನೀಡಿದರು.



ಜಗಜ್ಯೋತಿ ಬಸವೇಶ್ವರ ಜಯಂತಿ ಮಹೋತ್ಸವ | ಅದ್ದೂರಿ ಮೆರವಣಿಗೆಗೆ ಭಕ್ತರ ದಂಡು

ಸಮಾನತೆಯ ಹರಿಕಾರ ಬಸವಣ್ಣ: ಸುತ್ತೂರು ಶ್ರೀ

ಸರಗೂರು: ಸಾಮಾಜಿಕವಾಗಿ ಅನೇಕ ಕಾಂತ್ರಿಯ ಕಹಳೆಯನ್ನು ಮೊಳಗಿಸುವ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತಿಳಿಸಿದರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ಸಮೀಪದ ವೀರಶೈವ-ಲಿಂಗಾಯತ ಸಮಾಜದ ಕಛೇರಿಯಲ್ಲಿ ಮಂಗಳವಾರ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಸರಗೂರು, ತಾಲೂಕು ಘಟಕದಿಂದ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿ ಮಹೋತ್ಸವ ಕಾರ್ಯಕ್ರಮ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿ ಬಸವಣ್ಣನವರನ್ನು ನಾವು ಜಗಜ್ಯೋತಿ, ವಿಶ್ವಗುರು ಹೀಗೆ ಹಲವಾರು ವಿಶೇಷತೆಗಳಿಂದ ಗುರುತಿಸುತ್ತೇವೆ. ಅಂತಹ ಬಸವಣ್ಣನವರ ಅಂದಿನ ಕಾಲಕ್ಕೆ ಸಮಾನತೆಯ ಸಂದೇಶ ಸಾರಿದ್ದರು. ಅವರ ತತ್ವ, ಆದರ್ಶಗಳು ಜೀವನದಲ್ಲಿ ಬಹಳ ಮುಖ್ಯ ಎಂದರು.

ಸಮಾಜದವರು ಎಲ್ಲರು ಸೇರಿ ಒಟ್ಟಾಗಿ ಆಚರಿಸುತ್ತಿರುವ ಬಸವ ಜಯಂತಿ ಯಶಸ್ವಿಗೆ ಸಾಕ್ಷಿಯಾಗಿದೆ ಎಂದರು.



ಜೆಎಸ್‌ಎಸ್ ಶಾಲಾ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ತಾಲೂಕು ತಹಸೀಲ್ದಾರ್ ಮೋಹನ ಕುಮಾರಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲೇ ಸಾಮಾಜಿಕ ಕಾಂತ್ರಿಯನ್ನು ಮಾಡಿದವರು ಎಂದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಸರಗೂರು, ತಾಲೂಕು ಘಟಕದ ಅಧ್ಯಕ್ಷ ಕಾಟವಾಳು ವೀರಭದ್ರಪ್ಪ ನಟರಾಜು ಮಾತನಾಡಿ, ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಬಂಧುಗಳಿಂದ ಬಸವಣ್ಣನವರ ಜಯಂತಿ ಆಚರಣೆಗೆ ಸಹಕಾರ ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರರ ಪುತ್ಥಳಿಯನ್ನು ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಕೆಇಬಿ ಕಚೇರಿ ಮುಂಭಾಗದಿಂದ ನಂದಿ ಧ್ವಜ ಬಸವೇಶ್ವರರ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿ ಕೂರಿಸಿ, ಶರಣರ ವಚನಗಳು, ಅಲಂಕೃತ ಸ್ತಬ್ಧ ಚಿತ್ರಗಳು, ಭಜನಾಮೇಳ, ವೀರಗಾಸೆಕುಣಿತ, ಡೊಳ್ಳುಕುಣಿತ, ಮಂಗಳವಾದ್ಯ, ಚಂಡೆಮದ್ದಳೆ ಸೇರಿದಂತೆ ಇನ್ನಿತರ ಕಲಾತಂಡಗಳ ಮೂಲಕ ಮೆರವಣಿಗೆಯಲ್ಲಿ ಜೆ.ಎಸ್.ಎಸ್. ಮಂಟಪ ಸೇರಿತು. ಇದೇ ವೇಳೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ದೇವನೂರು ಮಹಾಸಂಸ್ಥಾನ ಮಠದ ಮಹಾಂತಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಡಾ.ಷಡಕ್ಷರಿಸ್ವಾಮೀಜಿ ಬಿಡುಗಲು ಪಡುವಲು ವಿರಕ್ತಮಠದ ಮಹದೇವಸ್ವಾಮೀಜಿ, ಹಂಚೀಪುರ ಮಠದ ಕಿರಿಯ ತೋಂಟದಾರ್ಯಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನಸ್ವಾಮೀಜಿ, ಜಕ್ಕಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ ಇತರರು ಉಪಸ್ಥಿತರಿದ್ದರು.

ಕುಂತನಹಳ್ಳಿ ಎಲ್ಐಸಿ ದೇವರಾಜು ಅಭಿಮತ

ಎಚ್‌ಡಿಡಿ ರೈತರ ಕಣ್ಮಣಿ

ಬನ್ನೂರು: ಪಟ್ಟಣದ ಸಂತೆಮಾಳದ ಜೆಡಿಎಸ್ ಕಾರ್ಯಕರ್ತರಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ 94ನೇ ವರ್ಷದ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ಸಂತೆಮಾಳದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಪಟಾಕಿ ಸಿಡಿಸಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಅವರ ಭಾವಚಿತ್ರದ ಕೇಕ್ ಕತ್ತರಿಸಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಕುಂತನಹಳ್ಳಿ ಎಲ್ ಐಸಿ ದೇವರಾಜು, ಈ ದೇಶ ಕಂಡ ಅಪರೂಪದ ರಾಜಕಾರಣಿ, ಹಳ್ಳಿಯ ಸೊಗಡನ್ನು ದಿಲ್ಲಿಯವರೆಗೆ ಕೊಂಡೊಯ್ದ ಮಹಾನ್ ನಾಯಕ ಎಂದು ತಿಳಿಸಿದರು. ಹುಟ್ಟು ಹೋರಾಟಗಾರರಾಗಿ, ರೈತರ ಕಣ್ಮಣಿಯಾಗಿ ಮಾಡಿರುವಂತ ಸಾಧನೆ ಮಹತ್ತರವಾಗಿದೆ ಎಂದು ಹೇಳಿದರು. ದೇಶದ ಭೂಪಟದಲ್ಲಿ ಕನ್ನಡಿಗನೊಬ್ಬ ಪ್ರಧಾನಿಯಾಗಿ ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಹಗ್ಗಳಿಕೆಗೆ ಪಾತ್ರರಾದ ಮಹಾನ್ ನಾಯಕ ಎಂದರು. ನಂತರ ಮಾತನಾಡಿದ ತಾಲ್ಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ, ಹಾಸನ ಜಿಲ್ಲೆಯಲ್ಲಿ ಹುಟ್ಟಿ ಪ್ರಧಾನ ಮಂತ್ರಿ ಪಟ್ಟಕ್ಕೆ ಏರುವ ಮೂಲಕ ರಾಜಖಿಯ ಜೀವನದಲ್ಲಿ ಅತಿ ಎತ್ತರಕ್ಕೆ ಏರಿದ ಗೌಡರು, ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.



ಕಿರುಸುದ್ದಿ

ಅಂಕೇಗೌಡರಿಗೆ ಪದ್ಮಶ್ರೀ ಪ್ರಶಸ್ತಿ ಮೇ 25ಕ್ಕೆ ಪ್ರದಾನ

ಮಂಡ್ಯ: ಪಾಂಡವಪುರ ತಾಲೂಕಿನ ಹರಳಹಳ್ಳಿ ಗ್ರಾಮದ 'ಪುಸ್ತಕ ಮನೆ' ರೂವಾರಿ ಅಂಕೇಗೌಡ ಅವರಿಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಸಾಧಾರಣ ಸೇವೆಗಾಗಿ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ದೊರೆತಿದೆ.



ದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಮೇ 25 ರಂದು ನಡೆಯುವ ಪದ್ಮಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಹಿನ್ನಲೆಯಲ್ಲಿ ಇಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂಕೇಗೌಡ ಅವರಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಗೌರವ ಪತ್ರವನ್ನು ಹಸ್ತಾಂತರಿಸಿದರು. ಅಂಕೇಗೌಡ ಅವರು ದಿಲ್ಲಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಯಾವುದೇ ತೊಂದರೆಯಾಗದಂತೆ ಸಹಾಯಕರನ್ನು ಅವರೊಂದಿಗೆ ಕಳುಹಿಸುವ ವ್ಯವಸ್ಥೆಯನ್ನು ಸಹ ಜಿಲ್ಲಾಧಿಕಾರಿ ಡಾ. ಕುಮಾರ ಮಾಡಿದ್ದಾರೆ.

ಮೇ 22ರಿಂದ ಗಮ್ಯ ರಂಗ ಹಬ್ಬ

ಶ್ರೀರಂಗಪಟ್ಟಣ: ಸ್ಥಳೀಯ ಪ್ರತಿಭೆಗಳ ಬೆಳೆಸುವ ಮತ್ತು ರಂಗ ಸಂಸ್ಕೃತಿಯನ್ನು ಉಳಿಸುವ ಸದುದ್ದೇಶದಿಂದ ವಿನೂತನ ನಾಟಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗಮ್ಯ ಸಂಸ್ಥೆಯ ಸಂಸ್ಥಾಪಕ ಚ. ನಾರಾಯಣ ಸ್ವಾಮಿ ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ರಂಗಭೂಮಿ ಕೇವಲ ಮನರಂಜನೆಯ ಮಾಧ್ಯಮವಲ್ಲ, ಅದು ಸಮಾಜದ ಕನ್ನಡಿಯಾಗಿದೆ, ಸಮಾಜಮುಖಿಯಾಗಿ ನಾವುಗಳು ಬದುಕಬೇಕಾದರೆ, ಪ್ರಜ್ಞೆ ಪ್ರಶ್ನೆಯಾಗಬೇಕು, ಅಂತಹ ಪ್ರಜ್ಞಾವಂತಿಕೆ ಮೂಡಿಸು ಮತ್ತು ಜೀವನಕ್ಕೆ ಉತ್ತಮ ಸಂದೇಶಗಳನ್ನು ನೀಡುವ ನಮ್ಮ ಗಮ್ಯ ರಂಗ ಭೂಮಿಯ ಕಲಾಯಜ್ಞವನ್ನು ಕಳೆದ 8ವರ್ಷಗಳಿಂದ ನಿರಂತರವಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರದರ್ಶಿಸುತ್ತಾ ಬಂದಿದ್ದು, ನಾಟಕ ನೋಡಲು ಉಚಿತ ಪ್ರವೇಶವಿದ್ದು, ಪಟ್ಟಣದ ಶಿಕ್ಷಕರ ಭವನದಲ್ಲಿ ಪ್ರತಿದಿನ ಸಂಜೆ 7ಗಂಟೆಗೆ ಪ್ರದರ್ಶನವಿದ್ದು,

ಮೇ 22ರಂದು ಪಿಪ್ಪಿಗೊಂದು ಪಪ್ಪಿ ಮಕ್ಕಳ ನಾಟಕ, 23ಕ್ಕೆ, ರಾಜಶೇಖರ್ ಕೆ. ಶೆಟ್ಟಹಳ್ಳಿ ವಿರಚಿತ ನಾವೆಲ್ಲರೂ ಕೂಡಿಬಾಳೋಣ ಹಾಸ್ಯ ನಾಟಕ, 24ರಂದು ಮಧುರ ಮಂಡೋದರಿ ಏಕವ್ಯಕ್ತಿ ನಾಟಕ, ಮೇ25ರಂದು ಸಳೀಯ ಕಲಾವಿದರಿಂದ ಉರಿಕಂಡಾಯ ನಾಟಕ ಪ್ರಸ್ತುತಿಯ ನಾಟಕಗಳಿದ್ದು, ಈ ನಾಟಕೋತ್ಸವಕ್ಕೆ ಪ್ರೇಕ್ಷಕರಿ ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಿ ಪ್ರೋತ್ಸಾಹ ನೀಡಬೇಕೆಂದು ಮನವಿಮಾಡಿದರು ಜೊತೆಯಲಿ ಗಮ್ಯದ ರಂಗ ನಿರ್ದೇಶಕರಾದ ಆದಿತ್ಯ ಭಾರದ್ವಜ್ ಇದ್ದರು.

ಡೆತ್ ನೋಟ್ ಬರೆದಿಟ್ಟು ಸಹೋದರಿಯರು ನಾಪತ್ತೆ

ಶ್ರೀರಂಗಪಟ್ಟಣ: ಡೆತ್ ನೋಟ್ ಬರೆದಿಟ್ಟು ಅಪ್ರಾಪ್ತ ಸಹೋದರಿಯರು ನಾಪತ್ತೆಯಾಗಿರುವ ಘಟನೆ ಗ್ರಾಮಾಂತರ ಠಾಣಾ ವ್ಯಾಪ್ತಿಯ ಕಾಳೇನಹಳ್ಳಿ (ಶೆಡ್) ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಗ್ರಾಮದ ರಾಮಚಂದ್ರ ಎಂಬುವರ ಮಕ್ಕಳಾದ ಸುಜಾತ(16), ರುಕ್ಮಿಣಿ(14) ಈ ಇಬ್ಬರು ಸಹೋದರಿಯರು ತಾಯಿ ಬೈದಳು ಎಂಬ ಕಾರಣಕ್ಕಾಗಿ ಡೆತ್ ನೋಟ್ ಬರೆದಿಟ್ಟು ನಾಪತ್ತೆಯಾಗಿದ್ದಾರೆ. ಅಪ್ಪ ಅಮ್ಮ ಸ್ಸಾರಿ, ನಿಮ್ಮ ಕಣ್ಣುಮುಂದೆ ಸಾಯೋಕೆ ಆಗಲ್ಲ, ನಾವು ದೂರ ಹೋಗಿ ಸತ್ತಿದೇವೆ ಎಂದು ಡೆತ್ ನೋಟ್ ಬರೆದಿಟ್ಟು ಇದೇ ಮೇ.17 ರಂದು ಮಧ್ಯಾಹ್ನದ ವೇಳೆ ಮನೆಯಿಂದ ಹೊರಟು ಹೋಗಿದ್ದಾರೆ. ಈ ಸಂಬಂಧ ಬಾಲಕಿಯರ ತಂದೆ ರಾಮಚಂದ್ರ, ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಬಾಲಕಿಯರ ಪತ್ತೆಗಾಗಿ ಮನವಿ ಮಾಡಲಾಗಿದೆ.



ವಾರಸುದಾರರಿಲ್ಲದ ಬೈಕ್‌ಗಳು ಪೊಲೀಸರ ವಶಕ್ಕೆ

ಮಂಡ್ಯ: ನಗರದ ಹಲವೆಡೆ ವಾರಸುದಾರರಿಲ್ಲದಿರುವ ಸುಮಾರು 10 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿರುವ ಸಂಚಾರಿ ಪೊಲೀಸರು ವಾಹನಗಳ ಮಾಲೀಕರು ಅಗತ್ಯ ದಾಖಲಾತಿ ಹಾಜರುಪಡಿಸಿ ಸುಪರ್ದಿಗೆ ಪಡೆದುಕೊಳ್ಳುವಂತೆ ತಿಳಿಸಿದ್ದಾರೆ.ಟಿವಿಎಸ್, ಹೀರೋ ಹೋಂಡಾ, ಹೋಂಡಾ, ಬಜಾಜ್ ಕಂಪನಿಗಳ ದ್ವಿಚಕ್ರ ವಾಹನಗಳು ಮಂಡ್ಯ ಸಂಚಾರಿ ಪೊಲೀಸ್ ಠಾಣೆ ಆವರಣದಲ್ಲಿದ್ದು, ಮಾಲೀಕರು ವಾಹನಗಳ ದಾಖಲಾತಿಗಳೊಂದಿಗೆ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂಬಂಧಿಸಿದ ಅಧಿಕಾರಿಗಳಿಗೆ ದಾಖಲಾತಿಗಳನ್ನು ಸಲ್ಲಿಸಿ ಪಡೆಯಬಹುದಾಗಿದೆ ಎಂದು ಸಂಚಾರಿ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಸಿದ್ದಪ್ಪ ಎಚ್.ಆರ್. ಅವರು ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. ಸಂ. 9480804848, 8970083660 ಸಂಪರ್ಕಿಸುವಂತೆ ಕೋರಲಾಗಿದೆ.



ಮಂಡ್ಯದ ಪ್ರಶಾಂತ್ ಹೈಸ್ಕೂಲ್ ಆಫ್ ಬ್ರಿಲಿಯನ್ಸ್ ಶಾಲೆ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಹಿನ್ನೆಲೆಯಲ್ಲಿ ಬಸವರಾಜ್ ಸುದ್ದಿಗೋಷ್ಠಿ ನಡೆಸಿದರು.

ಬ್ರಿಲಿಯನ್ಸ್ ಶಾಲೆಗೆ ಶೇ.100 ಫಲಿತಾಂಶ

ಮಂಡ್ಯ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಶಾಂತ್ ಹೈಸ್ಕೂಲ್ ಆಫ್ ಬ್ರಿಲಿಯನ್ಸ್ ಶಾಲೆಗೆ ಶೇ.100ರಷ್ಟು ಫಲಿತಾಂಶ ಲಭಿಸಿದ್ದು, ವಿದ್ಯಾರ್ಥಿನಿ ಶ್ರೇಯಾ ರಮೇಶ್ ಮದ್ದೂರು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ಶಾಲೆ ಕಾರ್ಯದರ್ಶಿ ಬಸವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಶಾಲೆಯ 73 ವಿದ್ಯಾರ್ಥಿಗಳು ಎಲ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಿದ್ದರು. ಅದರಲ್ಲಿ 32 ಅತ್ಯುತ್ತಮ, 33 ಪ್ರಥಮ ದರ್ಜೆ, 8 ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದರು.

ಫಲಿತಾಂಶ ಪ್ರಕಟವಾದಾಗ ಶ್ರೇಯಾ ರಮೇಶ್ 611 ಅಂಕಗಳು ಲಭಿಸಿದ್ದವು. ಮರು ಪರಿಶೀಲನೆಯ ನಂತರ 9 ಅಧಿಕ ಅಂಕಗಳು ಲಭಿಸಿದ್ದು, ಒಟ್ಟು 620 ಅಂಕಗಳೊಂದಿಗೆ ಜಿಲ್ಲೆಗೆ 2ನೇ ಸ್ಥಾನ, ರಾಜ್ಯಕ್ಕೆ 6ನೇ ಸ್ಥಾನ ಗಳಿಸಿದ್ದಾರೆ. ಶಾಲೆಯ ಬಿ.ಎಸ್.ಸೌಜನ್ಯಗೆ 612, ಕೆ.ತನುಶ್ರೀ 608 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿನಿ ಶ್ರೇಯಾ ಮಾತನಾಡಿ, ಶಾಲೆಯ ಶಿಕ್ಷಕರು ನೀಡಿದ ಉತ್ತಮ ಬೋಧನೆಗೆ, ಪರೀಕ್ಷೆಗಾಗಿ ಆಡಳಿತ ಮಂಡಳಿ ಆಯೋಜಿಸಿದ ಅಭ್ಯಾಸದ ತಯಾರಿ ಹೆಚ್ಚು ಅಂಕಗಳನ್ನು ಗಳಿಸಲು ಸಹಕಾರಿಯಾಯಿತು. ಜತೆಗೆ ನಿರಂತರ ಅಭ್ಯಾಸ, ಪರಿಶ್ರಮ ಸಾಧನೆಗೆ ಕಾರಣವಾಗಿದೆ ಎಂದು ಹೇಳಿದರು. ವಿದ್ಯಾರ್ಥಿನಿಯ ಪೋಷಕರಾದ ರಮೇಶ್, ಉಷಾರಾಣಿ, ಸರೋಜಮ್ಮ, ಮುಖ್ಯ ಶಿಕ್ಷಕ ರಾಜೇಂದ್ರ ಗೋಷ್ಠಿಯಲ್ಲಿದ್ದರು.



ಮೇಲುಕೋಟೆಯಲ್ಲಿ ಸರ್ಕಾರಿ ಪ್ರೌಢಶಾಲೆ ಆರಂಭಿಸಬೇಕೆಂದು ಸರ್ಕಾರಿಶಾಲೆ ನನ್ನವ್ವ ಪಾದಯಾತ್ರೆಯವೇಳೆ ಮಂಗಳವಾರ ಶತಮಾನದ ಶಾಲೆಯ ಗೇಟ್ ಮುಂದೆ ನಿಂತು ರೈತಸಂಘ ಮತ್ತು ವಿವಿಧ ಸಂಘಟನೆಗಳ ಮುಖಂಡರು ಒತ್ತಾಯಿಸಿದರು.

ಅಧಿಕಾರಿಗಳ ನಿರ್ಲಕ್ಷ್ಯದಿಂದ ಚಿಕ್ಕಮಂಡ್ಯ ನಿವಾಸಿಗಳಿಗೆ ಸಂಕಷ್ಟ

ಕಳಪೆ ಕಾಮಗಾರಿಗೆ ಆಕ್ರೋಶ

ಮಂಡ್ಯ: ಅಭಿವೃದ್ಧಿಯ ಸಂಕೇತವಾಗಿರಬೇಕಿದ್ದ ರಸ್ತೆಗಳು ಕೆಲವೊಮ್ಮೆ ಕಳಪೆ ಕಾಮಗಾರಿಯಿಂದ ಪ್ರಗತಿಯ ಅಧಃಪತನವನ್ನು ಸಾಕ್ಷೀಕರಿಸುತ್ತವೆ. ಅಂತಹ ರಸ್ತೆಗಳಲ್ಲಿ ಚಿಕ್ಕಮಂಡ್ಯದಿಂದ ಬಿ.ಹೊಸಹಳ್ಳಿ ಸಂಪರ್ಕ ರಸ್ತೆಯೂ ಒಂದಾಗಿದೆ. ರಸ್ತೆ ನಿರ್ಮಾಣವಾಗಿ ಆರು ತಿಂಗಳಾಗಿಲ್ಲ, ಆಗಲೇ ಜಲ್ಲಿಕಲ್ಲುಗಳು ಮೇಲೇಳುತ್ತಿವೆ. ಇಡೀ ರಸ್ತೆ ಧೂಳುಮಯವಾಗಿದ್ದು, ಸ್ಥಳೀಯರು ರಸ್ತೆ ನಿರ್ಮಿಸಿದ ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.


ಬಾಗಿಲು ತೆರೆದರೆ ರಸ್ತೆಯ ಧೂಳೆಲ್ಲವೂ ಮನೆಯನ್ನು ತುಂಬಿಕೊಳ್ಳುತ್ತದೆ. ಮನೆಯನ್ನು ಸ್ವಚ್ಛಗೊಳಿಸುವುದೇ ದೊಡ್ಡ ಕೆಲಸವಾಗಿದೆ. ಧೂಳಿನಿಂದ ವೃದ್ಧರು, ಮಕ್ಕಳು ಅಲರ್ಜಿ, ಕೆಮ್ಮಿನಿಂದ ಬಳಲುತ್ತಿದ್ದಾರೆ ಎಂದು ಮಹಿಳೆಯರು ದೂರಿದ್ದಾರೆ.

ಮೂರೇ ದಿನದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪೂರೈಸಿದ್ದಾರೆ. ಒಂದು ದಿನ ಜಲ್ಲಿ ತಂದು ಸುರಿದರು. ಇನ್ನೊಂದು ದಿನ ಅದನ್ನು ಮಟ್ಟ ಮಾಡಿದರು. ಎರಡು ತಿಂಗಳ ಬಳಿಕ ಕಾಂಕ್ರೀಟ್ ಸುರಿದು ತಟ್ಟಿ ಹೋದರು. ಕಾಮಗಾರಿಗೆ ಬಳಸಿದ ಸಿಮೆಂಟ್ ಕಳಪೆಯದ್ದು ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಜಲ್ಲಿ ಬಿಚಾವಣೆ ಮಾಡುವ ಸಂದರ್ಭದಲ್ಲೇ 200ರಿಂದ 300 ಮೂಟೆ ಸಿಮೆಂಟ್ ತಂದಿರಿಸಿಕೊಂಡಿದ್ದರು. ಮಳೆಯಿಂದ ರಕ್ಷಿಸಲು ಟಾರ್ಪಾಲು ಹಾಕಿದ್ದರು. 2 ತಿಂಗಳಾದರೂ ಕಾಮಗಾರಿ ನಡೆಸಿರಲಿಲ್ಲ. ಕೊನೆಗೆ ಮಳೆ ಬಂದು ಸಿಮೆಂಟ್ ಒದ್ದೆಯಾಗಿತ್ತು. ನೀರಲ್ಲಿ ನೆನೆದು ಗಟ್ಟಿಯಾಗಿದ್ದ ಸಿಮೆಂಟ್‌ನ್ನೇ ಒಡೆದು ರಸ್ತೆಗೆ ಹಾಕಿ ಹೋದರು.

ಸಿಮೆಂಟ್ ರಸ್ತೆ ಮಾಡಿ ಹೋದ ಕೆಆರ್‌ಐಡಿಎಲ್ ಅಧಿಕಾರಿಗಳು ಮತ್ತೆ ಆ ರಸ್ತೆ ಹೇಗಿದೆ ಎಂದು ಅತ್ತ ತಿರುಗಿಯೂ ನೋಡಿಲ್ಲ, ಅಧಿಕಾರಿಗಳು ಬರುವುದನ್ನೇ ಸ್ಥಳೀಯರೂ ಕೂಡ ಎದುರುನೋಡುತ್ತಿದ್ದಾರೆ. ರಸ್ತೆ ನಿರ್ಮಾಣ ಹೆಸರಿನಲ್ಲಿ ಲಕ್ಷಾಂತ ರು. ವೆಚ್ಚ ಮಾಡಿ ಬಿಲ್ ಮಾಡಿಕೊಂಡಿರುವ ಕೆಆರ್‌ಐಡಿಎಲ್ ಅಧಿಕಾರಿಗಳು ಕಳಪೆ ಕಾಮಗಾರಿ ನಡೆಸಿರುವುದರ ವಿರುದ್ಧ ಸ್ಥಳೀಯ ಜನರು ಅದರಲ್ಲೂ ಮಹಿಳೆಯರು ಕೆಂಡಕಾರುತ್ತಿದ್ದಾರೆ.

ಈಗಾಗಲೇ ಒಮ್ಮೆ ಸ್ಥಳೀಯರು ಅವ್ಯವಸ್ಥಿತ ರಸ್ತೆ ಕಾಮಗಾರಿಯನ್ನು ಖಂಡಿಸಿ ಪ್ರತಿಭಟನೆಯನ್ನು ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, ಇಂತಹ ರಸ್ತೆಯನ್ನು ಏತಕ್ಕಾದರೂ ಮಾಡಬೇಕು. ಮೊದಲೇ ರಸ್ತೆ ಎಷ್ಟೋ ಚೆನ್ನಾಗಿತ್ತು. ಸಿಮೆಂಟ್ ರಸ್ತೆ ಮಾಡುವುದಾಗಿ ಹೇಳಿ ಅದ್ವಾನ ಮಾಡಿದ್ದಾರೆ. ಪಂಚಾಯಿತಿಯವರನ್ನು ಕೇಳಿದರೆ ಈ ರಸ್ತೆಯನ್ನು ನಾವು ಮಾಡಿಲ್ಲ, ಕೆಆರ್ ಐಡಿಎಲ್ ಅಧಿಕಾರಿಗಳು ಮಾಡಿರೋದು ಅವರನ್ನೇ ಕೇಳಿಹೋಗಿ ಎನ್ನುತ್ತಾರೆ. ಯಾರ ಬಳಿ ನಮ್ಮ ಕಷ್ಟ ಹೇಳೋದು ಎನ್ನುವುದು ಸ್ಥಳೀಯ ನಿವಾಸಿಗಳ ಆಕ್ರೋಶದ ಮಾತಾಗಿದೆ.



> ಇಂತಹ ರಸ್ತೆ ಯಾಕೆ ಮಾಡಬೇಕಿತ್ತು. ಸಿಮೆಂಟ್ ರಸ್ತೆ ಮಾಡಿ ಅದ್ವಾನ ಮಾಡಿದ್ದಾರೆ. ಗುಣಮಟ್ಟದ ಸಿಮೆಂಟ್ ಬಳಸದೆ, ಸರಿಯಾಗಿ ಕ್ಯೂರಿಂಗ್ ಮಾಡದೆ ಸಿಮೆಂಟ್-ಮರಳೆಲ್ಲವೂ ಮೇಲೆದ್ದಿದೆ. ಜಲ್ಲಿ ಕಲ್ಲುಗಳೂ ಕಿತ್ತುಬರುತ್ತಿವೆ. ವಾಹನಗಳು ಓಡಾಡಿದರೆ ಮನೆಗಳಿಗೆ ಧೂಳು ಆವರಿಸುತ್ತದೆ. ರಸ್ತೆ ಅವಸ್ಥೆಯನ್ನು ಯಾರೂ ಹೇಳೋರಿಲ್ಲ, ಕೇಳೋರಿಲ್ಲ ಎಂಬಂತಾಗಿದೆ.
> ■ - ಮಾದಶೆಟ್ಟಿ, ಸ್ಥಳೀಯ ನಿವಾಸಿ, ಚಿಕ್ಕಮಂಡ್ಯ

> ಅಧಿಕಾರಿಗಳೇನೋ ಬೇಕಾಬಿಟ್ಟಿ ಕಾಮಗಾರಿ ನಡೆಸಿ ಹೋಗಿದ್ದಾರೆ. ಕಷ್ಟ ಅನುಭವಿಸುತ್ತಿರುವವರು ಮಾತ್ರ ನಾವು.
> ■ - ಲಕ್ಷ್ಮಮ್ಮ, ಸ್ಥಳೀಯ ನಿವಾಸಿ, ಚಿಕ್ಕಮಂಡ್ಯ

ಪಲ್ಸ್ ಪೋಲಿಯೋ ಜೂ.28ರಿಂದ: ಡಿಸಿ

ಮಂಡ್ಯ: ಬರುವ ಜೂ. 28ರಿಂದ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದ್ದು, ಐದು ವರ್ಷದೊಳಗಿನ ಯಾವುದೇ ಮಗುವು ಲಸಿಕೆಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೂ. 28 ರಂದು ಜಿಲ್ಲೆಯಾದ್ಯಂತ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂ. 29 ರಿಂದ ಜುಲೈ 1 ರವರೆಗೆ ಲಸಿಕೆ ಹಾಕದ ಮಕ್ಕಳನ್ನು ಪತ್ತೆಹಚ್ಚಲು ಮನೆ ಮನೆಗೆ ಭೇಟಿ ನೀಡಲಾಗುವುದು. ಮನೆ ಮನೆಗೆ ತೆರಳಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಸೂಚನೆ ನೀಡಿದರು.

ಜಿಲ್ಲೆಯಾದ್ಯಂತ ಜೂ. 28 ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ 0-5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದ್ದು, ಪ್ರತಿಯೊಬ್ಬ ಪೋಷಕರು ತಪ್ಪದೇ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆಯನ್ನು ಹಾಕಿಸುವುದರೊಂದಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ನಗರ ಪ್ರದೇಶಗಳಲ್ಲಿ 723 ಲಸಿಕಾ ಕೇಂದ್ರಗಳನ್ನು ತೆರೆಯಲಾಗುವುದು. ಲಸಿಕೆ ನಿರಾಕರಿಸುವ ಕುಟುಂಬಗಳ ಮನವೊಲಿಸಿ ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ಲಸಿಕೆ ಹಾಕಿಸುವಂತೆ ಮಾಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಕೆ.ಪಿ. ಅಶ್ವಥ್, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಲೋಕೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ವಸ್ತುಸಂಗ್ರಹಾಲಯಗಳು ಬಹು ಸಂಸ್ಕೃತಿಯ ಪ್ರತೀಕ

ಶ್ರೀರಂಗಪಟ್ಟಣ: ವಸ್ತುಸಂಗ್ರಹಾಲಯಗಳು ಬಹು ಸಂಸ್ಕೃತಿಯ ಪ್ರತೀಕ ಎಂದು ಹಂಪಿ ವಿವಿ ವಿಶ್ರಾಂತ ಪ್ರಾಧ್ಯಾಪಕ ಹಾಗೂ ಇತಿಹಾಸ ಸಂಶೋಧಕ ಪ್ರೊ. ಸಿ. ಮಹದೇವ ಬಣ್ಣಿಸಿದರು.

ಪಟ್ಟಣದ ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆ ದರಿಯಾ ದೌಲತ್‌ನಲ್ಲಿ ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆ ಸೋಮವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚಣೆ'ಯಲ್ಲಿ ಅವರು ಮಾತನಾಡಿದರು. ಒಂದು ವಸ್ತುಸಂಗ್ರಹಾಲಯ ಹಲವು ಸಂಸ್ಕೃತಿಗಳನ್ನು ಬಿಂಬಿಸುತ್ತದೆ. ಬದಲಾದ ಕಾಲಮಾನದ ಘಟನಾವಳಿಗಳನ್ನು ಪರಿಚಯಿಸುತ್ತದೆ. ಶಾಸನಗಳು, ಶಿಲ್ಪಗಳು, ಗ್ರಂಥಗಳು ಶ್ರೀಮಂತ ಪರಂಪರೆಯನ್ನು ಸಾಕ್ಷೀಕರಿಸುತ್ತವೆ. ಜ್ಞಾನ ಮತ್ತು ಸಂಸ್ಕೃತಿಕ ಕೇಂದ್ರಗಳೂ ಆಗಿದ್ದು, ವಿಶ್ವಮಾನವ ಸಂದೇಶ ಸಾರುತ್ತವೆ. ಗ್ರೀಕ್ ಮತ್ತು ರೋಂನಲ್ಲಿ ಕ್ರಿಸ್ತ ಪೂರ್ವದಲ್ಲೇ ವಸ್ತುಸಂಗ್ರಹಾಲಯದ ಪರಿಕಲ್ಪನೆ ಇತ್ತು. ಇಂದಿನ ತಲೆಮಾರಿಗೆ ವಸ್ತುಸಂಗ್ರಹಾಲಯಗಳ ಮಹತ್ವ ತಿಳಿಸಬೇಕು. ನಮ್ಮ ಇತಿಹಾಸ ಮತ್ತು ಪರಂಪರೆಯ ಬಗ್ಗೆ ಆಸಕ್ತಿ ಬೆಳೆಸಬೇಕು' ಎಂದು ಹೇಳಿದರು.

ಮೈಸೂರು ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಮಂಜುನಾಥ್.ಬಿ ಮಾತನಾಡಿ, ಶಾಸನ, ಶಿಲ್ಪ, ಹಸ್ತಪ್ರತಿ ಇತರ ಐತಿಹಾಸಿಕ ಪಳೆಯುಳಿಕೆಗಳಿಗೆ ಬೆಲೆ ಕಟ್ಟಲಾಗದು. ಒಂದು ಐತಿಹಾಸಿಕ ಪಳೆಯುಳಿಕೆ ಹಲವು ಸಂಗತಿಗಳನ್ನು ತಿಳಿಸುತ್ತದೆ. ಅಂತಹ ಅಪರೂಪದ ವಸ್ತುಗಳು ಸಿಕ್ಕಿದರೆ ಜೋಪಾನ ಮಾಡಬೇಕು. ಸಮೀಪ ವಸ್ತುಸಂಗ್ರಹಾಲಯಗಳಿಗೆ ಕೊಡಬೇಕು' ಎಂದು ತಿಳಿಸಿದರು. ವಾಣಿಜ್ಯ ಇಲಾಖೆ ನಿವೃತ್ತ ಅಧಿಕಾರಿ ರಮೇಶ್, ವಸ್ತುಸಂಗ್ರಹಾಲಯಗಳು ಮಾನವನ ವಿವಿಧ ಪೀಳಿಗೆಗಳ ನಡುವೆ ಕೊಂಡಿಯಾಗಿವೆ. ಇವುಗಳಲ್ಲಿ ಧರ್ಮ, ಭಾಷೆ, ಆಚಾರ, ವಿಚಾರಗಳನ್ನು ಮೀರಿದ ಮಹತ್ವದ ಸಂದೇಶಗಳಿವೆ' ಎಂದರು. ಸಹಾಯಕ ಪುರಾತತ್ವ ಅಧೀಕ್ಷಕ ಆರ್. ರಮೇಶ್, ಪ್ರಾಚ್ಯವಸ್ತು ರಾಸಾಯನ ವಿಜ್ಞಾನ ವಿಭಾಗದ ಸಹಾಯಕಿ ಪ್ರಭಿನ ಕೆ.ಪಿ, ಸಂರಕ್ಷಣಾ ಸಹಾಯಕರಾದ ಚಂದನ್ ಪ್ರಕಾಶ್, ಅನ್ನು ಅನ್ನಾ ಅಬ್ರಹಾಮ್, ಮಾಡೆಲರ್ ಸತೀಶಕುಮಾರ್ ಪಾಲ್ಗೊಂಡಿದ್ದರು. ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.



ಮೇಲುಕೋಟೆ ತಲುಪಿದ ಐತಿಹಾಸಿಕ ಪಾದಯಾತ್ರೆ

ಮೇಲುಕೋಟೆ: ಮಂಡ್ಯ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಏಕರೂಪ ಸಮಾನ ಶಿಕ್ಷಣಕ್ಕಾಗಿ ಆಗ್ರಹಿಸಿ ಜಿಲ್ಲಾದ್ಯಂತ ಹಮ್ಮಿಕೊಳ್ಳಲಾಗಿರುವ ಸರ್ಕಾರಿ ಶಾಲೆ ನನ್ನದು ಐತಿಹಾಸಿಕ ಪಾದಯಾತ್ರೆ ಮಂಗಳವಾರ ಮೇಲುಕೋಟೆಗೆ ಪ್ರವೇಶಿಸಿತು.

ಏಪ್ರಿಲ್ 11 ರಿಂದ ಆರಂಭವಾಗಿ ಈಗಾಗಲೇ 1349 ಕಿ.ಮೀ ಸಂಚರಿಸಿರುವ ಈ ಪಾದಯಾತ್ರೆಯು, ಸಂತೋಷ್ ಮಂಡ್ಯಗೌಡ ಅವರ ನೇತೃತ್ವದಲ್ಲಿ ನಾಗಮಂಗಲ ತಾಲೂಕಿನ ಕಡೆಯಿಂದ ಬಂದು ಬಳ್ಳಿಗಟ್ಟ ಮಾರ್ಗವಾಗಿ ಮೇಲುಕೋಟೆ ತಲುಪಿತು. ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿದ ತಂಡ, ಸರ್ಕಾರಿ ಶಾಲೆಗಳ ಬಲವರ್ಧನೆಗೆ ಘೋಷಣೆಗಳನ್ನು ಕೂಗಿತು. ಜೂನ್ 6 ರಂದು ಪಂಜಿನ ಮೆರವಣಿಗೆಯೊಂದಿಗೆ ಈ ಪಾದಯಾತ್ರೆ ಮುಕ್ತಾಯಗೊಳ್ಳಲಿದೆ. ಸುದ್ದಿಗಾರರೊಂದಿಗೆ ಮಾತನಾಡಿ, ರೈತ ಸಂಘದ ಜಿಲ್ಲಾಧ್ಯಕ್ಷ ಇಂದುವಾಳು ಚಂದ್ರಶೇಖರ್, ಸಂವಿಧಾನದ ಆಶಯದಂತೆಏಕರೂಪಶಿಕ್ಷಣಜಾರಿಯಾಗಬೇಕು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸಿಬಿಎಸ್‌ಇ ಮಾದರಿ ಗುಣಮಟ್ಟದ ಶಿಕ್ಷಣ ಮತ್ತು ವಸತಿ ಸೌಕರ್ಯವಿರುವ ದ್ವಿಭಾಷಾ ಶಾಲೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು. ಯುವ ಘಟಕದ ಅಧ್ಯಕ್ಷ ಸಂತೋಷ್ ಮಂಡ್ಯಗೌಡ ಮಾತನಾಡಿ, ಜಿಲ್ಲೆಯ ಹಲವು ಗ್ರಾಮಗಳಲ್ಲಿ ಶಾಲೆಗಳು ಮುಚ್ಚುತ್ತಿದ್ದು, ಮೂಲಸೌಕರ್ಯಗಳನ್ನು ಕಲ್ಪಿಸಿ ಮಕ್ಕಳ ದಾಖಲಾತಿ ಹೆಚ್ಚಿಸಲು ಜನಪ್ರತಿನಿಧಿಗಳು ಶ್ರಮಿಸಬೇಕು ಎಂದರು. ವರದಿಯಲ್ಲಿ ರೈತ ಸಂಘದ ಶಿವಳ್ಳಿ ಚಂದ್ರಶೇಖರ್, ಬೆಟ್ಟಸ್ವಾಮಿಗೌಡ, ಅಮೃತಿಶಂಕರ್, ಮುಖಂಡರು ಇದ್ದರು.



3 ಕಿ.ಮೀ. ಬೀದಿದೀಪಗಳಿಗೆ ಶಾಸಕ ಲೋಕಾರ್ಪಣೆ

ಪಾಂಡವಪುರ : ಲೋಕೋಪಯೋಗಿ ಇಲಾಖೆ ವತಿಯಿಂದ ಪಾಂಡವಪುರ ಬಸ್ ನಿಲ್ದಾಣದಿಂದ ಹಾರೋಹಳ್ಳಿ ಕೆ.ಎಚ್ .ಬಿ ಕಾಲನಿವರೆಗೆ ಅಳವಡಿಸಲಾಗಿರುವ ಅಲಂಕಾರಿಕ ವಿದ್ಯುತ್ ಬೀದಿ ದೀಪಗಳಿಗೆ ಬಿಜಿಎಸ್ ಶಾಲೆ ಮುಂಭಾಗ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸುಮಾರು 1.52 ಕೋಟಿ ರೂ. ವೆಚ್ಚದಲ್ಲಿ 3 ಕಿಲೋಮೀಟರ್ ವ್ಯಾಪ್ತಿಯಲ್ಲಿ ರಸ್ತೆ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದ್ದು, ನವೀನ ಮಾದರಿಯ ಒಟ್ಟು 106 ವಿದ್ಯುತ್ ದೀಪದ ಕಂಬಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದರು. ಈ ಭಾಗದಲ್ಲಿ ರಾತ್ರಿ ವೇಳೆ ಹೆಚ್ಚಿನ ಕತ್ತಲೆ ಆವರಿಸಿದ್ದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿತ್ತು. ಹಲವು ದಿನಗಳ ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸಿ ಇದೀಗ ಅಲಂಕಾರಿಕ ಬೀದಿ ದೀಪಗಳ ವ್ಯವಸ್ಥೆಯನ್ನು ತುರ್ತಾಗಿ ಪೂರ್ಣಗೊಳಿಸಿ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಸತೀಶ್ ಕುಮಾರ್, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಜಾಯ್ ಕುಮಾರ್, ಪುರಸಭೆ ನಾಮ ನಿರ್ದೇಶನ ಸದಸ್ಯರಾದ ಎಂ. ಮುರುಳೀಧರ್, ಪಟೇಲ್ ರಮೇಶ್, ಮಹಮದ್ ಹನೀಫ್, ಹಾರೋಹಳ್ಳಿ ಲಕ್ಷ್ಮೇಗೌಡ, ಮಾಜಿ ಅಧ್ಯಕ್ಷ ಡಿ.ಹುಚ್ಚೇಗೌಡ, ರೈತ ಸಂಘದ ತಾಲೂಕು ಅಧ್ಯಕ್ಷ ಎಣ್ಣೆಹೊಳೆಕೊಪ್ಪಲು ಮಂಜುನಾಥ್, ಪುರಸಭಾ ಮಾಜಿ ಸದಸ್ಯರಾದ ಬಂಕ್ ಶ್ರೀನಿವಾಸ್, ಕೆ.ಉಮಾಶಂಕರ್, ಮಹಿಳಾ ಹೋರಾಟಗಾರ್ತಿ ಅರಳಕುಪ್ಪೆ ರೂಪಾ, ರೈತಸಂಘದ ಮುಖಂಡರಾದ ಗರಡಿಮನೆ ಚಂದ್ರಶೇಖರ್, ರಾಮಕೃಷ್ಣ, ಅರಗಪ್ಪರ ರಮೇಶ್, ಚಿಕ್ಕಣ್ಣ, ಕೊನಾರಿ ಮಂಜು, ಬೇವಿನಕುಪ್ಪೆ ಅನಿಲ್, ಕಾಂಗ್ರೆಸ್ ಮುಖಂಡರಾದ ಬಿ.ಜೆ.ಸ್ವಾಮಿ, ಕಣಿವೆ ರಾಮು ಸೇರಿದಂತೆ ಅನೇಕ ರೈತ ಮುಖಂಡರು, ಅಧಿಕಾರಿಗಳು ಇದ್ದರು.



ಮುಂದಿನ ವರ್ಷದ ಬಸವ ಜಯಂತಿಗೆ ಲೋಕಾರ್ಪಣೆ: ಶಾಸಕ ಉದಯ್

ಪುತ್ಥಳಿ ನಿರ್ಮಾಣಕ್ಕೆ ನಗರಸಭೆ ನಿರ್ಣಯ

ಮದ್ದೂರು: ಜಗಜ್ಯೋತಿ ಬಸವಣ್ಣನವರ ಪುತ್ಥಳಿಯನ್ನು ನಗರದ ಕೊಲ್ಲಿ ವೃತ್ತದದಲ್ಲಿ ನಿರ್ಮಾಣ ಮಾಡಲು ನಗರಸಭೆಯಲ್ಲಿ ನಿರ್ಣಯ ಮಾಡಲಾಗಿದ್ದು, ಮುಂದಿನ ವರ್ಷ ಬಸವಣ್ಣನವರ ಜಯಂತಿಯಂದು ಲೋಕಾರ್ಪಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಕೆ.ಎಂ.ಉದಯ್ ಭರವಸೆ ವ್ಯಕ್ತಪಡಿಸಿದರು.

ನಗರದ ಶ್ರೀ ರಾಮ ಮಂದಿರ ಪಾರ್ಕ್ ಬಳಿ ನಡೆದ ವಿಶ್ವಗುರು ಬಸವೇಶ್ವರ ಜಯಂತ್ಯುತ್ಸವ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾ ಉದ್ಘಾಟನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬಸವಣ್ಣ ಅವರ ಪುತ್ಥಳಿಯನ್ನು ನಿರ್ಮಾಣ ಮಾಡಿ ಎಂದು ಯಾರೂ ನನಗೆ ಅರ್ಜಿ ನೀಡಿರಲಿಲ್ಲ, ಆದರೂ ಅವರು ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಗಮನಿಸಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ಪ್ರತಿನಿತ್ಯ ಜನರಿಗೆ ಅವರದರ್ಶನವಾಗಬೇಕುಎಂಬಸುದುದ್ದೇಶದಿಂದ ಪುತ್ಥಳಿ ನಿರ್ಮಾಣ ಮಾಡುತ್ತಿದ್ದು, ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು ಎಂದು ಮನವಿ ಮಾಡಿದರು.



ಜಾಗತಿಕಲಿಂಗಾಯತಮಹಾಸಭಾದಜಿಲ್ಲಾಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಬಸವಣ್ಣನವರು ನಾಡಿಗೆ ನೀಡಿದ ಕೊಡುಗೆಗಳು ಅಭೂತ ಪೂರ್ವವಾಗಿದೆ. ಇಂತಹ ಮಹಾತ್ಮರ ಸ್ಮರಣೆ ಬದುಕಿಗೆ ಹೊಸ ಚೈತನ್ಯವನ್ನುಂಟು ಮಾಡುತ್ತದೆ. ಮಹನೀಯರ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಾಂಡವಪುರದ ಬೇಬಿಬೆಟ್ಟದ ಶ್ರೀರಾಮ ಯೋಗೀಶ್ವರ ಮಠದ ಪರಮಪೂಜ್ಯ ಶ್ರೀ ಶಿವಬಸವ ಸ್ವಾಮೀಜಿ ಮಾತನಾಡಿದರು.

ಮೈಸೂರಿನ ಶರಣು ವಿಶ್ವವಚನ ಫೌಂಡೇಶನ್ ಶರಣೆರೂಪ ಕುಮಾರಸ್ವಾಮಿ ಅವರಿಗೆ ಶರಣೆ ಅಕ್ಕ ಮಹಾದೇವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶರಣು ವಿಶ್ವ ಫೌಂಡೇಶನ್ ಅಧ್ಯಕ್ಷ ವಚನಕುಮಾರಸ್ವಾಮಿ , ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್ಮುಲ್ ನಿರ್ದೇಶಕ ಹರೀಶ್ ಬಾಬು, ಶಿವಾನಂದ, ಎಂ.ಸುಬ್ರಹ್ಮಣ್ಯ, ಮಹದೇವಪ್ಪ, ಎಂ.ಎಸ್.ಮಂಜುನಾಥ್, ಎಲ್. ಸಂದೇಶ್, ಎಚ್.ಶಿವರುದ್ರಪ್ಪ, ಮೆಣಸಗೆರೆ ಶಿವಲಿಂಗಪ್ಪ, ಮನುಕುಮಾರ್, ಎಂ.ಬಸವರಾಜು, ಎಚ್.ಕೆ.ಕೆಂಪಣ್ಣ, ಮಹದೇವಸ್ವಾಮಿ, ಮಹಾಲಿಂಗಪ್ಪ, ಕೆಂಪರಾಜು, ಮುಖಂಡ ವಿಜಯ್ ಕುಮಾರ್ ಇದ್ದರು.

ವಿಚಾರ ಮಂಥನ ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಹೇಳಿಕೆ

ಜೀವನದಲ್ಲಿ ಗಾಂಧಿ ತತ್ತ್ವ ಅಳವಡಿಸಿಕೊಳ್ಳಿ

ಮಂಡ್ಯ: ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳು ಕುಸಿದುಹೋಗಿವೆ. ಲೋಕಸಭೆಯಲ್ಲಿರುವ ಸದಸ್ಯರ ಪೈಕಿ ಶೇ.47 ರಷ್ಟು ಸದಸ್ಯರು ಒಂದಲ್ಲ ಒಂದು ಕ್ರಿಮಿನಲ್ ಕೇಸ್ ಎದುರಿಸುತ್ತಿದ್ದಾರೆ ಇದು ಆತಂಕಕಾರಿ ಇಂತಹ ಸ್ಥಿತಿಯಲ್ಲಿ ನಾವಿದ್ದೇವೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ ಪಿ.ಕೃಷ್ಣ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ,ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ,ರಾಷ್ಟ್ರೀಯ ಸೇವಾ ಯೋಜನೆ ಕೃಷಿ ಮಹಾವಿದ್ಯಾಲಯ,ವಿ.ಸಿ. ಫಾರಂ, ಜಿಲ್ಲಾ ಯುವ ಪರಿಷತ್ ವತಿಯಿಂದ ನಡೆದ ಯುವ ಮನಸ್ಸುಗಳಿಗೆ ಗಾಂಧಿ ರಾಜ್ಯ ಮಟ್ಟದ ವಿಚಾರ ಮಂಥನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂಸೆ,ಅರಾಜಕತೆ, ಭ್ರಷ್ಟಾಚಾರ ತಾಂಡವಾಡುತ್ತಿರುವ ಈ ದಿನಗಳಲ್ಲಿ ಜಗತ್ತಿಗೆ ಅಹಿಂಸೆ, ವಿಶ್ವ ಭ್ರಾತೃತ್ವ, ಗ್ರಾಮ ಸ್ವರಾಜ್ಯ, ಸಮಾನತೆ, ಸರಳತೆಯ ಪಾಠ ಹೇಳಿಕೊಟ್ಟ ಮಹಾತ್ಮ ಗಾಂಧೀಜಿ ಇಂದಿಗೂ ಪ್ರಸ್ತುತ ಎಂದು ತಿಳಿಸಿದರು.



ಸಮಾಜ,ಸಾಮಾಜಿಕ, ನೈತಿಕ ಸ್ವಾತಂತ್ರ್ಯ ಹಾಗೂ ಗಾಂಧಿ ಅವರ ಜೀವನ ಸಂದೇಶವನ್ನು ವಿವೇಚನಾತ್ಮಕವಾಗಿ ಚಿಂತಿಸಿದಲ್ಲಿ ಮೂಲಭೂತವಾದಿಗಳ, ಕೋಮುವಾದಿಗಳ ವಿರುದ್ಧ ಹೋರಾಟ ನಡೆಸಬಹುದು.ಬಹುತ್ವದ ಚಿಂತನೆ ನಮ್ಮ ಶಕ್ತಿಯಾಗಿದೆ. ಗಾಂಧೀ ಪ್ರಪಂಚಕ್ಕೆ ಬೆಳಕಾದವರು ಎಂದುಹೇಳಿದರು. ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಅಧ್ಯಕ್ಷ ಮಂಗಲ ಎಂ.ಯೋಗೀಶ್ ಮಾತನಾಡಿ ಜೀವರಾಜ್ ಆಳ್ವ ಅವರು ಯುವಜನ ಕ್ರೀಡೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ರಾಜ್ಯದಲ್ಲಿ ಕಲಾಮಂದಿರ ಹಾಗೂ ಆಟದ ಮೈದಾನಗಳನ್ನು ನಿರ್ಮಿಸುವ ಮೂಲಕ ಯುವಜನರಲ್ಲಿರುವ ಸೂಕ್ತ ಪ್ರತಿಭೆಗಳನ್ನು ಹೊರಸೂಸುವ ಕೆಲಸ ಮಾಡಿದರು. ಯುವ ಚೇತನಗಳಿಗೆ ತರಬೇತಿ ನೀಡುವ ಕೆಲಸ ಮಾಡಿದರು ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ವಿ.ಧರಣೇಂದ್ರಯ್ಯ, ಕವಿ ಕೆ.ಪಿ.ಮೃತ್ಯುಂಜಯ ಯಾಕಾಗಿ , ಡಾ.ವಿಷ್ಣು ಎಂ.ಶಿಂಧೆ ಅವರು ಉಪನ್ಯಾಸ ನೀಡಿದರು. ಕೃಷಿ ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ, ಡಾ.ಪ್ರವೀಣ್ ಪಿ., ಪ್ರೊ ನಾಗಾನಂದ ಕೆ., ಎನ್.ಪರಮೇಶ್, ಇದ್ದರು.

ಕಿರುಸುದ್ದಿ

ಪುಣ್ಯ, ನಿಖಿಲ್ ಗೌಡ ರಾಜ್ಯಕ್ಕೆ ಮೂರನೇ ಸ್ಥಾನ

ಹಾಸನ: 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದ ನಂತರ ನಗರದ ವಿಜಯ ಶಾಲಾ ವಿದ್ಯಾರ್ಥಿಗಳಾದ ಪುಣ್ಯ ಆರ್. ಮತ್ತು ನಿಖಿಲ್ ಗೌಡ ಆರ್. 62 ಕ್ಕೆ 623 ಅಂಕಗಳೊಂದಿಗೆ ರಾಜ್ಯಕ್ಕೆ ಮೂರನೇ ಸ್ಥಾನ ಮತ್ತು ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ತನ್ವಿ ಎ ಕಣಗಾಲ್ 622, ಜೀವಿತ ಆರ್ 620, ಯಶಸ್ವಿ ಗೌಡ ಎಚ್.ಡಿ. – 620, ಚಿರಾಗ್ ಜಿ.ಎಸ್. 618, ಚಿಂತನ್ ಎಚ್.ಕೆ. 618, ತನಿಷ ಎಚ್.ಡಿ.– 618, ಮೃದುಲ ಮಹೇಶ್ 617, ಸುಜನ್ ಎಂ. 617, ಪುನೀಶ್ ಕೃಷ್ಣ 617, ಬಿ.ಎಸ್.ಪ್ರಿಯಾಂಕಾ 617, ಧನ್ವಿಷ್ ಎಲ್. 616 ಅಂಕಗಳನ್ನು ಪಡೆದುಕೊಂಡಿದ್ದಾರೆ. ರಾಜ್ಯದಲ್ಲಿ ಮೊದಲ ಹತ್ತು ಸ್ಥಾನಗಳನ್ನು 13 ವಿದ್ಯಾರ್ಥಿಗಳು ಪಡೆದುಕೊಂಡಿದ್ದು, 625ಕ್ಕೆ 600 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು 43 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಹಾಗೂ ಎಲ್ಲಾ ವಿಷಯಗಳಿಂದ ಒಟ್ಟು 109 ಸೆಂಟರ್‌ಗಳು ಬಂದಿವೆ. ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 157 ವಿದ್ಯಾರ್ಥಿಗಳಲ್ಲಿ 156 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದು, ಒಬ್ಬ ವಿದ್ಯಾರ್ಥಿಯು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದುವ ಮೂಲಕ ಪ್ರತಿಬಾರಿಯಂತೆ ವಿಜಯ ಶಾಲೆಯು ಶೇ.100 ಫಲಿತಾಂಶವನ್ನು ಪಡೆದುಕೊಂಡಿದೆ. ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ಶಿಕ್ಷಕ ವೃಂದ ಹಾಗೂ ಪೋಷಕರು ಅಭಿನಂದಿಸಿದ್ದಾರೆ.

ಮೇ 26ಕ್ಕೆ ಉದ್ಯೋಗಕ್ಕಾಗಿ ನೇರ ಸಂದರ್ಶನ

ಹಾಸನ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಸನ ಮತ್ತು ಮೈಸೂರು ನಗರದಲ್ಲಿರುವ ಕೇನ್ಸ್ ಟೆಕ್ನಾಲಜಿಸ್, ರಾಣಿ ಮದ್ರಸ್, ವಾಲ್ವೆಸ್ ಲೀಡ್ ಎಚ್.ಆರ್ ಮತ್ತು ಗ್ರೋಮೇಟ್ಸ್ ಕಂಪನಿಯ ಸಹಭಾಗಿತ್ವದಲ್ಲಿ ಹಾಸನ ಜಿಲ್ಲೆಯ ಯುವಕ ಯುವತಿಯರಿಗೆ ಉದ್ಯೋಗ ನೀಡುವ ಸಂಬಂಧ ಮೇ 26ರಂದು ಬೆಳಗ್ಗೆ 10.30ಕ್ಕೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ರೈಲ್ವೇ ಸ್ಟೇಷನ್ ಹತ್ತಿರ, ಹಾಸನ ಸರ್ಕಾರಿ ಐಟಿಐ ಕಾಲೇಜು ಆವರಣದಲ್ಲಿ ನೇರ ಸಂದರ್ಶನ ನಡೆಯಲಿದ್ದು ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಮತ್ತು ಯಾವುದೇ ಪದವಿ ಪಾಸಾದ ಪುರುಷ, ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9482120663ನ್ನು ಸಂಪರ್ಕಿಬಹುದಾಗಿದೆ.

ನಾಳೆಯಿಂದ ಐದು ದಿನ ವಿದ್ಯುತ್ ವ್ಯತ್ಯಯ

ಅರಸೀಕೆರೆ: 110/11 ಕೆವಿ ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ವ್ಯಾಪ್ತಿಯ ಸಂಪೂರ್ಣನಹಳ್ಳಿ ಗ್ರಾಮದ ಹತ್ತಿರ ಪಿಎಂ ಕುಸುಮ್ ಸಿ ಯೋಜನೆ ಸೋಲಾರ್ ಪ್ಲಾಂಟ್ ಅನುಷ್ಠಾನಗೊಳಿಸಲು ಲಿಂಕ್ ಲೈನ್ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಮೇ 21 ರಿಂದ 25ರವರೆಗೆ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೋರಿದ್ದಾರೆ. ಹಳೆ ಕಲ್ಲು ನಾಯಕನಹಳ್ಳಿ, ಸಂಕೋಡನಹಳ್ಳಿ, ಬೈರಾಂಬೂಧಿ, ಹಿರಿಯೂರು, ಚಿಕ್ಕೂರು, ಗೊಲ್ಲರಹಳ್ಳಿ, ಬಿಸಿಲೆಹಳ್ಳಿ, ಕಾಟಿಕೆರೆ, ಹೊಸ ಕಲ್ಲನಾಯಕನಹಳ್ಳಿ,ಕಾರಬೋರನ ಹಟ್ಟಿ, ಬೆಟ್ಟದಪುರ, ಹರಿಹರಪುರ, ಲೈಲಾಪುರ, ಕಾನೀಹಳ್ಳಿ, ಹೊಸಳ್ಳಿ, ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನುಡಿದಂತೆ ನಡೆದಿದ್ದೇನೆ: ಶಾಸಕ

ಬೇಲೂರು: ಕಳೆದ ಒಂದು ತಿಂಗಳ ಹಿಂದೆ ಬಂಡಿಲಕ್ಕನ ಕೊಪ್ಪಲು ಗ್ರಾಮದ ದೇವರ ಜಾತ್ರ ಮಹೋತ್ಸವಕ್ಕೆ ಆಗಮಿಸಿದ ಸಂದರ್ಭ ಗ್ರಾಮಸ್ಥರಿಗೆ ಕೊಟ್ಟ ಮಾತಿನಂತೆ ಗ್ರಾಮಕ್ಕೆ, ರಸ್ತೆ ಮತ್ತು ಪ್ರಯಾಣಿಕರ ತಂಗುದಾಣವನ್ನು ತಿಂಗಳೊಳಗೆ ಕೆಲಸ ಮಾಡಿಸಿ ಕೊಡುತ್ತೇನೆ ಎಂದಿದ್ದೆ, ಅದರಂತೆ ಭೂಮಿ ಪೂಜೆ ನೆರವೇರಿಸುತಿದ್ದೇನೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು. ತಾಲೂಕಿನ ಬಂಡಿಲಕ್ಕನ ಕೊಪ್ಪಲು ಗ್ರಾಮದಲ್ಲಿ ಸೋಮವಾರ ಗ್ರಾಮದ ಸಂಪರ್ಕ ರಸ್ತೆ ಹಾಗೂ ಹೈಟೆಕ್ ಮಾದರಿಯ ಪ್ರಯಾಣಿಕರ ತಂಗುದಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಪ್ರಮುಖವಾಗಿ ಬೇಕಿರುವುದು ಸಂಪರ್ಕ ರಸ್ತೆಗಳು. ಈ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಪ್ರಥಮವಾಗಿ ಆಧ್ಯತೆ ಮೇರೆಗೆ ಎಲ್ಲ ಗ್ರಾಮಗಳಿಗೂ ರಸ್ತೆ ಅಭಿವೃದ್ಧಿಗೆ ಒತ್ತು ಕೊಟ್ಟು ಕೆಲಸ ಮಾಡಿಸಲಾಗುತ್ತಿದೆ. ಈ ರಸ್ತೆಗಳಿಂದ ಜನರಿಗೆ, ವಾಹನಗಳಲ್ಲಿ ಓಡಾಡಲು, ರೈತರು ಸಾಮಾನು ಸಂರಂಜಾಮುಗಳನ್ನು ಕೊಂಡೋಯ್ಯಲು ಅನುಕೂಲವಾಗುತ್ತದೆ ಎಂಬುದನ್ನು ಅರಿತು ಕೆಲಸ ಮಾಡಿಸಲಾಗುತ್ತಿದೆ. ಜತೆಗೆ ಬಂಡಿಲಕ್ಕನ ಕೊಪ್ಪಲು ಗ್ರಾಮದಲ್ಲಿದ್ದ ಪ್ರಯಾಣಿಕರ ತಂದುದಾಣ ಸಂಪೂರ್ಣವಾಗಿ ಶೀತಿಲಾವಸ್ತೆ ತಲುಪಿತ್ತು. ಪ್ರಯಾಣಿಕರ ಅನುಕೂಲಕ್ಕಾಗಿ ರಸ್ತೆ ಹಾಗೂ ತಂಗುದಾಣಕ್ಕೆ ಒಟ್ಟಾರೆಯಾಗಿ 35 ಲಕ್ಷ ರೂ. ಗಳ ವೆಚ್ಚದ ಕಾಮಗಾರಿಗೆ ಚಾಲನೆ ನಿಡಲಾಗಿದೆ ಎಂದರು.



ಅರಸೀಕೆರೆ ನಗರದ ಪಿ.ಪಿ.ವೃತ್ತದಲ್ಲಿ ತಾಲೂಕಿನ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಸೋಮ ವಾರ ಹಮ್ಮಿಕೊಂಡಿದ್ದ ಎಚ್.ಡಿ.ದೇವೇಗೌಡರ 94ನೇ ಜನ್ಮದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಪಕ್ಷದ ಮುಖಂಡರು ಇದ್ದರು.

ಎತ್ತಿನಹೊಳೆ ಕಾಮಗಾರಿಗೆ ಅನುವು ಮಾಡಿಕೊಟ್ಟ ಎಚ್ಡಿಡಿ: ಗಂಗಾಧರ್

ಅರಸೀಕೆರೆ: ತಮ್ಮ ಅಧಿಕಾರವಧಿಯಲ್ಲಿ ದೇವೇಗೌಡರು ರೈತರ ಹಿತಾಸಕ್ತಿ, ಹಿಂದುಳಿದ ವರ್ಗ, ಮುಸ್ಲಿಮರಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ನೀಡಿದ್ದು, ಎತ್ತಿನಹೊಳೆ ನೀರಾವರಿಯ ಕಾಮಗಾರಿಗೆ ಅರಣ್ಯ ಇಲಾಖೆ ಒಡ್ಡಿದ್ದ ತಡೆಯನ್ನು ಪ್ರಸ್ತಾಪಿಸಿ, ಕಾಮಗಾರಿಗೆ ಅನುವು ಮಾಡಿಕೊಟ್ಟಿದ್ದಾರೆ. ಅದರ ಫಲವಾಗಿ ಇಂದು ಕಾಮಗಾರಿ ಪ್ರಗತಿಯಲ್ಲಿದೆ ಎಂದು ಜೆಡಿಎಸ್ ಮುಖಂಡ ಹೊಸೂರು ಗಂಗಾಧರ್ ಹೇಳಿದರು.

ನಗರದ ಪಿ.ಪಿ.ವೃತ್ತದಲ್ಲಿ ತಾಲೂಕಿನ ಜೆಡಿಎಸ್,ಬಿಜೆಪಿ ಮುಖಂಡರು ಹಮ್ಮಿಕೊಂಡಿದ್ದ ಎಚ್.ಡಿ.ದೇವೇಗೌಡರ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಕೆಂಪು ಕೋಟೆಯಲ್ಲಿ ತ್ರಿವಣ ಧ್ವಜವನ್ನು ಹಾರಿಸಿದ ಏಕೈಕ ಕನ್ನಡಿಗ ದೇವೇಗೌಡರು ಎಂದು ಹೇಳಿದರು. ಮಾಜಿ ಶಾಸಕ ಜಿ.ಎಸ್.ಪರಮೇಶ್ವರಪ್ಪ ಮಾತನಾಡಿ, ದೇವೇಗೌಡರಿಗೆ ದೇವೇಗೌಡರೇ ಸರಿಸಾಟಿ. ಇವರ ಕೊಡುಗೆ ನಾಡು, ಜಿಲ್ಲೆಗೆ ಅಪಾರವಾಗಿದೆ ಎಂದರು. ಬಿಜೆಪಿ ಮುಖಂಡ ಕೆವಿಎನ್ ಶಿವು ಮಾತನಾಡಿದರು. ಮುಖಂಡರಾದ ಶೇಖರಪ್ಪ, ವಕೀಲ ವಿವೇಕ್, ಜಿ.ಪಂ. ಮಾಜಿ ಸದಸ್ಯ ಅಶೋಕ್, ಕೆಂಕರೆ ಕೇಶವಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷರಾದ ಬಿ.ಎನ್.ಗಂಗಾಧರ್, ಗಿರೀಶ್, ಬಿ.ಜಿ.ನಿರಂಜನ್, ಲಾಳನಕೆರೆ ಯೋಗೀಶ್, ಸತೀಶ್, ರಮೇಶ್, ಕುಡುಕುಂದಿ ಕುಮಾರ್, ನಗರಸಭೆ ಮಾಜಿ ಸದಸ್ಯ ಹರ್ಷವರ್ಧನ್, ಕರವೇ ನಗರ ಘಟಕದ ಅಧ್ಯಕ್ಷ ಸಂತೋಷ್ ಇದ್ದರು.



ಬೇಲೂರು ತಾಲೂಕಿನ ಬಂಡಿಲಕ್ಕನ ಕೊಪ್ಪಲು ಗ್ರಾಮದಲ್ಲಿ ಸೋಮವಾರ ಗ್ರಾಮದ ಸಂಪರ್ಕ ರಸ್ತೆ ಹಾಗೂ ಹೈಟೆಕ್ ಮಾದರಿಯ ಪ್ರಯಾಣಿಕರ ತಂಗುದಾಣಕ್ಕೆ ಭೂಮಿ ಪೂಜೆಯನ್ನು ಶಾಸಕ ಎಚ್.ಕೆ.ಸುರೇಶ್ ನೆರವೇರಿಸಿದರು.

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲತಾಕುಮಾರಿ ನಿರ್ದೇಶನ

ಪೋಕ್ಸೋ ಪ್ರಕರಣ ತಡೆಯಿರಿ

ಹಾಸನ: ಆರೋಗ್ಯವಂತ ಮತ್ತು ಸುರಕ್ಷಿತ ಸಮಾಜ ನಿರ್ಮಾಣಕ್ಕಾಗಿ ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿ, ಸಂಕಷ್ಟಕ್ಕೆ ಸಿಲುಕಿದ ಹೆಣ್ಣು ಮಕ್ಕಳು 181 ಮಹಿಳಾ ಸಹಾಯವಾಣಿಗೆ ಕರೆ ಮಾಡಿದಾಗ ನಿಜವಾಗಿ ಅವರಿಗೆ ಸಹಾಯ ದೊರಕಬೇಕು ಈ ನಿಟ್ಟಿನಲ್ಲಿ ಸಹಾಯವಾಣಿ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಯಾವರೀತಿ ಸ್ಪಂದಿಸಿ ಕೆಲಸ ಮಾಡಬೇಕು ಎಂದು ತರಬೇತಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಕ್ತಿ ಸದನಕ್ಕೆ ದಾಖಲಾದ ಮಹಿಳೆಯರ ಆರೋಗ್ಯ ತಪಾಸಣೆಗೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಾನವ ಹಕ್ಕು ಮತ್ತು ಮಹಿಳೆಯರ ಹಕ್ಕುಗಳು ಉಲ್ಲಂಘನೆ ಆಗದಂತೆ ನಿಗಾ ವಹಿಸಿ ಅಸುರಕ್ಷಿತ ಹೆಣ್ಣು ಮಕ್ಕಳ ರಕ್ಷಣೆಗೆ ಒತ್ತು ನೀಡಲು ಅಧಿಕಾರಿಗಳಿಗೆ ಸೂಚಿಸಿದರು. ನಿರಾಶ್ರಿತರು ರಸ್ತೆ ಬದಿಯಲ್ಲಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಫ್ಲೈ ಓವರ್ ಗಳಲ್ಲಿ, ಪಾರ್ಕ್ ಗಳಲ್ಲಿ ಮಲಗಬಾರದು, ಬೀದಿಯಲ್ಲಿ ಮಾನಸಿಕ ಅಸ್ವಸ್ಥ ಹೆಣ್ಣು ಮಕ್ಕಳು ಓಡಾಡುತ್ತಿರುವವರನ್ನು ಗುರುತಿಸಿ ನಿರಾಶ್ರಿತರ ಕೇಂದ್ರದಲ್ಲಿ ತಂಗಲು ಅವಕಾಶ ಕಲ್ಪಿಸಲು ಅಧಿಕಾರಿ ಗಳಿಗೆ ಸೂಚಿಸಿದರು. ಯಾವುದೇ ಮಗು ಎಲ್ಲೆ ಸಿಕ್ಕರೂ ನೇರವಾಗಿ ಹತ್ತಿರದ ಪೊಲೀಸ್ ಠಾಣೆಗೆ ನೀಡಬೇಕು ಎಂದು ತಿಳಿಸಿದರು.

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ ಫಲಾನುಭವಿಗಳಿಗೆ ಸವಲತ್ತುಗಳನ್ನು ಒದಗಿಸುವಂತೆ ಸೂಚಿಸಿದ ಅವರು ಅಗತ್ಯವಿರುವ ಕಡೆಗಳಲ್ಲಿ ಶಿಶುಪಾಲನಾ ಕೇಂದ್ರ ತೆರೆಯಲು ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಹಿಳೆಯರು ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಭಾಗದಲ್ಲಿ ಕಾವಲು ಸಮಿತಿಗಳು ಪರಿಣಾಮಕಾರಿ ಯಾಗಿ ಕೆಲಸ ಮಾಡಿದರೆ ಬಾಲ್ಯ ವಿವಾಹ ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ನೆರವಾಗುತ್ತದೆ ಈ ನಿಟ್ಟಿನಲ್ಲಿ ಅಧಿಕಾರಿಗಳು ನಿಗಾ ವಹಿಸಬೇಕು. ವಿದ್ಯಾಸಂಸ್ಥೆಗಳಲ್ಲಿ ಮೂರು ವರ್ಷಗಳಿಂದ ಮಹಿಳಾ ದೌರ್ಜನ್ಯ ತಡೆಗೆ ಆಂತರಿಕಾ ದೂರು ನಿವಾರಣಾ ಸಮಿತಿ ರಚಿಸದೆ ಇರುವವರಿಗೆ 50 ಸಾವಿರ ದಂಡ ವಿಧಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಡಿ.ವೈ.ಎಸ್.ಪಿ.ಗಂಗಾಧರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಧರಣಿ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅನಿಲ್, ಸಮಿತಿ ಸದಸ್ಯರುಗಳಾದ ರೂಪ ಹಾಸನ್, ಕೆ.ಟಿ.ಜಯಶ್ರೀ ಮತ್ತಿತರರಿದ್ದರು.



ಸ್ವಾವಲಂಬಿ ಜೀವನಕ್ಕೆ ತರಬೇತಿ ನೀಡಿ

ವರದಕ್ಷಿಣೆ, ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆಯರಿಗೆ ಸಹಾಯ ಒದಗಿಸಲು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ತೆರೆಯಲಾದ ಸಾಂತ್ವನ ಕೇಂದ್ರದಲ್ಲಿ ಆಶ್ರಯ ಒದಗಿಸಿ ಅವರು ಸ್ವಾವಲಂಬಿಯಾಗಿ ಜೀವನ ನಡೆಸಲು ತರಬೇತಿ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲತಾ ಕುಮಾರಿ ಸೂಚಿಸಿದರು.

> ಹೆಣ್ಣು ಮಕ್ಕಳು ಧೈರ್ಯದಿಂದ ದುಡಿದು ಜೀವನ ನಡೆಸಲು ಮುಂದಾಗಬೇಕು ಎಂದ ಅವರು, ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು. ಸಂಕಷ್ಟಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸುವುದರ ಜೊತೆಗೆ ಕೌಶಲ್ಯ ತರಬೇತಿ ನೀಡಿ ಉತ್ತೇಜನ ನೀಡುವುದರ ಮೂಲಕ ಸ್ವಂತ ಕೆಲಸ ಮಾಡಲು ಪ್ರೇರಣೆ ನೀಡಬೇಕು.
>
> ■ **ಲತಾ ಕುಮಾರಿ, ಜಿಲ್ಲಾಧಿಕಾರಿ**

ಗೋ ಅಕ್ರಮ ಸಾಗಣೆ ತಡೆಗೆ ವಿಎಚ್‌ಪಿ ಮನವಿ

ಬೇಲೂರು: ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವಂಶಗಳ ಅಕ್ರಮ ಸಾಗಾಣಿಕೆಹಾಗೂಅಕ್ರಮವಧೆತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ವಿಶ್ವ ಹಿಂದೂ ಪರಿಷದ್ ಮತ್ತು ಭಜರಂಗದಳ ವತಿಯಿಂದ ಬೇಲೂರು ಪೊಲೀಸ್ ಠಾಣೆಯ ಮುಖ್ಯ ಠಾಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ವಿಶ್ವ ಹಿಂದು ಪರಿಷತ್ ಅಧ್ಯಕ್ಷ ಭರತ್ ಬಿರಡಹಳ್ಳಿ ಹಾಗೂ ನಾಗೇಶ್ (ಗುಂಡ) ಮಾತನಾಡಿ, ಬಕ್ರೀದ್ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕಾನೂನು ಬಾಹಿರವಾಗಿ ಗೋವಂಶ ಸಾಗಾಟ, ಅಕ್ರಮ ಕಸಾಯಿಖಾನೆ ಗಳಲ್ಲಿ ವಧೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕುರ್ಬಾನಿ ನಡೆಯುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿ ಮಾಡಿದರು.

ತಮ್ಮ ಠಾಣಾ ವ್ಯಾಪ್ತಿಯಲ್ಲಿರುವ ಅಕ್ರಮ ಕಸಾಯಿ ಖಾನೆಗಳನ್ನು ಗುರುತಿಸಿ ದಾಳಿ ನಡೆಸಬೇಕು. ಜಾನುವಾರು ವಧೆ ನಡೆದ ಮನೆ, ಕಟ್ಟಡ ಹಾಗೂ ಖಾಲಿ ಜಾಗಗಳನ್ನು ಜಪ್ತಿ ಮಾಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಬೇಕು ಎಂದು ಒತ್ತಾಯಿಸಿದರು. ಅಕ್ರಮ ವಧೆ ಹಾಗೂ ಸಾಗಾಟದಲ್ಲಿ ತೊಡಗಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ದಂಡ ಹಾಗೂ ಶಿಕ್ಷೆ ವಿಧಿಸ ಬೇಕೆಂದು ತಿಳಿಸಿದರು.

ಬಕ್ರೀದ್ ಹಿನ್ನೆಲೆ 24 ಗಂಟೆಗಳ ಗಸ್ತು ವ್ಯವಸ್ಥೆ ಕಲ್ಪಿಸಿ ವಾಹನ ತಪಾಸಣೆ ತೀವ್ರಗೊಳಿಸಬೇಕು. ಖಾಸಗಿ ವಾಹನಗಳು, ಕ್ಲೋಸ್ಡ್ ಕಂಟೈನರ್‌ಗಳು, ಹಾಲಿನ ಟ್ಯಾಂಕರ್‌ಗಳು ಸೇರಿದಂತೆ ವಿವಿಧ ವಾಹನಗಳಲ್ಲಿ ಅಕ್ರಮ ಸಾಗಾಟ ನಡೆಯುವ ಸಾಧ್ಯತೆ ಇರುವುದರಿಂದ ಕಟ್ಟುನಿಟ್ಟಿನ ನಿಗಾ ಇರಿಸಬೇಕೆಂದು ಮನವಿ ಮಾಡಲಾಗಿದೆ. ಈಗಾಗಲೇ ಅಕ್ರಮ ಗೋಸಾಗಾಟ ಹಾಗೂ ವಧೆ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾದ ಆರೋಪಿಗಳ ಮೇಲೂ ವಿಶೇಷ ನಿಗಾ ವಹಿಸಿ ಎಚ್ಚರಿಕೆ ನೀಡಬೇಕು ಎಂದರು.

ಈ ವೇಳೆ ಸುಮನ್ ನವಿಲಹಳ್ಳಿ ಇತರರು ಇದ್ದರು. ಈ ಸಂದರ್ಭದಲ್ಲಿ ಪಿಐ ರೇವಣ್ಣ ಹಾಗು ತಾಲೂಕು ಕಚೇರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಪೊಲೀಸ್ ಇಲಾಖೆ ಸಹಕಾರಕ್ಕೆ ಸಿದ್ಧ

ಹಿಂದು ಪೂಜನೀಯವಾಗಿರುವ ಗೋವಂಶ ರಕ್ಷಣೆಗೆ ಸಂವಿಧಾನದ ಚೌಕಟ್ಟಿನಲ್ಲಿ ಬದ್ಧರಾಗಿದ್ದು, ಅಕ್ರಮ ಗೋಸಾಗಾಟ ಹಾಗೂ ವಧೆ ತಡೆಯಲು ಪೊಲೀಸ್ ಇಲಾಖೆಗೆ ಅಗತ್ಯ ಸಹಕಾರ ನೀಡಲು ಸಿದ್ಧವಿದೆ ಎಂದು ವಿಹಿಂಪ ಹಾಗೂ ಭಜರಂಗದಳ ಮುಖಂಡರು ತಿಳಿಸಿದ್ದಾರೆ.

ಮಳೆಗೆ ನೆಲಕ್ಕುರುಳಿದ ಮರಗಳು

ಬೇಲೂರು: ಗುಡುಗು ಸಿಡಿಲು ಸಹಿತ ಬಿರುಗಾಳಿ ಮಳೆಯ ಅಬ್ಬರಕ್ಕೆ ತಾಲೂಕಿನ ರಾಜನಶಿರಿಯೂರು ಗ್ರಾಮದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಸಾಕಷ್ಟು ವಿದ್ಯುತ್ ಕಂಬಗಳು, ಮರಗಳು ನೆಲಕ್ಕುರುಳಿ ಬೆಳೆ ಹಾನಿಗೆ ಕಾರಣವಾಗಿದ್ದ ಹಿನ್ನೆಲೆಯಲ್ಲಿ, ಸೋಮವಾರ ಶಾಸಕ ಎಚ್.ಕೆ.ಸುರೇಶ್, ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭ ಸೆಸ್ಕ್ ಮತ್ತು ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಸಾರ್ವಜನಿಕರಿಂದ ಎಲ್ಲೆಲ್ಲಿ ಮಳೆಯಿಂದ ಹಾನಿಯಾಗಿದೆ ಎಂಬುದರ ಬಗ್ಗೆ ಮಾಹಿತಿ ಪಡೆದರು ಮತ್ತು ಆದಷ್ಟು ಬೇಗ ವಿದ್ಯುತ್ ಕಂಬಗಳನ್ನು ಹಾಕಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ವಿದ್ಯುತ್ ಸರಭರಾಜು ಮಾಡಬೇಕು. ವಿದ್ಯುತ್ ಕಂಬ, ಮರಗಳು ಹಾಗೂ ಮಳೆಯಿಂದ ಎಲ್ಲೆಲ್ಲಿ ಎಷ್ಟೆಷ್ಟು ಬೆಳೆ ಹಾನಿ ಸಂಭವಿಸಿದೆ ಎಂಬುದರ ಸಂಪೂರ್ಣ ಪಟ್ಟಿ ಮಾಡಿ, ರೈತರಿಗೆ ಸಕಾಲದಲ್ಲಿ ಪರಿಹಾರ ಕೊಡಿಸುವುದಕ್ಕೆ ಸಂಬಂಧಿಸಿದ ಅಧಿಕಾರಿಗಳು ಕ್ರಮಕ್ಕೆ ಮುಂದಾಗುವ ಮೂಲಕ, ಮುಂದಿನ ದಿನಗಳಲ್ಲಿ ಇಂತಹ ಅವಘಡಕ್ಕೆ ಅವಕಾಶವಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಸೂಚಿಸಿದರು. ಶಾಸಕ ಎಚ್.ಕೆ.ಸುರೇಶ್ ಮಾತನಾಡಿ, ಶನಿವಾರ ಸುರಿದ ಅಕಾಲಿಕ ಮಳೆಯಿಂದ ತಾಲೂಕಿನ ಸಾಕಷ್ಟು ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು, ಮರಗಳು ಮತ್ತು ಮನೆಗಳ ಮೇಲ್ಛಾವಣಿ ಹಾರಿ ಬಿದ್ದಿರುವ ಬಗ್ಗೆ ಮಾಹಿತಿ ಪಡೆದಿರುವುದಾಗಿ ತಿಳಿಸಿದರು.

ದರ ಪಾತಾಳಕ್ಕಿಳಿದರೂ ರೈತರಿಂದ ಹೊಗೆಸೊಪ್ಪು ನಾಟಿ!

ಕೊಣನೂರು: ಕೆಲ ದಿನಗಳಿಂದ ಹದಮಳೆಯು ಸುರಿಯತ್ತಿರುವುದರಿಂದ ದರ ಕುಸಿತದ ನಡುವೆಯೂ ಹೊಗೆಸೊಪ್ಪು ನಾಟಿ ಕಾರ್ಯ ಆರಂಭವಾಗಿದೆ.

ಅರಕಲಗೂಡು ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆ ತಂಬಾಕಿನ ಬೆಲೆ ಪಾತಾಳಕಿದರೂ ಛಲ ಬಿಡದ ರೈತ ಈ ವರ್ಷದ ಹೊಗೆಸೊಪ್ಪು ಕೃಷಿಗಾಗಿ ನಾಟಿಯು ಉತ್ಸಾಹದಿಂದ ಸಾಗಿರುವುದು ವಿಶೇಷ ವೆನಿಸಿದೆ.ಕಳೆದ ಒಂದು ವಾರದಿಂದ ಹೋಬಳಿಯ ವ್ಯಾಪ್ತಿಯಲ್ಲಿ ಹದಮಳೆಯು ಸುರಿಯುತ್ತಿರುವುದರಿಂದ ಹೆಚ್ಚು ತಂಬಾಕು ಉತ್ಪಾದಿಸುವ ಕೊಣನೂರು ಮತ್ತು ರಾಮನಾಥಪುರ ಮಳೆಯಾಶ್ರಿತ ಜಮೀನಿನ ಹೊಗೆಸೊಪ್ಪು ಬೆಳೆಗಾರರು ನಾಟಿಯಲ್ಲಿ ನಿರತರಾಗಿದ್ದಾರೆ.



ನೀರಾವರಿ ವ್ಯವಸ್ಥೆಯಿರುವ ಬೆಳೆಗಾರರು ಈಗಾಗಲೇ ಹೊಗೆಸೊಪ್ಪು ನಾಟಿ ಮುಗಿಸಿ ಸಸಿಗಳ ಆರೈಕೆಯಲ್ಲಿ ನಿರತರಾಗಿದ್ದಾರೆ. ಹದಮಳೆಗೆ ಕಾಯುತ್ತಿದ್ದ ಹೊಲ ಜಮೀನಿನಲ್ಲಿ ನಾಟಿಯು ಕಳೆದೊಂದು ವಾರದಿಂದ ಭರದಿಂದ ಸಾಗಿದೆ.

ತಂಬಾಕು ಖರೀದಿಯ ದರವು ಗಣನೀಯವಾಗಿ ಇಳಿಕೆಯಾಗಿದ್ದರೂ ಲೆಕ್ಕಿಸದ ಬೆಳೆಗಾರರು ಪ್ರತಿ ವರ್ಷದಂತೆ ಕಳೆದೆರಡು ತಿಂಗಳುಗಳಿಂದ ಬೆಳೆಸಿದ್ದ ಸಸಿಗಳನ್ನು ನಾಟಿ ಮಾಡುವಲ್ಲಿ ಮಗ್ನರಾಗಿದ್ದಾರೆ. ರಾಮನಾಥಪುರದ ತಂಬಾಕು ಹರಾಜು ಮಾರುಕಟ್ಟೆಯಲ್ಲಿ 2024–25ನೇ ಸಾಲಿನ ತಂಬಾಕು ಖರೀದಿಯು ಪ್ರಾರಂಭದ ದಿನಗಳಲ್ಲಿ ಪ್ರತಿ ಉತ್ಕೃಷ್ಟ ರ್ಗೆಯ ಹೊಗೆಸೊಪ್ಪು ಪ್ರತಿ ಕೆ ಜಿಗೆ ಗರಿಷ್ಠ 322 ರೂ. ದೊರಕಿತ್ತು. ಕೇಂದ್ರ ರ್ಕಾರವು ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕವನ್ನು ವಿಧಿಸಿದ ನಂತರ ದಿಢೀರ್ ಇಳಿಕೆ ಯಾಗಿ 270 ರೂ. ತಲುಪಿತು. ತಂಬಾಕು ಮಂಡಳಿಯು ನೀಡಿರುವ ತಂಬಾಕು ಬೆಳೆಯ ಪರವಾನಗಿಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ತಂಬಾಕು ಬೆಳೆಯಲು ಮುಂದಾಗಿದ್ದೇವೆ ಎನ್ನುತ್ತಿದ್ದಾರೆ ಬೆಳೆಗಾರರು.



ಮಳೆ ಅಬ್ಬರಕ್ಕೆ ಬೇಲೂರು ತಾಲೂಕಿನ ರಾಜನಶಿರಿಯೂರು ಗ್ರಾಮದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್, ಮರಗಳು ನೆಲಕ್ಕುರುಳಿ ಬೆಳೆ ಹಾನಿಗೆ ಕಾರಣವಾಗಿದ್ದ ಹಿನ್ನೆಲೆ ಸೋಮವಾರ ಶಾಸಕ ಎಚ್.ಕೆ.ಸುರೇಶ್, ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮಕ್ಕಳಲ್ಲಿ ಮಾನವೀಯ ಮೌಲ್ಯ ಬಿತ್ತಿರಿ: ವೀರಭದ್ರಪ್ಪ

ಕೊಣನೂರು: ಮಕ್ಕಳಿಗೆ ಶಿಕ್ಷಣ ನೀಡುವುದರೊಂದಿಗೆಮಾನವೀಯಮೌಲ್ಯವನ್ನೂ ಅವರಲ್ಲಿ ಬಿತುವುದು ಅತ್ಯವಶ್ಯಕ ಎಂದು ನಿವೃತ್ತ ಶಿಕ್ಷಕ ಬಿ.ಪಿ.ವೀರಭದ್ರಪ್ಪ ನುಡಿದರು.

ಸಮೀಪದ ರಾಮನಾಥಪುರ ಹೋಬಳಿಯ ಕೇರಳಾಪುರದ ಶ್ರೀ ವಿದ್ಯಾಗಣಪತಿ ಪ್ರೌಢ ಶಾಲೆಯ 1984–85ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಜಪ್ಪದಕಟ್ಟೆಯ ಜಪ್ಪೇಶ್ವರ ಭವನದಲ್ಲಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಶಿಕ್ಷಣದಿಂದ ಮಾತ್ರ ಸುಧಾರಣೆ ಸಾಧ್ಯ. ಅಂತೆಯೇ ಶಿಕ್ಷೆ ಇಲ್ಲದ ಶಿಕ್ಷಣಕ್ಕೆ ಅರ್ಥವಿಲ್ಲ. ಹೀಗಾಗಿ ಕಲಿಕಾ ಹಂತದಲ್ಲಿ ಮಕ್ಕಳಿಗೆ ಶಿಸ್ತು, ಸಂಯಮ ಮೂಡಿಸಿ ತಿದ್ದಿ ಬುದ್ಧಿ ಕಲಿಸುವುದು ಶಿಕ್ಷಕರ ಕರ್ತವ್ಯವಾಗಿದೆ ಎಂದರು.

ಮಕ್ಕಳಲ್ಲಿ ಏನಾದರೂ ವ್ಯತ್ಯಾಸವಾದರೆ ಅದಕ್ಕೆ ಪಾಲಕರೇ ಹೊಣೆಯೇ ಹೊರತು ಶಿಕ್ಷಕರಲ್ಲ. ಮಕ್ಕಳನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಶಿಕ್ಷಕರು ಮಾರ್ಗದ ರ್ಶನ ನೀಡಬಹುದು. ಸಮಾಜದಲ್ಲಿ ಈಗ ಮಾನವೀಯತೆ ಎಂಬುದು ದೂರವಾಗುತ್ತಲಿದೆಂದರು. ಓದಿನ ಜತೆಗೆ ಮಾನವೀಯತೆ ಕಲಿಸುವುದೂ ಶಿಕ್ಷಣ ಮತ್ತು ತರಬೇತಿಯ ಭಾಗವೇ ಆಗಿದೆ. ಸಮಾಜದಲ್ಲಿ ಶಿಕ್ಷಕರಿಗೆ ಇಂದಿಗೂ ಗೌರವಯುತ ಸ್ಥಾನಮಾನವಿದೆ. ಇದನ್ನು ಮನಗಂಡು ಎಲ್ಲರನ್ನೂ ಒಗ್ಗೂಡಿಸಿ ಗುರುವಂದನೆ ಸಲ್ಲಿಸುತ್ತಿರುವ ಹಳೆಯ ವಿದ್ಯಾರ್ಥಿಗಳ ಕಳಕಳಿ ಮಾದರಿಯಾಗಿದೆ ಎಂದರು.



ನಿವೃತ್ತ ಶಿಕ್ಷಕರಾದ ವೆಂಕಟರಾಮಯ್ಯ, ವೀರಭದ್ರಪ್ಪ, ಕೆ.ರಾಜಶೇಖರಯ್ಯ, ಪುಟ್ಟಲಿಂಗಯ್ಯ ಹಾಗೂ ದಿವಂಗತ ಶಿಕ್ಷಕರ ಪತ್ನಿಯರಿಗೆ ಗುರುವಂದನೆ ಸಲ್ಲಿಸಲಾಯಿತು. ಜಪ್ಪೇಶ್ವರ ಸುಕ್ಷೇತ್ರದ ಪುರೋಹಿತ ಮುಕುಂದ ಅಧ್ಯಕ್ಷತೆ ವಹಿಸಿದ್ದರು.

ರೋಗಿಗಳಿಗೆ ಹಣ್ಣು ವಿತರಣೆ

ಚನ್ನರಾಯಪಟ್ಟಣ: ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡ ಅವರ 94ನೇ ಹುಟ್ಟುಹಬ್ಬದ ಅಂಗವಾಗಿ ಶಾಸಕ ಸಿ.ಎನ್.ಬಾಲಕೃಷ್ಣ ಹಾಗೂ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು 40 ಅಡಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ಹಂಚಲಾಯಿತು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಡಯಾಲಿಸಿಸ್ ಕೇಂದ್ರಕ್ಕೆ ರೋಗಿಗಳ ಮನರಂಜನೆಗಾಗಿ ಟಿವಿಯನ್ನು ಕೊಡುಗೆಯಾಗಿ ನೀಡಿ, ಇಲ್ಲಿನ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಮತ್ತು ಬ್ರೆಡ್ ವಿತರಣೆ ಮಾಡಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಮಾಜಿ ಪ್ರಧಾನಿಗಳಾದ ಎಚ್.ಡಿ.ದೇವೇಗೌಡರ ಸಾರ್ವಜನಿಕ ಬದುಕು ರಾಜಕಾರಣವನ್ನೂ ಮೀರಿದ ಕ್ಷಮತೆ, ದೂರದರ್ಶಿತ್ವ, ವಿನಮ್ರತೆ, ರೈತಪರ ಚಿಂತನೆಯ ಪಯಣ ವಾಗಿದೆ ಎಂದರು. ದೇವೇಗೌಡರುನಮ್ಮ ರಾಜ್ಯದಹೆಮ್ಮೆಯಮಣ್ಣಿನಮಗನಾಗಿದ್ದಾರೆ. ಅವರು ರೈತನ ಬದುಕಿನ ಕಷ್ಟಗಳು ಚೆನ್ನಾಗಿ ಅರಿತವರಾಗಿದ್ದರಿಂದ, ಬಡ ರೈತರು, ಸೌಲಭ್ಯ ವಂಚಿತರು ಹಾಗೂ ಸಮಾಜದ ದುರ್ಬಲ ವರ್ಗಗಳ ಒಳಿತಿಗಾಗಿ ತಾವೊಬ್ಬ ಹೋರಾಟ ಗಾರನಾಗಿ ಗುರುತಿಸಿಕೊಂಡಿದ್ದಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕೆಳಸ್ತರದಿಂದ ಆರಂಭಿಸಿದ ಇವರ ಹೋರಾಟದ ಬದುಕು ರಾಜಕೀಯ ರಂಗದಲ್ಲಿ ಗಮನ ಸೆಳೆಯಿತು ಎಂದು ತಿಳಿಸಿದರು.

ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೇಶದ ಗ್ರಾಮೀಣ ಭಾಗ ಮತ್ತು ಕೃಷಿ ವಲಯಕ್ಕೆ ಬಜೆಟ್‌ನಲ್ಲಿ ಸಿಂಹಪಾಲು ನೀಡಿ ಆರ್ಥಿಕತೆ ಗಟ್ಟಿಗೊಳಿಸಿದರು. ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಗೆ ಪ್ರಸ್ತಾಪ ಮಾಡಿದ ಮೊದಲ ಪ್ರಧಾನಿ ಎನ್ನುವ ಹಿರಿಮೆ ಅವರದ್ದು. ಕೃಷಿ, ನೀರಾವರಿ ಸೇರಿದಂತೆ ಯಾವುದೇ ವಿಷಯದ ಬಗ್ಗೆ ಅವರು ಮಾತನಾಡುತ್ತಾರೆಂದರೆ ಇಡೀ ದೇಶವೇ ಅದನ್ನು ಕಿವಿಗೊಟ್ಟು ಆಲಿಸುತ್ತದೆ ಎಂದರು.

» 40 ಅಡಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ಹಂಚಿಕೆ

ಹೊಸ ದಿಗಂತ
ಗರಿಷ್ಠ 31° | ಕನಿಷ್ಠ 23°
ಬುಧವಾರ 20 ಮೇ 2026

ತುಮಕೂರು



ಸಾಂಸ್ಕೃತಿಕ ಬೊಂಬೆಗಳ ಮೆರುಗು ತುಮಕೂರಿನಲ್ಲಿ ನಡೆದ ಕಾಂಗ್ರೆಸ್ ಸರ್ಕಾರದ ಸಾಧನಾ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಆಯೋಜಿಸಿದ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ವಿವಿಧ ಜಾನಪದ ಸಂಸ್ಕೃತಿ ಬೀರುವ ಬೊಂಬೆಗಳ ಪ್ರದರ್ಶನ ವೀಕ್ಷಕರಿಗೆ ವಿಶೇಷ ಮೆರುಗು ನೀಡಿತು.

ಕಿರುಸುದ್ದಿ

ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಗೆ ಅಧಿಕ ಮಾಸ ಪೂಜೆ

ಕೊಡಿಗೇನಹಳ್ಳಿ: ಅಧಿಕ ಮಾಸದ ಅಂಗವಾಗಿ ಗ್ರಾಮದ ದೇವರ ತೋಪಿನಲ್ಲಿ ನೆಲೆಸಿರುವ ಸುಪ್ರಸಿದ್ಧ ಪುರಾತನ ದೇವಾಲಯವಾದ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದಲ್ಲಿ ಅಧಿಕಮಾಸ ಅಂಗವಾಗಿ ಮಂಗಳವಾರ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಸ್ವಾಮಿಗೆ ಬೆಳಿಗ್ಗೆ ಕುಂಕುಮಾರ್ಚನೆ ಪಂಚಾಮೃತ ಅಭಿಷೇಕ ನಾಗವಲ್ಲಿ ಸೇವೆ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಸ್ತೋತ್ರ ಪಾರಾಯಣ, ಶ್ರೀ



ಲಕ್ಷ್ಮಿ ಅಮ್ಮನವರ ಶ್ರೀಚಕ್ರಕ್ಕೆ ಪ್ರಧಾನ ಅರ್ಚಕ ಮುರುಳಿ ಶರ್ಮ ಸುಮಂಗಲೆಯರಿಂದ ಕುಂಕುಮಾರ್ಚನೆ ನೆರವೇರಿಸಿ ಮಾತನಾಡಿ ಅಧಿಕಮಾಸದಲ್ಲಿ ಮಾಡುವ ಪೂಜೆ ಅಧಿಕ ಫಲ ನೀಡುವುದಾಗಿ ತಿಳಿಸಿದರು. ವಿಶೇಷ ಅಲಂಕಾರದಲ್ಲಿ ಸ್ವಾಮಿ ಕಂಗೊಳಿಸುತ್ತಿದ್ದರು. ಭಕ್ತಾದಿಗಳಾದ ಪದ್ಮಾವತಿ ವರಲಕ್ಷ್ಮಿ ಚಿನ್ಮಯಿ ಸಾಯಿ ತನ್ಮಯಿ ಸಾಯಿ ಮುಂತಾದವರು ಸ್ವಾಮಿಯ ದರ್ಶನ ಪಡೆದು ಕಣ್ತುಂಬಿಕೊಂಡರು ನಂತರ ತೀರ್ಥ ಪ್ರಸಾದ ಸ್ವೀಕರಿಸಿ ಪುನೀತರಾದರು.

ಮೈಸೂರು-ಧಾರವಾಡ ವಿವಿಗಳಿಗೆ ಚಾಂಪಿಯನ್ ಶಿಪ್

ತುಮಕೂರು: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ರಾಜ್ಯಮಟ್ಟದ ಮಾಧ್ಯಮ ಹಬ್ಬ ಇಂಪ್ರೆಶನ್ 2026 ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು. ಈ ಪ್ರತಿಷ್ಠಿತ ಮಾಧ್ಯಮ ಹಬ್ಬದ ಸಮಗ್ರ ಚಾಂಪಿಯನ್ ಶಿಪ್ ಅನ್ನು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಜಂಟಿಯಾಗಿ ತಮ್ಮ ಮುಡಿಗೇರಿಸಿಕೊಂಡಿವೆ. ರನ್ನರ್ ಆಗಿ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಶ್ವವಿದ್ಯಾನಿಲಯ ಹೊರಹೊಮ್ಮಿದೆ. ವಿಜೇತ ತಂಡಗಳಿಗೆ ಚಾಂಪಿಯನ್ ಟ್ರೋಫಿ ವಿತರಿಸಿ ಮಾತನಾಡಿದ ಬೆಂಗಳೂರಿನ ಇನ್ಫೋಸಿಸ್ ಲಿಮಿಟೆಡ್‌ನ ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಇಂಡಿಯಾ ಸರ್ಕಾರಿ ಪಾಲುದಾರಿಕೆಗಳ ಸಹ ಉಪಾಧ್ಯಕ್ಷರು ಹಾಗೂ ಮುಖ್ಯಸ್ಥರಾದ ಸಂತೋಷ್ ಅನಂತಪುರ ಅವರು ನಾವು ನಮ್ಮನ್ನು ಈ ಜಗತ್ತಿಗೆ ಎಷ್ಟರ ಮಟ್ಟಿಗೆ ತೊಡಗಿಸಿಕೊಂಡಿದ್ದೇವೆ ಎಂಬುದು ಅತ್ಯಂತ ಪ್ರಮುಖವಾದದ್ದು ಎಂದು ನುಡಿದರು. ತುಮಕೂರು ವಿವಿ ಕ್ಯಾಂಪಸ್ ಪತ್ರಿಕೆಯಾದ ಕಲ್ಪತರು ಟೈಮ್ಸ್ ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಹಿರಿಯ ಪತ್ರಕರ್ತರಾದ ಎಸ್. ನಾಗಣ್ಣ ಅವರು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಚಲನ ಶಕ್ತಿ, ಕಲ್ಪನಾ ಶಕ್ತಿ ಹಾಗೂ ಅಂತಃಕರಣ ಅತ್ಯಂತ ಮುಖ್ಯವಾಗಿದ್ದು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ಕಾರಣಕ್ಕೂ ಹಿಂಜರಿಕೆಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಾರದು ಎಂದರು. ಪರೀಕ್ಷಾ ಕುಲ ಸಚಿವರಾದ ಪ್ರೊ. ಹೆಚ್. ಎಸ್. ಮೋಹನ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.ಪ. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ. ಸಿಬಂತಿ ಪದ್ಮನಾಭ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಷ್ಣುಧರನ್ ನಿರೂಪಿಸಿದರೆ, ಡಾ. ಪೃಥ್ವಿರಾಜ್ ಟಿ. ವಂದಿಸಿದರು.ರಾಜ್ಯದ ವಿವಿಧ ಭಾಗಗಳ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಮಾಧ್ಯಮ ಹಬ್ಬದಲ್ಲಿ ಭಾಗವಹಿಸಿ ಅರ್ಥಪೂರ್ಣಗೊಳಿಸಿದರು.

ಕಳವು ಆರೋಪಿಗಳ ಬಂಧನ

ಕುಣಿಗಲ್: ಮನೆಯ ಬೀಗ ಮುರಿದು ಚಿನ್ನಾಭರಣಗಳನ್ನ ಕದ್ದು ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಕುಣಿಗಲ್ ಪೊಲೀಸರು ಯಶಸ್ವಿಯಾಗಿದ್ದಾರೆ. ಸೈಯದ್ ಅಹಮದ್ ಕೋಲಾರ ಜಿಲ್ಲೆ, ಬಂಗಾರಪೇಟೆ, ಮತ್ತು ತನ್ವೀರ್ ಪಾಷ ಬೆಂಗಳೂರು, ಬಂಧಿತ ಆರೋಪಿಗಳಾಗಿದ್ದಾರೆ. ಇವರು ಕಳೆದ ತಿಂಗಳು ತಾಲೂಕಿನ ಕೊತ್ತಗೆರೆ ಹೋಬಳಿ ಸಿಂಗೋನಹಳ್ಳಿ ಗ್ರಾಮದ ಮನೆಯೊಂದರ ಬೀಗ ಮುರಿದು ಚಿನ್ನಾಭರಣ ಕದ್ದು ಪರಾರಿಯಾಗಿದ್ದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಮೇಲಧಿಕಾರಿಗಳ ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ನೇತೃತ್ವದ ತಂಡ ಆರೋಪಿಗಳನ್ನು ಬಂಧಿಸಿ 21 ಗ್ರಾಂ ಚಿನ್ನ 200 ಗ್ರಾಂ ಬೆಳ್ಳಿ ವಶಪಡಿಸಿಕೊಂಡಿದ್ದಾರೆ.

ಗಿನ್ನಿಸ್ ದಾಖಲೆಯಾದ ಹಕ್ಕುಪತ್ರ ವಿತರಣೆ | ಕಾಂಗ್ರೆಸ್ ಸಾಧನೆಗಳ ಸೇವೆಯ ಸಮರ್ಪಣೆ

1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ

ತುಮಕೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಅಧಿಕಾರಕ್ಕೆ ವರ್ಷಗಳು ಪೂರ್ಣಗೊಳ್ಳುತ್ತಿರುವ ನೆನಪಿಗಾಗಿ ಸೇವೆಗಳ ಸಮರ್ಪಣೆಯನ್ನು ಮೇ 19ರಂದು ಮಂಗಳವಾರ ನಗರದ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. 15, 2492 ಫಲಾನುಭವಿಗಳಿಗೆ ಪತ್ರ ವಿತರಣೆ ಮಾಡುವ ಮೂಲಕ ಸದರಿ ಕಾರ್ಯಕ್ರಮ ಗಿನ್ನಿಸ್ ದಾಖಲೆ ತನ್ನದಾಗಿಸಿಕೊಂಡಿತು.

ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಆಗಿರುವ ಅಭೂತಪೂರ್ವ ಅಭಿವೃದ್ಧಿ ಕಾರ್ಯಕ್ರಮವನ್ನು ಈ ಸಮಾವೇಶದ ಮೂಲಕ ಫಲಾನುಭವಿಗಳಿಗೆ ಹಕ್ಕುಪತ್ರ ಸವಲತ್ತುಗಳನ್ನು ನೀಡುವ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಾಧನೆಯಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಈ ಸಾಧನೆಗಾಗಿ ಗಿನ್ನಿಸ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ ದಾಖಲೆ ಸೇರಿದ್ದು, ಇದೇ ಕಾರ್ಯಕ್ರಮದಲ್ಲಿ ಸಾಧನೆಯ ಪ್ರಶಸ್ತಿಯನ್ನು ಗಿನ್ನಿಸ್ ಸಂಸ್ಥೆಯವರು ಪ್ರದಾನ ಮಾಡಿದರು.

ಹಕ್ಕುಪತ್ರ ವಿತರಣೆ ವಿವರ: ಜಿಲ್ಲೆಯ ಕಂದಾಯ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಇ-ಪೌತಿ ಆಂದೋಲನ 1,06,000, ದರಖಾಸ್ತು ಪೋಡಿ – 24,256, ಕಂದಾಯ ಗ್ರಾಮ ಹಕ್ಕು ಪತ್ರ – 20,666 ಮತ್ತು ಪೋಡಿ ಮುಕ್ತ ಅಭಿಯಾನ 1570 ಸೇರಿದಂತೆ ಒಟ್ಟು 152492 ಫಲಾನುಭವಿಗಳಿಗೆ ಹಕ್ಕು ಪತ್ರ, ಆದೇಶ ಪತ್ರಗಳನ್ನು ವಿತರಣೆ ಮಾಡಲಾಯಿತು. ಅಲ್ಲದೆ, ರಾಜ್ಯದಲ್ಲಿಯೇ ದೊಡ್ಡ ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಒಟ್ಟು 600 ಹುದ್ದೆಗಳ ನೇಮಕಾತಿ ಆದೇಶವನ್ನು ಕಾರ್ಯಕ್ರಮದಲ್ಲಿ ನೀಡಲಾಯಿತು.

ಸುಮಾರು 3 ಸಾವಿರ ಸರಕಾರಿ , ಖಾಸಗಿ ಬಸ್ಸುಗಳಲ್ಲಿ ತುಮಕೂರು ನಗರಕ್ಕೆ ಜಿಲ್ಲೆಯ ಇತರೆ ತಾಲ್ಲೂಕುಗಳಿಂದ ಫಲಾನುಭವಿಗಳನ್ನು ಕರೆತರಲಾಗಿತ್ತು. ಫಲಾನುಭವಿಗಳಿಗೆ ತುಮುಲ್ ವತಿಯಿಂದ ಮಜ್ಜಿಗೆ, ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ತುಮಕೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಸ್ವಚ್ಛತೆ ಹಾಗೂ ಸುಂದರವಾಗಿ ಕಾಣಿಸಲು ವ್ಯವಸ್ಥೆ ಕೈಗೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಲಕ್ಷಾಂತರ ಫಲಾನುಭವಿಗಳಿಗೆ ಸೂಕ್ತ ರೀತಿಯ ಸಂಚಾರಿ ಶೌಚಾಲಯ ವ್ಯವಸ್ಥೆಯನ್ನು ಜಿಲ್ಲಾಡಳಿತ ಕಲ್ಪಿಸಿತ್ತು.

ನಗರ ಭಾಗದಲ್ಲಿ ವಾಹನ ಸಂಚಾರ ಅಥವಾ ವಾಹನಗಳ ನಿಲುಗಡೆಗೆ ಸ್ಥಳಾವಕಾಶದ ಕೊರತೆಯಾಗದಂತೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು.



ವಸ್ತುಪ್ರದರ್ಶನ

ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸುಮಾರು 682 ಕೋಟಿ ರುಪಾಯಿಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಕಲಾಯಿತು, ಈಗಾಗಲೇ ಮುಕ್ತಾಯಗೊಂಡಿರುವ ಕಾಮಗಾರಿಗಳನ್ನು ಉದ್ಘಾಟಿಸಲಾಯಿತು. ವಸ್ತು ಪ್ರದರ್ಶನದಲ್ಲಿ ಒಂದು ಭಾಗ ಜಿಲ್ಲೆ ಸೇರಿದಂತೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಆಯೋಜನೆ ಮಾಡಲಾಗಿತ್ತು.



ಗಿನ್ನಿಸ್ ಪ್ರಶಸ್ತಿ ಹಸ್ತಾಂತರ

ತುಮಕೂರು: ಜಿಲ್ಲೆಯಲ್ಲಿ ಕಂದಾಯ ಗ್ರಾಮದ 21,529 ಕುಟುಂಬಗಳಿಗೆ ಹಕ್ಕುಪತ್ರ ನೀಡಿ ಫೋಟೋ ಅಪ್‌ಲೋಡ್ ಮಾಡಿದ ಹಿನ್ನೆಲೆಯಲ್ಲಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ದಾಖಲೆ ಸೇರಿದ ಹಿನ್ನೆಲೆಯಲ್ಲಿ ಮಂಗಳವಾರ ತುಮಕೂರಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಸಾಧನಾ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ (ರಿ) ತೀರ್ಪುಗಾರ ಸ್ವಪ್ನಿಲ್‌ಡಂಗರಿಕರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂಲಕ ತುಮಕೂರು ಜಿಲ್ಲಾಧಿಕಾರಿ ಶುಭಾಕಲ್ಯಾಣ್ ಅವರಿಗೆ ಗಿನ್ನಿಸ್ ಪ್ರಶಸ್ತಿಯನ್ನು ನೀಡಿದರು. ಗೃಹಸಚಿವ ಡಾ.ಜಿ. ಪರಮೇಶ್ವರ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಚಿವರಾದ ಹೆಚ್.ಕೆ.ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಬಿ.ಝಡ್. ಜಮೀರ್ ಅಹಮದ್ ಖಾನ್ ಸೇರಿದಂತೆ ಇತರೆ ಸಚಿವರು, ಶಾಸಕರು ಹಾಗೂ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನ ಸಲಹೆಗಾರರಾದ ಶೈಲಜಾ ಮತ್ತಿತರರು ಉಪಸ್ಥಿತರಿದ್ದರು.





ಸೂಕ್ತ ಬಂದೋಬಸ್ತ್

ಕಾರ್ಯಕ್ರಮದ ಅಂಗವಾಗಿ ನಗರಾದ್ಯಂತ 4 ಸಾವಿರಕ್ಕೂ ಅಧಿಕ ಬಿಗಿ ಪೊಲೀಸ್ ಭದ್ರತೆಯನ್ನು ಹಾಕಲಾಗಿತ್ತು. ನಾಲ್ವರು ಎಸ್ಪಿ, 10 ಅಡಿಷನಲ್ ಎಸ್ಪಿ, 32 ಡಿವೈಎಸ್ಪಿ, 116 ಸಿಪಿಐಗಳು, 220 ಪಿಎಸ್‌ಐಗಳು, 398 ಎಎಸ್‌ಐಗಳು 3229 ಹೆಡ್ ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್‌ಗಳು, 185 ಮಹಿಳಾ ಕಾನ್‌ಸ್ಟೇಬಲ್‌ಗಳು, 8 ಡಿಎಆರ್ ತುಕಡಿ, 9 ಕೆಎಸ್‌ಆರ್‌ಪಿ ತುಕಡಿಗಳ ಸರ್ಪಗಾವಲು ಮೂಲಕ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬೇಸಿಗೆ ಕ್ರೀಡಾ ಶಿಬಿರ ಸಮಾರೋಪ

ಗುಬ್ಬಿ: ಮಕ್ಕಳ ದೈಹಿಕ ಸಾಮರ್ಥ್ಯ ಮತ್ತು ಆರೋಗ್ಯ ವೃದ್ಧಿಗೆ ಕ್ರೀಡೆಗಳು ಅತ್ಯಂತ ಸಹಕಾರಿ ಎಂದು ಜಿ.ಎಚ್.ಗುರು ಧರ್ಮಾರ್ಥ ಟ್ರಸ್ಟ್ ಅಧ್ಯಕ್ಷ ಜಿ. ಪ್ರಸನ್ನ ಕುಮಾರ್ ಹೇಳಿದರು. ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಶ್ರೀ ಚನ್ನಬಸವೇಶ್ವರ ಯುವಕ ಸಂಘ ಆಯೋಜಿಸಿದ್ದ ಉಚಿತ ಬೇಸಿಗೆ ತರಬೇತಿ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು. ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಪವನ್ ಗ್ರಾಮೀಣ ಆಟಗಳಾದ ಖೊಖೋ, ಕಬಡ್ಡಿಯ ಮಹತ್ವ ತಿಳಿಸಿದರು.

ಯುವಕ ಸಂಘದ ಅಧ್ಯಕ್ಷ ಜಿ.ಎಸ್. ವಿಶ್ವನಾಥ್ ಹಾಗೂ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಸಿ.ಜಿ. ಶಂಕರ್ ಕುಮಾರ್ ಮಾತನಾಡಿ, ಕಳೆದ 50 ವರ್ಷಗಳಿಂದ ಸಂಘ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಿದ್ದು, ಈ ಬಾರಿ 90 ಮಕ್ಕಳು ಶಿಬಿರದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ ಎಂದು ತಿಳಿಸಿದರು.



ಮೇ 22ಕ್ಕೆ ಬೃಹತ್ ಉದ್ಯೋಗ ಮೇಳ

ತುಮಕೂರು: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಸರ್ಕಾರಿ ಕೈಗಾರಿಕಾ ತರಬೇತಿ, ಹಾಗೂ ಅನನ್ಯ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮ್ಯಾನೇಜ್‌ಮೆಂಟ್ ಇವರ ಸಹಯೋಗದೊಂದಿಗೆ ಮೇ 22ರಂದು ಬೃಹತ್ ಉದ್ಯೋಗ ಮೇಳ ನಡೆಯಲಿದ್ದು, ಸದರಿ ಉದ್ಯೋಗ ಮೇಳದಲ್ಲಿ 60ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸುತ್ತಿವೆ.

ಎಸ್‌ಎಸ್‌ಎಲ್‌ಸಿ., ಪಿಯುಸಿ. ಐಟಿಐ., ಡಿಪ್ಲೊಮಾ, ಡಿ.ಫಾರ್ಮ, ಬಿ.ಫಾರ್ಮ, ನರ್ಸಿಂಗ್, ಯಾವುದೇ ಪದವಿ, ಬಿ.ಇ. ಹಾಗೂ ಸ್ನಾತಕೋತ್ತರ ಪದವಿ ಪಾಸಾದ 18 ರಿಂದ 35 ವರ್ಷದ ಒಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳು ಮೇ 22ರಂದು ಬೆಳಿಗ್ಗೆ 10 ಗಂಟೆಗೆ ಅನನ್ಯ ಕ್ಯಾಂಪಸ್, ಟೌನ್‌ಹಾಲ್ ಸರ್ಕಲ್, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ತಮ್ಮ ಬಯೋಡೇಟಾ ಹಾಗೂ ಶಾಲಾ ದಾಖಲಾತಿಗಳೊಂದಿಗೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, ಮೊ.ಸಂ. 9513136642, 7349416152 ಹಾಗೂ 7760174554ನ್ನು ಸಂಪರ್ಕಿಸಬೇಕೆಂದು ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣದಿಂದ ಮಾತ್ರ ಬದುಕು ಹಸನು ಸಾಧ್ಯ: ರಾಜಣ್ಣ

ಮಧುಗಿರಿ: ಅಬಡತನಕ್ಕೆ ಹೆದರಿ ಮನೆಯಲ್ಲಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಶಾಸಕ ಕೆ.ಎನ್.ರಾಜಣ್ಣ ತಿಳಿಸಿದರು. ತಾಲೂಕಿನ ಕೊಡಿಗೇನಹಳ್ಳಿ ಹೋಬಳಿಯ ಕಾಳೇನಹಳ್ಳಿ ಗ್ರಾಮದಲ್ಲಿ ನಡೆದ ಶ್ರೀ ಸೀತಾರಾಮಚಂದ್ರ ಹಾಗೂ ವೀರಾಂಜನೇಯ ಸ್ವಾಮಿಯ ಹೂವಿನ ಪಲ್ಲಕ್ಕಿ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ನಮ್ಮ ಸರ್ಕಾರದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ವ್ಯಕ್ತಿಯ ಬದುಕು ಹಸನಾಗಲು ಶಿಕ್ಷಣದಿಂದ ಮಾತ್ರ ಸಾಧ್ಯ, ಪೋಷಕರು ಎಷ್ಟೇ ಕಷ್ಟವಿದ್ದರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು.

ವಿದ್ಯೆಯಿಂದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ ಎಂದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಧ್ಯಾಹ್ನದ ವೇಳೆ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಕಲ್ಪಿಸಿದ್ದು ಸದುಪಯೋಗ ಪಡಿಸಿಕೊಳ್ಳಬೇಕು. ಗ್ರಾಮೀಣ ಭಾಗದ ಮಕ್ಕಳು ವಿಧ್ಯಾವಂತರಾಗಿ ಉನ್ನತ ಸ್ಥಾನಕ್ಕೇರಿ ಹೆತ್ತವರಿಗೆ,ಊರಿಗೆ ಒಳ್ಳೆಯ ಹೆಸರು ತರಬೇಕು ಎಂದರು. ಈ ಬಾರಿ ಒಳ್ಳೆಯ ಮಳೆಯಾಗಿ ರೈತಾಪಿ ವರ್ಗಕ್ಕೆ ಅನುಕೂಲವಾಗಲಿ. ಕ್ಷೇತ್ರದ ಹಾಗೂ ಗ್ರಾಮದ ಜನತೆಯ ಒಳಿತಾಗಲಿ ಎಂದು ಪ್ರಾರ್ಥಿಸಿದರು. ಚಿಕ್ಕಮಾಲೂರಿನ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಮುಖಂಡರುಗಳು ಹಾಗೂ ಗ್ರಾಮಸ್ಥರ ಜತೆ ಮಾತನಾಡಿದರು.



ಬಹುಮುಖ ವ್ಯಕ್ತಿತ್ವದ ಸಾಹಿತಿ ಗಿರೀಶ್ ಕಾರ್ನಾಡ್

ಮಧುಗಿರಿ: ಗಿರೀಶ್ ಕಾರ್ನಾಡರು ಪ್ರತಿಭೆ, ಸಂವೇದನೆ, ಸೃಜನಶೀಲತೆಯ ಬಹುಮುಖ ವ್ಯಕ್ತಿತ್ವದ ನಾಟಕಕಾರ, ಸಾಹಿತಿ, ನಟ, ನಿರ್ದೇಶಕ ಎಂದು ಸಾಹಿತಿ ಪ್ರೊ. ಮಲನ ಮೂರ್ತಿ ತಿಳಿಸಿದರು.ಪಟ್ಟಣದ ಸಹೃದಯ ಬಳಗ, ಟಿವಿವಿ, ಬಿ.ಎಡ್ ಕಾಲೇಜು ಸಂಯುಕ್ತವಾಗಿ ಏರ್ಪಡಿಸಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಪದ್ಮಭೂಷಣ ಗಿರೀಶ್ ಕಾರ್ನಾಡರ ಜನ್ಮದಿನದಲ್ಲಿ ಮಾತನಾಡಿ, ಅವರು ಇತಿಹಾಸ, ಪುರಾಣ, ಜಾನಪದದಿಂದ ವಸ್ತುಗಳನ್ನು ಆರಿಸಿಕೊಂಡು ಅವನ್ನು ಕೇವಲ ಚೌಕಟ್ಟಾಗಿ ಬಳಸಿಕೊಂಡು ಸಮಕಾಲೀನ ಕಾಳಜಿಗಳನ್ನು, ಆತಂಕಗಳನ್ನು, ವ್ಯಕ್ತಿಯ ಹಾಗೂ ಸಮಾಜದ ಮೂಲಭೂತ ಸಮಸ್ಯೆಗಳನ್ನು, ಸಂಬಂಧಗಳನ್ನು ಸ್ವಂತಿಕೆಯಲ್ಲಿತೋರಿಸುವುದುಅವರವೈಶಿಷ್ಟ್ಯವಾಗಿದೆ. ಅವರ ನಾಟಕದ ರಚನೆ ಅಪರೂಪದ್ದು,ವಸ್ತು ಮತ್ತು ತಂತ್ರಗಳಲ್ಲಿ ನಾವೀನ್ಯತೆ,ವೈಚಾರಿಕ ವಿಶ್ಲೇಷಣೆ ನೋಡು ತ್ತೇವೆ ಚಲನ ಚಿತ್ರರಂಗದಲ್ಲೂ ಸಾಧನೆ ಮಾಡಿದ್ದರು, ಸಂಸ್ಕಾರ, ಕಾಡು ಒಂದಾನೊಂದು ಕಾಲದಲ್ಲಿ, ಚಿತ್ರಗಳ ಮರೆಯಲಾಗದು. ಅವರ ಆತ್ಮಕಥೆ ಆಡಾಡತ ಆಯುಷ್ಯ ಜನಪ್ರಿಯವಾದ ಕೃತಿ ಎಂದರು. ಗ್ರಂಥಪಾಲಕ ಜಿ .ಎಸ್ ನಾಗಭೂಷಣ ಮಾತನಾಡಿ, ಕಾರ್ನಾಡರ ಮನೆ ಮಾತು ಮರಾಠಿ, ಓದಿದ್ದು ಇಂಗ್ಲೀಷ್, ಬರೆದದ್ದು ಕನ್ನಡದಲ್ಲಿ ಇದು ಸಾಮಾನ್ಯ ಸಾಧನೆಯಲ್ಲ ಎಂದರು. ಬಳಗದ ಸದಸ್ಯರಾದ ಮಂಜುನಾಥ, ವಿನೋದ್ ಕುಮಾರ್ ಕಾರ್ನಾಡರ ಕೃತಿ ಪರಿಚಯಿಸಿದರು. ಸಹನಾ. ಎಂ.ಎಸ್.ಪ್ರಾರ್ಥಿಸಿ. ಸಂಧ್ಯಾ ಸ್ವಾಗತಿಸಿ, ಬಸಮ್ಮ ನಿರೂಪಿಸಿ, ರೇವತಿ ವಂದಿಸಿದರು.



ಹುಳಿಯಾರು ಪದವಿ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ

ಅಧ್ಯಯನದಲ್ಲಿ ಇ-ಸಂಪನ್ಮೂಲಗಳ ಸೌಲಭ್ಯ ಬಳಸಿ

ಹುಳಿಯಾರು: ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ಜಂಟಿ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ(ಶೈಕ್ಷಣಿಕ ಮತ್ತು ವೃತ್ತಿಜೀವನದ ಉತ್ಕೃಷ್ಟತೆಗಾಗಿ ಮಾಹಿತಿ ಮರುಪಡೆಯುವಿಕೆ ಕೌಶಲಗಳು)ಎಂಬ ವಿಷಯದ ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ವೀರಣ್ಣ ಎಸ್.ಸಿ.ಅವರು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾರು ಸರಿಯಾದ ಮಾಹಿತಿಯನ್ನು ಸರಿಯಾದ ಸಮಯಕ್ಕೆ ಪಡೆದುಕೊಳ್ಳುತ್ತಾರೋ ಅವರೇ ಯಶಸ್ವಿಯಾಗುತ್ತಾರೆ. ವಿದ್ಯಾರ್ಥಿಗಳು ಇಂತಹ ವಿಶೇಷ ಉಪನ್ಯಾಸಗಳ ಸದುಪಯೋಗವನ್ನು ಪಡೆದುಕೊಂಡು ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಸಂಪನ್ಮೂಲ ವ್ಯಕ್ತಿಗಳು ತಿಳಿಸಿಕೊಟ್ಟಿರುವ ಆನ್‌ಲೈನ್ ವೇದಿಕೆಗಳನ್ನು ಮತ್ತು ಕಾಲೇಜಿನ ಗ್ರಂಥಾಲಯದಲ್ಲಿರುವ ಅತ್ಯುತ್ತಮ ಇ-ಸಂಪನ್ಮೂಲಗಳ ಸೌಲಭ್ಯ ಅಧ್ಯಯನದಲ್ಲಿ ಬಳಸಿಕೊಳ್ಳುವ ಮೂಲಕ ಉದ್ಯೋಗ ಮಾರುಕಟ್ಟೆಯಲ್ಲಿ ಅವಕಾಶಗಳನ್ನು ಗುರುತಿಸಿಕೊಳ್ಳಬೇಕು ಎಂದು ಕರೆ



ನೀಡಿದರು. ಕಾಲೇಜಿನ ಗ್ರಂಥಪಾಲಕರು ಹಾಗೂ ಕಾರ್ಯಕ್ರಮದ ಸಂಘಟಕರಾದ ಮೋಹನ್ ಕುಮಾರ್ ಜೆ.ಅವರು, ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಕೇವಲ ಇಂಟರ್ನೆಟ್ ಬಳಸುವುದು ಮುಖ್ಯವಲ್ಲ, ಬದಲಿಗೆ ಜ್ಞಾನದ ಸಾಗರದಿಂದ ನಮಗೆ ಅಗತ್ಯವಿರುವ ನಿಖರ ಮತ್ತು ಅಧಿಕೃತ ಮಾಹಿತಿಯನ್ನು ಹೇಗೆ ಹುಡುಕಬೇಕು ಎಂಬ ಕೌಶಲ ಅತ್ಯಂತ ಪ್ರಮುಖವಾಗಿದೆ ಎಂದು ಕಾರ್ಯಕ್ರಮದ ಉದ್ದೇಶವನ್ನು ಸ್ಪಷ್ಟಪಡಿಸಿದರು.

ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮಹಾಲಕ್ಷ್ಮಿ ಕೆ.ಆರ್. ಅವರು ವಿದ್ಯಾರ್ಥಿಗಳು ಕೇವಲ ಗೂಗಲ್ ಸರ್ಚ್‌ಗೆ ಸೀಮಿತವಾಗದೆ, ಪ್ರಮುಖ ಮುಕ್ತ ಸಂಪನ್ಮೂಲಗಳಾದ ಶೋಧಗಂಗಾ, ನ್ಯಾಷನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ ಮತ್ತು ಇ-ಪಿಜಿ ಪಾಠಶಾಲಾ ಮುಂತಾದ ವೇದಿಕೆಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಜ್ಞಾನದ ಹರವನ್ನು ವಿಸ್ತರಿಸಿಕೊಳ್ಳಬೇಕು ಎಂದು ಅವರು ವಿವರಿಸಿದರು. ಕಾಲೇಜಿನ ಸಂಚಾಲಕರಾದ ಡಾ.ಸರಸ್ವತಿ ಕೆ.ಬಿ. ಮಾತನಾಡಿ, ಕಾಲೇಜಿನ ಶೈಕ್ಷಣಿಕ ಗುಣಮಟ್ಟವನ್ನು ಅಳೆಯುವಲ್ಲಿ ಇಂತಹ ಕಾರ್ಯಾಗಾರಗಳು ಪ್ರಮುಖ ಪಾತ್ರ ವಹಿಸುತ್ತವೆ. ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗದೆ, ಜಾಗತಿಕ ಮಟ್ಟದ ಇ-ಸಂಪನ್ಮೂಲಗಳು ಮತ್ತು ಜರ್ನಲ್‌ಗಳನ್ನು ಬಳಸಿಕೊಳ್ಳುವ ಕೌಶಲವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬರ ಪರಿಹಾರ ಯೋಜನೆ | ಡಾ.ಜಪಾನಂದ ಶ್ರೀಗಳ ಸೇವಾಕಾರ್ಯಕ್ಕೆ ಮೆಚ್ಚುಗೆ

ಮೇವು ವಿತರಣಾ ಘಟಕಕ್ಕೆ ವಿವಿ ಕುಲಪತಿ ತಂಡ ಭೇಟಿ

ಪಾವಗಡ: ಇನ್ಫೋಸಿಸ್ ಸಂಸ್ಥೆ ಸಹಕಾರದಲ್ಲಿ ಶ್ರೀರಾಮಕೃಷ್ಣ ಸೇವಾಶ್ರಮದಿಂದ ಪ್ರಾರಂಭಿಸಿರುವ ಬರಗಾಲ ಪರಿಹಾರ ಯೋಜನೆಯ, ಪಾವಗಡದ ಮೇವು ವಿತರಣಾ ಕೇಂದ್ರಕ್ಕೆ ತುಮಕೂರು ವಿವಿ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ನೇತೃತ್ವದ ತಂಡ ಸೋಮವಾರ ಭೇಟಿ ನೀಡಿ ಡಾ.ಜಪಾನಂದ ಶ್ರೀಗಳ ಸೇವಾಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತುಮಕೂರು ವಿವಿಯ ಶ್ರೀಅನ್ನಪೂರ್ಣೇಶ್ವರಿ ಆಹಾರ ವಿತರಣಾ ಸಮಿತಿ ಸದಸ್ಯರುಗಳಾದ ಡಾ.ಪರಶುರಾಮ್, ಡಾ.ಗುಂಡೇಗೌಡ, ಆರ್.ಎಲ್. ರಮೇಶ್ ಬಾಬು, ಬಿ.ಆರ್. ನಟರಾಜಶೆಟ್ಟಿರೊಂದಿಗೆ ಪ್ರಸನ್ನ ಕುಮಾರ್, ಮೃದುಲ್ ಹಾಗೂ ಸ್ವಯಂ ಸೇವಕರನ್ನೊಳಗೊಂಡ ತಂಡ ಮೇವು ವಿತರಣಾ ಕೇಂದ್ರಕ್ಕೆ ಭೇಟಿ ನೀಡಿದಾಗ, ಐದು ನೂರಕ್ಕೂ ಹೆಚ್ಚು ಜನರು ಮೇವು ಪಡೆಯುತ್ತಿರುವ ದೃಶ್ಯ ಕಂಡು ಆಶ್ಚರ್ಯ ವ್ಯಕ್ತಪಡಿಸಿ ಕಳೆದ ಐದು ತಿಂಗಳಿಂದ ಸುಮಾರು ಹತ್ತು ಸಾವಿರ ಹಸುಗಳಿಗೆ ಮೇವು ನೀಡುತ್ತಿರುವ ಶ್ರೀಗಳ ಸೇವಾಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೇವಿಗಾಗಿ 40-50 ಕಿಮೀ ದೂರದಿಂದ ಆಗಮಿಸಿದ್ದ ಗೋಪಾಲಕರಿಗೆ ಸ್ವಯಂ ಕುಲಪತಿಗಳ ನೇತೃತ್ವದ ತಂಡ ಶ್ರೀಗಳೊಂದಿಗೆ ಮೇವು ವಿತರಿ ಸಿದ್ದು ವಿಶೇಷವಾಗಿತ್ತು. ನಂತರ ಸ್ಥಳೀಯ ಗೋಪಾಲಕರೊಂದಿಗೆ ಮಾತುಕತೆ ನಡೆಸಿದ ತಂಡ ಜಪಾನಂದ ಶ್ರೀಗಳ ನಿರಂತರ ಸೇವಾಕಾರ್ಯಗಳ ಬಗ್ಗೆ ತಿಳಿದು ಮೂಕವಿಸ್ಮಿತರಾದರು.

ಜಪಾನಂದ ಶ್ರೀಗಳ ಮಾರ್ಗದರ್ಶನದಲ್ಲಿ ಚಳ್ಳಕೆರೆ, ಮುತ್ತಿಗಾನಹಟ್ಟಿ, ಅಜ್ಜಯ್ಯನಗುಡು, ಮೇವು ವಿತರಣಾ ಕೇಂದ್ರಗಳಿಗೆ ಭೇಟಿ ನೀಡಿದ ವಿವಿ ತಂಡ ಬರಗಾಲದ ಹಿನ್ನೆಲೆಯಲ್ಲಿ ಪ್ರತಿ ನಿತ್ಯ ರಾಸುಗಳಿಗೆ ಮೇವು ನೀಡುವ ಜಪಾನಂದ ಶ್ರೀಗಳ ಬರುವಿಕೆಗಾಗಿ ಕಾಯುವ ಗೋವುಗಳು, ಓಡಿ ಬಂದು ಮೇವು, ಇಂಡಿ, ಬಾಳೆಹಣ್ಣುಗಳನ್ನು ತಿನ್ನುವ ಗೋವುಗಳ ಪ್ರೀತಿ ವಿಶ್ವಾಸ ಕಂಡು ನಿನ್ನೆರಗಾದರು.

ಪ್ರತಿ ಮೇವು ವಿತರಣಾ ಘಟಕದಲ್ಲೂ 350, 400, 500 ರಾಸುಗಳಿಗೆ ನಿತ್ಯ ಮೇವು ವಿತರಿಸುವ ಜಪಾನಂದ ಶ್ರೀಗಳು ಇನ್ಫೋಸಿಸ್ ಸಂಸ್ಥೆಯ ಸಹಕಾರದಿಂದ ಆಂದ್ರಾದ ಕಣೇಕಲ್ ನಿಂದ ಮೇವು ತರಿಸಿ ಮಕ್ಕಳ ರೀತಿಯಲ್ಲಿ ಉಪಚಾರ ಮಾಡುತ್ತಿದ್ದಾರೆ, ಎಂದು ಕಿಲಾರಿಗಳು, ರೈತರು, ಮತ್ತು ಗೋಪಾಲಕರು ವಿವರಿ ಸಿದ್ದನ್ನು ಕೇಳಿ ತುಮಕೂರು ವಿವಿ ತಂಡ ಡಾ.ಜಪಾನಂದ ಶ್ರೀಗಳಿಗೆ ಭಕ್ತಿಯಿಂದ ಗೌರವ ಸಮರ್ಪಿಸಿ ಸೇವಾಕಾರ್ಯ ಮುಂದುವರೆಸುವಂತೆ ಮನವಿ ಮಾಡಿತು.



ಕಿರುಸುದ್ದಿ

ಅರ್ಜಿ ಆಹ್ವಾನ

• ರಾಮನಗರ: 2026-27ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕು ವ್ಯಾಪ್ತಿಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ, ಸರ್ಕಾರಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಹಾಗೂ ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ದಾಖಲು ಮಾಡಲು ದಾಖಲಾತಿ ಪ್ರಾರಂಭವಾಗಿದ್ದು, ಇಲಾಖೆಯ ಅಧಿಕೃತ ವೆಬ್‌ಸೈಟ್ sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ರಾಮನಗರ ತಾಲ್ಲೂಕು. ಈ ಕಚೇರಿಯನ್ನು ಸಂಪರ್ಕಿಸುವಂತೆ ರಾಮನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ (ಶ್ರೇಣಿ-1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯಾರ್ಥಿ ನಿಲಯಗಳ ವಿವರ ಡಾ. ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೊಂಬೇಗೌಡನ ದೊಡ್ಡಿ, ಡಾ. ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ದೊಡ್ಡಗಂಗವಾಡಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕಣ್ವ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ರಾಮನಗರ ಟೌನ್, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬಿಡದಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಅರ್ಜಿ ಸಲ್ಲಿಸಬಹುದು.

ಜೂ.1ಕ್ಕೆ ಬೀಡಿ ಕಾರ್ಮಿಕರ ಚಿಕಿತ್ಸಾಲಯ ಬಂದ್

• ರಾಮನಗರ: ಕೇಂದ್ರ ಸರ್ಕಾರದ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಬೀಡಿ ಕಾರ್ಮಿಕರಿಗಾಗಿ ಚನ್ನಪಟ್ಟಣ ಟೌನಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೀಡಿ ಕಾರ್ಮಿಕರ ಚಿಕಿತ್ಸಾಲಯವನ್ನು ಜೂ.1ರಿಂದ ಸಂಪೂರ್ಣವಾಗಿ ಮುಚ್ಚಲಾಗುತ್ತದೆ. ಚಿಕಿತ್ಸಾಲಯದ ಫಲಾನುಭವಿಗಳು ಮುಂದಿನ ಚಿಕಿತ್ಸೆ ಮತ್ತು ಔಷಧಗಳಿಗಾಗಿ ಬೆಂಗಳೂರು ಹಳೆ ಗುಡ್ಡದಹಳ್ಳಿ ಬೀಡಿ ಕಾರ್ಮಿಕರ ಆಸ್ಪತ್ರೆ, ಅಥವಾ ಮಂಡ್ಯದ ಮುಡಕೆರೆ ವಿವೇಕಾನಂದ ಲೇಔಟ್ ನಲ್ಲಿರುವ ಚಿಕಿತ್ಸಾಲಯಗಳಲ್ಲಿ ವೈದ್ಯಾಧಿಕಾರಿಯನ್ನು ಸಂಪರ್ಕಿಸುವಂತೆ ಚನ್ನಪಟ್ಟಣದ ಬೀಡಿ ಕಾರ್ಮಿಕರ ಕಲ್ಯಾಣನಿಧಿ ಸ್ಥಾಯಿ ಚಿಕಿತ್ಸಾಲಯ ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಟೋ ರಿಕ್ಷಾ ಡಿಕ್ಕಿ: ಸೈಕಲ್ ಸವಾರ ಸಾವು

• ಕನಕಪುರ: ನಗರದ ಹೊರವಲಯದ ಮಹಾರಾಜರ ಕಟ್ಟೆಯಿಂದ ನಗರಕ್ಕೆ ಸೈಕಲ್‌ನಲ್ಲಿ ಬರುತ್ತಿದ್ದ ವೇಳೆ ಆಟೋ ರಿಕ್ಷಾ ಒಂದು ಡಿಕ್ಕಿ ಹೊಡೆದ ಪರಿಣಾಮ ಸೈಕಲ್ ಸವಾರ ಸಾವನ್ನಪ್ಪಿ, ಆಟೋ ಚಾಲಕನಿಗೂ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಬೈಪಾಸ್ ರಸ್ತೆ ಎಪಿಎಂಸಿ ಮಾರುಕಟ್ಟೆ ಸಮೀಪ ಸೋಮವಾರ ಬೆಳಗ್ಗೆ ಸಂಭವಿಸಿದೆ. ಮೃತನನ್ನು ಮಹಾರಾಜರ ಕಟ್ಟೆವಾಸಿ ತಿಮ್ಮಯ್ಯ(65) ಎಂದು ಗುರುತಿಸಲಾಗಿದೆ, ಬೆಳಗ್ಗೆ ಮನೆಯಿಂದ ನಗರಕ್ಕೆ ಬರುವ ವೇಳೆ ಸಾತನೂರು ಕಡೆಯಿಂದ ಬಂದ ಆಟೋರಿಕ್ಷಾ ಡಿಕ್ಕಿ ಹೊಡೆದಿದೆ.

ತಲೆ, ಕಾಲಿಗೆ ತೀವ್ರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಕೂಡಲೇ ತಿಮ್ಮಯ್ಯ ಹಾಗೂ ಸಣ್ಣಪುಟ್ಟ ಗಾಯವಾಗಿದ್ದ ಆಟೋ ಚಾಲಕನನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತಿಮ್ಮಯ್ಯನನ್ನು ಹೆಚ್ಚಿನ ಚಿಕಿತ್ಸೆಗಾಗಿ ದಯಾನಂದ್ ಸಾಗರ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಆತ ಅಸುನೀಗಿದ್ದಾನೆ. ಸಂಚಾರಿ ಪೊಲೀಸ್ ಠಾಣಾ ಸಬ್‌ಇನ್‌ಸ್ಪೆಕ್ಟರ್ ಪಾಂಡು, ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗಾಳಿ ಮಳೆ: ಸಿಡಿಲು ಬಡಿದು ಹಸು ಸಾವು

• ಕನಕಪುರ: ಸೋಮವಾರ ಸಂಜೆ ಸಿಡಿಲಿನ ಆರ್ಭಟದೊಂದಿಗೆ ಭಾರೀ ಗಾಳಿ ಮಳೆಗೆ ಮನೆಯ ಹೊರಾವರಣದಲ್ಲಿ ಕಟ್ಟಿಹಾಕಿದ್ದ ಹಸುವೊಂದಕ್ಕೆ ಸಿಡಿಲು ಬಡಿದ ಪರಿಣಾಮ ಹಸು ಬಲಿಯಾದ ಘಟನೆ ನಡೆದಿದೆ. ತಾಲೂಕಿನ ಸಾತನೂರು ಹೋಬಳಿ ಕಂಚನಹಳ್ಳಿ ಗ್ರಾಮದ ಚಂದ್ರಪ್ಪ ಎಂಬುವವರಿಗೆ ಸೇರಿದ 25 ಸಾವಿರ ಬೆಲೆ ಬಾಳುವ ತುಂಬು ಗರ್ಭಿಣಿ ಹಳ್ಳಿಕಾರ್ ನಾಟಿ ಹಸು ಬಲಿಯಾಗಿದೆ. ಗಂಟೆಗಟ್ಟಲೆ ಸುರಿದ ಧಾರಾಕಾರ ಮಳೆಯ ನಂತರ ಹಸುವನ್ನು ಮನೆಯ ಹಿಂದೆ ದನದ ಕೊಟ್ಟಿಗೆಗೆ ಕಟ್ಟಿಹಾಕಲು ಹೋದ ವೇಳೆ ಹಸು ಸಿಡಿಲು ಬಡಿದು ಸಾವನ್ನಪ್ಪಿದೆ. ಪಶು ವೈದ್ಯ ಅಧಿಕಾರಿ ಡಾ.ಕಿರಣ್, ಗ್ರಾ.ಪಂ ಅಧಿಕಾರಿಗಳು ಮಂಗಳವಾರ ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ನಂತರ ಪರೀಕ್ಷೆಯಲ್ಲಿ ಹಸು ಗರ್ಭ ಧರಿಸಿರುವುದು ಗೊತ್ತಾಗಿದೆ. ಸರ್ಕಾರದಿಂದ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ರಾಮನಗರ ನಗರದಲ್ಲಿರುವ ಬಿಇಒ ಕಚೇರಿಯಲ್ಲಿ ಕೆಲವು ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರಿಗೆ ಸಾಂಕೇತಿಕವಾಗಿ ಪಠ್ಯಪುಸ್ತಕಗಳನ್ನು ನೀಡುವ ಮೂಲಕ ವಿತರಣೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಸೋಮಲಿಂಗಯ್ಯ ಚಾಲನೆ ನೀಡಿದರು.

ಕಾರ್ಯಕರ್ತೆ ಸೇವೆಗೆ ಸನ್ಮಾನ

• ಕನಕಪುರ: ತಾಲೂಕಿನ ಹೂಕುಂದ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹೊನ್ನರತಿ ಅವರ ಸೇವೆಯನ್ನು ಗುರುತಿಸಿ ಯುವ ಶಕ್ತಿ ವೇದಿಕೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಮಂಗಳವಾರ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಜರುಗಿದ ಸರಳಸಮಾರಂಭದಲ್ಲಿವಿ.ಆರ್.ಡಬ್ಲ್ಯು ಹೊನ್ನರತಿಗೆಸನ್ಮಾನನೆರವೇರಿಸಿದಯುವ ಶಕ್ತಿ ವೇದಿಕೆಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪ್ರೇಮ್‌ಕುಮಾರಿ ಮಾತನಾಡಿ, ವಿಶೇಷಚೇತನರ ಹಾಗೂ ಹಿರಿಯ ನಾಗರೀಕರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಹೊನ್ನರತಿಯವರ ಸಮಾಜ ಸೇವೆಗೆ ಪ್ರೋತ್ಸಾಹಿಸಿ ಸನ್ಮಾನಿಸಲಾಗುತ್ತಿದೆ ಎಂದರು.

ವೇದಿಕೆ ಸಂಸ್ಥಾಪಕ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ವಿಶೇಷಚೇತನರು ದೈಹಿಕ, ಮಾನಸಿಕ ಸವಾಲುಗಳನ್ನು ಮೆಟ್ಟಿ ಅವರ ಸೇವೆಯಲ್ಲಿ ಅದ್ಭುತ ಸಾಧನೆಯನ್ನು ಮಾಡುತ್ತಿದ್ದಾರೆ. ಇವರು ಸಮಾಜಕ್ಕೆ ಸ್ಫೂರ್ತಿಯಾಗಿದ್ದಾರೆ. ಅಂಗವೈಕಲ್ಯವು ಯಶಸ್ಸಿಗೆ ಎಂದೂ ಅಡ್ಡಿಯಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಶ್ಲಾಘಿಸಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಲುವರಾಜು, ವೇದಿಕೆಯ ಪದಾಧಿಕಾರಿಗಳಾದ ಸಿದ್ದರಾಜು, ಚಂದ್ರಕುಮಾರ್, ಅಲಮೇಲಮ್ಮ, ಲಕ್ಷ್ಮಣ, ಚುಂಚಗಿರಿ, ಮನು, ನವೀನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕನಕಪುರ ತಾಲೂಕಿನ ಹೂಕುಂದ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹೊನ್ನರತಿ ಅವರ ಸೇವೆಯನ್ನು ಗುರುತಿಸಿ ಯುವ ಶಕ್ತಿ ವೇದಿಕೆಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾಮಟ್ಟದ ಲಸಿಕಾ ಕಾರ್ಯಪಡೆ ಸಮಿತಿ ಸಭೆಯಲ್ಲಿ ಡಿಸಿ ಸೂಚನೆ

ಸಕಾಲದಲ್ಲಿ ಚಿಕಿತ್ಸೆ ನೀಡಿ

• ರಾಮನಗರ: ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ವೈದ್ಯರು, ರೋಗಿಗಳಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡಲು ಸದಾ ಸನ್ನದ್ಧರಾಗಿರಬೇಕು ಎಂದು ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಲಸಿಕಾ ಕಾರ್ಯಪಡೆ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮಗಳಲ್ಲಿ ಹಾವು ಕಡಿತದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬ ಕ್ರಮಗಳ ಕುರಿತು ಹಾಗೂ ಹಾವು ಕಡಿತಕ್ಕೊಳಗಾದವರಿಗೆ ನೀಡಬೇಕಾದ ಪ್ರಥಮ ಚಿಕಿತ್ಸೆ ಕುರಿತು ಜನರಲ್ಲಿ ಹಾಗೂ ರೈತರು ಹೊಲ-ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವಾಗ, ಕೆರೆ ಬದಿ ಹಾದು ಹೋಗುವಾಗ ಎಚ್ಚರಿಕೆಯಿಂದ ಇರುವಂತೆ ಜಾಗೃತಿ ಮೂಡಿಸಬೇಕು ಎಂದವರು ತಿಳಿಸಿದರು.

ಹಾವು ಕಡಿತದ ವಿಷ ವಿರೋಧಿ ಚುಚ್ಚುಮದ್ದುಗಳು(ಆಂಟಿ ಸ್ನೇಕ್ ವೆನೋಮ್ -ಎಎಸ್‌ವಿ)ಚನ್ನಪಟ್ಟಣ ತಾಲೂಕಿನಲ್ಲಿ 104, ಹಾರೋಹಳ್ಳಿ ತಾಲೂಕಿನಲ್ಲಿ 57, ಕನಕಪುರ ತಾಲೂಕಿನಲ್ಲಿ 87, ಮಾಗಡಿ ತಾಲೂಕಿನಲ್ಲಿ 53 ಹಾಗೂ ರಾಮನಗರ ತಾಲೂಕಿನಲ್ಲಿ 106 ಚುಚ್ಚುಮದ್ದುಗಳು ಸೇರಿ ಒಟ್ಟಾರೆ ಬೆಂಗಳೂರು ದಕ್ಷಿಣ ಜಿಲ್ಲಾ ಆಸ್ಪತ್ರೆ, ತಾಲೂಕು ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 407 ಹಾವು ಕಡಿತ ವಿಷ ವಿರೋಧಿಚುಚ್ಚುಮದ್ದುಗಳುಲಭ್ಯವಿದೆಎಂದುಜಿಲ್ಲಾ ಆರೋಗ್ಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.



83 ಹಾವು ಕಡಿತ ಪ್ರಕರಣ ವರದಿ

ಜಿಲ್ಲೆಯಲ್ಲಿ ಕಳೆದ ಜನವರಿಯಿಂದ ಏಪ್ರಿಲ್ ಮಾಹೆಯವರೆಗೆ 83 ಹಾವು ಕಡಿತಕ್ಕೊಳಗಾದ ಪ್ರಕರಣಗಳು ವರದಿಯಾಗಿವೆ, ಅವುಗಳಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಯಾರೊಬ್ಬರ ಪ್ರಾಣ ಹಾನಿಯಾಗದಂತೆ ಜಿಲ್ಲೆಯ ವೈದ್ಯರು ಕಟ್ಟೆಚ್ಚರ ವಹಿಸಿ, ಅಗತ್ಯ ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡಬೇಕು.

ತಾಯಿ ಮರಣ ಹಾಗೂ ಶಿಶು ಮರಣ ಪ್ರಮಾಣ ಕಡಿಮೆ ಮಾಡಲು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಗರ್ಭಿಣಿ-ಬಾಣಂತಿಯರು ಮನೆಗೆ ಭೇಟಿ ನೀಡಿ ನಿಯಮಿತವಾಗಿ ಗರ್ಭಿಣಿ, ತಾಯಿ-ಮಗುವಿನ ತಪಾಸಣೆ ಮಾಡಿಸಬೇಕು. ಎಂದ ಜಿಲ್ಲಾಧಿಕಾರಿಯವರು, ಮುಂಬರುವ ತಿಂಗಳಿನಿಂದ ಮಳೆಗಾಲ ಆರಂಭವಾಗಲಿದ್ದು ಮಲೇರಿಯಾ, ಡೆಂಘೀ, ಚಿಕೂನ್ ಗುನ್ಯ, ಇನ್ನಿತರ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಗಟ್ಟಲು ನೀರು ನಿಲ್ಲದಂತೆ ನೋಡಿಕೊಂಡು ಸ್ವಚ್ಛತೆ ಕಾಪಾಡುವಂತೆ, ಸಂಬಂಧಿಸಿದ ಇಲಾಖೆಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಗ್ರಾಮ-ನಗರ ಪ್ರದೇಶಗಳಲ್ಲಿ ಜನ-ಜಾಗೃತಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ನಿರ್ದೇಶಿಸಿದರು. ಈ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಿರಂಜನ್, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಮಂಜುನಾಥ್, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ. ರಾಜು, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಪದ್ಮಾವತಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಕಿರಣ್ ಶಂಕರ್, ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು, ಇತರೆ ಇಲಾಖೆಯ ಅಧಿಕಾರಿಗಳು ಹಾಗೂ ಆರೋಗ್ಯ ಸಿಬ್ಬಂದಿಗಳು ಹಾಗೂ ಇತರರು ಇದ್ದರು.

ಆಡಳಿತ ವೈಫಲ್ಯಗಳ ಕುರಿತು ಸಮಗ್ರ ತನಿಖೆಯಾಗಲಿ

• ರಾಮನಗರ: ಕನಕಪುರ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ನಡೆಯುತ್ತಿದೆ ಎನ್ನಲಾಗುತ್ತಿರುವ ಭ್ರಷ್ಟಾಚಾರ, ಕಡತಗಳ ಉದ್ದೇಶಪೂರ್ವಕ ವಿಳಂಬ, ಶಿಕ್ಷಕರುಹಾಗೂಸಾರ್ವಜನಿಕರಿಗೆ ಆಗುತ್ತಿರುವ ಅನಗತ್ಯ ಕಿರುಕುಳ ಮತ್ತು ಆಡಳಿತ ವೈಫಲ್ಯಗಳ ಕುರಿತು ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು. ಶ್ರೀರಾಮಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗಾರ್ಜುನ ಗೌಡ ಮಾತನಾಡಿ, ಕನಕಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಕಾರ್ಯವೈಖರಿಯಿಂದ ಶಿಕ್ಷಕರು ಹಾಗೂ ಸಾರ್ವಜನಿಕರು ತೀವ್ರ ಅಸಮಾಧಾನಗೊಂಡಿದ್ದಾರೆ. ಗಂಭೀರ ಆರೋಪಗಳು ಕೇಳಿಬರುತ್ತಿವೆ ಎಂದು ಒತ್ತಾಯಿಸಿದರು. ವರ್ಗಾವಣೆಗೊಂಡ ಶಿಕ್ಷಕರ ಎಸ್‌ಆರ್, ಎಲ್‌ಪಿಸಿ ಹಾಗೂ ಸೇವಾ ದಾಖಲಾತಿಗಳ ರವಾನೆಯಲ್ಲಿ ವಿಳಂಬ, ನಿವೃತ್ತ ಶಿಕ್ಷಕರ ಪಿಂಚಣಿ ಹಾಗೂ ಗಳಿಕೆ ರಜೆ ನಗದೀಕರಣ ಕಡತಗಳ ನಿರ್ಲಕ್ಷ್ಯ, ಹೊಸ ಶಿಕ್ಷಕರ ಸೇವಾ ದೃಢೀಕರಣ ಕಡತಗಳ ಬಾಕಿ, ಡಿಎಸ್ ಮೂಲಕ ಸಲ್ಲಿಸಲಾದ ಕಡತಗಳನ್ನು ಉದ್ದೇಶಪೂರ್ವಕವಾಗಿ ಬಾಕಿ ಇಡುವುದು ಹಲವು ಗಂಭೀರ ಆರೋಪಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

2024ರಿಂದ ಇಂದಿನವರೆಗೆ ನಡೆದ ವರ್ಗಾವಣೆ ಕಡತಗಳು, ನಿವೃತ್ತಿ ಕಡತಗಳು, ಎಸ್‌ಆರ್/ಎಲ್‌ಪಿಸಿ ರವಾನೆ, ಗಳಿಕೆ ರಜೆ ಬಿಲ್‌ಗಳು, ಡಿಎಸ್ ಕಡತಗಳು ಹಾಗೂ ತಪಾಸಣಾ ವರದಿಗಳ ವಿಶೇಷ ಪರಿಶೀಲನೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಇಲಾಖಾತ್ಮಕ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜಿಲ್ಲಾ ಅಧ್ಯಕ್ಷ ಪರಮೇಶ್ ಗೌಡ, ಜಿಲ್ಲಾ ಕಾರ್ಯದರ್ಶಿ ರಾಜೇಂದ್ರ, ಪದಾಧಿಕಾರಿಗಳಾದ ಹಾರೋಹಳ್ಳಿ ಕುಮಾರ್, ಸ್ವಾಮಿ ಇತರರು ಇದ್ದರು.



ಗ್ರಾಮಸ್ಥರ ಅನುಕೂಲಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಆರಂಭ

• ಮಾಗಡಿ: ತಾಲೂಕಿನ ತಿಪ್ಪಸಂದ್ರ ಹೋಬಳಿಯ ಮುಳ್ಳಟ್ಟಮ್ಮನ ಪಾಳ್ಯ ಗ್ರಾಮದ ಶ್ರೀ ಮುಳ್ಳಟ್ಟಮ್ಮ ದೇವಸ್ಥಾನದ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ನಿರ್ಮಾಣಕ್ಕೆ ಶನಿವಾರ ಭೂಮಿಪೂಜೆ ನೆರವೇರಿಸಲಾಯಿತು.

ಗೃಹಸಚಿವ ಜಿ. ಪರಮೇಶ್ವರ್ ಮನೆ ದೇವರಾದ ಮುಳ್ಳಟ್ಟಮ್ಮ ದೇವಾಲಯಕ್ಕೆ ಪ್ರತಿನಿತ್ಯ ಹಾಗೂ ವಿಶೇಷ ದಿನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಾರೆ. ಇಲ್ಲಿಗೆ ಬರುವ ಭಕ್ತರಿಗೆ ಮತ್ತು ಸ್ಥಳೀಯ ಗ್ರಾಮಸ್ಥರಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ಬೆಸ್ಕಾಂ ಮಾಜಿ ನಿರ್ದೇಶಕರು ಹಾಗೂ ಕಾಂಗ್ರೆಸ್ ಮುಖಂಡರಾದ ಬಿ.ವಿ.ಜಯರಾಂ ತಮ್ಮ ಸ್ವಂತ ವೆಚ್ಚದಲ್ಲಿ ಈ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸುತ್ತಿದ್ದಾರೆ.

ಗ್ರಾಮಸ್ಥರ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಬಿ.ವಿ.ಜಯರಾಂ, ಗ್ರಾಮಸ್ಥರು ಮತ್ತು ಭಕ್ತರು ಹಲವು ದಿನಗಳ ಬೇಡಿಕೆಯಂತೆ ನನ್ನ ಸ್ವಂತ ವೆಚ್ಚದಲ್ಲಿ ಈ ಘಟಕವನ್ನು ಪ್ರಾರಂಭಿಸಲಾಗುತ್ತಿದೆ. ಶುದ್ಧವಾದ ನೀರನ್ನು ಕುಡಿಯುವುದರಿಂದ ಸಾರ್ವಜನಿಕರು ಉತ್ತಮ ಆರೋಗ್ಯವನ್ನು ಪಡೆದುಕೊಳ್ಳಬಹುದು ಈ ಹಿನ್ನೆಲೆಯಲ್ಲಿ ಇಂದು ಶಂಕುಸ್ಥಾಪನೆ ನೆರವೇರಿಸಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಮುಗಿಸಿ ಘಟಕವನ್ನು ಲೋಕಾರ್ಪಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಮುಖಂಡರಾದ ನರಸಿಂಹ ಮೂರ್ತಿ, ದೇವಾಲಯದ ಪ್ರಧಾನ ಅರ್ಚಕರು ಹಾಗೂ ಮುಳ್ಳಟ್ಟಮ್ಮನ ಪಾಳ್ಯದ ಗ್ರಾಮಸ್ಥರು ಭಾಗವಹಿಸಿದ್ದರು.



ಮಳೆ ಗಾಳಿಗೆ ಧರೆಗುರುಳಿದ ವಿದ್ಯುತ್ ಕಂಬಗಳು

• ಹುಲಿಯೂರು: ಸೋಮವಾರ ರಾತ್ರಿ ಸತತವಾಗಿ ಬೀಸುತ್ತಿರುವ ಭಾರೀ ಬಿರುಗಾಳಿ ಹಾಗೂ ಸಿಡಿಲು ಸಹಿತ ಮಳೆಗೆ ಹುಳಿಯಾರು ಹೋಬಳಿಯ ಯಳನಾಡು ಗ್ರಾಮ ವ್ಯಾಪ್ತಿಯಲ್ಲಿ 40ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ಹಲವು ಕಡೆ ಟ್ರಾನ್ಸ್‌ಫಾರ್ಮರ್‌ಗಳು ಮುರಿದು ಬಿದ್ದಿದ್ದು, ವಿದ್ಯುತ್ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು ಹತ್ತಾರು ಹಳ್ಳಿಗಳು ಕತ್ತಲೆಯಲ್ಲಿ ಮುಳುಗುವಂತಾಗಿದೆ.

ಅಬ್ಬರಿಸಿದ ಬಿರುಗಾಳಿಗೆ ಯಳನಡು, ಸಿಂಗಾಪುರ, ಮೋಟಿಹಳ್ಳಿ, ಕೆರೆಸೂರುಗೊಂಡನಹಳ್ಳಿಹಾಗೂಹುಳಿಯಾರುಸಮೀಪದಕೆಂಕೆರೆವ್ಯಾಪ್ತಿಯಲ್ಲಿ ಅಕ್ಷರಶಃ ಪ್ರಳಯ ಸೃಷ್ಟಿಯಾಗಿದೆ. ಇಲ್ಲಿ ಸುಮಾರು 40ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಮೂರು ಪ್ರಮುಖ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್)ಕೇಂದ್ರಗಳು ನೆಲಕ್ಕುರುಳಿವೆ. ಹುಳಿಯಾರು ಶಾಖೆ-2 ರ ಪಂಡರಗುತ್ತಿ ಬಳಿ ಪೈಪ್‌ಮರಿ ಮತ್ತು ಸೆಕೆಂಡರಿ ಮಾರ್ಗದ ಮೇಲೆ ಬೃಹತ್ ಮರಗಳು ಬಿದ್ದಿದ್ದರಿಂದ ಸಾಲು ಸಾಲು ಕಂಬಗಳು ಮುರಿದುಹೋಗಿವೆ.

ಅವಘಡದ ತೀವ್ರತೆ ಅರಿತ ಬೆಸ್ಕಾಂ ಅಧಿಕಾರಿಗಳು ಮತ್ತು ಲೈನ್‌ಮನ್ ಸಿಬ್ಬಂದಿ ಯುದ್ದೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಸೋಮವಾರ ರಾತ್ರಿಯಿಂದಲೇ ದುರಸ್ತಿ ಕಾರ್ಯ ನಡೆಸಲಾಗಿದ್ದು, ಮಧ್ಯರಾತ್ರಿಯಲ್ಲೇ ಹಲವು ಕಡೆ ವಿದ್ಯುತ್ ಸರಬರಾಜನ್ನು ಯಶಸ್ವಿಯಾಗಿ ಮರುಸ್ಥಾಪಿಸಲಾಗಿದೆ. ಮಳೆಯಿಂದಾಗಿ ತೋಟ ಹಾಗೂ ಜಮೀನುಗಳಲ್ಲಿ ನೀರು ನಿಂತು ಕೆಸರಾಗಿದ್ದು, ಕಂಬಗಳನ್ನು ಸಾಗಿಸಲು ಟ್ರ್ಯಾಕ್ಟರ್‌ಗಳು ಚಲಿಸಲಾಗುತ್ತಿಲ್ಲ. ಇಂತಹ ದುರ್ಗಮ ಜಾಗಗಳಲ್ಲಿ ಕಂಬಗಳನ್ನು ಬದಲಾಯಿಸಲು ಸಿಬ್ಬಂದಿ ಹರಸಾಹಸ ಪಡುತ್ತಿದ್ದು, ಸಂಪೂರ್ಣ ವಿದ್ಯುತ್ ಸಂಪರ್ಕ ಕಲ್ಪಿಸಲು ಸ್ವಲ್ಪ ಸಮಯಾವಕಾಶ ಬೇಕಾಗಬಹುದು ಎಂದು ಬೆಸ್ಕಾಂ ಎಸ್‌ಇ ರಘುರಾಮ್ ಪತ್ರಿಕೆಗೆ ತಿಳಿಸಿದ್ದಾರೆ.

ರೈತರ ನಿದ್ದೆಗೆಡಿಸಿದ್ದ ಕೇಬಲ್ ಕಳ್ಳನ ಸೆರೆ:ಬಂಧನ

• ಮಾಗಡಿ: ತಾಲೂಕಿನ ವಿವಿಧ ಭಾಗದ ರೈತರ ಪಂಪ್‌ಸೆಟ್‌ಗಳ ವಿದ್ಯುತ್ ಕೇಬಲ್ ಕಳ್ಳತನ ಮಾಡುತ್ತಿದ್ದ ಖದೀಮನೊಬ್ಬನನ್ನು ರೈತರೇ ಕಾರ್ಯಾಚರಣೆ ನಡೆಸಿ ಮಾಲು ಸಮೇತ ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ಸೋಮವಾರ ಮಧ್ಯರಾತ್ರಿ ನಡೆದಿದೆ. ತಾಲೂಕಿನ ದಂಡೀನಪಾಳ್ಯ ಗ್ರಾಮದ ನಿವಾಸಿ ಚಂದ್ರು (38) ಬಂಧಿತ ಆರೋಪಿ. ಈತ ಸೋಮವಾರ ರಾತ್ರಿ 2 ಗಂಟೆ ಸಮಯದಲ್ಲಿ ರಾಮನಗರ ಮುಖ್ಯರಸ್ತೆಯ ಕೊಟ್ಟಗಾರಹಳ್ಳಿ ಬಳಿ ಕಳವು ಮಾಡಿದ ಕೇಬಲ್ ಸಮೇತ ರೈತರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಸರಣಿ ಕಳ್ಳತನದಿಂದ ಕಂಗೆಟ್ಟಿದ್ದ ರೈತರು: ಕಳೆದ ಕೆಲವು ದಿನಗಳಿಂದ ತಾಲೂಕಿನ ಚಕ್ರಬಾವಿ, ಕೋರಮಂಗಲ, ಮರಲು ದೇವನಹಳ್ಳಿ, ಪೂಜಾರಿಪಾಳ್ಯ, ಕೊಟ್ಟಗಾರಹಳ್ಳಿ, ದಂಡೀಗೆರೆ, ದಂಡಿಮದಲ ಮತ್ತಿಕೆರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸರಣಿ ಕೇಬಲ್ ಕಳ್ಳತನ ಪ್ರಕರಣಗಳು ವರದಿಯಾಗುತ್ತಿದ್ದವು. ರಾತ್ರಿ ವೇಳೆ ಜಮೀನುಗಳಿಗೆ ನುಗ್ಗುತ್ತಿದ್ದ ಕಳ್ಳರು, ಬೋರ್‌ವೆಲ್‌ಗಳಿಗೆ ಅಳವಡಿಸಲಾಗಿದ್ದ ದುಬಾರಿ ಬೆಲೆಯ ತಾಮ್ರದ ಕೇಬಲ್ ವೈರ್‌ಗಳನ್ನು ಕತ್ತರಿಸಿ ಪರಾರಿಯಾಗುತ್ತಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಸುತ್ತಮುತ್ತಲಿನ ಗ್ರಾಮಗಳ ರೈತರು ಕಳ್ಳನಿಗಾಗಿ ಹದ್ದಿನ ಕಣ್ಣಿಟ್ಟು ಕಾಯುತ್ತಿದ್ದರು. ಸೋಮವಾರ ರಾತ್ರಿ ಕೊಟ್ಟಗಾರಹಳ್ಳಿ ಸಮೀಪದ ಆರೋಪಿ ಚಂದ್ರು, ತೋಟವೊಂದರಲ್ಲಿ ಕೇಬಲ್ ಕದಿಯುತ್ತಿದ್ದಾಗ ಸಂಶಯಗೊಂಡು ಬೆನ್ನಟ್ಟಿದ ರೈತರು, ಆತನನ್ನು ಮಾಲು ಸಮೇತ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ತಕ್ಷಣವೇ ಮಾಗಡಿ ಪೊಲೀಸರಿಗೆ ಮಾಹಿತಿ ನೀಡಿ ಆರೋಪಿಯನ್ನು ಮಾಲು ಸಮೇತ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಮಾಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯಿಂದ ಮತ್ತಷ್ಟು ಮಾಹಿತಿ ಪಡೆಯಲು ತೀವ್ರ ವಿಚಾರಣೆ ಕೈಗೊಂಡಿದ್ದಾರೆ.



ಬೇಸಿಗೆಯಲ್ಲಿ ರೈತರ ಆತಂಕ, ಕಠಿಣ ಕ್ರಮಕ್ಕೆ ಒತ್ತಾಯ: ಈಗಾಗಲೇ ತೀವ್ರ ಬೇಸಿಗೆಯಿದ್ದು ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಬೋರ್‌ವೆಲ್ ಕೇಬಲ್‌ಗಳು ಕಳ್ಳತನವಾದರೆ, ಮತ್ತೆ ಸಾವಿರಾರು ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿಸುವುದು ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಭಾರಿ ಹೊರೆಯಾಗುತ್ತಿದೆ. ಪೊಲೀಸರು ಇಂತಹ ಕಳ್ಳರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಗ್ರಾಮೀಣ ಭಾಗದಲ್ಲಿ ರಾತ್ರಿ ಗಸ್ತು ಹೆಚ್ಚಿಸಿ ರೈತರಿಗೆ ರಕ್ಷಣೆ ನೀಡಬೇಕು ಎಂದು ಪ್ರಗತಿಪರ ರೈತ ನರಸಿಂಹಮೂರ್ತಿ ಒತ್ತಾಯಿಸಿದ್ದಾರೆ.

ಕಾಡಾನೆ ಸಾವು ಹಿನ್ನೆಲೆ, ಜಿಲ್ಲೆಯ ಜೀವಜಾಲಕ್ಕೆ ನದಿಗಳಿಂದ ಅಪಾಯ, ಆತಂಕ

ಕಲುಷಿತಗೊಂಡ ಅರ್ಕಾವತಿ, ವೃಷಭಾವತಿ

» ಎಸ್. ರುದ್ರೇಶ್ವರ

• ರಾಮನಗರ: ಬೆಂಗಳೂರಿನ ಕಲುಷಿತ ನೀರನ್ನು ಹೊತ್ತು ಬೆಂಗಳೂರು ದಕ್ಷಿಣ ಜಿಲ್ಲೆಗೆ ಹರಿಯುತ್ತಿರುವ ಅರ್ಕಾವತಿ ಮತ್ತು ವೃಷಭಾವತಿ ನದಿಗಳು, ಜಿಲ್ಲೆಯ ಜೀವಜಾಲಕ್ಕೆ ಅಪಾಯ ತಂದೊಡ್ಡುತ್ತಿದೆಯಾ..? ಈಚೆಗೆ ಕನಕಪುರ ತಾಲೂಕಿನ ಮಗ್ಗೂರು ಅರಣ್ಯ ವ್ಯಾಪ್ತಿಯಲ್ಲಿ ಸಂಭವಿಸಿದ ಕಾಡಾನೆ ಸಾವು ಇಂತಹದ್ದೊಂದು ಪ್ರಶ್ನೆ ನಾಗರಿಕ ವಲಯದಲ್ಲಿ ಹರಿದಾಡುತ್ತಿದೆ.

ಕೆಲ ತಿಂಗಳ ಹಿಂದೆ ಜನವಸತಿ ಪ್ರದೇಶಕ್ಕೆ ಬಂದಿದ್ದ 6 ಕಾಡಾನೆಗಳನ್ನು ಹಿಮ್ಮೆಟ್ಟಿಸುವಾಗ ಎರಡು ಕಾಡಾನೆಗಳು ಹಾರೋಬೆಲೆ ಜಲಾಶಯದ ಹಿನ್ನೀರಿನಲ್ಲಿ ಇಳಿದಿದ್ದವು. ಈ ನೀರಿನಲ್ಲಿ ಅಪಾರ ಪ್ರಮಾಣದ ಪಾಚಿ, ಜೊಂಡು ಬೆಳೆದಿದ್ದ ಕಾರಣ ಈ ಎರಡೂ ಆನೆಗಳು ನೀರಿನಿಂದ ಹೊರಬರಲಾಗದೆ ಅಲ್ಲೇ ಸಾವಿಗೀಡಾದವು. ಇದೀಗ ಮಗ್ಗೂರು ಅರಣ್ಯ ಪ್ರದೇಶದಲ್ಲಿ ಕಾಡಾನೆ ಹೆಣ್ಣಾನೆ ಸಾವಿಗೀಡಾಗಿದೆ. ಮಗ್ಗೂರು ಅರಣ್ಯದಲ್ಲಿ ಸಾವಿಗೀಡಾಗಿರುವ ಹೆಣ್ಣಾನೆ ಮರಣೋತ್ತರ ಪರೀಕ್ಷೆಯಲ್ಲಿ 35 ಲೀಟರ್ ನಷ್ಟು ನೀರು



ಸಿಕ್ಕಿದ್ದು, ಈ ಆನೆ ಮಗ್ಗೂರು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಹಾದ್ದು ಹೋಗುವ ಅರ್ಕಾವತಿ ನದಿಯಲ್ಲಿ ನೀರು ಕುಡಿದಿದೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ. ಕನಕಪುರ ತಾಲೂಕಿನ ಸಂಗಮದಲ್ಲಿ ಕಾವೇರಿ ಮತ್ತು ಅರ್ಕಾವತಿ ನದಿ ಸಂಗಮವಾಗುತ್ತದೆ. ಬೆಂಗಳೂರು ನಗರದಿಂದಲೇ ಕಲುಷಿತ ಗೊಂಡು ಹರಿಯುವ ಅರ್ಕಾವತಿ ನದಿ, ರಾಮನಗರ ಪಟ್ಟಣದ ಮಧ್ಯ ಭಾಗದಲ್ಲಿ ಹರಿದು ಹೋಗುತ್ತದೆ. ರಾಮನಗರ ಪಟ್ಟಣದ ಎರಡೂ ಬದಿಯ ಶೌಚಾಲಯದ ತ್ಯಾಜ್ಯಗಳನ್ನು ನೇರವಾಗಿ ನದಿಗೆ ಬಿಡುತ್ತಿದ್ದು, ರಾಮನಗರ ಬಿಟ್ಟ ಮುಂದಕ್ಕೆ ಹರಿಯುವ ವೇಳೆಗೆ ಅರ್ಕಾವತಿಯ ಮಾಲಿನ್ಯ ಮತ್ತಷ್ಟು ಹೆಚ್ಚಾಗುತ್ತದೆ.

ಮಗ್ಗೂರು ಅರಣ್ಯ ಪ್ರದೇಶದಲ್ಲಿ ಕಾಡಾನೆ ಬಹು ಅಂಗಾಂಗ ವೈಫಲ್ಯದಿಂದ ಸಾವಿಗೀಡಾಗಿದ್ದು, ಅಂಗಾಂಗ ವೈಫಲ್ಯಕ್ಕೆ ನಿಖರವಾದ ಕಾರಣ ತಿಳಿಯಲು ಆನೆಯ ಹೊಟ್ಟೆಯಲ್ಲಿ ಸಿಕ್ಕ ನೀರು ಹಾಗೂ ಇನ್ನಿತರ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅಲ್ಲಿಂದ ವರದಿ ಬಂದ ಬಳಿಕ ಆನೆಯ ಸಾವಿಗೆ ಸ್ಪಷ್ಟಕಾರಣ ದೊರೆಯಲಿದೆ ಎಂದು ಮಗ್ಗೂರು ವಲಯದ ಕಾವೇರಿ ವನ್ಯಜೀವಿ ಧಾಮದ ಆರ್‌ಎಫ್‌ಒ ರಾಜೇಂದ್ರ ಸ್ವಾಮಿ ತಿಳಿಸಿದರು. ನದಿಯ ಕೆಳಭಾಗದಲ್ಲಿರುವ ಕನಕಪುರ ಜನರ ಆರೋಗ್ಯದ ಮೇಲೂ ಇದು ದುಷ್ಪರಿಣಾಮ ಬೀರಲಿದೆ. ಕಾಡಾನೆ ಸಾವಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುಮಾರಸ್ವಾಮಿ ತಿಳಿಸಿದರು.


ಕನಕಪುರ ತಾಲೂಕಿನಲ್ಲಿ ಹರಿಯುವ ಕಾವೇರಿ ಮತ್ತು ಅರ್ಕಾವತಿ ನದಿಗಳ ನೀರಿನ ಗುಣಮಟ್ಟ ಪರಿಶೀಲಿಸಬೇಕು ಎಂದರು.

ಸೈಯದ್ ಆಡಳಿತಾವಧಿಯಲ್ಲಿ ಬಡ ಕುಟುಂಬಗಳಿಗೆ ನಿವೇಶನ ವಿತರಣೆ

ಕೈ ಮುಖಂಡ ಸೈಯದ್ ಜಿಯಾಉಲ್ಲಾ ನಿಧನ

• ರಾಮನಗರ: ಪುರಸಭೆ ಅಧ್ಯಕ್ಷರು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಸಂಘಟನೆಗೆ ವಿವಿಧ ಹಂತಗಳಲ್ಲಿ ದುಡಿದಿದ್ದ ಹಿರಿಯ ಮುಖಂಡ ಹಾಜಿ ಸೈಯದ್ ಜಿಯಾ ಉಲ್ಲಾ (78) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ನಗರಸಭೆ ಸದಸ್ಯ ಅಕ್ರಂ ಪಾಷಾ ಸೇರಿದಂತೆ ನಾಲ್ಕು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗ ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ.

ಪುರಸಭೆ ಅಧ್ಯಕ್ಷರಾಗಿದ್ದ ವೇಳೆ ನಗರದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಸುಸಜ್ಜಿತ ಸಭಾಂಗಣ ನಿರ್ಮಿಸಬೇಕು ಎಂಬ ಉದ್ದೇಶ ಹೊಂದಿದ್ದ ಸೈಯದ್ ಜಿಯಾ ಉಲ್ಲಾ ಆರ್ಥಿಕ ಸಂಪನ್ಮೂಲ ಕ್ರೂಢೀಕರಣಕ್ಕಾಗಿ ಡಾ.ರಾಜ್ ಕುಮಾರ್ ಅವರ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕಾರ್ಯಕ್ರಮದಿಂದ ಬಂದ ಟಿಕೆಟ್ ಹಣವನ್ನು ಬಳಸಿಕೊಂಡು ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಿದ್ದರು. ನಗರ ಬೆಳೆಯಲಿದೆ ಎಂಬ ದೂರದೃಷ್ಟಿಯಿಂದ ಅರ್ಕಾವತಿ ನದಿ ದಂಡೆಯ ಮೇಲೆ ಕೇಂದ್ರ ಸರ್ಕಾರದ ಅನುದಾನದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ(ಡಾ.ರಾಜ್‌ಕುಮಾರ್ ಕಾಂಪ್ಲೆಕ್ಸ್) ನಿರ್ಮಿಸಲು ಕಾರಣಕರ್ತರಾಗಿದ್ದಾರೆ. ಕೈ ಕಟ್ಟಲು ಶ್ರಮಿಸಿದ್ದ ಇವರ ಪಕ್ಷ ಸೇವೆಯನ್ನು ಗುರುತಿಸಿ ಕಾಂಗ್ರೆಸ್ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ನೀಡಿತ್ತು. ಸೈಯದ್ ಜಿಯಾರನ್ನು ಎಂಎಲ್‌ಸಿ ಮಾಡುವ ಭರವಸೆಯನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಚುನಾವಣೆ ಬಂದಾಗಲೆಲ್ಲಾ ನೀಡುತ್ತಲೇ ಇದ್ದರು. ಕೊನೆಯ ಬಾರಿಗೂ ಅವರ ಆಸೆ ಈಡೇರಲಿಲ್ಲ. ಪುರಸಭೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುವ ವೇಳೆ ಜಿಯಾ ಉಲ್ಲಾ ಅವರು ಮೈಸೂರು



ಸಿಲ್ಕ್ ಸೀರೆಗಳ ಪ್ರಚಾರಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದರು. ಜೀವನಕ್ಕಾಗಿ ಸ್ವತಃ ರೇಷ್ಮೆ ರೀಲರ್ ವೃತ್ತಿಯನ್ನು ಅನುಸರಿಸಿದ್ದ ಜಿಯಾವುಲ್ಲಾ, ಬಹುಶಃ ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಅತ್ಯಾಧುನಿಕ ತಂತ್ರಜ್ಞಾನದ ರೇಷ್ಮೆ ರೀಲಿಂಗ್ ಯಂತ್ರವನ್ನು ಅಳವಡಿಸಿಕೊಂಡಿದ್ದರು. ರೇಷ್ಮೆ ಉದ್ಯಮಿಯಾಗಿ, ರಾಜಕೀಯವಾಗಿ ಯಶಸ್ಸು ಸಾಧಿಸಿರುವ ಸೈಯದ್ ಜಿಯಾವುಲ್ಲಾ ಅವರನ್ನು ನಗರದ ಎಲ್ಲಾ ಧರ್ಮೀಯರು ವಿಶ್ವಾಸ ಗಳಿಸಿದ್ದರು. ಮಂಗಳವಾರ ಇಸ್ಲಾಂ ಧರ್ಮದ ಪದ್ಧತಿಯಂತೆ ಅವರ ಅಂತ್ಯ ಸಂಸ್ಕಾರ ನಗರದಲ್ಲಿ ನೆರವೇರಿದೆ. ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ. ಸುರೇಶ್, ಶಾಸಕ ಇಕ್ಬಾಲ್ ಹುಸೇನ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು, ಟಿಎಪಿಸಿಎಂಎಸ್ ಅಧ್ಯಕ್ಷ ಎಸ್.ಸುರೇಶ್ ಮುಂತಾದ ಗಣ್ಯರು, ಸಮಾಜದ ಎಲ್ಲಾ ವರ್ಗದ ಪ್ರಮುಖರು ಸೈಯದ್ ಜಿಯಾ ಉಲ್ಲಾ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದುಕೊಂಡರು.

ಸೈಯದ್ ಜಿಯಾ ಉಲ್ಲಾ ನಿಧನದಿಂದ ಆಘಾತ: ಡಿಕೆಶಿ ಹಿರಿಯ ಮುಖಂಡ ಜಿಯಾ ಉಲ್ಲಾ ಅವರ ನಿಧನದಿಂದ ಪಕ್ಷದ ದೊಡ್ಡ ಆಧಾರ ಸ್ತಂಭವನ್ನು ಕಳೆದುಕೊಂಡಂತಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಂಬನಿ ಮಿಡಿದಿದ್ದಾರೆ. 40 ವರ್ಷಗಳಿಂದ ನೋಡಿದ್ದೇನೆ. ಅನೇಕ ನಾಯಕರನ್ನು ಅವರು ತಯಾರು ಮಾಡಿದ್ದಾರೆ. ಅಪಾರ ಪ್ರೀತಿ ಇಟ್ಟಿದ್ದರು. ಎಂಎಲ್‌ಸಿ ಮಾಡುವ ಭರವಸೆ ನೀಡಿದ್ದೆ, ಆದರೆ ಸಾಧ್ಯವಾಗಲಿಲ್ಲ ಎಂದು ವಿಷಾದಿಸಿದರು.

ಕಿರುಸುದ್ದಿ

ಸತ್ಯಮ್ಮದೇವಿಯ ಜಾತ್ರೆ, ದೀಪೋತ್ಸವ



ಕೋಲಾರ: ತಾಲೂಕಿನ ಕಾಮಧೇನಹಳ್ಳಿ ಗ್ರಾಮದಲ್ಲಿ ಅನಾದಿಕಾಲದಿಂದಲೂ ನೆಲೆಸಿರುವ ಶ್ರೀಮಾತೆ ಆದಿಶಕ್ತಿ ಸತ್ಯಮ್ಮದೇವಿಯ ಹುಟ್ಲು ಜಾತ್ರೆ ಮತ್ತು 9 ಗ್ರಾಮಸ್ಥರಿಂದ ದೀಪೋತ್ಸವ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಬಾಬು ಮೌನಿ ತಿಳಿಸಿದ್ದಾರೆ. ಕಾಮಧೇನಹಳ್ಳಿ, ಚಿನ್ನಾಪುರ, ಯಳಚೀಪುರ, ಪೂವಂಡಹಳ್ಳಿ, ಯಲವಾರ, ಮಾರ್ಜೇನಹಳ್ಳಿ, ಪಾರೇಹೊಸಹಳ್ಳಿ, ಕೂತಾಂಡಹಳ್ಳಿ, ವರದೇನಹಳ್ಳಿ ಗ್ರಾಮಸ್ಥರುಗಳಿಂದ ಶ್ರೀ ಸತ್ಯಮ್ಮ ದೇವಿಗೆ ದೀಪೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗ್ರಾಮಸ್ಥರೆಲ್ಲರೂ ಸೇರಿ ಕಂಬವನ್ನು ನಿಲ್ಲಿಸಿ ತೆಂಗಿನಕಾಯಿ ತಿರುಗಿಸಿ ಕಾಯಿಯನ್ನು ಹೊಡೆಯುವ ಪದ್ಧತಿ ಹಲವು ವರ್ಷಗಳಿಂದ ನಡೆಯುತ್ತಾ ಬಂದಿದೆ. ಹಾಗೇ ಶ್ರೀಆದಿಶಕ್ತಿ ಚೌಡೇಶ್ವರಿ ದೇವಿಗೆ ಅಭಿಷೇಕ, ಅಲಂಕಾರ, ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನಡೆಯಲಿದ್ದು, ಸತ್ಯಮ್ಮ ದೇವಿ ರಥೋತ್ಸವ ಕಾರ್ಯಕ್ರಮಗಳಲ್ಲಿ ಭಕ್ತಮಹಾಶಯರು ತೇರಿಗೆ ಹಣ್ಣು ಕಾಯಿಗಳನ್ನು ಅರ್ಪಿಸುವ ಕಾರ್ಯಕ್ರಮವಿರುತ್ತದೆ. ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಬಾಬು ಮೌನಿ ಕೋರಿದ್ದಾರೆ.

ಸಮುರಾಯ್ ಸೆಮಿನಾರ್ ಕೋಲಾರ ತಂಡಕ್ಕೆ ಮೆಚ್ಚುಗೆ

ಕೋಲಾರ: ಮೈಸೂರಿನಲ್ಲಿ ದಿನಾಂಕ 17 ಮತ್ತು 18 ಮೇ 2026 ರಂದು ಮೈಸೂರಿನ ಹಿಣಕಲ್ ನಗರದ ರಾಯಲ್ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಕರ್ನಾಟಕ ರಾಜ್ಯ ಸಮುರಾಯ್ ಫೆಡರೇಶನ್ ವತಿಯಿಂದ ಎರಡು ದಿನಗಳ ರಾಜ್ಯಮಟ್ಟದ ಸಮುರಾಯ್ ಸೆಮಿನಾರ್ ಯಶಸ್ವಿಯಾಗಿ ನಡೆಯಿತು.

ಈ ಸೆಮಿನಾರ್‌ನಲ್ಲಿ ಕೋಲಾರದ ರಾಮ ಮಾರ್ಷಲ್ ಆರ್ಟ್ಸ್ ಸಂಸ್ಥೆಯ ಮುಖ್ಯಸ್ಥ ಹಾಗೂ ಸಮುರಾಯ್ ಜಿಲ್ಲಾ ಅಧ್ಯಕ್ಷ ಕರಾಟೆ ರಾಮರವರು ತಮ್ಮ ವಿದ್ಯಾರ್ಥಿಗಳಾದ ಅಂಜನ್ ಕುಮಾರ್, ಯಶ್ವಂತ್ ಕುಮಾರ್ ಹಾಗೂ ಮೈದಿಲಿ ರವರ ತಂಡದೊಂದಿಗೆ ಭಾಗವಹಿಸಿ ಉನ್ನತ ಮಟ್ಟದ ತರಬೇತಿ ಪಡೆದರು.

ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಮುರಾಯ್ ಫೆಡರೇಶನ್‌ನ ರಾಜ್ಯ ಅಧ್ಯಕ್ಷ ಜಯಂತ್ ಸೆಮಿನಾರ್‌ನಲ್ಲಿ ಭಾಗವಹಿಸಿ ಉತ್ಸಾಹದಿಂದ ತರಬೇತಿ ಪಡೆದ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಅವರ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

ಹೂಡಿ ಹಾಲ್ಟ್ ನಿಲ್ದಾಣದ ನಿಲುಗಡೆಗೆ ತಾತ್ಕಾಲಿಕ ರದ್ದು

ಬಂಗಾರಪೇಟೆ: ಬೆಂಗಳೂರು ಕಂಟೋನ್ಮೆಂಟ್ ವೈಟ್ ಫೀಲ್ಡ್ ಭಾಗದಲ್ಲಿ ಚತುಷ್ಪಥ ರೈಲ್ವೆ ಮಾರ್ಗ ಕಾಮಗಾರಿ ನಿಮಿತ್ತ ಮೇ 18 ರಿಂದ ಜಾರಿಗೆ ಬರುವಂತೆ ಹೂಡಿ ಹಾಲ್ಟ್ ನಿಲ್ದಾಣವನ್ನು ಪ್ರಯಾಣಿಕ ಸಂಚಾರಕ್ಕೆ ತಾತ್ಕಾಲಿಕವಾಗಿ ಮುಚ್ಚಲಾಗುತ್ತದೆ, ಆದ್ದರಿಂದ ಮೇ 18 ಸೋಮವಾರ ದಿಂದ ಮುಂದಿನ ಸೂಚನೆಯವರೆಗೆ ಬಂಗಾರಪೇಟೆ ಮಾರ್ಗವಾಗಿ ಬೆಂಗಳೂರಿಗೆ ಚಲಿಸುವ ರೈಲುಗಳಿಗೆ ಹೂಡಿ ಹಾಲ್ಟ್ ನಿಲ್ದಾಣದಲ್ಲಿ ನಿಲುಗಡೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗವುದು ಎಂದು ಬೆಂಗಳೂರು ಭಾಗದ ರೈಲ್ವೆ ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಕೆ.ಎನ್ .ಪ್ರಾಣೇಶ್ ಹೇಳಿದ್ದಾರೆ.ಕೆ.ಎಸ್.ಆರ್. ಬೆಂಗಳೂರು–ಮಾರಿಕುಪ್ಪಂ ಮೆಮು, ಕೆ.ಎಸ್.ಆರ್. ಬೆಂಗಳೂರು ಜೋಲಾರಪೇಟೆ ಮೆಮು, ಕೆ.ಎಸ್.ಆರ್. ಬೆಂಗಳೂರು, ವೈಟ್ ಫೀಲ್ಡ್ ಮೆಮು, ಕೆ.ಎಸ್.ಆರ್. ಬೆಂಗಳೂರು – ಬಂಗಾರಪೇಟೆ ಮೆಮು, ಬಾಣಸವಾಡಿ ಕುಪ್ಪಂ ಮೆಮು, ಕೆ.ಎಸ್.ಆರ್. ಬೆಂಗಳೂರು – ಬಂಗಾರಪೇಟೆ ಮೆಮು ಸೇರಿದಂತೆ ಒಟ್ಟು 23 ಮೆಮು ರೈಲು ಗಾಡಿ ಗಳು ನಿಲುಗಡೆಯನ್ನು ರದ್ದುಪಡಿಸಲಾಗಿದ್ದು ಇದಕ್ಕೆ ಪ್ರಯಾಣಿಕರು ಸಹಕರಿಸಬೇಕಾಗಿ ಮನ ಮಾಡಿದ್ದಾರೆ.

ಗಂಟಲಲ್ಲಿ ನೆಲ್ಲಿಕಾಯಿ ಸಿಲುಕಿ ಮಗು ಸಾವು

ಕೋಲಾರ: ಬೆಟ್ಟದ ನೆಲ್ಲಿಕಾಯಿ ಗಂಟಲಲ್ಲಿ ಸಿಲುಕಿ ಎರಡು ವರ್ಷದ ಮಗು ಸಾವನ್ನಪ್ಪಿರುವ ಘಟನೆ ಕೋಲಾರದಲ್ಲಿ ನಡೆದಿದೆ.



ಕೋಲಾರ ಜಿಲ್ಲೆ ಮಾಲೂರು ಪಟ್ಟದ ಗಾಂಧಿ ಸರ್ಕಲ್‌ನಲ್ಲಿಂದು ಈ ಘಟನೆ ನಡೆದಿದ್ದು, ರವಿ ಹಾಗೂ ಮಾಲಾ ದಂಪತಿಯ ಎರಡು ವರ್ಷದ ಗಂಡು ಮಗು ವಿಜಯೇಂದ್ರ ಮೃತಪಟ್ಟಿದ್ದಾನೆ. ಘಟನೆ ನಡೆದ ದಿನ ಆಟವಾಡುವಾಗ ಮಗು ಬೆಟ್ಟದ ನೆಲ್ಲಿಕಾಯಿ ನುಂಗಿದೆ. ಈ ವೇಳೆ ಅದು ಗಂಟಲಲ್ಲಿ ಸಿಲುಕಿಕೊಂಡಿದೆ. ಪರಿಣಾಮ ಉಸಿರಾಟದ ಸಮಸ್ಯೆ ಉಂಟಾಗಿದ್ದು, ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಗಂಟಲಲ್ಲಿ ಸಿಲುಕಿದ್ದ ನೆಲ್ಲಿಕಾಯಿ ಹೊರ ತೆಗೆಯಲಾಗದೇ ಮಗು ಸಾವನ್ನಪ್ಪಿದೆ.



ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದಲ್ಲಿ ಎಸ್.ಎಂ ಸೆಹಗಲ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಉದ್ಯಮಶ್ರೀ ಯೋಜನೆಯನ್ನು ಅತಿಥಿಗಳು ಉದ್ಘಾಟಿಸಿದರು.

ಉದ್ಯಮಶ್ರೀ ಯೋಜನೆಗೆ ಚಾಲನೆ

ಕೋಲಾರ: ಮಹಿಳೆಯರ ಸಬಲೀಕರಣ ಮತ್ತು ಸ್ವ ಉದ್ಯೋಗದ ಪ್ರೋತ್ಸಾಹಕ್ಕಾಗಿ ಉದ್ಯಮಶ್ರೀ ಎಂಬ ವಿನೂತನ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಎಸ್.ಎಂ ಸೆಹಗಲ್ ಫೌಂಡೇಶನ್ ನ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಶಿವಶರಣಪ್ಪ ಹೇಳಿದರು.

ಜಿಲ್ಲೆಯ ಮಾಲೂರು ತಾಲ್ಲೂಕಿನ ಕುಡಿಯನೂರು ಗ್ರಾಮದಲ್ಲಿ ಎಸ್.ಎಂ ಸೆಹಗಲ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಉದ್ಯಮಶ್ರೀ ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದರು. ಉದ್ಯಮಶ್ರೀ ಯೋಜನೆ ಮೂಲಕ ಸ್ವಸಹಾಯ ಸಂಘದ ಮಹಿಳೆಯರಿಗೆ ವಿವಿಧ ಕೌಶಲ್ಯಯುತ ತರಬೇತಿ ನೀಡುವುದು. ಅರ್ಹರಿಗೆ ವಿವಿಧ ಯಂತ್ರೋಪಕರಣ ವಿತರಣೆಯ ಜೊತೆಗೆ ಮಹಿಳೆಯರು ತಯಾರಿಸಿದ ವಿವಿಧ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಕೆಲಸವನ್ನು ಈ ಯೋಜನೆ ಮೂಲಕ ಮಾಡಲಾಗುತ್ತದೆ ಎಂದರು. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಧಿಕಾರಿ ತುಳಸಿ ಮಾತನಾಡಿ,ಎಲ್ಲಾ ಸ್ವಸಹಾಯ ಸಂಘದ ಸದಸ್ಯರು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಜೀವನ ಜ್ಯೋತಿ ಭಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಸುವ ಮೂಲಕ ವಿಮಾ ವ್ಯಾಪ್ತಿಗೆ ಒಳಪಡಬೇಕು ಎಂದು ತಿಳಿಸಿದರು. ಸೆಹಗಲ್ ಫೌಂಡೇಶನ್ ನ ಅಧಿಕಾರಿ ವಿಜಯ್ ಪುಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಉದ್ಯಮಿ ಮಂಜುಳಮ್ಮ ಸೇರಿದಂತೆ ಸಂಘದ ಸದಸ್ಯರು ಭಾಗವಹಿಸಿದ್ದರು.



ಕೋಲಾರ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ಕೆ.ಉಮಾ ಅವರನ್ನು ಸಹಶಿಕ್ಷಕರ ಸಂಘ,ಜಿಲ್ಲಾ ದೈಹಿಕ ಶಿಕ್ಷಕರ ಸಂಘ, ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದಿಂದ ಸನ್ಮಾನಿಸಿ ಸ್ವಾಗತಿಸಲಾಯಿತು. ರಾಧಮ್ಮ, ಮುರಳಿ ಮೋಹನ್, ಶಿವಕುಮಾರ್, ನಾರಾಯಣರೆಡ್ಡಿ,ಕೃಷ್ಣೇಗೌಡ ಇದ್ದರು.

ಮಾರುಕಟ್ಟೆ ಜಾಗದ ಕಡತ ಮುಕ್ತಿಗಾಗಿ ಮೇ 26ರಂದು ಹೋರಾಟ

ರೈತರಿಂದ ಬಂದ್ ಎಚ್ಚರಿಕೆ

ಕೋಲಾರ: ಸರ್ಕಾರದ ಮಟ್ಟದಲ್ಲಿ ದೂಳು ಹಿಡಿಯುತ್ತಿರುವ ಕೋಲಾರ ಎ.ಪಿ.ಎಂ.ಸಿ. ಜಾಗದ ಕಡತಕ್ಕೆ ಮುಕ್ತಿ ನೀಡುವಲ್ಲಿ ವಿಫಲವಾಗಿರುವ ಕಂದಾಯ ಹಾಗೂ ಉಸ್ತುವಾರಿ ಸಚಿವರ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ಮೇ.26 ರ ಮಂಗಳವಾರ ಜಾನುವಾರುಗಳು, ಟ್ರಾಕ್ಟರ್‌ಗಳ ಸಮೇತ ರಾಷ್ಟ್ರೀಯ ಹೆದ್ದಾರಿ ಕೊಂಡರಾಜನಹಳ್ಳಿ ಗೇಟ್ ಬಂದ್ ಮಾಡಲು ರೈತ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮಾತನಾಡಿ, ಹತ್ತಾರು ಕಡೆ ಎರಡು ಲಕ್ಷಾಂತರ ರೈತ ಕುಟುಂಬಗಳ ಜೀವನಾಡಿಯಾಗಿರುವ ಮಾರುಕಟ್ಟೆಯ ಜಾಗದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಭೂಮಿ ಮಂಜೂರು ಮಾಡಿ ಅಭಿವೃದ್ಧಿ ಮಾಡಲು ಉಸ್ತುವಾರಿ ಹಾಗೂ ಕಂದಾಯ ಸಚಿವರಿಗೆ ಇಚ್ಛಾಶಕ್ತಿ ಕೊರತೆ ಕಾರಣವಾಗಿದೆ ಎಂದು ಜನ ಪ್ರತಿನಿಧಿಗಳ ವಿರುದ್ಧ ಆಕ್ರೋಷ ವ್ಯಕ್ತಪಡಿಸಿದರು.

ಏಷ್ಯಾದಲ್ಲಿ 2ನೇ ಅತಿದೊಡ್ಡ ಮಾರುಕಟ್ಟೆಯೆಂಬ ಹೆಗ್ಗಳಿಕೆಯಿದ್ದು, ಕೆಲವೆ ದಿನಗಳಲ್ಲಿ ಟಮೊಟೋ ಸುಗ್ಗಿ ಕಾಲ ಪ್ರಾರಂಭ ವಾಗುತ್ತಿದ್ದು, ಮಾರುಕಟ್ಟೆ ಜಾಗದ ಸಮಸ್ಯೆಯಿಂದ ಟ್ರಾಫಿಕ್ ಸಮಸ್ಯೆ, ಜೊತೆಗೆ ವ್ಯಾಪಾರಸ್ಥರಿಗೆ ಮಂಡಿ ಮಾಲೀಕರಿಗೆ, ರೈತರಿಗೆ ಅನಾನುಕೂಲವಾಗುತ್ತಿದ್ದು, ಜನ ಪ್ರತಿನಿಧಿಗಳು ರೈತರ ಸಮಸ್ಯೆ ಪರಿಹರಿಸುವ ಗೋಜಿಗೆ ಹೋಗುತ್ತಿಲ್ಲ ಎಂದು ಕಿಡಿಕಾರಿದರು.

ಕಂದಾಯ, ಸರ್ವೆ ಹಾಗೂ ಎ.ಪಿ.ಎಂ.ಸಿ. ಅಧಿಕಾರಿಗಳ ವರದಿಯಂತೆ ಕಸಬಾ ಹೋಬಳಿ ಕಲ್ಲಂಡೂರು ಗ್ರಾಮದ ಸ.ನಂ. 37 ರಲ್ಲಿ 32.37 ಎಕರೆ ಹಾಗೂ ವಕ್ಕಲೇರಿ ಹೋಬಳಿಯ ಕೋನೆಪುರ ಗ್ರಾಮದ ಸ.ನಂ. 34 ರಲ್ಲಿ 27.10 ಎಕರೆ ಒಟ್ಟು 60.07 ಎಕರೆ ಜಮೀನಿನ ಸಂಪೂರ್ಣ ಕಡತವನ್ನು ತಯಾರಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಕಳುಹಿಸಿ ಎರಡು ವರ್ಷ ಕಳೆದರೂ ಇದುವರೆವಿಗೂ ಜಾಗದ ಪ್ರಸ್ತಾವನೆ ಚರ್ಚೆಯಾಗುತ್ತಿಲ್ಲ ಎಂದು ಖಂಡಿಸಿದರು.



> ಕಂದಾಯ ಹಾಗೂ ಉಸ್ತುವಾರಿ ಸಚಿವರೇ ಟಿಮೋಟೋ ಮಾರುಕಟ್ಟೆಯ ಕಡತಕ್ಕೆ ಮುಕ್ತಿ ನೀಡಿ. ಇಲ್ಲವೆ, ರೈತರಿಗೆ ವಿಷ ನೀಡಿ. ಇಲ್ಲವಾದರೆ ದಯವಿಟ್ಟು ನಿಮಗೆ ಕೈಮುಗಿದು ಬೇಡಿಕೊಳ್ಳುತ್ತೇವೆ ಕೋಲಾರ ಜಿಲ್ಲೆಯನ್ನು ಪಕ್ಕದ ಆಂಧ್ರ ರಾಜ್ಯಕ್ಕೆ ಸೇರಿಸಿ ಪುಣ್ಯ ಕಟ್ಟಿಕೊಳ್ಳಿ.
> ■ ಈಕಂಬಳ್ಳಿ ಮಂಜುನಾಥ, ಜಿಲ್ಲಾಧ್ಯಕ್ಷ

ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ ಮಾತನಾಡಿ,20 ವರ್ಷಗಳಿಂದ ಮಾರುಕಟ್ಟೆಯ ಜಾಗದ ಸಮಸ್ಯೆಗೆ ಮುಕ್ತಿ ನೀಡದ ಸರ್ಕಾರದ ಮಟ್ಟದಲ್ಲಿ ದೂಳು ಹಿಡಿಯುತ್ತಿರುವ ಕಡತಕ್ಕೆ ಮುಕ್ತಿ ನೀಡಬೇಕೆಂದು ಜಾನುವಾರುಗಳು, ಬಂಡಿಗಳ ಸಮೇತ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವ ಮೂಲಕ ನ್ಯಾಯಪಡೆದುಕೊಳ್ಳುವ ಕಟ್ಟ ಕಡೆಯ ಹೋರಾಟಕ್ಕೆ ರೈತ ಸಂಘ ಮುಂದಾಗಿದೆ ಎಂದರು.

ಪೊಲೀಸ್ ಬರಲೀ, ಲಾಠಿ ಬರಲೀ, ನ್ಯಾಯ ಸಿಗುವವರೆಗೂ ಹೆದ್ದಾರಿ ಬಂದ್‌ನಿಂದ ಹಿಂದೆ ಹೋಗುವ ನಿರ್ಧಾರವಿಲ್ಲವೆಂದು ಜನಪ್ರತಿನಿಧಿಗಳಿಗೆ, ಪೊಲೀಸ್ ಇಲಾಖೆಗೆ ಎಚ್ಚರಿಕೆಯನ್ನು ಸಭೆಯ ಮುಖಾಂತರ ನೀಡಿದರು. ಸಭೆಯಲ್ಲಿ ಮಂಗಸಂದ್ರ ತಿಮ್ಮಣ್ಣ, ಗಿರೀಶ್, ಪುತ್ತೇರಿರಾಜು, ಚಂದ್ರಪ್ಪ, ರಾಜ್ಯ ಮು. ಕಮ್ಮದಟ್ಟಿ ಚಲಪತಿ, ಮಂಜುನಾಥ, ದೇವರಾಜ್, ಯಲ್ಲಣ್ಣ, ಸುಪ್ರಿಂ ಚಲ, ಆನಂದರೆಡ್ಡಿ, ಮುನಿರಾಜು, ಶೈಲಜ, ರತ್ನಮ್ಮ, ಗೌರಮ್ಮ, ನಯನ, ಪವಿತ್ರ ಮುಂತಾದವರು ಇದ್ದರು.

ಮುಂಗಾರು ಮಳೆ ಮುನ್ನೆಚ್ಚರಿಕೆ ವಹಿಸಿ

ಕೋಲಾರ: ರಾಜ್ಯದಲ್ಲಿ ಮುಂಗಾರು ಮಳೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆಯ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿಗಳ ರಕ್ಷಣೆಗೆ ಜಿಲ್ಲಾಡಳಿತ ಮೊದಲ ಆದ್ಯತೆ ನೀಡಿದೆ ಎಂದು ಕೋಲಾರ ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ತಿಳಿಸಿದ್ದಾರೆ.

> ಜಿಲ್ಲೆಯಾದ್ಯಂತ ಶಿಥಿಲಗೊಂಡ ಕಟ್ಟಡಗಳ ತೆರವಿಗೆ ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ಆದೇಶ

ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿರುವ ಅವರು, ಜಿಲ್ಲೆಯ ಹಲವು ಭಾಗಗಳಲ್ಲಿ ಹಳೆಯ ಹಾಗೂ ಶಿಥಿಲಗೊಂಡ ವಸತಿ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು, ಸರ್ಕಾರಿ ಕಚೇರಿಗಳು ಹಾಗೂ ಶಾಲಾ–ಕಾಲೇಜು ಕಟ್ಟಡಗಳು ಅಪಾಯಕಾರಿ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಳೆಯಿಂದಾಗಿ ಇಂತಹ ಕಟ್ಟಡಗಳು ಕುಸಿದು ಸಂಭವಿಸಬಹುದಾದ ಭೀಕರ ಅಪಘಾತಗಳನ್ನು ತಡೆಯಲು ಜಿಲ್ಲೆಯ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕು ಎಂದು ಸೂಚನೆ ನೀಡಿದ್ದಾರೆ. ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಶಿಥಿಲಗೊಂಡ ಕಟ್ಟಡಗಳನ್ನು ತುರ್ತಾಗಿ ಗುರುತಿಸಬೇಕು. ಸಾರ್ವಜನಿಕರ ವಾಸಕ್ಕೆ ಯೋಗ್ಯವಲ್ಲದ ಹಾಗೂ ಅಪಾಯಕಾರಿಯಾಗಿರುವ ಕಟ್ಟಡಗಳ ಮಾಲೀಕರಿಗೆ ಅಥವಾ ಬಳಕೆದಾರರಿಗೆ ತಕ್ಷಣವೇ ಕಟ್ಟಡ ಖಾಲಿ ಮಾಡಲು ಅಥವಾ ಸೂಕ್ತ ದುರಸ್ತಿ ಕ್ರಮಗಳನ್ನು ಕೈಗೊಳ್ಳಲು ನೋಟಿಸ್ ಜಾರಿಗೊಳಿಸಲಾಗುವುದು. ಅಲ್ಲದೆ, ಇಂತಹ ಕಟ್ಟಡಗಳ ವಿರುದ್ಧ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಸಂಪೂರ್ಣ ವರದಿಯನ್ನು ಮುಂದಿನ 15 ದಿನಗಳೊಳಗಾಗಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಗಡುವು ವಿಧಿಸಿದ್ದಾರೆ.

ಕೋಲಾರ ಜಿಲ್ಲೆಯ ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅಥವಾ ವಾಸವಿರುವ ಪ್ರದೇಶಗಳಲ್ಲಿ ಯಾವುದೇ ಹಳೆಯ, ಅತ್ಯಂತ ಜರ್ಜರಿತ ಅಥವಾ ಅಪಾಯಕಾರಿ ಸ್ಥಿತಿಯಲ್ಲಿರುವ ಖಾಸಗಿ ಅಥವಾ ಸಾರ್ವಜನಿಕ ಕಟ್ಟಡಗಳು ನಿಮ್ಮ ಗಮನಕ್ಕೆ ಬಂದಲ್ಲಿ, ತಕ್ಷಣವೇ ಸ್ಥಳೀಯ ಆಡಳಿತ ಕಚೇರಿ ಅಥವಾ ಜಿಲ್ಲಾ ಮಟ್ಟದ ತುರ್ತು ನಿಯಂತ್ರಣ ಕೊಠಡಿ ದೂ.ಸಂ:08152–243506 / 1077 /9740050061/ 9606241449 ಗೆ ಮಾಹಿತಿ ನೀಡಿ. ಸಾರ್ವಜನಿಕರ ಜಾಗರೂಕತೆ ಮತ್ತು ಸಹಕಾರದಿಂದ ಮಾತ್ರ ದೊಡ್ಡ ಅನಾಹುತಗಳನ್ನು ತಡೆಯಲು ಸಾಧ್ಯ. ಜಿಲ್ಲಾಡಳಿತದೊಂದಿಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಕೋರಿದ್ದಾರೆ.

ಅಕ್ರಮ ಚಟುವಟಿಕೆ ಬಗ್ಗೆ ಮಾಹಿತಿ ನೀಡಿ: ಪಿಎಸ್‌ಐ

ಬಂಗಾರಪೇಟೆ: ಗ್ರಾಮದಲ್ಲಿ ಮಾದಕ ದ್ರವ್ಯ ಮಾರಾಟ ಅಥವಾ ಇನ್ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಪಿಎಸ್‌ಐ ಕಿರಣ್ ಕುಮಾರ್ ಹೇಳಿದರು.

ಕಾಮಸಮುದ್ರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಂಗರಹಳ್ಳಿ ಗ್ರಾಮದಲ್ಲಿ ಇಲಾಖೆ ವತಿಯಿಂದ ಜನಸಂಪರ್ಕ ಮತ್ತು ಬೀಟ್ ಸಭೆ ನಡೆಯಿತು.ಈ ವೇಳೆ ಕಾಮಸಮುದ್ರ ಠಾಣೆಯ ಪೊಲೀಸ್ ಪಿಎಸ್‌ಐ ಕಿರಣ್ ಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಸಂಭಸುತ್ತಿರುವ ಅಪರಾಧಗಳ ಸ್ವರೂಪ ಬದಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚು ಜಾಗರೂಕರಾಗಿರಬೇಕೆಂದು ಕರೆ ನೀಡಿದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು, ಅಪ್ರಾಪ್ತ ವಯಸ್ಕರಿಗೆ ಯಾವುದೇ ಕಾರಣಕ್ಕೂ ವಾಹನ ಚಾಲನೆ ಮಾಡಲು ನೀಡಬಾರದು, ಅತಿವೇಗ ಹಾಗೂ ಬೇಜವಾಬ್ದಾರಿ ಚಾಲನೆಯೇ ರಸ್ತೆ ಅಪಘಾತಗಳಿಗೆ ಕಾರಣ, ಹಾಗಾಗಿ ನಿಯಮ ಪಾಲನೆ ಮೂಲಕ ಪ್ರಾಣಹಾನಿ ತಡೆಯಬಹುದು ಎಂದರು, ಇಂಟರ್ನೆಟ್ ಹಾಗೂ ಅತಿಯಾದ ಮೊಬೈಲ್ ಬಳಕೆಯಿಂದ ಸೈಬರ್ ವಂಚನೆಗಳು ಹೆಚ್ಚಾಗುತ್ತಿವೆ, ಲಾಟರಿ ಬಂದಿದೆ, ಅತಿ ಕಡಿಮೆ ದರದಲ್ಲಿ ಲೋನ್ ನೀಡಲಾಗುವುದು ಎಂಬ ನಕಲಿ ಆಮಿಷಗಳಿಗೆ ಸಾರ್ವಜನಿಕರು ಬಲಿಯಾಗಬಾರದು. ಬ್ಯಾಂಕ್ ಖಾತೆ ವರ, ಒಟಿಪಿ ಯಾರಿಗೂ ಹಂಚಿಕೊಳ್ಳಬಾರದು. ಒಂದು ವೇಳೆ ವಂಚನೆಗೊಳಗಾದರೆ ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಿ ದೂರು ದಾಖಲಿಸಬೇಕೆಂದು ತಿಳಿಸಿದರು. ಗ್ರಾಮದ ಮುಖಂಡರು, ಬೀಟ್ ಪೊಲೀಸರು ಇದ್ದರು.



ಕೋಲಾರ ತಾಲೂಕಿನ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆ ಶಿಕ್ಷಕರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ದಾಖಲಾತಿ ಆಂದೋಲನ ನಡೆಸಿ, ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಲು ಪೋಷಕರಿಗೆ ಮನವಿ ಮಾಡಿದರು.

ಕಳಪೆ ಕಾಮಗಾರಿಗೆ ಬಿಜೆಪಿ ಮುಖಂಡರ ಆಕ್ರೋಶ

ಕೆಜಿಎಫ್: ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳ ಪೈಕಿ 30 ವಾರ್ಡ್‌ಗಳಲ್ಲಿ ಕೈಗೊಳ್ಳಲಾಗಿರುವ ಡ್ರೈನೇಜ್ (ಕಾಲುವೆ) ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, ಇಂಜಿನಿಯರಿಂಗ್ ಇಲಾಖೆ ನಿಗದಿಪಡಿಸಿರುವ ಮಾನದಂಡಗಳನ್ನು ಸಂಪೂರ್ಣ ಉಲ್ಲಂಘಿಸಲಾಗಿದೆ ಎಂದು ಸಾರ್ವಜನಿಕರು ಬಿಜೆಪಿ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರಸಭೆ ವ್ಯಾಪ್ತಿಯಲ್ಲಿ ಕೋಟ್ಯಾಂತರ ರೂಪಾಯಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದರೂ, ನಿಯಮಾನುಸಾರ ಬಳಸಬೇಕಾದ ಗೇಜ್ ಕಬ್ಬಿಣ, ಸಿಮೆಂಟ್ ಹಾಗೂ ಮರಳು ಮಿಶ್ರಣದ ಪ್ರಮಾಣವನ್ನು ಪಾಲಿಸಿಲ್ಲ ಎಂದು ಆರೋಪಿಸಲಾಗಿದೆ. ಹಳೆಯ ಕಾಲುವೆಗಳನ್ನು ಕೆಡವಿದ ನಂತರ ಅಲ್ಲಿದ್ದ ಜಲ್ಲಿ ಹಾಗೂ ಕಲ್ಲುಗಳನ್ನು ಮರುಬಳಕೆ ಮಾಡಲಾಗಿದೆ ಎನ್ನಲಾಗಿದೆ. ಹಳೆಯ ಕಾಲುವೆಗಳನ್ನು ಸಮರ್ಪಕವಾಗಿ ಸ್ವಚ್ಛಗೊಳಿಸದೆ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಒಂದು ಕಾಲುವೆಯಿಂದ ಮತ್ತೊಂದು ಕಾಲುವೆಗೆ ಸಮರ್ಪಕ ಲಿಂಕ್ ನೀಡದಿರುವುದರಿಂದ ಮಳೆ ಹಾಗೂ ಒಳಚರಂಡಿ ನೀರು ಸರಾಗವಾಗಿ ಹರಿಯದೆ ಒಂದೇ ಸ್ಥಳದಲ್ಲಿ ನಿಂತು ಕೊಳಚೆ ಹಾಗೂ ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಬೇಕಾದ ನಗರಸಭೆ ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದೆ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಬಿಲ್‌ಗಳನ್ನು ಪಾಸ್ ಮಾಡುತ್ತಿದ್ದಾರೆ ಎಂದು ಕೋಲಾರ ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಾಬಿ ಸುರೇಶ್ ಆರೋಪಿಸಿದರು. ಮುಂದಿನ ದಿನಗಳಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ನಡೆದಿರುವ ಕಳಪೆ ಗುಣಮಟ್ಟದ ಕಾಮಗಾರಿಗಳ ವಿರುದ್ಧ ಮಾಜಿ ಶಾಸಕ ವೈ.ಸಂಪಂಗಿ ನೇತೃತ್ವದಲ್ಲಿ ನಗರಸಭೆ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಘನತ್ಯಾಜ್ಯ ನಿರ್ವಹಣೆಯಲ್ಲಿ ಸಾಧನೆಗೆ ಡಿಸಿ ಶ್ಲಾಘನೆ

ಕೋಲಾರ: ನಗರ ಸ್ಥಳೀಯ ಸಂಸ್ಥೆಗಳ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ರಾಜ್ಯ ಮಟ್ಟದ ಪ್ರಮುಖ ಸಾಧಕರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಕೋಲಾರ ಜಿಲ್ಲೆಯ ಪೌರಾಯುಕ್ತರು ಹಾಗೂ ಘನತ್ಯಾಜ್ಯ ನಿರ್ವಹಣಾ ತಜ್ಞರ ಕಾರ್ಯವೈಖರಿಗೆ ವ ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರು ತೀವ್ರ ಹರ್ಷ ಹಾಗೂ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.



ರಾಜ್ಯ ಮಟ್ಟದ ಶ್ರೇಯಾಂಕ ಪಟ್ಟಿಯಲ್ಲಿ ಕೋಲಾರ ಜಿಲ್ಲೆಯ ನಗರಸಭೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಒಟ್ಟು ನಾಲ್ಕು ಮುಖ್ಯಾಧಿಕಾರಿಗಳು ಮತ್ತು ತಜ್ಞರು ಅತ್ಯುತ್ತಮ ಸಾಧನೆ ತೋರಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಸಾಧಕರ ವಿವರ:– ವೆಂಕಟೇಶ್ ನಾಗನೂರ್ ಪೌರಾಯುಕ್ತರು, ಕೋಲಾರ ನಗರಸಭೆ, ಇವರು ರಾಜ್ಯ ಮಟ್ಟದಲ್ಲಿ 6ನೇ ಶ್ರೇಯಾಂಕ ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಮಹದೇವ ಎಂ.ಎಸ್.–ಪೌರಾಯುಕ್ತರು, ಮಾಲೂರು ನಗರಸಭೆ ಇವರು ರಾಜ್ಯ ಮಟ್ಟದಲ್ಲಿ 11ನೇ ಶ್ರೇಯಾಂಕ ಮುಡಿಗೇರಿಸಿಕೊಂಡಿದ್ದಾರೆ.

ಆಂಜನೇಯಲು ಜಿ. ಬಿ.–ಪೌರಾಯುಕ್ತರು, ಮುಳಬಾಗಿಲು ನಗರಸಭೆ ಇವರು ರಾಜ್ಯ ಮಟ್ಟದಲ್ಲಿ 16ನೇ ಶ್ರೇಯಾಂಕ ಪಡೆದು ಗಮನಾರ್ಹ ಸಾಧನೆ ತೋರಿದ್ದಾರೆ. ಹರ್ಷವರ್ಧನ್ ಘನತ್ಯಾಜ್ಯ ನಿರ್ವಹಣಾ ತಜ್ಞರು, ಕೋಲಾರ ಜಿಲ್ಲಾ ನಗರಾಭಿವೃದ್ಧಿ ಕೋಶದ ಘನತ್ಯಾಜ್ಯ ನಿರ್ವಹಣಾ ತಜ್ಞರ ವಿಭಾಗದಲ್ಲಿ ಇವರು ರಾಜ್ಯ ಮಟ್ಟದಲ್ಲೇ 3ನೇ ಶ್ರೇಯಾಂಕ ಪಡೆಯುವ ಮೂಲಕ ಅತ್ಯುನ್ನತ ಸಾಧನೆ ಮಾಡಿದ್ದಾರೆ. ಈ ಯಶಸ್ಸಿನ ಕುರಿತು ಮಾತನಾಡಿದ ಡಿಸಿ ಡಾ. ಎಂ.ಆರ್. ರವಿ ಅವರು, ಸ್ವಚ್ಛತೆ ಮತ್ತು ವ್ಯವಸ್ಥಿತ ಘನತ್ಯಾಜ್ಯ ನಿರ್ವಹಣೆಯಲ್ಲಿ ಕೋಲಾರ ಜಿಲ್ಲೆಯ ನಗರಸಭೆಗಳು ರಾಜ್ಯ ಮಟ್ಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಧಿಕಾರಿಗಳ ಮತ್ತು ತಜ್ಞರ ನಿರಂತರ ಪರಿಶ್ರಮ, ಯೋಜನಾಬದ್ಧ ಕಾರ್ಯವೈಖರಿಯಿಂದಾಗಿ ಈ ಸಾಧನೆ ಸಾಧ್ಯವಾಗಿದೆ. ಇದೇ ಉತ್ಸಾಹದೊಂದಿಗೆ ಮುಂದಿನ ದಿನಗಳಲ್ಲೂ ಜಿಲ್ಲೆಯನ್ನು ಸ್ವಚ್ಛ ಹಾಗೂ ಮಾದರಿ ಜಿಲ್ಲೆಯನ್ನಾಗಿ ರೂಪಿಸಲು ಶ್ರಮಿಸಬೇಕು ಎಂದು ಸಾಧಕ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.


ಔಷಧ ವ್ಯಾಪಾರಿಗಳ ಉಳಿವು ಮತ್ತು ಸಾರ್ವಜನಿಕರ ಹಿತಾಸಕ್ತಿಗಾಗಿ

ದೇಶಾದ್ಯಂತ ಔಷಧ ಮಳಿಗೆಗಳ ಬಂದ್‌ಗೆ ನಿರ್ಧಾರ

ಕೋಲಾರ: ಎಐಒಸಿಡಿ ಔಷಧ ವ್ಯಾಪಾರಿಗಳ ಉಳಿವು ಮತ್ತು ಸಾರ್ವಜನಿಕರ ಆರೋಗ್ಯ ಹಿತಾಸಕ್ತಿಯನ್ನು ಕಾಪಾಡಲು ಮೇ 20 ರಂದು ದೇಶಾದ್ಯಂತ ಬಂದ್‌ಗೆ ಕರೆ ಕೊಟ್ಟಿರುವ ಹಿನ್ನಲೆಯಲ್ಲಿ ಕೋಲಾರ ಡಿಸ್ಟ್ರಿಕ್ಟ್ ಕೆಮಿಸ್ಟ್ ವೆಲ್‌ಫೇರ್ ಅಸೋಸಿಯೇಷನ್ ಸಂಪೂರ್ಣ ಬೆಂಬಲ ಸೂಚಿಸಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಂ.ವಿ.ಸೋಮಶೇಖರ್, ಕಾರ್ಯದರ್ಶಿ ಬಿ.ಉಮೇಶ್ ತಿಳಿಸಿದ್ದಾರೆ.

ಅಸೋಸಿಯೇಷನ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ಭಾರತ ದೇಶಾದಾದ್ಯಂತ 12.40 ಲಕ್ಷಕ್ಕೂ ಹೆಚ್ಚು ಔಷಧ ವ್ಯಾಪಾರಿಗಳಿದ್ದಾರೆ. ಆನ್‌ಲೈನ್ ಪೋರ್ಟಲ್‌ಗಳ ಅನಿಯಂತ್ರಿಕ ಕಾರ್ಯನಿರ್ವಹಣೆ ಮತ್ತು ದರೋಡೆಕೋರತನದ ಬೆಲೆ ಅಕ್ರಮಗಳ ವಿರುದ್ಧ ಎಲ್ಲರೂ ಬೀದಿಗಿಳಿದು ಪ್ರತಿಭಟಿಸಲಿದ್ದಾರೆ. ಅಕ್ರಮ ಇ–ಔಷಧ ಪೋರ್ಟಲ್‌ಗಳ ಒಡ್ಡುವ ಆಮಿಷಗಳು 50 ಮಿಲಿಯನ್ ಅವಲಂಬಿತ ಜೀವನೋಪಾಯವನ್ನು ಅಪಾಯಕ್ಕೆ ಸಿಲುಕಿಸಿವೆ.

ದೇಶಾದಾದ್ಯಂತ ವ್ಯಾಪಿಸಿರುವ ಎಲ್ಲ ಔಷಧ ವ್ಯಾಪಾರಿಗಳು ಹಾಗೂ ವಿತರಕರನ್ನು ಪ್ರತಿನಿಧಿಸುವ ಸಂಸ್ಥೆ ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ ಅಂಡ್ ಡ್ರಗಿಸ್ಟ್ ಸರ್ಕಾರದ ನಿಷ್ಕ್ರಿಯತೆಯನ್ನು ವಿರೋಧಿಸಿ ಬುಧವಾರ, 20 ಮೇ 2026 ರಂದು ಒಂದು ದಿನದ ರಾಷ್ಟ್ರವ್ಯಾಪಿ ಬಂದ್ ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಪದೇ ಪದೇ ಜ್ಞಾಪನ ಪತ್ರಗಳ ಮೂಲಕ ವಿನಂತಿಸಿದರೂ, ಇ–ಪೋರ್ಟಲ್‌ಗಳ ಮೂಲಕ ವಹಿವಾಟು ನಡೆಸುವ ಔಷಧ ವ್ಯಾಪಾರವು ಬೀರುವ ಗಂಭೀರ ಸಮಸ್ಯೆಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಾಗಿಲ್ಲ, ಇದು ದೇಶಾದ್ಯಂತ ಔಷಧ ವ್ಯಾಪಾರಿಗಳ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.



ಕೋವಿಡ್–19 ಸಮಯದಲ್ಲಿ ಹೊರಡಿಸಲಾದ ಈ ಅಧಿಸೂಚನೆಯು ತಾತ್ಕಾಲಿಕ ಕ್ರಮವಾಗಿತ್ತು. ಆದರೆ ಅನಗತ್ಯವಾಗಿ ಅದನ್ನು ಇಂದಿಗೂ ಮುಂದುವರಿಸಲಾಗಿದೆ. ಇದು ತರ್ಕಬದ್ಧವಲ್ಲ ಇದನ್ನು ಹಿಂಪಡೆಯಲು ಆಗ್ರಹಿಸಿದರು. ಇದು ಕೇವಲ ವ್ಯಾಪಾರದ ವಿಷಯವಲ್ಲ, ಬದಲಾಗಿ ರೋಗಿಗಳ ಸುರಕ್ಷತೆಯ ವಿಷಯವಾಗಿದೆ. ಮೇ 20ರೊಳಗೆ ಸರ್ಕಾರ ಈ ಬೇಡಿಕೆಗಳ ಬಗ್ಗೆ ಯಾವುದೇ ನಿರ್ದಿಷ್ಟ ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ, ನಾವು ಅನಿರ್ದಿಷ್ಟಾವಧಿ ಆಂದೋಲನವನ್ನು ಪ್ರಾರಂಭಿಸಬೇಕಾಗುತ್ತದೆ ಎಂದು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳವರು ಜಂಟಿಯಾಗಿ ತಿಳಿಸಿದ್ದಾರೆ.

ದೇವೇಗೌಡರ ಜನ್ಮದಿನಾಚರಣೆಯಲ್ಲಿ ಚೆಲುವನಹಳ್ಳಿ ನಾಗರಾಜ್ ಹೇಳಿಕೆ

ದೇವೇಗೌಡರ ಆದರ್ಶಗಳು ನಮಗೆಲ್ಲ ಸ್ಫೂರ್ತಿ

ಕೋಲಾರ: ಮಾಜಿ ಪ್ರಧಾನ ಮಂತ್ರಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ ದೇವೇಗೌಡರು ತಮ್ಮ ರಾಜಕೀಯ ಜೀವನದುದ್ದಕ್ಕೂ ರೈತರು, ಬಡವರು ಹಾಗೂ ಹಿಂದುಳಿದ ವರ್ಗಗಳವರ ಸೇವೆ ಮಾಡಿ ಅವರ ಅಭಿವೃದ್ಧಿಗೆ ಕಾರಣವಾಗಿದ್ದಾರೆ ಅವರು ದೇಶದ ಆಸ್ತಿ ಇದ್ದಂತೆ ಅವರ ರಾಜಕಾರಣದ ಆದರ್ಶಗಳು ನಮಗೆಲ್ಲ ಸ್ಫೂರ್ತಿಯಾಗಿವೆ ಎಂದು ಕೋಮುಲ್ ನಿರ್ದೇಶಕ ಹಾಗೂ ಜೆಡಿಎಸ್ ಮುಖಂಡ ಚೆಲುವನಹಳ್ಳಿ ಡಿ.ನಾಗರಾಜ್ ತಿಳಿಸಿದರು

ತಾಲೂಕಿನ ಚೆಲುವನಹಳ್ಳಿ ಗ್ರಾಮದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರ 94 ನೇ ಹುಟ್ಟುಹಬ್ಬ ಆಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ದೇವೇಗೌಡರು ಪ್ರಧಾನಿಯಾಗಿ ಪಂಜಾಬ್ ರಾಜ್ಯದಲ್ಲಿ ಭತ್ತ ಖರೀದಿಸಿ ದೇಶದ ಜನಕ್ಕೆ ಅಕ್ಕಿ ಹಂಚಿದ್ದಾರೆ ಅವರ ಹೆಸರಿನಲ್ಲಿ ಪ್ರತಿಮೆಗಳು ಮಾಡಿದ್ದಾರೆ ಅನೇಕ ನೀರಾವರಿ ಯೋಜನೆಗಳ ಮೂಲಕ ರೈತರಿಗೆ ದಾರಿಯಾಗಿ ದೇಶದಲ್ಲಿ ಮಣ್ಣಿನ ಮಗ ಎನಿಸಿಕೊಂಡಿದ್ದಾರೆ ಬಡವರ ಪರ ಆಡಳಿತ ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ವಕ್ಕಲೇರಿ ಸೊಸೈಟಿ ಅಧ್ಯಕ್ಷ ಎಂ.ಪಾಲಾಕ್ಷಗೌಡ ಮಾತನಾಡಿ, ಮಾಜಿ ದೇವೇಗೌಡರು ಪ್ರಾದೇಶಿಕ ಪಕ್ಷವನ್ನು ಕಟ್ಟಿ ದೇಶದ ಪ್ರಧಾನಿಯಾಗಿದ್ದಾರೆ ಅವರಿಗೆ 94 ವರ್ಷವಾದರೂ ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ತೊಡಗಿದ್ದಾರೆ ಅವರಿಗೆ ದೇವರು ಆರೋಗ್ಯ ಆಯುಷ್ಯ ನೀಡಲಿ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಯುವ ಮುಖಂಡ ಖಾಜಿಕಲ್ಲಹಳ್ಳಿ ಹರೀಶ್, ಅಮ್ಮೇರಹಳ್ಳಿ ಗ್ರಾಪಂ ಮಾಜಿ ಸದಸ್ಯ ಚಲಪತಿ, ವಕ್ಕಲೇರಿ ಗ್ರಾಪಂ ಮಾಜಿ ಸದಸ್ಯ ಮಂಜುನಾಥ್ ಪಾಶ್ವಗಾನಹಳ್ಳಿ ಗ್ರಾಪಂ ಮಾಜಿ ಸದಸ್ಯ ಅಶ್ವಥ್ ರಾಮ್, ಮುಖಂಡರಾದ ವಕ್ಕಲೇರಿ ಆನಂದ್ ಕುಮಾರ್, ಅರಾಭಿಕೊತ್ತನೂರು ಮುನಿರಾಜು, ರಾಮಣ್ಣ, ರಾಜಣ್ಣ, ನಾಗೇಶ್, ಮೈಲಾಂಡಹಳ್ಳಿ ರಮೇಶ್, ವಕೀಲ ಮುನಿರಾಜು, ಮಂಜುನಾಥ್ ಮುಂತಾದವರು ಇದ್ದರು.



ಕಿರುಸುದ್ದಿ

ಶ್ರೀ ವೀರಾಂಜನೇಯ ಸ್ವಾಮಿಗೆ ವಿಶೇಷ ಪೂಜೆ

ಶಿಡ್ಲಘಟ್ಟ: ನಗರದ ಚಿಂತಾಮಣಿ ರಸ್ತೆಯ ಯೋಗಿ ಯತೀಂದ್ರನಗರದಲ್ಲಿರುವ ಶ್ರೀ ಬಲಿಜ ಸೇವಾ ಟ್ರಸ್ಟ್‌ನ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ಭಕ್ತಿ ಹಾಗೂ ವಿಜೃಂಭಣೆಯಿಂದ ವಿಶೇಷ ಪೂಜೆ ಕಾರ್ಯಕ್ರಮಗಳು ನೆರವೇರಿಸಲಾಯಿತು. ಅನಾದಿಕಾಲದಿಂದ ನೆಲೆಸಿರುವ ದೇವಾಲಯದಲ್ಲಿ ಬೆಳಗಿನ ಜಾವ ದೇವಾಲಯವನ್ನು ಸಚ್ಛಗೊಳಿಸಿ ಶ್ರೀ ವೀರಾಂಜನೇಯ ಸ್ವಾಮಿಗೆ ಅಭಿಷೇಕ, ಮಹಾಭಿಷೇಕ, ಪತ್ರೆ ಅಲಂಕಾರ ಹಾಗೂ ಹೂವಿನ ಅಲಂಕಾರ ಮಾಡಲಾಯಿತು.



ಸಾಂಪ್ರದಾಯಬದ್ಧವಾಗಿ ದೇವಾಲಯವನ್ನು ಮಾವಿನ ತೋರಣಗಳಿಂದ ಅಲಂಕರಿಸಿ ಧೂಪ, ದೀಪ, ನೈವೇದ್ಯ ಸಮರ್ಪಿಸಿ ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ ನೆರವೇರಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಾಲಯಕ್ಕೆ ಆಗಮಿಸಿ ಶ್ರೀ ವೀರಾಂಜನೇಯ ಸ್ವಾಮಿಯ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾದರು.

ಮೇ 21, 2026 ಗುರುವಾರ ಸಂಜೆ 6 ಗಂಟೆಗೆ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿದ್ದು, ಸಂಬಂಧಪಟ್ಟ ಎಲ್ಲರೂ ಸಭೆಗೆ ಆಗಮಿಸಬೇಕೆಂದು ದೇವಾಲಯ ಸಮಿತಿಯವರು ಮನವಿ ಮಾಡಿದ್ದಾರೆ.

ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ಶಿಡ್ಲಘಟ್ಟ: ತಾಲೂಕು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 5 ಅಂಗನವಾಡಿ ಕಾರ್ಯಕರ್ತೆ ಹಾಗೂ 34 ಅಂಗನವಾಡಿ ಸಹಾಯಕಿಯರ ಹುದ್ದೆಗಳ ಭರ್ತಿಗಾಗಿ ಸ್ಥಳೀಯ ಅರ್ಹ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಕ್ತ ಅಭ್ಯರ್ಥಿಗಳು ಸಿಡಿಪಿಒ ಕಚೇರಿಯಿಂದ ಅರ್ಜಿ ಪಡೆದು, ಅಗತ್ಯ ದಾಖಲೆಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ ನೇಮಕಾತಿ ಅರ್ಜಿಗಳನ್ನು ಜೂನ್ 20ರೊಳಗೆ ಸಿಡಿಪಿಒ ಕಚೇರಿಯಲ್ಲಿರುವ ಅರ್ಜಿ ಪೆಟ್ಟಿಗೆಯಲ್ಲಿ ಸಲ್ಲಿಸಬ ಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ನಿಸರ್ಗ ನಿಲಯ, ನ್ಯೂ ಡೀಲಕ್ಸ್ ಬೇಕರಿ ಹಿಂಭಾಗ, ಕನಕನಗರ, ಶಿಡ್ಲಘಟ್ಟ ಅಥವಾ ದೂರವಾಣಿ ಸಂಖ್ಯೆ 80158 256497 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಶಿಡ್ಲಘಟ್ಟ ಸಿಡಿಪಿಒ ತಿಳಿಸಿದ್ದಾರೆ.

ಸಬ್ಕೆ ಡೋರ್, ಸಬ್ಕೆ ಪೆಹ್ಲೆ: ವಿಶೇಷ ಐಇಸಿ ಅಭಿಯಾನ

ಚಿಕ್ಕಬಳ್ಳಾಪುರ: 2026-27ನೇ ಸಾಲಿನ ಜನ್ ಭಾಗೀದಾರಿ ಅಭಿಯಾನ ಕೇಂದ್ರ, ಬುಡಕಟ್ಟು ವ್ಯವಹಾರಗಳ ಸಚಿವಾಲಯದಿಂದ ಜಿಲ್ಲೆಯಲ್ಲಿ ಮೇ 18 ರಿಂದ ಮೇ 25 ರವರೆಗೆ ಜನ್ ಭಾಗೀದಾರಿ ಸಬ್ಕೆ ಡೋರ್, ಸಬ್ಕೆ ಪೆಹ್ಲೆ ಎಂಬ ವಿಶೇಷ ಐಇಸಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಬುಡಕಟ್ಟು ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಪ್ರಯೋಜನ ತಲುಪಿಸುವುದು ಮತ್ತು ಅದಕ್ಕೆ ಬೇಕಾಗುವ ಅಗತ್ಯ ದಾಖಲೆಗಳನ್ನು ಒದಗಿಸುವುದು ಅಭಿಯಾನದ ಉದ್ದೇಶ. ಗ್ರಾಮ ಮಟ್ಟದಲ್ಲಿ ಜಾಗೃತಿ, ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತದೆ. ಹೆಚ್ಚಿನ ವಿವರಗಾಗಿ ಸಂಬಂಧಪಟ್ಟ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ ತಾಲೂಕು ಸಮಾಜ ಕಲ್ಯಾಣ ಇಲಾಖೆ, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗೌರಿಬಿದನೂರು ತಾಲೂಕು ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ದೂ.ಸಂ:08156-277177 ಗೆ ಸಂಪರ್ಕಿಸಬಹುದು.

ಬರ್ಲಪಲ್ಲಿ ಕಿಟ್ಟಣ್ಣ ನಿಧನ

ಚೇಳೂರು: ತಾಲೂಕಿನ ಪುಲಗಲ್ ಗ್ರಾ.ಪಂ. ಎ.ಬೆಲ್ಲಾಲಂಪಲ್ಲಿ ಗ್ರಾಮದ ಕುರುಬ ಸಮಾಜದ ಹಿರಿಯ ಶ್ರಮಜೀವಿಯಾದ ಬರ್ಲಪಲ್ಲಿ ಕಿಟ್ಟಣ್ಣ (62) ಇವರಿಗೆ ಸಂಜೆ ಎದೆನೋವು ಕಾಣಿಸಿಕೊಂಡು ಚೇಳೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆಂದು ಚಿಂತಾಮಣಿಗೆ ಹೋಗುವ ದಾರಿಯಲ್ಲಿ ಹೃದಯಘಾತವಾಗಿ ಅಕಾಲಿಕ ನಿಧನ ಹೊಂದಿದರು. ಮೃತರು ಪತ್ನಿ. ಇಬ್ಬರು ಮಕ್ಕಳನ್ನು ಅಗಲಿದ್ದಾರೆ.



ಮೃತರನ್ನು ಗ್ರಾಮದ ಸ್ವಗೃಹದ ಮುಂದೆ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಚುನಾಯಿತ ಪ್ರತಿನಿಧಿಗಳು.ಶಿಕ್ಷಕರು. ಪತ್ರಕರ್ತರು. ಕನ್ನಡಪರ/ರೈತಪರ ಸಂಘಟನೆಗಳ ಅಪಾರ ಪ್ರತಿನಿಧಿಗಳು. ವ್ಯಾಪಾರಸ್ಥರುಗಳು ಸೇರಿದಂತೆ ಚೇಳೂರು ತಾ. ಸುತ್ತಮುತ್ತಲಿನ ನೂರಾರು ಜನರು ಅಂತಿಮ ದರ್ಶನ ಪಡೆದರು ಪ್ರಾರ್ಥವ ಶರೀರವನ್ನ ಅವರ ತೋಟದಲ್ಲಿ ಅಂತ್ಯ ಸಂಸ್ಕಾರ ಭಾನುವಾರದಂದು ನಡೆಸಲಾಯಿತು. ಸುತ್ತಮುತ್ತಲಿನಲ್ಲಿ 46 ವರ್ಷಗಳಿಂದ ಜನರಲ್ಲಿ ಜನಭಿಮಾನಿಯಾಗಿ ಜನಮನ ಗೆದ್ದಿದ್ದರು.



ಚಿಂತಾಮಣಿ ನಗರದ ಹೊರವಲಯದ ಬೆಟ್ಟದ ಮೇಲ್ಭಾಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ವೀಕ್ಷಣೆ ಮಾಡಿದ ಉನ್ನತ ಶಿಕ್ಷಣ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್.

ಯಾತ್ರಾರ್ಥಿಗಳಿಗೆ ಸೌಲಭ್ಯ: ಶಾಸಕ

ಗೌರಿಬಿದನೂರು: ಶ್ರೀಕ್ಷೇತ್ರ ಮುದುಗಾನಕುಂಟೆ ಗಂಗಮ್ಮನ ದರ್ಶನಕ್ಕೆ ಬರುವ ಯಾತ್ರಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸುವುದಾಗಿ ಶಾಸಕ ಕೆಎಚ್.ಪುಟ್ಟಸ್ವಾಮಿಗೌಡರು ಭರವಸೆಯನ್ನು ನೀಡಿದರು.

ಅವರು ತಾಲೂಕಿನ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಮುದುಗಾನಕುಂಟೆ ಕ್ಷೇತ್ರದಲ್ಲಿ, ಪ್ರವೇಶ ದ್ವಾರದಿಂದ ಗಂಗಮ್ಮ ತಾಯಿಯ ಕಲ್ಯಾಣಿಯವರೆಗೂ ಸುಮಾರು ಐವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುವ ಸಿಮೆಂಟ್ ರಸ್ತೆಯ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡುತ್ತಿದ್ದರು. ಮುದುಗಾನಕುಂಟೆ ಕ್ಷೇತ್ರದ ಗಂಗಮ್ಮ ತಾಯಿಯ ದರ್ಶನಕ್ಕಾಗಿ ಪ್ರತಿ ಸೋಮವಾರ ಸಾವಿರಾರು ಭಕ್ತರು ಆಗಮಿಸಿ, ತಮ್ಮ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಗಂಗಮ್ಮ ತಾಯಿಗೆ ಹರಿಕೆ ಹೊತ್ತು ಪೂಜೆ ಸಲ್ಲಿಸುತ್ತಾರೆ. ಅದನ್ನು ಕೂಡ ಶೀಘ್ರವಾಗಿ ನೆರವೇರಿಸುವುದಾಗಿ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡರು ತಿಳಿಸಿದರು.

ತಹಸೀಲ್ದಾರ್ ಅರವಿಂದ್, ತಾಲೂಕು ಪಂಚಾಯತಿ ಇಒ ಜಿ.ಕೆ ಹೊನ್ನಯ್ಯ ,ಪೊಲೀಸ್ ವೃತ್ತ ನಿರಿಕ್ಷಕ ಅಂಜನ್ ಕುಮಾರ್, ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ನರಸಿಂಹರೆಡ್ಡಿ ದೇವಸ್ಥಾನದ ಪಾರುಪತ್ತೇದಾರ ಕಿರಣ್ ಮುಖಂಡರಾದ ಲಕ್ಷ್ಮೀನಾರಾಯಣ್ ಪಟೇಲ್, ಸಾಗಾನಹಳ್ಳಿ ಶಿವಕುಮಾರ್, ದಲಿತ ಮುಖಂಡ ಕೆ.ನಂಜುಂಡಪ್ಪ, ಅಶೋಕ್ ಕುಮಾರ್,ಲೇಟೆಸ್ಟ್ ಚಂದ್ರು ,ಹನುಮಂತರಾಯಪ್ಪ ,ಜಬೀ,ನರಸಿಂಹಮೂರ್ತಿ, ತಿಮ್ಮರೆಡ್ಡಿ, ಆನಂದ್ , ಮೂರ್ತಿ, ಗುತ್ತಿಗೆದಾರರಾದ ವಿಜಯ್ ಕುಮಾರ್ ಹಾಗೂ ಇನ್ನಿತರರು ಭಾಗವಹಿಸಿದ್ದರು.



ಮುದುಗಾನಕುಂಟೆ ಕ್ಷೇತ್ರದಲ್ಲಿ ಪ್ರವೇಶ ದ್ವಾರದಿಂದ ಗಂಗಮ್ಮ ತಾಯಿ ಕಲ್ಯಾಣಿಯವರೆಗೂ ಸುಮಾರು 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುವ ಸಿಮೆಂಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ಶಾಸಕ ಕೆಎಚ್.ಪುಟ್ಟಸ್ವಾಮಿಗೌಡ ನೆರವೇರಿಸಿದರು.

ತಳಗವಾರ ಅಮಾನಿಕೆರೆಯಲ್ಲಿ ಮಣ್ಣು ದಂಧೆ | ಪರಿಸರ ನಾಶಕ್ಕೆ ಗ್ರಾಮಸ್ಥರ ಆಕ್ರೋಶ

ಮಣ್ಣು ಮಾಫಿಯಾ ನಿಲ್ಲಿಸಿ



ಸಾರ್ವಜನಿಕ ಆಸ್ತಿ ಲೂಟಿ

ಪ್ರತಿ ಲೋಡ್ ಮಣ್ಣಿಗೆ 5 ಸಾವಿರ ರೂಪಾಯಿಗಳಂತೆ ಆಂತರಿಕ ಒಪ್ಪಂದ ಮಾಡಿ ಕೊಂಡು ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡಲಾಗುತ್ತಿದೆಯೆಂದು ಸ್ಥಳೀಯರು ದೂರಿದ್ದಾರೆ. ಅಕ್ರಮ ದಂಧೆಯ ಹಿಂದೆ ದೊಡ್ಡ ಜಾಲವೇ ಸಕ್ರಿಯವಾಗಿದ್ದು, ಸ್ಥಳೀಯ ಕೆಲವು ಪುಂಡ ಹುಡುಗರನ್ನು ಕಾವಲಿಗಾಗಿ ಬಳಸಿಕೊಳ್ಳಲಾಗುತ್ತಿದೆ.

ಚಿಂತಾಮಣಿ: ತಾಲೂಕಿನ ತಳಗವಾರ ಅಮಾನಿಕೆರೆಯಲ್ಲಿ ಅರಣ್ಯ ಸಂಪತ್ತನ್ನು ನುಂಗಿ ನೀರು ಕುಡಿಯುತ್ತಿರುವ ಮಣ್ಣು ಮಾಫಿಯಾ ದಂದೆ ಇತ್ತೀಚೆಗೆ ಮಿತಿಮೀರಿದ್ದು, ರಾತ್ರೋರಾತ್ರಿ ಮರಗಳನ್ನು ಬುಡಸಮೇತ ಕಿತ್ತೊಗೆದು ಪ್ರಕೃತಿ ನಾಶ ಮಾಡಲಾಗುತ್ತಿದೆ. ಕೇವಲ ರಾತ್ರಿ, ವೇಳೆಯೇ ಅವಿರತವಾಗಿ ಸಾಗಿರುವ ಈ ಅಕ್ರಮ ಮಣ್ಣುಗಾರಿಕೆಯನ್ನು ತಡೆಯುವಲ್ಲಿ ತಾಲೂಕು ಆಡಳಿತ ಕಣ್ಣುಮುಚ್ಚಿ ಕುಳಿತಿದ್ದಾರೆಂದು ಗ್ರಾಮಸ್ಥರು ಮತ್ತು ಸ್ಥಳೀಯರು ಅತ್ಯಂತ ಗಂಭೀರವಾಗಿ ಆರೋಪಿಸಿದ್ದಾರೆ.

ಸುಮಾರು ಒಂದು ದಶಕದ ಹಿಂದೆ ತಳಗವಾರ ಅಮಾನಿಕೆರೆಯ ಹತ್ತು-ಹನ್ನೆರಡು ಎಕರೆ ವಿಶಾಲ ಪ್ರದೇಶದಲ್ಲಿ ಅರಣ್ಯ ಇಲಾಖೆಯು ಲಕ್ಷಾಂತರ ರೂಪಾಯಿಗಳ ಸರ್ಕಾರಿ ಹಣವನ್ನು ವ್ಯಯ ಮಾಡಿ ಅತ್ಯಂತ ಕಾಳಜಿಯಿಂದ ಬಿದಿರು ಮತ್ತು ಹೊಂಗೆ ಮರಗಳನ್ನು ಬೆಳೆಸಿ ಪೋಷಿಸಿತ್ತು. ಈ ಹಸಿರು ವಲಯವು ಕಾಲಕ್ರಮೇಣ ಜಿಂಕೆಗಳು, ನವಿಲುಗಳು ಸೇರಿದಂತೆ ಹತ್ತಾರು ಪ್ರಬೇಧದ ಕಾಡುಪ್ರಾಣಿ ಹಾಗೂ ಪಕ್ಷಿ ಸಂಕುಲಕ್ಕೆ ಆಶ್ರಯ ತಾಣವಾಗಿ ಮಾರ್ಪಟ್ಟಿತ್ತು.

ಆದರೆ ಇತ್ತೀಚೆಗೆ ಮಣ್ಣು ದಂದೆಕೋರರ ಕಣ್ಣು ಈ ನಿಸರ್ಗದ ಮಡಿಲಿನ ಮೇಲೆ ಬಿದ್ದಿದ್ದು, ಜೆಸಿಬಿ ಯಂತ್ರಗಳ ಅಬ್ಬರಕ್ಕೆ ಹಸಿರು ವನಸಿರಿ ಧ್ವಂಸವಾಗುತ್ತಿದೆ. ಮರಗಳನ್ನು ಮಣ್ಣುಪಾಲು ಮಾಡುತ್ತಿರುವ ಮಾಫಿಯಾ, ಇಲ್ಲಿನ ಫಲವತ್ತಾದ ಮಣ್ಣನ್ನು ಯಾವುದೇ ಇಲಾಖೆಯ ಅನುಮತಿ ಇಲ್ಲದೆ ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಅಕ್ರಮವಾಗಿ ಸಾಗಿಸುತ್ತಿದೆ. ಈ ಕಿಡಿಗೇಡಿಗಳು ಸ್ಥಳದಲ್ಲೇ ಮದ್ಯಪಾನ ಮಾಡುತ್ತಾ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುತ್ತಿದ್ದಾರೆ. ಮಣ್ಣು ಲೂಟಿ ಮತ್ತು ಪರಿಸರ ನಾಶವನ್ನು ಪ್ರಶ್ನಿಸಲು ಮುಂದಾಗುವ ಸ್ಥಳೀಯ ನಿವಾಸಿಗಳಿಗೆ ಹಾಗೂ ರೈತರಿಗೆ ಈ ಪುಂಡರು ನೇರವಾಗಿ ಜೀವಬೆದರಿಕೆ ಒಡ್ಡುತ್ತಿರುವುದು ಗ್ರಾಮಸ್ಥರ ಆತಂಕವನ್ನು ದುಪ್ಪಟ್ಟು ಮಾಡಿದೆ. ಅಮಾನಿಕೆರೆಯಲ್ಲಿ ನಡೆಯುತ್ತಿದ್ದ ಈ ಭೀಕರ ಅಕ್ರಮವನ್ನು ಮನಗಂಡ ತಳಗವಾರ ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರತಾಪ್ ಕುಮಾರ್, ಪ್ರಮುಖರಾದ ವೆಂಕಟೇಶ್, ಶಶಿ, ಶಶಿಕುಮಾರ್, ಕೈವಾರ ಸುಬ್ಬಾರೆಡ್ಡಿ ಹಾಗೂ ಬಾಲು ಸೇರಿದಂತೆ ಹಲವರು ತಕ್ಷಣವೇ ತಾಲ್ಲಕು ವಲಯ ಅರಣ್ಯಾಧಿಕಾರಿ ಚಂದನ್ ಅವರಿಗೆ ತುರ್ತು ಮಾಹಿತಿ ರವಾನಿಸಿದ್ದಾರೆ. ಸಾರ್ವಜನಿಕರ ದೂರಿಗೆ ತಕ್ಷಣವೇ ಸಕಾರಾತ್ಮಕವಾಗಿ ಸ್ಪಂದಿಸಿದ ಆರ್.ಎಫ್.ಓ ಚಂದನ್ ಮತ್ತು ಅವರ ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಮಿಂಚಿನ ದಾಳಿ ನಡೆಸಿದ್ದಾರೆ.

ಅಧಿಕಾರಿಗಳ ದಿಢೀರ್ ದಾಳಿ ನಡೆಸಿ ಅಕ್ರಮ ಸಾಗಾಣಿಕೆಗೆ ಬಳಸುತ್ತಿದ್ದ 6 ಟಿಪ್ಪರ್‌ಗಳು, 2 ಜೆಸಿಬಿಗಳು ಹಾಗೂ 1ಮಹೀಂದ್ರಾ ಥಾರ್ ವಾಹನವನ್ನು ಅಧಿಕಾರಿಗಳು ಸ್ಥಳದಲ್ಲೇ ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯ ಸಂದರ್ಭದಲ್ಲಿ 2 ಟಿಪ್ಪರ್ ವಾಹನ ಪೊಲೀಸರು ಶಾಮೀಲಾಗಿದ್ದಾರೆಯೇ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ತೀವ್ರ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಕಾನೂನು ರಕ್ಷಕರು ಸ್ಥಳದಲ್ಲೇ ಇದ್ದೂ ಇಂತಹ ದಂಧೆಗೆ ಪರೋಕ್ಷವಾಗಿ ದಾರಿ ಮಾಡಿಕೊಡುತ್ತಿದ್ದಾರೆಂದು ಆಕ್ರೋಶ ಹೊರಹಾಕಿದ್ದು, ಉನ್ನತ ಅಧಿಕಾರಿಗಳು ಈ ಪರಿಸರ ನಾಶದ ಜಾಲವನ್ನು ಬೇರುಸಹಿತ ಕಿತ್ತೊಗೆದು, ಮಾಫಿಯಾ ಕಿಂಗ್‌ಪಿನ್‌ಗಳು ಹಾಗೂ ಅವರಿಗೆ ಸಹಕರಿಸುತ್ತಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಸಾರ್ವಜನಿಕರು ಬಲವಾಗಿ ಆಗ್ರಹಿಸಿದ್ದಾರೆ.

ಹೆಚ್ಚಿನ ಉದ್ಯೋಗಾವಕಾಶ ಸ್ಥಳೀಯರಿಗೆ ಒತ್ತು ನೀಡಲಿ



ಚಿಂತಾಮಣಿ: ತಾಲೂಕಿನ ಮಸ್ತೇನಹಳ್ಳಿ ಮತ್ತು ಕೈವಾರ ಕೈಗಾರಿಕಾ ಪ್ರದೇಶದಲ್ಲಿ ಹಂತ ಹಂತವಾಗಿ ಕೈಗಾರಿಕೆಗಳ ಸ್ಥಾಪನೆಯಾಗುತ್ತಿದ್ದು ಸ್ಥಳೀಯರಿಗೆ ಹೆಚ್ಚಿನ ಉದ್ಯೋಗವಕಾಶವನ್ನು ನೀಡಬೇಕೆಂಬ ಉದ್ದೇಶದಿಂದ ಕೈಗಾರಿಕೆ ಪ್ರದೇಶಕ್ಕೆ ಜಮೀನನ್ನು ಮೀಸಲಿಟ್ಟಿದ್ದು ನಂತರ ಹಲವು ಕೈಗಾರಿಕೆಗಳು ಸ್ಥಾಪನೆಯಾಗಿ ಉದ್ಯೋಗ ವಕಾಶ ನಿರ್ಮಾಣವಾಗುತ್ತಿರುವ ವಿಚಾರ ವನ್ನು ಉನ್ನತ ಶಿಕ್ಷಣ ಮತ್ತು ಜಿಲ್ಲಾ ಉಸ್ತು ವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಪರ್ಪಲ್ ಸ್ಟಾರ್ ತಯಾರಿಕಾ ಕೈಗಾರಿಕೆಗೆ ಭೇಟಿ ನೀಡಿ ಅಲ್ಲಿನ ಪ್ರಧಾನ ವ್ಯವಸ್ಥಾಪಕ ಸುಂದರ್‌ರಿಂದ ಮಾಹಿತಿ ಪಡೆದರು.

ತಾಲೂಕಿನ ಮಸ್ತೇನಹಳ್ಳಿ ಕೈಗಾರಿಕೆ ಪ್ರದೇಶದಲ್ಲಿರುವ ಪರ್ಪಲ್ ಸ್ಟಾರ್ ತಯಾರಿಕಾ ಕೈಗಾರಿಕಾ ಘಟಕಕ್ಕೆ ಭೇಟಿ ನೀಡಿ ಅಲ್ಲಿ ತಯಾರಾಗುತ್ತಿರುವ ಮಕ್ಕಳಿಗೆ ಅವಶ್ಯವಿರುವ ವಸ್ತುಗಳು, ಆಟಿಕೆಗಳು ಹಾಗೂ ಸ್ಟೀಲ್ ಸಾಮಗ್ರಿಗಳು ಸೇರಿದಂತೆ ಅಲ್ಲಿ ಉದ್ಯೋಗಾವಕಾಶ, ಸಂಪರ್ಕ ಹಲವು ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆದರು. ಡಾ.ಎಂ.ಸಿ.ಸುಧಾಕರ್‌ರ ಬಹು ವರ್ಷಗಳ ಕನಸು ನನಸಾಗಿದ್ದು ಸ್ಥಳೀಯರಿಗೆ ಹೆಚ್ಚಿನ ಉದ್ಯೋಗವಕಾಶಗಳು ಲಭಿಸಿ ಆರ್ಥಿಕವಾಗಿ ಸದೃಢರಾಗಲು ಸಹಕಾರಿಯಾಗಿದ್ದು ಇದರಿಂದ ಕುಟುಂಬದ ಆರ್ಥಿಕತೆ ಅಭಿವೃದ್ಧಿಯಾಗಿ ಉತ್ತಮ ಹುದ್ದೆಗಳನ್ನು ಅಲಂಕರಿಸಿ ಮತ್ತಷ್ಟು ಸದೃಢರಾಗಿ ಯುವಕ-ಯುವತಿಯರು ಬೆಳವಣಿಗೆಯಾಗಲು ಅವಕಾಶವಾಗಲಿ ದೆಯೆಂದು ತಿಳಿಸಿದರು. ಹಲವು ವರ್ಷಗಳ ನಿರಂತರ ಶ್ರಮ ಹಾಗೂ ಕನಸು ನನಸಾಗುತ್ತಿದ್ದು ಕೈಗಾರಿಕಾ ಪ್ರದೇಶದ ಅಭಿವೃದ್ಧಿಯ ಫಲವಾಗಿ ಕೈಗಾರಿಕೆಗಳು ಕಾರ್ಯ ನಿರ್ವಹಣೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆಯೆಂದರು. ಈ ಸಂದರ್ಭದಲ್ಲಿ ಜಿ.ಎಂ. ಸುಂದರ್, ವಿವಿಧ ಅಧಿಕಾರ ವೃಂದದವರು ಪಿಎಸ್‌ಐ ಪ್ರಕಾಶ್ ಮತ್ತಿತರರು ಇದ್ದರು.

ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಶಾಸಕ ರವಿಕುಮಾರ್‌ರಿಂದ ಸನ್ಮಾನ

ಶಿಡ್ಲಘಟ್ಟ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಶಾಸಕ ಬಿ.ಎನ್. ರವಿಕುಮಾರ್ ಸನ್ಮಾನಿಸಿ ನಗದು ಬಹುಮಾನ ವಿತರಿಸಿದರು.

ಸಾಗಲಿ ಸರ್ಕಾರಿ ಪ್ರೌಢಶಾಲೆಯ ಎಂ.ಪ್ರಕಾಶ್ (592 ಅಂಕ) ಅವರಿಗೆ 1 ಲಕ್ಷ ರೂ., ಪಲ್ಲಿಚೇರ್ಲು ಸರ್ಕಾರಿ ಪ್ರೌಢಶಾಲೆಯ ಪಿ.ಎಸ್.ರಶ್ಮಿ (589 ಅಂಕ) ಹಾಗೂ ಚಿಮಂಗಳ ಸರ್ಕಾರಿ ಪ್ರೌಢಶಾಲೆಯ ಎ. ವೈಭವಿ (589 ಅಂಕ) ಅವರಿಗೆ ತಲಾ 50 ಸಾವಿರ ರೂ., ಜಂಗಮಕೋಟೆ ಸರ್ಕಾರಿ ಪ್ರೌಢಶಾಲೆಯ ಮಾನಸ (581 ಅಂಕ) ಅವರಿಗೆ 25 ಸಾವಿರ ರೂ.ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಇದೇ ವೇಳೆ ಶೇ.100 ಫಲಿತಾಂಶ ದಾಖಲಿಸಿರುವ ಐದು ಸರ್ಕಾರಿ ಪ್ರೌಢಶಾಲೆಗಳ ಶಿಕ್ಷಕರಿಗೆ ಒಟ್ಟು 5 ಲಕ್ಷ ರೂ. ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ 94ನೇ ವರ್ಷದ ಜನ್ಮದಿನದ ಅಂಗವಾಗಿ ಹಂಡಿಗನಾಳದ ಶ್ರೀ ಬಾಲಾಜಿ ಕನ್ವೆನ್ಷನ್ ಹಾಲ್‌ನಲ್ಲಿ ಜೆಡಿಎಸ್‌ನಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸರ್ಕಾರಿ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಶೇಕಡ 100 ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರನ್ನು ಗೌರವಿಸಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಬಿ.ಎನ್. ರವಿಕುಮಾರ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇಳಿವಯಸ್ಸಿನಲ್ಲಿಯೂ ಅವರು ಕೃಷಿ, ರೈತರು ಹಾಗೂ ನೀರಾವರಿ ಯೋಜನೆಗಳ ಬಗ್ಗೆ ತೋರುತ್ತಿರುವ ಕಾಳಜಿ ಎಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರು. ಕೋಲಾರ ಲೋಕಸಭಾ ಕ್ಷೇತ್ರದ ಸಂಸದ ಎಂ. ಮಲ್ಲೇಶ್ ಬಾಬು ಮಾತನಾಡಿ, ಎಚ್.ಡಿ. ದೇವೇಗೌಡರು ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಮೇಲಿನ ಅಭಿಮಾನದಿಂದ ಶಾಸಕ ಬಿ.ಎನ್. ರವಿಕುಮಾರ್ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಮತ್ತೊಮ್ಮೆ ದೇವೇಗೌಡರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಬೇಕು ಎಂಬುದು ನಮ್ಮ ಆಶಯ ಎಂದು ತಿಳಿಸಿದರು.ಇದೇ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ನರೇಂದ್ರ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಜೆಡಿಎಸ್ ಅಧ್ಯಕ್ಷ ಡಿ.ವೆಂಕಟೇಶ್, ಕೋಲಾರ ಜಿಲ್ಲಾ ಜೆಡಿಎಸ್ ಮುಖಂಡ ವಕ್ಕಲೇರಿ ರಾಮು, ಫುಲ್‌ಕುಂಟಳ್ಳಿ ರಘುನಾಥ್ ರೆಡ್ಡಿ, ಗಂಜಿಗುಂಟೆ ನರಸಿಂಹಮೂರ್ತಿ, ಇ. ತಿಮ್ಮಸಂದ್ರ ಶಿವಾರೆಡ್ಡಿ, ಜೆ.ವಿ. ಸದಾಶಿವ, ತಿಮ್ಮನಾಯಕನಹಳ್ಳಿ ರಮೇಶ್, ಮಾಜಿ ನಗರಸಭೆ ಅಧ್ಯಕ್ಷ ವೆಂಕಟಸ್ವಾಮಿ, ದಾದೂರು ರಘು, ಮಿಲಿಟರಿ ರಘು, ಪಲ್ಲಿ ಚೇರ್ಲು ನಾರಾಯಣಸ್ವಾಮಿ, ರಮೇಶ್, ಲಕ್ಷ್ಮೀನಾರಾಯಣ (ಲಚ್ಚಿ), ನಂದಕಿಶೋರ್ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ದೇವೇಗೌಡ ಹುಟ್ಟುಹಬ್ಬ: ಹಣ್ಣು-ಬ್ರೆಡ್ ವಿತರಣೆ

ಚಿಂತಾಮಣಿ: ಮಾಜಿ ಪ್ರಧಾನಿ ಹಾಗೂ ಲೋಕಸಭಾ ಸದಸ್ಯ ಎಚ್.ಡಿ.ದೇವೇಗೌಡರ 94ನೇ ಹುಟ್ಟುಹಬ್ಬದ ಅಂಗವಾಗಿ ತಾಲೂಕು ಜೆಡಿಎಸ್ ಪಕ್ಷ ದ ವತಿಯಿಂದ ನಗರದ ಸೊಣ್ಣಶೆಟ್ಟಿಹಳ್ಳಿ ಆಂಜನೇಯಸ್ವಾಮಿ ದೇವಾಲಯ ಹಾಗೂ ನಾಗ ನಾಥೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಜೆಡಿಎಸ್ ಮುಖಂಡರು ಹಣ್ಣು-ಹಂಪಲಗಳನ್ನು ಮತ್ತು, ಬ್ರೆಡ್ ವಿತರಿಸಿದರು. ಜೆಡಿಎಸ್ ತಾಲೂಕು ಅಧ್ಯಕ್ಷ ವೆಂಕಟಾಚಲಪತಿ ಮಾತನಾಡಿ ದೇವೇಗೌಡರು ದೇಶದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಛಾಪು ಮೂಡಿಸಿದ ನಾಯಕ. ರೈತರ ಸಮಸ್ಯೆ, ಗ್ರಾಮೀಣಾಭಿವೃದ್ಧಿ ಹಾಗೂ ಜನಸಾಮಾನ್ಯರ ಪರ ಹೋರಾಟದ ಮೂಲಕ ಅವರು ಜನಮನ ಗೆದ್ದಿದ್ದಾರೆ. ಅವರ ಸರಳತೆ ಮತ್ತು ಜನಪರ ಆಡಳಿತ ಇಂದಿಗೂ ಅನೇಕರಿಗೆ ಪ್ರೇರಣೆ. ಅವರ ಜನ್ಮದಿನವನ್ನು ಹಬ್ಬದಂತೆ ಆಚರಿಸಲು



ಅಭಿಮಾನಿಗಳು ಉತ್ಸಾಹದಿಂದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹಣ್ಣುಹಂಪಲ ಮತ್ತು ಬ್ರೆಡ್ ವಿತರಿಸಿದ್ದೇವೆ ಎಂದು ಹೇಳಿದರು. ಯುವ ಮುಖಂಡ ಸಂತೇಕಲ್ಲಹಳ್ಳಿ ಪ್ರಭಾಕರ್ ಮಾತನಾಡಿ ಅಬಿವೃದ್ಧಿಯ ಹರಿಕಾರ, ಎಚ್.ಡಿ. ದೇವೇಗೌಡರು ಮಾಡಿರುವ ಉತ್ತಮವಾದ ಕೆಲಸಗಳು ಸಾಕ್ಷಿವೆ. ಅವರು ಮಾಡಿರುವ ಕೆಲಸ ಕಾರ್ಯಗಳಿಗೆ ರಾಜ್ಯದ ಹಾಗೂ ದೇಶದ ಜನತೆಯ ಆರ್ಶೀವಾದ ಇದೆ. ಇವರ ಸೇವೆ ದೇಶಕ್ಕೆ ಇನ್ನೂ ಹೆಚ್ಚಿನ ಅವಶ್ಯಕತೆ ಇರುವುದರಿಂದ ಹಾಗೂ ದೇಶದ ರೈತರಿಗೆ ಸಾರ್ವಜನಿಕರಿಗೆ, ನಿರ್ಗತಿಕರ ಪರವಾಗಿ ಇನ್ನೂ ಹಲವು ಅಬಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲು ದೇವರು ಅವರಿಗೆ ಆಯಸ್ಸು, ಆರೋಗ್ಯ, ಶಕ್ತಿ ನೀಡಲೆಂದು ಶುಭ ಕೋರಿದರು. ಜೆಡಿಎಸ್ ಮುಖಂಡರಾದ ದೊಡ್ಡಬೊಮ್ಮನಹಳ್ಳಿ ವೆಂಕಟರೆಡ್ಡಿ, ಶ್ರೀನಿವಾಸರೆಡ್ಡಿ, ಚಿಮುಲ್ ನಿರ್ದೇಶಕ ಆವಲಪ್ಪ,ನಟರಾಜ್, ನಾರಾಯಣಮೂರ್ತಿ,ಮಾದಮಂಗಲ ಆಂಜಿ , ಪ್ರಕಾಶ್ ಮತ್ತಿತರರು ಇದ್ದರು.

ರೈತಸಂಘ ತಾಲೂಕು ನೂತನ ಅಧ್ಯಕ್ಷರ ಅವಿರೋಧ ಆಯ್ಕೆ

ಚೇಳೂರು: ರೈತ ನಾಯಕ ಪ್ರೊ.ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ರಿ) (ಆರ್ .ವಿ. ನಾರಾಯಣರೆಡ್ಡಿ ಬಣ) ಚೇಳೂರು ತಾಲೂಕು ಕಚೇರಿ ಸಮೀಪದ ರಾಜು ಹೋಟೇಲ್ ಆವರಣದಲ್ಲಿ ಜಿಲ್ಲಾ ಅಧ್ಯಕ್ಷರಾದ ಎಚ್.ಎನ್.ಗೋವಿಂದರೆಡ್ಡಿ ನೇತೃತ್ವದಲ್ಲಿ ಇಂದು ನಡೆದ ಸಮಿತಿಯಲ್ಲಿ ಚೇಳೂರು ತಾಲೂಕು ನೂತನ ಅಧ್ಯಕ್ಷರಾಗಿ ಕುರುಬವಾಂಡ್ಲಪಲ್ಲಿ ಕೆ.ಎನ್.ಅಶ್ವಥನಾರಾಯಣಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗೌರವಧ್ಯಕ್ಷರಾಗಿ ಪಟೇಲ್ ಕೃಷ್ಣಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಚಲಪತಿ. ಉಪಾಧ್ಯಕ್ಷರಾಗಿ ಮಾಚನ ಪಲ್ಲಿ ಅಂಗಡಿ ಬೈರೆಡ್ಡಿ. ಕಾರ್ಯಾಧ್ಯಕ್ಷ ಪೆದ್ದೂರು ಬಿ.ವೆಂಕಟರಮಣ, ಸಹ ಕಾರ್ಯದರ್ಶಿ ಪಾಳ್ಯಕೆರೆ ವೈ ಶಂಕರಪ್ಪ. ಖಜಾಂಚಿ



ಬೈರಪ್ಪನಪಲ್ಲಿ ಶ್ರೀನಿವಾಸ, ಸಂಚಾಲಕ ಪಾಳ್ಯಕೆರೆ ಟಿ ಇ ಬಾಷ, ಸದಸ್ಯರಾಗಿ ಪಿ.ಎನ್. ರವಿ ಕ್ಲೀನರ್ ಬಾಬು. ಮಾಚನಪಲ್ಲಿ ಎಂ.ವಿ ವೆಂಕಟರಮಣ, ಪೆದ್ದರಾಜಪಲ್ಲಿ ಜಿ.ಶಿವಣ್ಣ, ಪೂಲುಕುಂಟ್ಲಪಲ್ಲಿ ಬಯ್ಯಾರೆಡ್ಡಿ, ಬೈರಪ್ಪನಪಲ್ಲಿ ರಾಮಚಂದ್ರ, ಆಯ್ಕೆಯಾಗಿದ್ದಾರೆ. ದರವಾರಪಲ್ಲಿ ಹಿರಿಯ ರಾದ ಪಿ.ಸುಬ್ಬಾರೆಡ್ಡಿ, ಮಹಿಳಾ ಘಟಕದ ಕೆ.ಎನ್. ಶಾಂತರೆಡ್ಡಿ, ಅಮರಾವತಿ ಇತರರು ಭಾಗವಹಿಸಿದ್ದರು.

ಡಿ.ಪಾಳ್ಯ ಗ್ರಾಮಸಭೆಯಲ್ಲಿ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಆಶಯ

ಬಡವರಿಗೆ ನಿವೇಶನ ನೀಡುವುದು ನನ್ನ ಧರ್ಮ

ಗೌರಿಬಿದನೂರು: ಬಡವರಿಗೆ ಯಾವುದೇ ಪಕ್ಷವಿಲ್ಲ. ಅವರಿಗೆ ದುಡಿದು ಜೀವನ ಸಾಗಿಸುವುದೇ ಕಷ್ಟ. ಅಂತಹವರು ಯಾವುದೇ ಪಕ್ಷದಲ್ಲಿರಲಿ ನಿವೇಶನ ನೀಡುವುದು ನನ್ನ ಧರ್ಮ ಎಂದು ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಹೇಳಿದರು.

ಅವರು ತಾಲೂಕಿನ ಡಿ.ಪಾಳ್ಯ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಗ್ರಾಮಸಭೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ಪ್ರತಿಯೊಬ್ಬ ಬಡವನಿಗೂ ತನ್ನದೇ ಆದ ಒಂದು ಸೂರು ಮಾಡಿಕೊಳ್ಳಬೇಕು, ಮಕ್ಕಳನ್ನು ಚೆನ್ನಾಗಿ ಓದಿಸಬೇಕು. ಸಂಸಾರವನ್ನು ಚೆನ್ನಾಗಿ ನಡೆಸಬೇಕು ಎಂಬ ಕನಸುಗಳಿರುತ್ತವೆ. ಅವರಿಗೆ ರಾಜಕೀಯ ಮಾಡುವಷ್ಟು ಸಮಯವಿರುವುದಿಲ್ಲ, ಅವರಿಗೆ ಯಾವ ಪಕ್ಷವಾದರೇನು? ಆದರೆ ದಶಕಗಳಿಂದ ಕ್ಷೇತ್ರದ ಬಡವರು ನಿವೇಶನಗಳಿಗೆ ಅಲೆಯುತ್ತಿದ್ದರೂ ಕಲ್ಪಿಸದಿರುವುದು ವಿಪರ್ಯಾಸ , ಈಗ ಆ ಕೆಲಸವನ್ನು ನಾನು ಕೈಗೆತ್ತಿಕೊಂಡಿದ್ದೇನೆ. ಪಕ್ಷಾತೀತ ಹಾಗೂ ಧರ್ಮಾತೀತವಾಗಿ ಅರ್ಹ ಬಡವರನ್ನು ಮಾತ್ರ ಗುರುತಿಸಿ,ಸರ್ಕಾರದ ನಿಯಮಾವಳಿಗಳ ಪ್ರಕಾರ ನಿವೇಶನ ನೀಡುವ ಮೂಲಕ ಅವರ ಸೂರಿನ ಕನಸನ್ನು ನನಸು ಮಾಡುತ್ತೇನೆ, ನಿವೇಶನ ಕೊಟ್ಟು ನೀವು ನನಗೆ



ಮತ ಹಾಕಿ ಎಂದು ಕೇಳುವ ಕೀಳು ಮಟ್ಟಕ್ಕೆ ನಾನು ಹೋಗುವುದಿಲ್ಲ. ತಮಗೆ ಇಷ್ಟ ಬಂದವರಿಗೆ ಮತ ಹಾಕುವುದು ಮತದಾರರ ವಿವೇಚನೆಗೆ ಬಿಟ್ಟಿದ್ದು ಎಂದ ಶಾಸಕರು, ಇಂತಹ ಒಳ್ಳೆಯ ಕೆಲಸಕ್ಕೂ ಕಳಂಕ ತರುವ ಕೆಲಸವನ್ನು ಕೆಲವರು ಮಾಡುತ್ತಿರುವುದು ಬೇಸರದ ಸಂಗತಿ. ಆದರೆ ಕ್ಷೇತ್ರದ ಜನತೆ ನನ್ನ ಜೊತೆಗಿದ್ದಾರೆ ಎಂದು ತಿಳಿಸಿದರು. ಅಭಿವೃದ್ಧಿ ಅಧಿಕಾರಿ ನಾಗೇಂದ್ರ ಮಾತನಾಡಿ, ನಿವೇಶನಗಳಿಗಾಗಿ ಸರಕಾರ ಮಂಜೂರು ಮಾಡಿರುವ ಜಮೀನುಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಿ ನಿವೇಶನಗಳನ್ನು ವಿಂಗಡಿಸಲಾಗುವುದು. ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡಲಾಗುವುದು ಎಂದರು. ಜಿಲ್ಲಾ ಪಂಚಾಯತಿ ಮಾಜಿ ಉಪಾಧ್ಯಕ್ಷ ಪಿ.ವಿ.ರಾಘವೇಂದ್ರ ಹನುಮಾನ್ ಮಾತನಾಡಿ, ಶಾಸಕ ಪುಟ್ಟಸ್ವಾಮಿ ಗೌಡರ ಪ್ರಾಮಾಣಿಕ ಹಾಗೂ ನಿರಂತರ ಪ್ರಯತ್ನದಿಂದಾಗಿ ಕನಸು ನನಸಾಗುತ್ತಿದೆ ಎಂದರು. ತಹಸೀಲ್ದಾರ್ ಅರವಿಂದ್, ತಾ.ಪಂ ನೀವು ಜಿ.ಕೆ.ಹೊನ್ನಯ್ಯ ಹಾಜರಿದ್ದರು. ಪಂಚಾಯಿತಿಗಳಲ್ಲಿ ಆಯ್ಕೆ ಸೋಮವಾರ 3 ಗ್ರಾಪಂಗಳ ವ್ಯಾಪ್ತಿಯಲ್ಲಿ ಫಲಾನುಭವಿಗಳ ಆಯ್ಕೆ ನಡೆಯಿತು. ಡಿ.ಪಾಳ್ಯ ಪಂಚಾಯಿತಿಯಲ್ಲಿ 2ಎಕರೆ ಜಮೀನು ಮಂಜೂರಾಗಿದ್ದು, ನಿವೇಶನಕ್ಕಾಗಿ 28 ಅರ್ಜಿ ಸಲ್ಲಿಕೆಯಾಗಿವೆ. ಮೊದಲ ಹಂತದಲ್ಲಿ 23 ಮಂದಿ ಫಲಾನುಭವಿಗಳ ಆಯ್ಕೆ ಮಾಡಲಾಯಿತು. ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ.ಎಚ್. ನಾಗೇಂದ್ರ, ಪಂಚಾಯತಿ ನೋಡಲ್ ಅಧಿಕಾರಿ ಡಾ. ಮಾರುತಿ, ನಾಮಗೊಂಡ್ಲು ಗ್ರಾಪಂಗೆ 3 ಎಕರೆ ಜಮೀನು ಮಂಜೂರಾಗಿದ್ದು, 227 ಅರ್ಜಿ ಸಲ್ಲಿಕೆಯಾಗಿವೆ. ಮೊದಲ ಹಂತದಲ್ಲಿ 40 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಗಂಗಸಂದ್ರ ಗ್ರಾಪಂಗೆ 9 ಎಕರೆ ಜಮೀನು ಮಂಜೂರಾಗಿದ್ದು, 340 ಅರ್ಜಿ ಸಲ್ಲಿಕೆಯಾಗಿವೆ. ಮೊದಲ ಹಂತದಲ್ಲಿ 64 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಅಧಿಕಾರಿ ರೂಪ, ನೋಡಲ್ ಅಧಿಕಾರಿ ಕೆ. ಜೆ. ರಮೇಶ್, ಹಾಜರಿದ್ದರು.

ನಿರ್ವಹಣೆಗೆ ಅಧಿಕಾರಿಗಳ ನಿರ್ಲಕ್ಷ್ಯ: ಸಾರ್ವಜನಿಕರ ಆಕ್ರೋಶ

ಕಸ ಸಂಗ್ರಹಣೆ ತಾಣವಾದ ಚಿನ್ನಸಂದ್ರ ಕ್ರಾಸ್

ಚಿಂತಾಮಣಿ: ನಗರದ ಹೊರವಲಯದ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ಚಿನ್ನಸಂದ್ರ ಕ್ರಾಸ್ ಸದ್ಯ ನರಕಸದೃಶವಾಗಿ ಮಾರ್ಪಟ್ಟಿದೆ. ಕಡಪ ಮುಖ್ಯರಸ್ತೆಯ ಅಕ್ಕಪಕ್ಕದಲ್ಲಿ ಹೋಟೆಲ್ ತ್ಯಾಜ್ಯ ಮತ್ತು ಮಾಂಸದ ಎಂಜಲುಗಳನ್ನು ರಾಶಿ ಹಾಕುತ್ತಿರುವುದರಿಂದ, ಈ ಭಾಗವು ಮಿನಿ ಡಂಪಿಂಗ್ ಯಾರ್ಡ್ ಆಗಿ ಪರಿವರ್ತನೆಯಾಗಿದೆ. ಸ್ವಚ್ಛ ಭಾರತ್ ಅಭಿಯಾನದ ಬಗ್ಗೆ ಉದ್ದುದ್ದ ಭಾಷಣ ಮಾಡುವ ಅಧಿಕಾರಿಗಳು, ತಮ್ಮ ಕಚೇರಿಯ ಮೂಗಿನ ನೇರಕ್ಕೇ ಇರುವ ಈ ಗಲೀಜನ್ನು ಕಾಣದಂತೆ ಇರುವುದು ಸಾರ್ವಜನಿಕರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಚಿನ್ನಸಂದ್ರ ಪಂಚಾಯಿತಿಯ ಕೇಂದ್ರ ಸ್ಥಾನದಲ್ಲೇ ಈ ಅವ್ಯವಸ್ಥೆ ತಾಂಡವವಾಡುತ್ತಿದೆ. ಆಂಧ್ರಪ್ರದೇಶದ ಕಡಪ ಹಾಗೂ ಮದನಪಲ್ಲಿ ಕಡೆಯಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಬದಿಯಲ್ಲಿ ಸುರಿಯಲಾಗಿರುವ ಹೋಟೆಲ್ ತ್ಯಾಜ್ಯ ಹಾಗೂ ಕೊಳೆತ ವಸ್ತುಗಳಿಂದಾಗಿ ಇಡೀ ಪರಿಸರ ಗಬ್ಬು ನಾರುತ್ತಿದ್ದು, ವಾಹನ ಸವಾರರು



ಹಾಗೂ ಪಾದಚಾರಿಗಳು ಮೂಗು ಮುಚ್ಚಿಕೊಂಡೇ ಓಡಾಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಸಮಸ್ಯೆ ಕೇವಲ ಕಸಕ್ಕೆ ಮಾತ್ರ ಸೀಮಿತವಾಗಿಲ್ಲ.

ಚಿನ್ನಸಂದ್ರ ಬಳಿ ಬೆಂಗಳೂರು ರಸ್ತೆಯ ಪಕ್ಕದಲ್ಲಿ ಮಳೆ ನೀರು ಹರಿದು ಹೋಗಲು ನಿರ್ಮಿಸಲಾದ ಚರಂಡಿಗಳು ಕಸದಿಂದ ಸಂಪೂರ್ಣವಾಗಿ ಮುಚಿಹೋಗಿವೆ. ಇದರಿಂದಾಗಿ ಮಳೆ ನೀರು ಸರಾಗವಾಗಿ ಹರಿಯಲಾಗದೆ ರಸ್ತೆಯ ಮೇಲೆ ನಿಲ್ಲುತ್ತಿದೆ. ಪರಿಣಾಮವಾಗಿ ಸುಸ್ಥಿತಿಯಲ್ಲಿದ್ದ ಡಾಂಬರು ರಸ್ತೆಗಳು ಕಿತ್ತು ಹೋಗುತ್ತಿದ್ದು, ಸಾರ್ವಜನಿಕರ ಹಣ ಪೋಲಾಗುತ್ತಿದೆ. ತಮ್ಮ ಕಚೇರಿ ಇರುವ ಕೇಂದ್ರ ಸ್ಥಾನವನ್ನೇ ಸ್ವಚ್ಛವಾಗಿಡಲು ಸಾಧ್ಯವಾಗದ ಅಧಿಕಾರಿಗಳು, ಇನ್ನು ಹಳ್ಳಿಗಳಲ್ಲಿ ಸ್ವಚ್ಛತೆಯನ್ನು ಹೇಗೆ ಕಾಪಾಡುತ್ತಾರೆ? ಎಂದು ನಾಗರಿಕರು ಆಕ್ರೋಶದಿಂದ ಪ್ರಶ್ನಿಸುತ್ತಿದ್ದಾರೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ರಸ್ತೆ ಬದಿಯ ತ್ಯಾಜ್ಯವನ್ನು ತೆರವುಗೊಳಿಸಬೇಕು ಮತ್ತು ಕಾನೂನುಬಾಹಿರವಾಗಿ ಕಸ ಸುರಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ರೋಗ ಹರಡುವ ಭೀತಿ

ತ್ಯಾಜ್ಯ ಸುರಿಯುತ್ತಿರುವ ಜಾಗದ ಅಕ್ಕಪಕ್ಕದಲ್ಲೇ ವಿದ್ಯಾರ್ಥಿಗಳ ಹಾಸ್ಟೆಲ್ ಇರುವುದು ಆತಂಕವನ್ನು ಇಮ್ಮಡಿಗೊಳಿಸಿದೆ. ಕೊಳೆತ ಮೊಟ್ಟೆ ಮತ್ತು ಕಸದಿಂದಾಗಿ ನೊಣಗಳ ಕಾಟ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ವಿದ್ಯಾರ್ಥಿಗಳನ್ನು ಕಾಡುತ್ತಿದೆ. ಸ್ಥಳೀಯ ನಿವಾಸಿಗಳು ರೋಗರುಜಿನಗಳ ಭಯದಲ್ಲಿ ದಿನ ಕಳೆಯುವಂತಾಗಿದ್ದರೂ, ಪಂಚಾಯಿತಿ ಅಧಿಕಾರಿಗಳು ಮಾತ್ರ ಜಾಣ ನಿದ್ದೆಗೆ ಜಾರಿದ್ದಾರೆ.